ಶುಕ್ರವಾರ, ಅಕ್ಟೋಬರ್ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 284 | ಪುಟ 20
● www.prajavani.net
prajavani.net | prajavani | prajavani | prajavani

# ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಭೋಜ್‌ಪುರಿಯ ಅವಕಾಶ ತಾನಾಗಿಯೇ ಅರಸಿ ಬಂತು'
ನಟ ಹರ್ಷಿಕಾ ಪೂಣಚ್ಚ ಸಂದರ್ಶನ



ಸಂಸದರಿಗೆ ಮಣೆ: ಬಿಜೆಪಿಯ ಹೊಸ ಕಾರ್ಯತಂತ್ರ 10
ಆಳ-ಅಗಲ ಅಮೆಜಾನ್ ಕಾಡಿನಲ್ಲಿ ಬರ
'ಕಾಂಗ್ರೆಸ್ ಕಡೆಗೆ ಅನ್ಯಪಕ್ಷಗಳ 42 ನಾಯಕರು' 8

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 66,408 ▼ | 19,794 ▼ | ₹59,780 (ಬೆಂಗಳೂರು) ▲ | ₹71,500 (ಬೆಂಗಳೂರು) ▲ | 83.24 ▼ |



ಒಳ ಪುಟ



ಉಚಿತ ಶಿಕ್ಷಣ: ಪ್ರಿಯಾಂಕಾ ಆಶ್ವಾಸನೆ 10

ಚಿನಕುರಳಿ

ಪ್ರಕಾಶ್ ಶೆಟ್ಟಿ




### ಇಸ್ರೇಲ್ ಕಾರ್ಯಾಚರಣೆ: ಡಮಾಸ್ಕಸ್, ಅಲೆಪ್ಪೊದಲ್ಲಿ ರನ್‌ವೇಗೆ ಹಾನಿ

# ಸಿರಿಯಾಕ್ಕೆ ವಿಸ್ತರಿಸಿದ ದಾಳಿ

**ಡಮಾಸ್ಕಸ್/ಟೆಲ್ ಅವೀವ್ (ಎಪಿ/ಎಎಫ್‌ಪಿ/ರಾಯಿಟರ್ಸ್):** ಇಸ್ರೇಲ್–ಹಮಾಸ್ ನಡುವಣ ಯುದ್ಧವು ಉತ್ತರದ ಸಿರಿಯಾ ಕಡೆಗೂ ವಿಸ್ತರಿಸಿದೆ. ಸಿರಿಯಾ ರಾಜಧಾನಿ ಡಮಾಸ್ಕಸ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಸಿರಿಯಾದ ಉತ್ತರ ಭಾಗದಲ್ಲಿರುವ ಅಲೆಪ್ಪೊ ನಗರದ ವಿಮಾನ ನಿಲ್ದಾಣದ ಮೇಲೆ ಇಸ್ರೇಲ್ ಗುರುವಾರ ವಾಯುದಾಳಿ ನಡೆಸಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಈ ದಾಳಿಯ ಪರಿಣಾಮವಾಗಿ ಈ ಎರಡೂ ವಿಮಾನ ನಿಲ್ದಾಣಗಳ ರನ್‌ವೇ ಹಾಳಾಗಿವೆ, ಅಲ್ಲಿ ಕಾರ್ಯಾಚರಣೆ ಸ್ಥಗಿತಗೊಂಡಿದೆ ಎಂದು ವರದಿಗಳು ಹೇಳಿವೆ.

ದಾಳಿಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಸೇನೆಯ ಅಧಿಕಾರಿಯೊಬ್ಬರನ್ನು ಉಲ್ಲೇಖಿಸಿ ಸಿರಿಯಾದ ಸರ್ಕಾರಿ ಸ್ವಾಮ್ಯದ ಸುದ್ದಿಸಂಸ್ಥೆ ಸನಾ ವರದಿ ಮಾಡಿದೆ. ದಾಳಿಯ ಕುರಿತು ಪ್ರತಿಕ್ರಿಯೆ ನೀಡಲು ಇಸ್ರೇಲ್ ಸೇನೆ ನಿರಾಕರಿಸಿದೆ. ಇಸ್ರೇಲ್ ಮೇಲೆ ಹಮಾಸ್ ದಾಳಿ ನಡೆಸಿದ ನಂತರದಲ್ಲಿ ಇಸ್ರೇಲ್, ಸಿರಿಯಾ ಮೇಲೆ ದಾಳಿ ನಡೆಸಿರುವುದು ಇದೇ ಮೊದಲು.



ಇಸ್ರೇಲ್ ಪಡೆಗಳು ಗುರುವಾರ ವಾಯು ದಾಳಿ ನಡೆಸಿದ ವೇಳೆ ದಕ್ಷಿಣ ಗಾಜಾ ಪಟ್ಟಿಯಲ್ಲಿ ಬಾಲಕರು ಸುರಕ್ಷಿತ ಸ್ಥಳಗಳತ್ತ ಓಡಿದರು – ಎಎಫ್‌ಪಿ ಚಿತ್ರ

ಮಧ್ಯಪ್ರಾಚ್ಯದಲ್ಲಿನ ಪರಿಸ್ಥಿತಿ ಬಗ್ಗೆ ಚರ್ಚಿಸಲು ಇರಾನ್‌ನ ವಿದೇಶಾಂಗ ಸಚಿವರು ಶುಕ್ರವಾರ ಸಿರಿಯಾಕ್ಕೆ ಭೇಟಿ ನೀಡಲಿದ್ದಾರೆ. ಅದಕ್ಕೆ ಒಂದು ದಿನ ಮೊದಲು ಈ ವಾಯುದಾಳಿ ನಡೆದಿದೆ. ಇರಾನ್‌ನ ಬೆಂಬಲ ಇರುವ ಬಂಡುಕೋರ ಗುಂಪುಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಆಗದಂತೆ ನೋಡಿಕೊಳ್ಳಲು ಇಸ್ರೇಲ್, ಸಿರಿಯಾ ದೇಶದ ವಿಮಾನ ನಿಲ್ದಾಣಗಳು ಹಾಗೂ ಬಂದರುಗಳನ್ನು ಗುರಿಯಾಗಿಸಿಕೊಂಡಿದೆ ಎನ್ನಲಾಗಿದೆ.

**'ಇಸ್ರೇಲ್ ಒಂಟಿಯಲ್ಲ':** ಅಮೆರಿಕವು ಯಾವತ್ತಿಗೂ ಇಸ್ರೇಲ್ ಜೊತೆ ಇರಲಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಗುರುವಾರ ಹೇಳಿದ್ದಾರೆ. ಪ್ಯಾಲೆಸ್ಟೀನ್ ಜನರು ನ್ಯಾಯಸಮ್ಮತವಾದ ಆಸೆಗಳನ್ನು ಹೊಂದಿದ್ದಾರೆ ಎಂದೂ ಅವರು ಇದೇ ವೇಳೆ ಹೇಳಿದ್ದಾರೆ.

10ನೇ ಪುಟ ನೋಡಿ

## ಭಾರತೀಯರು ಇಂದು ಸ್ವದೇಶಕ್ಕೆ

**ನವದೆಹಲಿ (ಪಿಟಿಐ):** ಆಪರೇಷನ್ ಅಜಯ್ ಕಾರ್ಯಾಚರಣೆಯ ಭಾಗವಾಗಿ ಇಸ್ರೇಲ್‌ನಿಂದ ಅಂದಾಜು 230 ಮಂದಿ ಭಾರತೀಯರು ಶುಕ್ರವಾರ ಮರಳುವ ನಿರೀಕ್ಷೆ ಇದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಹೇಳಿದ್ದಾರೆ.

ಇಸ್ರೇಲ್‌ನಿಂದ ಸ್ವದೇಶಕ್ಕೆ ಮರಳಲು ಬಯಸುವವರನ್ನು ಕರೆತರಲು ಕೇಂದ್ರ ಸರ್ಕಾರವು ಈ ಕಾರ್ಯಾಚರಣೆ ಆರಂಭಿಸಿದೆ. 'ಹಮಾಸ್ ನಡೆಸಿದ ದಾಳಿಯನ್ನು ಭಯೋತ್ಪಾದಕ ದಾಳಿ ಎಂದು ಭಾರತ ಪರಿಗಣಿಸುತ್ತದೆ' ಎಂದು ಬಗ್ಚಿ ಹೇಳಿದ್ದಾರೆ.

'ಸಾರ್ವಭೌಮ, ಸ್ವತಂತ್ರ ಪ್ಯಾಲೆಸ್ಟೀನ್ ದೇಶ ಸ್ಥಾಪನೆಯಾಗಬೇಕು' ಎಂಬ ನಿಲುವನ್ನು ಭಾರತವು ಹಿಂದಿನಿಂದಲೂ ಹೊಂದಿದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

# ಶಾಲೆಯಲ್ಲೇ ಅಂಕಪಟ್ಟಿ ತಿದ್ದುಪಡಿ

## ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಪ್ಪಲಿದೆ ಅಲೆದಾಟ

● ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿಗಾಗಿ ಬೆಂಗಳೂರಿಗೆ ಬರಬೇಕಿಲ್ಲ. ತಾವು ಓದಿದ ಪ್ರೌಢಶಾಲೆಯಲ್ಲೇ ಸೌಲಭ್ಯ ಪಡೆಯಬಹುದು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅದಕ್ಕಾಗಿಯೇ ವಿದ್ಯಾರ್ಥಿಸ್ನೇಹಿ ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ರಾಜ್ಯದ ಎಲ್ಲ ಶಾಲೆಗಳ ಮುಖ್ಯ ಶಿಕ್ಷಕರಿಗೂ ತಿದ್ದುಪಡಿ ಪ್ರಸ್ತಾವ ಸಲ್ಲಿಸಲು ಅನುಕೂಲವಾಗುವಂತೆ ಲಾಗಿನ್ ಸೌಲಭ್ಯ ಕಲ್ಪಿಸಿದೆ. ವಿದ್ಯಾರ್ಥಿಗಳು ಕೋರಿಕೆ ಸಲ್ಲಿಸಿದ ಒಂದು ವಾರದಲ್ಲೇ ಪರಿಷ್ಕೃತ ಅಂಕಪಟ್ಟಿ ಕೈಸೇರಲಿದೆ.

ಅಂಕಪಟ್ಟಿಯಲ್ಲಿ ವಿದ್ಯಾರ್ಥಿಯ ಹೆಸರು, ತಾಯಿ-ತಂದೆ ಹೆಸರು, ಜನ್ಮದಿನಾಂಕ ಸೇರಿದಂತೆ ಯಾವುದಾದರೂ ತಪ್ಪುಗಳಿದ್ದರೆ ತಾವು ಓದಿದ ಶಾಲೆಗೆ ತೆರಳಿ, ಅಗತ್ಯವಾದ ಪೂರಕ ದಾಖಲೆಗಳನ್ನು ಸಲ್ಲಿಸಬೇಕು. ಕರ್ನಾಟಕ ಶಾಲಾಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಜಾಲತಾಣದ ಲಾಗಿನ್ ಮೂಲಕ ಶಾಲಾ ಮುಖ್ಯ ಶಿಕ್ಷಕರು ತಿದ್ದುಪಡಿ ಪ್ರಸ್ತಾವ ಸಲ್ಲಿಸುವರು. ಆನ್‌ಲೈನ್ ಮೂಲಕವೇ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ನಿಗದಿತ ಮೊತ್ತ ಪಾವತಿಸಬಹುದು. ಆನ್‌ಲೈನ್ ಮೂಲಕ ಹಣ ಪಾವತಿಸಲು ಬಯಸದವರು ಚಲನ್ ಡೌನ್‌ಲೋಡ್ ಮಾಡಿಕೊಂಡು ತಮ್ಮ ಸಮೀಪದ ಯೂನಿಯನ್ ಬ್ಯಾಂಕ್ ಶಾಖೆಗೆ ತೆರಳಿ ಶುಲ್ಕ ಕಟ್ಟಬಹುದು.

8ನೇ ಪುಟ ನೋಡಿ

# 13,352 ಶಿಕ್ಷಕರ ನೇಮಕಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** '13,352 ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಈ ಹಿಂದೆ ಆಯ್ಕೆಪಟ್ಟಿ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ರದ್ದುಪಡಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 451 ಅಭ್ಯರ್ಥಿಗಳನ್ನು ಹೊರಗಿಡಲಾಗಿದೆ. ಈ ಅಭ್ಯರ್ಥಿಗಳು ತಮ್ಮ ತಕರಾರನ್ನು ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ)ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು' ಎಂದು ಸ್ಪಷ್ಟಪಡಿಸಿದೆ.

'ರಾಜ್ಯದಾದ್ಯಂತ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ದೊಡ್ಡ ಪ್ರಮಾಣದಲ್ಲಿ ಖಾಲಿ ಉಳಿದಿವೆ. ಇದರಿಂದ 6ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗಿದೆ. ಹೀಗಾಗಿ, ರಾಜ್ಯ ಸರ್ಕಾರ 2023ರ ಜೂನ್ 8ರಂದು ಸಿದ್ಧಪಡಿಸಿರುವ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಾರ 13,352 ಮಂದಿ ಆಯ್ಕೆಯಾದ ಶಿಕ್ಷಕರ ನೇಮಕಾತಿ ಮುಂದುವರಿಸಬಹುದು' ಎಂದು ತಿಳಿಸಿದೆ. ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ ಹುಯಿಲಗೋಳ ಅವರು ವಾದ ಮಂಡಿಸಿದ್ದರು.

8ನೇ ಪುಟ ನೋಡಿ

## ವಿಟಮಿನ್, ಖನಿಜಾಂಶ ಹಾಗೂ ಪೋಷಕಾಂಶಗಳ ಸಮೃದ್ಧ ಆಹಾರ

# ಮೊಟ್ಟೆಯಿಂದ ಸಿಗಲಿದೆ ಅಗತ್ಯ ಪೋಷಣೆ

**ಮೊಟ್ಟೆಯು ಉತ್ತಮ ಗುಣಮಟ್ಟದ ಪ್ರೊಟೀನ್, ಕೊಬ್ಬು ಕರಗುವ ವಿಟಮಿನ್‌ಗಳು, ನೀರಿನಲ್ಲಿ ಕರಗುವ ವಿಟಮಿನ್‌ಗಳು ಹಾಗೂ ಖನಿಜಾಂಶಗಳು ಮತ್ತು ಪೋಷಕಾಂಶಗಳಿಂದ ಸಮೃದ್ಧವಾಗಿದೆ ಎಂದು ಶೀಲಾ ಕೃಷ್ಣಸ್ವಾಮಿ ಅವರು ಲೇಖನದಲ್ಲಿ ವಿವರವಾಗಿ ಹೇಳಿದ್ದಾರೆ.**



1996 ರಲ್ಲಿ ಆಸ್ಟ್ರಿಯಾ ದೇಶದ ವಿಯೆನ್ನಾದಲ್ಲಿ ಮೊಟ್ಟ ಮೊದಲ ಬಾರಿಗೆ 'ವಿಶ್ವ ಮೊಟ್ಟೆ ದಿನ'ವನ್ನು ಆಚರಿಸಲಾಯಿತು. ಅಲ್ಲಿಂದ ಪ್ರಚಲಿತಕ್ಕೆ ಬಂದ ಮೊಟ್ಟೆ ದಿನ ಪ್ರತಿ ವರ್ಷ ಅಕ್ಟೋಬರ್ ಮಾಸದ 2ನೇ ಶುಕ್ರವಾರ ಮೊಟ್ಟೆಯ ಶಕ್ತಿಯ ಬಗ್ಗೆ ತಿಳಿವಳಿಕೆ ನೀಡಲು ನಿರ್ಧರಿಸಲಾಯಿತು. ಪ್ರಸಕ್ತ ವರ್ಷದಲ್ಲಿ 'ಆರೋಗ್ಯಕರ ಭವಿಷ್ಯಕ್ಕಾಗಿ ಮೊಟ್ಟೆಗಳು' ಎಂಬ ವಿಷಯಾಧಾರಿತವಾಗಿ ಮೊಟ್ಟೆಯ ಪೌಷ್ಟಿಕಾಂಶದ ಪ್ರಯೋಜನಗಳ ಅರಿವು ಮೂಡಿಸಲು ಹೆಚ್ಚು ಒತ್ತು ಕೊಡಲಾಗಿದೆ. ಆ ಮೂಲಕ ಕೆಲವು ಪೌಷ್ಟಿಕಾಂಶದ ಕೊರತೆಗಳ ನಿವಾರಣೆಗೆ ಈ ಲೇಖನ ಸಹಾಯಕವಾಗಲಿದೆ.

ಭಾರತದಲ್ಲಿ ಮಾಂಸ ಸೇವಿಸದ ಕೆಲವು ಸಸ್ಯಾಹಾರಿಗಳೂ ಸೇರಿದಂತೆ ಅನೇಕರು ಮೊಟ್ಟೆಗಳನ್ನು ಸೇವಿಸುತ್ತಾರೆ. ಮೊಟ್ಟೆಯಲ್ಲಿ ಉತ್ತಮ ಗುಣಮಟ್ಟದ ಪ್ರೊಟೀನ್, ಕೊಬ್ಬಿನಲ್ಲಿ ಕರಗುವ ವಿಟಮಿನ್‌ಗಳು, ನೀರಿನಲ್ಲಿ ಕರಗುವ ವಿಟಮಿನ್‌ಗಳು ಮತ್ತು ಖನಿಜಾಂಶಗಳು ಸೇರಿದಂತೆ ಪೋಷಕಾಂಶಗಳಿಂದ ಭರಿತವಾಗಿದೆ. ಮೊಟ್ಟೆಯ ಹಳದಿ ಭಾಗ (ಹಳದಿ ಲೋಳೆ ) ಹಾಗೂ ಮೊಟ್ಟೆಯ ಬಿಳಿ ಭಾಗ ಪ್ರೋಟೀನ್ ಅಂಶವನ್ನು ಹೊಂದಿರುತ್ತದೆ. ಆದ್ದರಿಂದ ಹಳದಿ ಭಾಗವನ್ನು ಬಿಟ್ಟು ಬಿಳಿ ಭಾಗ ಮಾತ್ರ ತಿನ್ನುವುದು ದಡ್ಡತನವಾಗುತ್ತದೆ. ಮೊಟ್ಟೆಯ ಹಳದಿ ಲೋಳೆಯನ್ನು ತಿನ್ನಲು ಅನೇಕ ಮಂದಿ ಭಯಪಡುತ್ತಾರೆ. ಇದರಲ್ಲಿ ಸರಿಸುಮಾರು 183 ಮಿಲಿ ಗ್ರಾಂ ಕೊಲೆಸ್ಟ್ರಾಲ್ ಹಾಗೂ ಕೇವಲ ಒಂದೂವರೆ ಗ್ರಾಂನಷ್ಟು ಮಾತ್ರ ಸ್ಯಾಚುರೇಟೆಡ್ ಕೊಬ್ಬನ್ನು ಹೊಂದಿರುತ್ತದೆ. ದಿನವೊಂದಕ್ಕೆ ಬೇಕಾಗುವಷ್ಟು ಹಾಗೂ ಶಿಫಾರಸು ಮಾಡಿದ ಪ್ರಮಾಣದಲ್ಲಿ ಪೋಷಕಾಂಶಗಳು ಇದರಲ್ಲಿತ್ತವೆ.

ಹಳದಿ ಲೋಳೆಯಲ್ಲಿ ಮೊಟ್ಟೆಯ ಬಿಳಿಭಾಗಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಟಮಿನ್ ಬಿ1, ಬಿ3, ಬಿ5, ಬಿ6, ಬಿ7 ಮತ್ತು ಬಿ9 ನಿಂದ ಕೂಡಿರುತ್ತದೆ. ವಿಟಮಿನ್ ಡಿ ಹೆಚ್ಚಿನ ಪ್ರಮಾಣದಲ್ಲಿ ಮೊಟ್ಟೆಯ ಹಳದಿ ಲೋಳೆಯಲ್ಲಿದೆ. ಇದು ವಿಟಮಿನ್‌ನ ಕೆಲವು ನೈಸರ್ಗಿಕ ಆಹಾರ ಮೂಲಗಳಲ್ಲಿ ಒಂದಾಗಿದೆ. ಅಲ್ಲದೆ, ಮೊಟ್ಟೆಯ ಹಳದಿ ಲೋಳೆಯು ವಿಟಮಿನ್ ಇ, ಕೆ ಮತ್ತು ಕ್ಯಾರೊಟಿನಾಯ್ಡ್‌ಗಳ ಮೂಲವಾಗಿದೆ. ಹಳದಿ ಲೋಳೆಗೆ ಹೋಲಿಸಿದರೆ ಮೊಟ್ಟೆಯ ಬಿಳಿಭಾಗವು ಕಡಿಮೆ ಕೊಬ್ಬನ್ನು ಹೊಂದಿರುತ್ತದೆ.

100 ಗ್ರಾಂನ ಒಂದು ಸಂಪೂರ್ಣ ಮೊಟ್ಟೆಯಲ್ಲಿ 49.40 ಮಿಲಿ ಗ್ರಾಂ ಕ್ಯಾಲ್ಸಿಯಂ, 1.82 ಮಿಲಿ ಗ್ರಾಂ ಕಬ್ಬಿಣ, 1.20 ಮಿಲಿ ಗ್ರಾಂ ಸತು, 198 ಎಂಸಿಜಿ ವಿಟಮಿನ್ ಎ, 49.30 ಎಂಸಿಜಿ ಡಯೆಟರಿ ಫೋಲೇಟ್, 1.80 ಎಂಸಿಜಿ ವಿಟಮಿನ್ ಬಿ 12 ಇರುತ್ತದೆ. ಇಷ್ಟೇ ಅಲ್ಲದೆ, ಎರಡು ಪ್ರಮುಖ ಕ್ಯಾರೊಟಿನಾಯ್ಡ್‌ಗಳಿವೆ. ಒಂದು ಲುಟೀನ್ ಮತ್ತೊಂದು ಜಿಯಾಕ್ಸಾಂಥಿನ್. ಆದರೆ, ಮೊಟ್ಟೆಗಳು ಫುಡ್ ಫೈಬರ್ ಮತ್ತು ವಿಟಮಿನ್ ಸಿ ಅನ್ನು ಒಳಗೊಂಡಿಲ್ಲ ಹಾಗೂ ಅವುಗಳು ಕಡಿಮೆ ಪ್ರಮಾಣದ ಕಾರ್ಬೋಹೈಡ್ರೇಟ್ ಹೊಂದಿರುತ್ತವೆ ಎಂಬುದು ತಿಳಿಯಬೇಕಾಗಿದೆ.

**ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್**

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಪೋಷಕಾಂಶಗಳ ಕೊರತೆಗಳಲ್ಲಿ ಕಬ್ಬಿಣ, ವಿಟಮಿನ್ ಡಿ, ವಿಟಮಿನ್ ಎ ಮತ್ತು ವಿಟಮಿನ್ ಬಿ 12 ಆಗಿದ್ದು, ಈ ಎಲ್ಲಾ ಪೋಷಕಾಂಶಗಳು ಮೊಟ್ಟೆಯಲ್ಲಿ ಮಾತ್ರ ಕಂಡುಬರುತ್ತವೆ. ಆದ್ದರಿಂದ ಪೋಷಕಾಂಶಗಳ ಕೊರತೆಯಿರುವವರಿಗೆ ಇದು ಉಪಯುಕ್ತ ಆಹಾರ.

ಮೊಟ್ಟೆಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಇದನ್ನು ಸೇವಿಸಬಹುದು. ಮೊಟ್ಟೆ ಸೇವನೆಯಿಂದ ಅಲರ್ಜಿ ಆಗುತ್ತದೆ ಎನ್ನುವವರು ಹಾಗೂ ಮಕ್ಕಳು ಮೊಟ್ಟೆ ವಿಶೇಷವಾಗಿ ಮೊಟ್ಟೆ ಸೇವಿಸಬಾರದು. ಆಹಾರದ ಶಿಫಾರಸು ಮಾಡಿದವರು ಮಾತ್ರ ಇದರಿಂದ ಹೊರತಾಗಿರುತ್ತಾರೆ. (ಉದಾ: ಕಡಿಮೆ ಪ್ರೋಟೀನ್ ಆಹಾರ, ಕಡಿಮೆ ಕೊಲೆಸ್ಟ್ರಾಲ್ ಆಹಾರ). ಫ್ಯಾಕ್ಟರಿ ಮತ್ತು ಕೋಳಿ ಸಾಕಣೆಯ ವಾಣಿಜ್ಯ ಮೊಟ್ಟೆಗಳಿಗಿಂತ ಮುಕ್ತವಾಗಿ ತಿರುಗಾಡುವ ಕೋಳಿಗಳ ಮೊಟ್ಟೆಗಳಿಗೆ ಹೆಚ್ಚಿನ ಬೇಡಿಕೆಯಿದೆ. ಇದಕ್ಕೆ ಕಾರಣ ಪರಿಸರ ಕಾಳಜಿ ಮತ್ತು ಪ್ರಾಣಿ, ಪಕ್ಷಿಗಳ ಬಗ್ಗೆ ಮಾನವನ ನಡೆಯಾಗಿದೆ. ಮುಖ್ಯವಾದ ಸಂಗತಿ ಎಂದರೆ, ಮೊಟ್ಟೆಗಳನ್ನು ಬೇಯಿಸದೆ ಕಚ್ಚಾ ರೂಪದಲ್ಲಿ ತಿನ್ನುವುದಕ್ಕಿಂತ ಬೇಯಿಸಿ ಸೇವಿಸುವುದು ಸೂಕ್ತ. ಇದರಿಂದ ಪಚನಕ್ರಿಯೆ ಸುಧಾರಣೆ ಹಾಗೂ ಸಾಲ್ಮೊನೆಲ್ಲಾ ಸೋಂಕನ್ನು ತಡೆಗಟ್ಟಬಹುದು.

### ಮೊಟ್ಟೆ ಸೇವಿಸುವ ವಿಧಾನಗಳು

**ಬೇಯಿಸಿದ ಮೊಟ್ಟೆ :** ಉಪ್ಪು ಮತ್ತು ಮೆಣಸು ಹಾಕಿದ ಮೊಟ್ಟೆ ತಿನ್ನಲು ಇದು ಆರೋಗ್ಯಕರ ವಿಧಾನ.

**ಸ್ಕ್ರಾಂಬಲ್ಡ್ ಮೊಟ್ಟೆ:** ಉಪ್ಪು ಮತ್ತು ಮೆಣಸು, ಕೆಲವೊಮ್ಮೆ ಹಾಲು ಮತ್ತು ಬೆಣ್ಣೆ ಅಥವಾ ಖಾದ್ಯತೈಲ ಸೇರಿಸಲಾಗುತ್ತದೆ. ಬೆಣ್ಣೆ ಅಥವಾ ತೈಲ ಸೇರ್ಪಡೆಯ ಭಕ್ಷ್ಯದಿಂದ ಕೊಬ್ಬಿನಂಶ ಹೆಚ್ಚಿಸುತ್ತದೆ ಮತ್ತು ಎಲ್ಲರಿಗೂ ಇದು ಸೂಕ್ತ ಆಗದಿರುವ ಸಾಧ್ಯತೆ ಇದೆ.

**ಹುರಿದ ಮೊಟ್ಟೆ:** ಎಣ್ಣೆ ಅಥವಾ ಬೆಣ್ಣೆಯಿಂದ ಇದನ್ನು ತಯಾರಿಸಲಾಗುತ್ತದೆ. ಉಪ್ಪು ಮತ್ತು ಮೆಣಸು ಕಾಳಿನ ಪುಡಿ ಸೇರಿಸಿ ತಿನ್ನಲಾಗುತ್ತದೆ. ತೈಲಾಂಶ ಬೇರೆಯುವುದರಿಂದ ಇದು ಹೆಚ್ಚಿನ ಕೊಬ್ಬಿನ ಭಕ್ಷ್ಯವಾಗುತ್ತದೆ. ಸಾಂದರ್ಭಿಕ ಬಳಕೆಗೆ ಮಾತ್ರ ಸೀಮಿತವಾಗಿದೆ.

**ಆಮ್ಲೆಟ್:** ಖಾದ್ಯ ತೈಲ ಸವರಿದ ಬಾಣಲೆಯಲ್ಲಿ ಉಪ್ಪು ಮತ್ತು ಮೆಣಸು ಅಥವಾ ಒಣಮೆಣಸಿನ ಹುಡಿ ಸೇರಿಸಿ ಒಡೆದ ಮೊಟ್ಟೆ ಬೇಯಿಸಲಾಗುತ್ತದೆ. ಇದು ಅನೇಕ ಮೊಟ್ಟೆ ಪ್ರಿಯರಲ್ಲಿ ಜನಪ್ರಿಯವಾಗಿದೆ.

ಟೊಮೆಟೊ, ಈರುಳ್ಳಿ, ಪಾಲಕ್, ಮಶ್ರೂಮ್, ಚೀಸ್, ಸ್ಪ್ರಿಂಗ್ ಆನಿಯನ್, ಗಿಡಮೂಲಿಕೆಗಳು ಮತ್ತು ಮಸಾಲೆ ಪದಾರ್ಥಗಳನ್ನು ಆಮ್ಲೆಟ್‌ಗೆ ಸೇರಿಸಬಹುದು. ಇದು ರುಚಿ ಮತ್ತು ಸುವಾಸನೆ ಹೆಚ್ಚಿಸಲಿದೆ.

ಎಣ್ಣೆ ಅಥವಾ ಚೀಸ್ ಇಲ್ಲದೆ ತರಕಾರಿಗಳು, ಗಿಡಮೂಲಿಕೆಗಳು ಮತ್ತು ಮಸಾಲೆಗಳನ್ನು ಬಳಸಿ ಆಮ್ಲೆಟ್ ತಯಾರಿಸಿದರೆ, ಅದು ನಿತ್ಯದ ಊಟದಲ್ಲಿ ಸೇರಿಸಬಹುದಾದ ಆರೋಗ್ಯಕರ ಭಕ್ಷ್ಯವಾಗುತ್ತದೆ.

ಮೊಟ್ಟೆಯು ಕಸ್ಟರ್ಡ್, ಕೇಕ್, ಮೌಸ್ಸ್, ಮೆರಿಂಗ್ಯೂ, ಕರಿ, ಬಿರಿಯಾನಿ, ಭುರ್ಜಿ, ನೂಡಲ್ಸ್, ಸೂಪ್, ಸಲಾಡ್, ಸೌಫಲ್, ಪಾಸ್ತಾ, ಸ್ಯಾಂಡ್‌ವಿಚ್, ಕ್ವಿಚೆ ಮತ್ತು ಇನ್ನಿತರ ಅನೇಕ ಭಕ್ಷ್ಯಗಳ ಭಾಗವಾಗಿದೆ. ಪ್ರಪಂಚದ ಕೆಲವು ಭಾಗಗಳಲ್ಲಿ ಮೊಟ್ಟೆ ಆಧಾರಿತ ಪಾನೀಯಗಳು ಎಗ್ ನಾಗ್ ಮತ್ತು ಎಗ್ ಕಾಫಿ ಜನಪ್ರಿಯವಾಗಿವೆ. ನೀವು ಕೆಲವು ಆರೋಗ್ಯ ಪ್ರಯೋಜನಗಳನ್ನು ಹುಡುಕುತ್ತಿದ್ದರೆ ಮೊಟ್ಟೆಯು ನೀವು ಆಯ್ಕೆ ಮಾಡಬಹುದಾದ ಒಂದು ಆಯ್ಕೆಯಾಗಿದೆ.

(ಲೇಖಕರು: ಪೌಷ್ಟಿಕಾಂಶ ಮತ್ತು ಕ್ಷೇಮ ಸಲಹೆಗಾರರು)

### ಮೊಟ್ಟೆಯಲ್ಲಿ ಏನೆಲ್ಲ ಇದೆ?



**ಪೋಷಕಾಂಶ - ಮುಖ್ಯ ಕಾರ್ಯ**

**ಪ್ರೋಟೀನ್** :ಬೆಳವಣಿಗೆ, ನಿರ್ವಹಣೆ ಮತ್ತು ದುರಸ್ತಿ/ ಜೀವಕೋಶಗಳು ಮತ್ತು ಅಂಗಾಂಶಗಳ ಗುಣಪಡಿಸುವಿಕೆ ಜೊತೆಗೆ ರಚನೆಯ ಭಾಗವಾಗಿ, ಸಾಗಣೆ, ಶೇಖರಣೆ, ಹಾರ್ಮೋನುಗಳು, ಕಿಣ್ವಗಳು, ಪ್ರತಿಕಾಯ ಮತ್ತು ಪರ್ಯಾಯ ಶಕ್ತಿಯ ಮೂಲ.

**ವಿಟಮಿನ್ ಬಿ1** ಕಾರ್ಬೋಹೈಡ್ರೇಟ್ ಚಯಾಪಚಯ ಇತರೆ
**ವಿಟಮಿನ್ ಬಿ3** ಚರ್ಮ ಮತ್ತು ನರ ಆರೋಗ್ಯ, ಸಹ ಕಿಣ್ವಗಳು
**ವಿಟಮಿನ್ ಬಿ5** ಚಯಾಪಚಯ ಮತ್ತು ಇತರೆ
**ವಿಟಮಿನ್ ಬಿ6** ಚಯಾಪಚಯ, ಕಿಣ್ವ ಪ್ರತಿಕ್ರಿಯೆಗಳು, ರೋಗನಿರೋಧಕ ಶಕ್ತಿ ಇತ್ಯಾದಿ
**ವಿಟಮಿನ್ ಬಿ7** ಚಯಾಪಚಯ ಇತ್ಯಾದಿ
**ವಿಟಮಿನ್ ಬಿ9** ಜೀವಕೋಶ ಬೆಳವಣಿಗೆ ಮತ್ತು ಇತರೆ
**ವಿಟಮಿನ್ ಬಿ12** ನರಗಳ ನಿರ್ವಹಣೆ, ಕೆಂಪು ರಕ್ತ ಕಣಗಳ ರಚನೆ, ಅನುವಂಶಿಕ ವಸ್ತು ಇತ್ಯಾದಿ
**ವಿಟಮಿನ್ ಎ** ದೃಷ್ಟಿ, ಪ್ರತಿರಕ್ಷಣಾ ಮತ್ತು ಇನ್ನಿತರೆ
**ವಿಟಮಿನ್ ಡಿ** ಕ್ಯಾಲ್ಸಿಯಂ ಹೀರಿಕೊಳ್ಳುವಿಕೆ ಇತ್ಯಾದಿ
**ವಿಟಮಿನ್ ಇ** ಉತ್ಕರ್ಷಣ ನಿರೋಧಕ, ಪ್ರತಿರಕ್ಷಣೆ ಮತ್ತು ಇತರೆ
**ವಿಟಮಿನ್ ಕೆ** ರಕ್ತ ಹೆಪ್ಪುಗಟ್ಟುವಿಕೆ,
**ಕ್ಯಾಲ್ಸಿಯಂ** ರಚನೆ ಮತ್ತು ಎಲುಬು ನಿರ್ವಹಣೆ ಹಾಗೂ ದಂತಗಳು, ನರಸ್ನಾಯುಕ ಕಾರ್ಯ, ರಕ್ತ ಹೆಪ್ಪುಗಟ್ಟುವಿಕೆ ಮತ್ತಿತರೆ
**ಸತು** ಬೆಳವಣಿಗೆ, ರೋಗನಿರೋಧಕ ಶಕ್ತಿ ಮತ್ತು ಇತರೆ
**ಕಬ್ಬಿಣ** ಹಿಮೋಗ್ಲೋಬಿನ್, ಶಕ್ತಿಯ ಚಯಾಪಚಯ, ಪ್ರತಿರಕ್ಷಣ ಇತ್ಯಾದಿ

## ಪ್ರಯಾಣ ಧಾವಂತದಲ್ಲಿರುವವರಿಗೆ ಆರೋಗ್ಯಕರ ತಿಂಡಿ
# ಮೊಟ್ಟೆಯಲ್ಲಿದೆ ಭರಪೂರ ಪೋಷಕಾಂಶ

*ಹೊರಡಬೇಕೆನ್ನುವ ಧಾವಂತದಲ್ಲಿ ನೀವು ಊಟವನ್ನು ತೊರೆಯುತ್ತೀರಾ? ಹಾಗಿದ್ದರೆ, ಹಸಿವಿನಿಂದ ಬಳಲುತ್ತಿದ್ದಲ್ಲಿ ಊಟದ ಬದಲಿಗೆ ನಾಲ್ಕು ಆರೋಗ್ಯಕರ ತಿಂಡಿಗಳ ಬಗ್ಗೆ ತಿಳಿದುಕೊಳ್ಳೋಣ*

• **ಜಯಂತಿ ಮಧುಕರ್**

ನೀವು ಸದಾ ಪ್ರಯಾಣದಲ್ಲಿರುವ ವ್ಯಕ್ತಿಯೇ? ಅವಸರದಲ್ಲಿ ನೀವು ಊಟವನ್ನು ಬಿಟ್ಟುಬಿಡುತ್ತೀರಾ ಅಥವಾ ತ್ವರಿತ (ಫಾಸ್ಟ್) ರೆಡಿಮೇಡ್ ಫುಡ್ ಗಳನ್ನು ಹುಡುಕುತ್ತಿದ್ದೀರಾ? ನಿಮ್ಮ ಈ ಫಾಸ್ಟ್ ಫಿಕ್ಸ್ ಲಘು ಆಹಾರ ಆರೋಗ್ಯಕರವೇ ಎಂದು ಒಮ್ಮೆ ಏಕೆ ಖಚಿತ ಪಡಿಸಿಕೊಳ್ಳಬಾರದು? ಅದು ಮೊಟ್ಟೆಯಿಂದ ಮಾಡಲ್ಪಟ್ಟ ಭಕ್ಷ್ಯಕ್ಕಿಂತ ಉತ್ತಮ ಆಯ್ಕೆ ಯಾಕಾಗಬಾರದು?

ಮೊಟ್ಟೆಯು ಪೋಷಕಾಂಶಗಳಿಂದ ಸಮೃದ್ಧವಾದ ಪದಾರ್ಥ. ನಿಮ್ಮ ದೈನಂದಿನ ಆಹಾರದೊಂದಿಗೆ ದೇಹದ ಅಗತ್ಯಕ್ಕೆ ಬೇಕಾಗಿರುವ ಅನೇಕ ಪೋಷಕಾಂಶಗಳನ್ನು ನೀಡುತ್ತದೆ. ಊಟವನ್ನು ತ್ಯಜಿಸುವುದು ಮತ್ತು ನಿಮಗೆ ಬೇಕಾದ ಪೌಷ್ಟಿಕಾಂಶಕ್ಕಾಗಿ ನಾನಾ ರೀತಿ ತಿಂಡಿಗಳ ಮೇಲೆ ಅವಲಂಬಿಸುವುದು ಒಳ್ಳೆಯದಲ್ಲ. ಯಾವುದೇ ಪೌಷ್ಟಿಕಾಂಶದ ಪ್ರಯೋಜನವಿಲ್ಲದೆ ಬರಿ ಹೊಟ್ಟೆ ಮಾತ್ರ ತುಂಬುವ ಜಂಕ್ ಫುಡ್‌ಗಿಂತ ಆರೋಗ್ಯಕರ ತಿಂಡಿಯ ಆಯ್ಕೆ ಉತ್ತಮ.

ಆ ನಿಟ್ಟಿನಲ್ಲಿ ಹೆಚ್ಚು ಸಮಯ, ಶ್ರಮ ಹಾಗೂ ಪದಾರ್ಥಗಳನ್ನು ತೆಗೆದುಕೊಳ್ಳದ ನಾಲ್ಕು ಸರಳ ಮೊಟ್ಟೆ ಭಕ್ಷ್ಯದ ಸಿದ್ಧತಾ ವಿಧಾನಗಳನ್ನು ಇಲ್ಲಿ ನೀಡಲಾಗಿದೆ. ಈ ಭಕ್ಷ್ಯಗಳನ್ನು ಪ್ರಯಾಣ ಸಮಯದಲ್ಲಿ ಹಾಳಾಗದ ರೀತಿಯಲ್ಲಿ ಸುಲಭವಾಗಿ ಪ್ಯಾಕ್ ಮಾಡಬಹುದಾಗಿವೆ ಮತ್ತು ನಿಮ್ಮೊಂದಿಗೆ ಅನುಕೂಲಕರವಾಗಿ ಸಾಗಿಸಬಹುದಾಗಿವೆ. ನಿಮಗೆ ಹಸಿವು ಎನಿಸಿದಾಗ ಕೊಂಚ ವಿರಾಮ ತೆಗೆದುಕೊಂಡು ಅವುಗಳನ್ನು ಸವಿಯಬಹುದಾಗಿದೆ. ಇದು ಉತ್ತಮ ಸ್ವಾಸ್ಥ್ಯದ ಮಾರ್ಗವೂ ಹೌದು. ಇವು ಕೇವಲ ಊಟದ ಬಾಕ್ಸ್‌ಗೆ ಮಾತ್ರ ಸೀಮಿತವಾಗಿ ಇರುವುದರಿಂದ, ನೀವು ಅವುಗಳನ್ನು ಹಿಂದಿನ ರಾತ್ರಿಯೇ ತಯಾರಿಸಿಡಬಹುದು. ಫ್ರಿಜ್‌ನಲ್ಲಿಟ್ಟು ಬೆಳಿಗ್ಗೆ ಕೆಲಸಕ್ಕೆ ಹೋಗುವ ವೇಳೆ ಕೊಂಡೊಯ್ಯಬಹುದಾಗಿವೆ.



### ಮೊಟ್ಟೆ ಚಪಾತಿ ರೋಲ್

**ಬೇಕಾದ ಪದಾರ್ಥಗಳು**

ಎರಡು ಗೋಧಿ ಚಪಾತಿಗಳು ಅಥವಾ ಫುಲ್ಕಾಗಳು (ರಾತ್ರಿ ತಯಾರಿಸಿದ)
ಎರಡು ಮೊಟ್ಟೆಗಳು
ಒಂದು ಕಪ್ ಸಣ್ಣದಾಗಿ ಕತ್ತರಿಸಿದ ಈರುಳ್ಳಿ
ಅರ್ಧ ಕಪ್ ಸಣ್ಣಗೆ ಕತ್ತರಿಸಿದ ಟೊಮೆಟೊಗಳು
ಅರ್ಧ ಕಪ್ ತುರಿದ ಕ್ಯಾರೆಟ್
ಸಣ್ಣಗೆ ಕತ್ತರಿಸಿದ ಹಸಿರು ಮೆಣಸಿನಕಾಯಿ ಮತ್ತು ಕೊತ್ತಂಬರಿ ಸೊಪ್ಪು (ತಲಾ ಒಂದು ಟೀ ಚಮಚದಷ್ಟು )
ರುಚಿಗೆ ಉಪ್ಪು ಮತ್ತು ಮೆಣಸು
ಒಂದು ಟೇಬಲ್ ಚಮಚ ಎಣ್ಣೆ

**ಮಾಡುವ ವಿಧಾನ:**

ಮೊಟ್ಟೆಗಳನ್ನು ಹೊಡೆದು ದೊಡ್ಡ ಬಟ್ಟಲಿನಲ್ಲಿ ಹಾಕಿ ಚೆನ್ನಾಗಿ ಕಲಕಬೇಕು. ನಂತರ ಪಟ್ಟಿ ಮಾಡಿದ ಎಲ್ಲಾ ಪದಾರ್ಥಗಳನ್ನು ಮೊಟ್ಟೆಯ ಮಿಶ್ರಣಕ್ಕೆ ಸೇರಿಸಿ. ಬಿಸಿಯಾದ ಬಾಣಲೆಗೆ ಎಣ್ಣೆಯನ್ನು ಹಾಕಿ ನಂತರ ಮೊಟ್ಟೆ-ತರಕಾರಿ ಮಿಶ್ರಣವನ್ನು ಬಾಣಲೆ ಮೇಲೆ ಸುರಿಯಿರಿ. ಬಹುತೇಕ ಬೆಂದ ಆಮ್ಲೆಟ್ ಮೇಲೆ ನಿಧಾನವಾಗಿ ಚಪಾತಿ ಇರಿಸಿ ಮತ್ತು ಆಮ್ಲೆಟ್ ಅನ್ನು ಚಪಾತಿಗೆ ಹೊಂದಿಸಲು ಪ್ರಯತ್ನಿಸಿ. ಮೊಟ್ಟೆ-ಚಪಾತಿಯನ್ನು ಎಚ್ಚರಿಕೆಯಿಂದ ತಿರುಗಿಸಿ ಮತ್ತು ಕೆಲವು ಸೆಕೆಂಡುಗಳ ನಂತರ ಅದನ್ನು ತಣ್ಣಗಾಗಲು ತಟ್ಟೆಯಲ್ಲಿ ಇಡಿ. ಮೊಟ್ಟೆಯ ಮಿಶ್ರಣದ ಇತರ ಭಾಗದೊಂದಿಗೆ ಇದನ್ನು ಪುನರಾವರ್ತಿಸಿ. ಮೊಟ್ಟೆ-ಚಪಾತಿ ತಣ್ಣಗಾದ ನಂತರ ಅದನ್ನು ನಿಧಾನವಾಗಿ ರೋಲ್ (ಸುತ್ತಿ) ಮಾಡಿ ಮತ್ತು ಲಂಚ್ ಬಾಕ್ಸ್‌ನಲ್ಲಿ ಇಟ್ಟು ಪ್ಯಾಕ್ ಮಾಡಿ.

### ಎಗ್ ಬ್ರೆಡ್ ಟೋಸ್ಟ್

**ಬೇಕಾಗಿರುವ ಪದಾರ್ಥಗಳು:**

- ಗೋಧಿ ಬ್ರೆಡ್‌ನ ನಾಲ್ಕು ಹೋಳುಗಳು
- ನಾಲ್ಕು ಮೊಟ್ಟೆಗಳು
- ಒಂದು ಕಪ್ ಸಣ್ಣದಾಗಿ ಕೊಚ್ಚಿದ ತರಕಾರಿಗಳು - ಈರುಳ್ಳಿ, ಟೊಮೆಟೊ, ಅಣಬೆ ಮತ್ತು ಸಬ್ಸಿಗೆ ಸೊಪ್ಪು
- ಕಾಲು ಕಪ್ ತುರಿದ ಕ್ಯಾರೆಟ್
- ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕಾಳು ಮೆಣಸು



**ವಿಧಾನ:**

ದೊಡ್ಡ ಬಟ್ಟಲಿನಲ್ಲಿ ಮೊಟ್ಟೆಗಳನ್ನು ಹೊಡೆದು ಚೆನ್ನಾಗಿ ಕಲಸಿ. ಅದಕ್ಕೆ ತರಕಾರಿಗಳನ್ನು ಸೇರಿಸಿ. ಉಪ್ಪು ಮತ್ತು ಕಾಳು ಮೆಣಸಿನ ಪುಡಿ ಹಾಕಿ ಕೊಂಚ ಸಮಯ ಇಡಿ. ಮಧ್ಯಮ ಉರಿಯಲ್ಲಿ ಬಾಣಲೆ ಬಿಸಿ ಮಾಡಿ ಮತ್ತು ಎರಡು ಚಮಚ ಎಣ್ಣೆ ಹಾಕಿ. ಎರಡು ದೊಡ್ಡ ಚಮಚ ಮೊಟ್ಟೆ ಮಿಶ್ರಣವನ್ನು ಎಣ್ಣೆ ಹಾಕಿರುವ ಬಾಣಲೆಯಲ್ಲಿ ಸುರಿಯಿರಿ. ಅದರ ಮೇಲೆ ಬ್ರೆಡ್ ಸ್ಲೈಸ್ ಅನ್ನು ಇರಿಸಿ. ಮೊಟ್ಟೆ ಸಿದ್ಧವಾದಾಗ, ಬ್ರೆಡ್ ಸ್ಲೈಸ್ ಅನ್ನು ನಿಧಾನವಾಗಿ ಮೇಲಕ್ಕೆತ್ತಿ. ಪುನಃ ಎರಡು ಚಮಚ ಮೊಟ್ಟೆಯ ಮಿಶ್ರಣವನ್ನು ಬಾಣಲೆಯ ಮೇಲೆ ಸುರಿಯಿರಿ. ನಂತರ ಅದರ ಮೇಲೆ ಬ್ರೆಡ್‌ನ ಮತ್ತೊಂದು ಭಾಗವನ್ನು ತಿರುಗಿಸಿ. ಅದು ಬೇಯುವವರೆಗೆ ಕಾಯಿರಿ. ಉಳಿದ ಬ್ರೆಡ್ ಸ್ಲೈಸ್‌ಗಳಿಗೂ ಪುನರಾವರ್ತಿಸಿ. ಮೊಟ್ಟೆ-ಬ್ರೆಡ್ ಟೋಸ್ಟ್ ತಣ್ಣಗಾಗುವವರೆಗೂ ಬಿಡಿ. ಟೊಮೆಟೊ ಸಾಸ್‌ನ ಕೆಲವು ಸ್ಯಾಷೆಗಳೊಂದಿಗೆ ಲಂಚ್ ಬಾಕ್ಸ್‌ನ ಪ್ಯಾಕ್ ಮಾಡಿ.

### ಲೆಟಿಸ್ ಕಪ್ ಮೊಟ್ಟೆ ಸಲಾಡ್

**ಬೇಕಾಗಿರುವ ಪದಾರ್ಥಗಳು:**

- ನಾಲ್ಕು ಮೊಟ್ಟೆಗಳು
- ಎಂಟು ದೊಡ್ಡ ಶೀಥಲೀಕರಣಗೊಂಡ (ಐಸ್‌ಬರ್ಗ್) ಲೆಟಿಸ್ ಎಲೆಗಳು
- ಎರಡು ಕಪ್ ಕೆಂಪು ಮತ್ತು ಹಳದಿ ಕ್ಯಾಪ್ಸಿಕಂ, ಟೊಮೆಟೊ, ತುರಿದ ಕ್ಯಾರೆಟ್
- ಕತ್ತರಿಸಿದ ಕೊತ್ತಂಬರಿ ಸೊಪ್ಪು ಮತ್ತು ಸ್ಪ್ರಿಂಗ್ ಆನಿಯನ್ ತಲಾ ಎರಡು ಚಮಚ
- ರುಚಿಗೆ ತಕ್ಕಷ್ಟು ಉಪ್ಪು
- ನಿಮ್ಮ ಆಯ್ಕೆಯ ಸಲಾಡ್ ಡ್ರೆಸ್ಸಿಂಗ್ ಅಥವಾ ಎರಡು ಟೇಬಲ್ ಚಮಚ ನಿಂಬೆ ರಸ ಮತ್ತು ಸಿಹಿ ಚಿಲ್ಲಿ ಸಾಸ್

**ಮಾಡುವ ವಿಧಾನ:**

ಸಾಸ್‌ಪ್ಯಾನ್ ಅಥವಾ ಬೋಗುಣಿ ಇಲ್ಲವೆ ಸಣ್ಣ ಬಟ್ಟಲಲ್ಲಿ ಮೊಟ್ಟೆಗಳನ್ನು ಹಾಕಿ, ಬೇಯಲು ಬೇಕಾದಷ್ಟು ನೀರನ್ನು ಹಾಕಿ ಮುಚ್ಚಿ ಇಡಿ. ನೀರಿಗೆ ಚಿಟಿಕೆ ಉಪ್ಪು ಹಾಕಿ 10 ನಿಮಿಷಗಳ ಕಾಲ ಚೆನ್ನಾಗಿ ಕುದಿಸಿರಿ. ನಂತರ ಶಾಖದಿಂದ ಹೊರ ತೆಗೆದು ನೀರನ್ನು ಚೆಲ್ಲಿ. ಬೋಗುಣಿಯಿಂದ ತೆಗೆದ ಮೊಟ್ಟೆಗಳನ್ನು ತಣ್ಣೀರಿನ ಕೆಳಗಿಟ್ಟು ತಣ್ಣಗಾಗುವವರೆ ಕಾಯಿರಿ. ಮೊಟ್ಟೆಯ ಶೆಲ್ ಅನ್ನು ಬಿಡಿಸಿ ತೆಗೆಯಿರಿ. ಬೇಯಿಸಿದ ಮೊಟ್ಟೆಗಳನ್ನು ಘನ ಅಥವಾ ನಿಮಗಿಷ್ಟವಾದ ಆಕಾರದಲ್ಲಿ ಕತ್ತರಿಸಿ ನಂತರ ಸಲಾಡ್ ಡ್ರೆಸ್ಸಿಂಗ್ ಹಾಗೂ ತರಕಾರಿಗಳನ್ನು ಸೇರಿಸಿ. ರುಚಿಗೆ ತಕ್ಕಷ್ಟು ಮಸಾಲೆ ಹಾಕಿ. ಬೇಯಿಸಿದ ಮೊಟ್ಟೆಯ ತುಂಡುಗಳನ್ನು ತರಕಾರಿ ಮಿಶ್ರಣಕ್ಕೆ ಸೇರಿಸಿ. ನಿಧಾನವಾಗಿ ಮಿಶ್ರಣ ಮಾಡಿ. ಈಗ ಐಸ್ಬರ್ಗ್ ಲೆಟಿಸ್ ಎಲೆಯನ್ನು ತೆಗೆದುಕೊಂಡು ನಿಧಾನವಾಗಿ ಸುರುಳಿಯಾಗಿ ಸುತ್ತಿಕೊಳ್ಳಿ, ಅದಕ್ಕೆ ಟೂತ್‌ಪಿಕ್ ಚುಚ್ಚಿ ಸುರಕ್ಷಿತಗೊಳಿಸಿ. ಲೆಟಿಸ್ ಕಪ್‌ಗಳನ್ನು ಲಂಚ್ ಬಾಕ್ಸ್ ನಲ್ಲಿ ಇಟ್ಟರೆ ತಿನ್ನಲು ರೆಡಿ. ಬೇಕಿದ್ದಲ್ಲಿ ಹಿಂದಿನ ರಾತ್ರಿಯೇ ಲೆಟಿಸ್ ಸಲಾಡ್ ಅನ್ನು ನೀವು ಮಾಡಿಟ್ಟುಕೊಂಡು, ತಯಾರಾದ ಲಂಚ್ ಬಾಕ್ಸ್ ಅನ್ನು ಫ್ರಿಡ್ಜ್ ನಲ್ಲಿ ಇಡಬಹುದು. ಮರುದಿನ ಈ ಲಂಚ್ ಬಾಕ್ಸ್ ಅನ್ನು ನಿಮ್ಮೊಂದಿಗೆ ಕೊಂಡೊಯ್ಯುಬಹುದು.

### ಎಗ್ ಮಫಿನ್



**ಮಾಡಲು ಬೇಕಾಗಿರುವುದು:**

- ಆರು ಮೊಟ್ಟೆಗಳು
- ಎರಡು ಟೇಬಲ್ ಚಮಚ ಗೋಧಿ ಹಿಟ್ಟು
- ಅರ್ಧ ಕಪ್ ಹಾಲು
- ಮೂರ್ನಾಲ್ಕು ಕಪ್ ತುರಿದ ಮೊಜ್ಜರೆಲ್ಲಾ ಚೀಸ್
- ಆಯ್ಕೆಯ ತರಕಾರಿಗಳು - ತುರಿದ ಜುಚ್ಚೀನಿ (ಕುಂಬಳಕಾಯಿ ಹೋಲುವ ಚೀನೀ ಕಾಯಿ), ಸಿಹಿ ಜೋಳ (ಸ್ವೀಟ್ ಕಾರ್ನ್), ಕ್ಯಾರೆಟ್, ಅಣಬೆ
- ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕಾಳು ಮೆಣಸು

**ವಿಧಾನ:**

ಒಲೆ ಅಥವಾ ಅವನ್‌ನಲ್ಲಿ 180 ಡಿಗ್ರಿ ಸಿ.ಗೆ ಪೂರ್ವಭಾವಿಯಾಗಿ ಕಾಯಿಸಿ. ದೊಡ್ಡ ಬಟ್ಟಲಿನಲ್ಲಿ ಮೊಟ್ಟೆ, ಹಾಲು ಮತ್ತು ಹಿಟ್ಟನ್ನು ಹಾಕಿ ಚೆನ್ನಾಗಿ ಕಲಸಿ. ತರಕಾರಿಗಳೊಂದಿಗೆ ಚೀಸ್ ಸೇರಿಸಿ ಮತ್ತು ಮೊಟ್ಟೆಯ ಮಿಶ್ರಣವನ್ನು ನಿಧಾನವಾಗಿ ಬೆರೆಸಿ. ನಂತರ ಉಪ್ಪು ಮತ್ತು ಕಾಳು ಮೆಣಸಿನ ಪುಡಿ ಹಾಕಿ ಸೇರಿಸಿ. ಚೆನ್ನಾಗಿ ಕಲಸಿದ ಮಿಶ್ರಣವನ್ನು ಮಫಿನ್ ಪ್ಯಾನ್ ಮೇಲೆ ಹಾಕಿ ಅವನ್ ಅಥವಾ ಒಲೆಯಲ್ಲಿ ಇರಿಸಿ. ಸಂಪೂರ್ಣವಾಗಿ ಬೆಂದು ಸಿದ್ಧವಾಗುವವರೆಗೆ, ಮಫಿನ್‌ಗಳು ಉಬ್ಬುವವರೆಗೆ ಸುಮಾರು 20 ರಿಂದ 25 ನಿಮಿಷಗಳ ಕಾಲ ಬೇಕಾಗುತ್ತದೆ. ಮಫಿನ್‌ಗಳನ್ನು ತಣ್ಣಗಾಗಿಸಿ ಮತ್ತು ಲಂಚ್ ಬಾಕ್ಸ್‌ನಲ್ಲಿಟ್ಟು ಪ್ಯಾಕ್ ಮಾಡಿ.

### ಬಿಎಂಟಿಸಿ ಚಾಲಕ–ನಿರ್ವಾಹಕರಿಗೆ ಹೈಕೋರ್ಟ್ ನ್ಯಾಯಮೂರ್ತಿ ಬುದ್ಧಿಮಾತು

# ‘ಪ್ರಯಾಣಿಕರ ಜೊತೆ ಸಭ್ಯತೆಯಿಂದ ವರ್ತಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೆಂಗಳೂರು ಮೆಟ್ರೊಪಾಲಿಟನ್ ಸಾರಿಗೆ ಸಂಸ್ಥೆ (ಬಿಎಂಟಿಸಿ) ಚಾಲಕರು ಮತ್ತು ನಿರ್ವಾಹಕರು ಪ್ರಯಾಣಿಕರ ಜೊತೆ ದಯಾಳುಗಳಾಗಿ ವರ್ತಿಸಬೇಕು’ ಎಂದು ಬುದ್ಧಿಮಾತು ಹೇಳಿರುವ ಹೈಕೋರ್ಟ್, ಮದ್ಯಪಾನ ಮಾಡಿ ಪ್ರಯಾಣಿಕರ ಜೊತೆ ಅನುಚಿತವಾಗಿ ವರ್ತಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಎಂಟಿಸಿ ನಿರ್ವಾಹಕರೊಬ್ಬರಿಗೆ ದಂಡ ವಿಧಿಸಿದ್ದ ಕೈಗಾರಿಕಾ ನ್ಯಾಯಮಂಡಳಿ ಆದೇಶವನ್ನು ಎತ್ತಿಹಿಡಿದಿದೆ.

ಶಿಸ್ತು ಪ್ರಾಧಿಕಾರದ ಆದೇಶದಲ್ಲಿ ದಂಡದ ಪ್ರಮಾಣವನ್ನು ಕನಿಷ್ಠ ಮೊತ್ತಕ್ಕೆ ಮಾರ್ಪಾಟು ಮಾಡಿದ್ದ ಕೈಗಾರಿಕಾ ನ್ಯಾಯಮಂಡಳಿಯ ಕ್ರಮವನ್ನು ಪ್ರಶ್ನಿಸಿ



ಬಿಎಂಟಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಟಿಕೆಟ್ ನೀಡುವುದು, ಹಣ ಪಡೆಯುವುದು, ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದು, ಇಳಿಸುವುದು, ಅವರಿಗೆ ಸಹಕಾರ ಮಾಡುವುದು, ಸೂಕ್ತ ಮಾಹಿತಿ ಒದಗಿಸುವುದು ನಿರ್ವಾಹಕರ ಆದ್ಯ ಕರ್ತವ್ಯ. ಉತ್ತಮ ನಿರ್ವಾಹಕರಾಗಿದ್ದರೆ ಅವರು ಎಲ್ಲರೊಂದಿಗೂ ಮಿತೃತ್ವ ಹೊಂದಿರುತ್ತಾರೆ, ಸಹಾಯಕರಾಗಿರುತ್ತಾರೆ ಮತ್ತು ಉತ್ತಮ ಸಂವಹನವನ್ನೂ ಹೊಂದಿರುತ್ತಾರೆ. ಹೀಗಾಗಿ ನಿರ್ವಾಹಕರು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು ಮತ್ತು ಪ್ರಯಾಣಿಕರಿಗೆ ಒದಗಿಸುವ ಸೇವೆ ಆಪ್ತವಾಗಿರಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಈ ಪ್ರಕರಣದಲ್ಲಿ ನಿರ್ವಾಹಕ ಪ್ರಯಾಣಿಕರ ಜೊತೆ ಕುಡಿದು ವರ್ತಿಸಿರುವುದು ಗಂಭೀರ ವಿಷಯ. ಇಂತಹ ಸನ್ನಿವೇಶಗಳು ಪ್ರಯಾಣಿಕರ ಪಾಲಿಗೆ ದುಃಸ್ವಪ್ನಗಳಾಗುತ್ತವೆ. ಕರ್ತವ್ಯನಿರತ ಸಮಯದಲ್ಲಿ ಮದ್ಯ ಸೇವಿಸಿ ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸಿರುವುದು ಸರಿಯಲ್ಲ. ಹಾಗಾಗಿ ಪ್ರತಿವಾದಿಯ ಮೂಲ ವೇತನವನ್ನು ಕಡಿತಗೊಳಿಸಿರುವ ಶಿಸ್ತು ಪ್ರಾಧಿಕಾರದ ಆದೇಶ ಸರಿಯಾಗಿಯೇ ಇದೆ. ಆದರೆ, ಈ ಆದೇಶವನ್ನು ಕೈಗಾರಿಕಾ ನ್ಯಾಯಮಂಡಳಿಯು ತನಗೆ ಅಧಿಕಾರ ಇಲ್ಲದಿದ್ದರೂ ಮಾರ್ಪಾಡು ಮಾಡುವ ಮೂಲಕ ತಪ್ಪೆಸಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಬಿಎಂಟಿಸಿ ಪರವಾಗಿ ಹೈಕೋರ್ಟ್ ವಕೀಲೆ ಎಚ್.ಆರ್.ರೇಣುಕಾ ವಾದ ಮಂಡಿಸಿದ್ದರು.

#### ಪ್ರಕರಣವೇನು?

‘ನಿರ್ವಾಹಕ ಸಿದ್ದರಾಜಯ್ಯ 2006ರ ಜುಲೈ 11ರಂದು ಬಿಎಂಟಿಸಿ ಬಸ್‌ನಲ್ಲಿದ್ದ ಪ್ರಯಾಣಿಕರ ಜತೆ ಅನುಚಿತವಾಗಿ ವರ್ತಿಸಿದ್ದರಲ್ಲದೆ, ಮದ್ಯಪಾನ ಸೇವನೆ ಮಾಡಿದ್ದರು’ ಎಂದು ಪ್ರಯಾಣಿಕರು ದೂರು ಸಲ್ಲಿಸಿದ್ದರು.

ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಸಿದ್ದರಾಜಯ್ಯ ಮದ್ಯಪಾನ ಮಾಡಿದ್ದು ದೃಢಪಟ್ಟಿತ್ತು. ಈ ಕುರಿತು ಡಿಪೊ ಮ್ಯಾನೇಜರ್ ವರದಿ ಸಲ್ಲಿಸಿದ್ದರು. ವರದಿಯನ್ನು ಆಧರಿಸಿ ಅವರ ವಿರುದ್ಧ ಆರೋಪ ನಿಗದಿ ಮಾಡಲಾಗಿತ್ತು. ಶಿಸ್ತು ಪ್ರಾಧಿಕಾರ ತನಿಖಾಧಿಕಾರಿಯನ್ನು ನೇಮಕ ಮಾಡಿತ್ತು. ತನಿಖಾಧಿಕಾರಿ ಎಲ್ಲ ಅಂಶಗಳನ್ನು ಪರಿಶಿಲಿಸಿ ವಿವರವಾದ ತನಿಖೆ ನಡೆಸಿ ಆರೋಪಗಳು ದೃಢಪಟ್ಟಿವೆ ಹಾಗಾಗಿ ದಂಡ ವಿಧಿಸಬೇಕು ಎಂದು ಶಿಫಾರಸು ಮಾಡಿದ್ದರು. ಈ ಶಿಫಾರಸನ್ನು ಅಂಗೀಕರಿಸಿದ್ದ ಪ್ರಾಧಿಕಾರವು 2014ರಲ್ಲಿ ಸಿದ್ದರಾಜಯ್ಯ ಅವರ ಮೂಲ ವೇತನವನ್ನು ಕಡಿತಗೊಳಿಸಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಸಿದ್ದರಾಜಯ್ಯ ಕೈಗಾರಿಕಾ ನ್ಯಾಯಮಂಡಳಿ ಮೊರೆ ಹೋಗಿದ್ದರು. ನ್ಯಾಯಮಂಡಳಿ, ಸಾರಿಗೆ ಸಂಸ್ಥೆ ನಡೆಸಿದ ಆಂತರಿಕ ತನಿಖೆ ನ್ಯಾಯಯುತವಾಗಿದೆ ಎಂದು ಒಪ್ಪಿದರೂ ಅದರಲ್ಲಿ ದಂಡದ ಪ್ರಮಾಣವನ್ನು ಕನಿಷ್ಠತಮಕ್ಕೆ ಇಳಿಸಿ ಮಾರ್ಪಾಡು ಮಾಡಿತ್ತು. ಇದನ್ನು ಪ್ರಶ್ನಿಸಿ ಬಿಎಂಟಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.



## ಶೂದ್ರ ನೆಲದ ಮಾತು ಪ್ರತಿಷ್ಠಾನದ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶೂದ್ರ ನೆಲದ ಮಾತು ಪ್ರತಿಷ್ಠಾನದ 2023ನೇ ಸಾಲಿನ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಕನ್ನಡ ಸಾಹಿತ್ಯ ಸಂಸ್ಕೃತಿಗೆ ನೀಡಿರುವ ಕೊಡುಗೆಗಾಗಿ ಕೊಡುವ ಕಿ.ರಂ. ನಾಗರಾಜ್ ಪ್ರಶಸ್ತಿಗೆ ಸಾಹಿತಿ ಜಿ.ಎಸ್. ಸಿದ್ಧಲಿಂಗಯ್ಯ ಅವರನ್ನು, ಪ್ರಯೋಗಶೀಲ ರೈತರಿಗೆ ನೀಡುವ ನಂಜಪ್ಪರೆಡ್ಡಿ ಪ್ರಶಸ್ತಿಗೆ ಜಿ. ಸುಶೀಲ್ ಅವರನ್ನು, ಅತ್ಯುತ್ತಮ ರಂಗನಟರಿಗೆ ನೀಡುವ ಕೆ. ಮರುಳಸಿದ್ದಪ್ಪ ಪ್ರಶಸ್ತಿಗೆ ಪ್ರಸನ್ನ ಹೆಗ್ಗೋಡು ಅವರನ್ನು ಆಯ್ಕೆ ಮಾಡಲಾಗಿದೆ.

2022ನೇ ಸಾಲಿನಲ್ಲಿ ಪ್ರಕಟವಾದ ಅತ್ಯುತ್ತಮ ಕವನ ಸಂಕಲನಕ್ಕೆ ನೀಡುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಗೆ ರೇಣುಕಾ ರಮಾನಂದ ಅವರ ‘ಸಂಬಾರ ಬಟ್ಟಲ ಕೊಡಿಸು’ ಕವನ ಸಂಕಲನ ಮತ್ತು ವೈಚಾರಿಕ ಸಾಹಿತ್ಯಕ್ಕೆ ನೀಡುವ ಕವಿ ಸಿದ್ಧಲಿಂಗಯ್ಯ ಪ್ರಶಸ್ತಿಗೆ ಎಚ್.ಟಿ. ಪೋತೆಯವರ ‘ಅಂಬೇಡ್ಕರ್ ಮತ್ತು...’ ಕೃತಿಯನ್ನು ಆಯ್ಕೆ ಮಾಡಲಾಗಿದೆ.

ಒಟ್ಟು ಸಾಹಿತ್ಯ ಸಾಧನೆಗೆ ನೀಡುವ ಕಿ.ರಂ. ನಾಗರಾಜ್ ಪ್ರಶಸ್ತಿ ಮತ್ತು ನಂಜಪ್ಪರೆಡ್ಡಿ ಪ್ರಗತಿಪರ ರೈತ ಪ್ರಶಸ್ತಿಗೆ ತಲಾ ₹ 20 ಸಾವಿರ ಜಿ.ಎಸ್. ಶಿವರುದ್ರಪ್ಪ ಕಾವ್ಯ ಪ್ರಶಸ್ತಿ, ಕೆ. ಮರುಳ ಸಿದ್ದಪ್ಪ ಉತ್ತಮ ರಂಗ ನಟ ಪ್ರಶಸ್ತಿ, ಸಿದ್ಧಲಿಂಗಯ್ಯ ಉತ್ತಮ ವೈಚಾರಿಕ ಸಾಹಿತ್ಯ ಪ್ರಶಸ್ತಿಗಳು ತಲಾ ₹ 10 ಸಾವಿರ, ಫಲಕ, ಸನ್ಮಾನ ಪತ್ರಗಳನ್ನು ಒಳಗೊಂಡಿವೆ.


ಪ್ರತಿಷ್ಠಾನದ ಅಧ್ಯಕ್ಷ ಎಚ್. ದಂಡಪ್ಪನವರ ಅಧ್ಯಕ್ಷತೆಯಲ್ಲಿ ಈ ಆಯ್ಕೆ ನಡೆದಿದೆ. ಡಿಸೆಂಬರ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಯಶವಂತ ಪ್ರೀತಿ ರೆಡ್ಡಿ ತಿಳಿಸಿದ್ದಾರೆ.



ಜಿ.ಎಸ್. ಸಿದ್ಧಲಿಂಗಯ್ಯ



ರೇಣುಕಾ ರಮಾನಂದ



ಪ್ರಸನ್ನ ಹೆಗ್ಗೋಡು



ಜಿ. ಸುಶೀಲ್



ಎಚ್.ಟಿ. ಪೋತೆ

### ಕೇಂದ್ರ ಸರ್ಕಾರದ ‘ಫ್ಲೆಕ್ಸಿ’ ಫಂಡ್ ದುರುಪಯೋಗ ಆರೋಪ

# ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ‘ಫ್ಲೆಕ್ಸಿ ಫಂಡ್’ ಅನ್ನು ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿಯ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಮಾತೃ ವಂದನಾ ಯೋಜನೆ ಅಡಿಯಲ್ಲಿ 2022–23ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಫ್ಲೆಕ್ಸಿ ಫಂಡ್ ಮತ್ತು ರಾಜ್ಯದ ಪಾಲಿನ ₹36.35 ಕೋಟಿ ಅನುದಾನವನ್ನು ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದಾರೆ’ ಎಂದು ಪ್ರತಿಭಟನಕಾರರು ದೂರಿದ್ದಾರೆ.

‘ಬೆಂಗಳೂರು ನಗರದಲ್ಲಿ ನಡೆದಿರುವ ಮಾತೃ ವಂದನಾ ಯೋಜನೆಯ ಅನುದಾನವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಈಗಾಗಲೇ ಲೋಕಾಯುಕ್ತದಲ್ಲಿ ದೂರು ನೀಡಲಾಗಿದೆ. ಇದರಲ್ಲಿ ಭಾಗಿಯಾಗಿರುವ ಎಲ್ಲ ಬಾಲ ವಿಕಾಸ ಯೋಜನಾಧಿಕಾರಿಗಳ ಮೇಲೆ ಸರ್ಕಾರ ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

‘ಮಾತೃಪೂರ್ಣ ಯೋಜನೆಯ ಬಗ್ಗೆ ಸರ್ಕಾರ ಸಮಗ್ರ ಅಧ್ಯಯನ, ಸಮೀಕ್ಷೆ ಮತ್ತು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಫಲಾನುಭವಿಗಳ ಹಿತದೃಷ್ಟಿಯಿಂದ ಪೌಷ್ಟಿಕ ಆಹಾರವನ್ನು (ಟೇಕ್‌ಹೋಂ) ಗರ್ಭಿಣಿ ಹಾಗೂ ಬಾಣಂತಿಯರಿಗೆ ವಿತರಿಸಬೇಕು. ಇಲ್ಲದಿದ್ದರೆ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದ್ದರಿಂದ, ನಿವೃತ್ತಿ ಹೊಂದಿರುವ ಎಲ್ಲ ಕಾರ್ಯಕರ್ತೆಯರಿಗೆ ಗ್ರಾಚ್ಯುಟಿ ನೀಡಬೇಕು. ಯಾವುದೇ ಮಾನದಂಡಗಳನ್ನು ವಿಧಿಸದೇ ಅಂಗನವಾಡಿ ಕಾರ್ಯಕರ್ತೆಯರಿಗೆ ಗೃಹಲಕ್ಷ್ಮಿ ಯೋಜನೆ ಸವಲತ್ತುಗಳನ್ನು ನೀಡಬೇಕು’ ಎಂದು ತಿಳಿಸಿದ್ದಾರೆ.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿಯ ಸದಸ್ಯರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

### ನಗರದಲ್ಲಿ ಇಂದು

**ಕರ್ನಾಟಕದಲ್ಲಿ ರಾಗಿಯ ಸುಸ್ಥಿರ ಉತ್ಪಾದನಾ ಪದ್ಧತಿಗಳು:** ಉದ್ಘಾಟನೆ: ಎಸ್.ವಿ. ಸುರೇಶ್, ಅಧ್ಯಕ್ಷತೆ: ವೆಂಕಟೇಶ್,ಅತಿಥಿಗಳು: ರವೀಂದ್ರ, ಜಿ. ಕೃಷ್ಣಪ್ರಸಾದ್, ಎನ್.ಬಿ. ಪ್ರಕಾಶ್, ಎಂ.ಎಸ್. ಉಮಾ, ಸ್ಥಳ: ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10.30

**ವಿಶ್ವ ಮೊಟ್ಟೆ ದಿನಾಚರಣೆ: ಉದ್ಘಾಟನೆ:** ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಬೈರತಿ ಸುರೇಶ್, ಅತಿಥಿಗಳು: ಕೆ. ವೆಂಕಟೇಶ್, ಲಕ್ಷ್ಮಿ ಹೆಬ್ಬಾಳ್ಕರ್, ಸಿ. ನಾರಾಯಣ ಸ್ವಾಮಿ, ಆಯೋಜನೆ: ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ, ಸ್ಥಳ: ಕರ್ನಾಟಕ ವೈದ್ಯಕೀಯ ಪರಿಷತ್ತು, ಹೆಬ್ಬಾಳ, ಬೆಳಿಗ್ಗೆ 11

**ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ:** ಅತಿಥಿಗಳು: ಬಾಲತ್ಯಾಗರಾಜನ್, ವಿಷ್ಣು ಭರತ್, ಆಯೋಜನೆ ಮತ್ತು ಸ್ಥಳ: ಎಪಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಸೋಮನಹಳ್ಳಿ, ಬೆಳಿಗ್ಗೆ 11

**ಬಿ. ಶ್ರೀಪಾದ್ ಭಟ್ ಅವರ ‘ವಿಷವಟ್ಟಿ ಸುಡುವಲ್ಲಿ’ ಪುಸ್ತಕ ಬಿಡುಗಡೆ:** ಸಬೀಹಾ ಭೂಮಿಗೌಡ, ಪುಸ್ತಕ ಪರಿಚಯ: ರವಿಕುಮಾರ್ ಬಾಗಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಅತಿಥಿಗಳು: ಎಸ್. ಜಿ. ಸಿದ್ಧರಾಮಯ್ಯ, ಪಿ.ಟಿ. ಶ್ರೀನಿವಾಸ್ ನಾಯಕ, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಅರಮನೆ ರಸ್ತೆ, ಸಂಜೆ 4.30

**‘ಇರದ ಇರುವಿನ ತಾವು’ ಪುಸ್ತಕ ಬಿಡುಗಡೆ:** ಅತಿಥಿಗಳು: ಪಿ. ಶೇಷಾದ್ರಿ, ಎಂ.ಆರ್. ದತ್ತಾತ್ರಿ, ಉಪಸ್ಥಿತಿ: ರಮೇಶ ಉಡುಪ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಬುಕ್ ಬ್ರಹ್ಮ ಪ್ರೈವೇಟ್ ಲಿಮಿಟೆಡ್, ಎಲೆಕ್ಟ್ರಾನಿಕ್ಸ್ ಸಿಟಿ, ಸಂಜೆ 5

**ಪ್ರವಚನ ವಾಹಿನಿ:** ‘ಪಿತೃ ಕಲ್ಪ’ ಕುರಿತು ಉಪನ್ಯಾಸ: ಕೃಷ್ಣರಾಜಭಟ್ ಕುಟ್ಪಾಡಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

**ಹರಿದಾಸ ಮಂಜರಿ:** ಗಾಯನ: ಪ್ರತೀಕ್ಷ ಜಿ. ರಾವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in



### ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಘಟಿಕೋತ್ಸವ

# ಸಕಾರಾತ್ಮಕ ಬದಲಾವಣೆಗೆ ಸಲಹೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 27ನೇ ಘಟಿಕೋತ್ಸವ ಗುರುವಾರ ನಡೆಯಿತು.

2021–23ನೇ ಸಾಲಿನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ) ಪದವಿಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿ ರಾಕುಟೆನ್ ಇಂಡಿಯಾ ಚೀಫ್ ಪೀಪಲ್ ಆಫೀಸರ್ ನಳಿನಿ ಜಾರ್ಜ್ ಮಾತನಾಡಿ, ‘ಪದವಿ ಪಡೆದ ವಿದ್ಯಾರ್ಥಿಗಳು ಮುಂದಿನ ವೃತ್ತಿ ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಟೊಯೊಟಾ ಸಮೂಹದ ಕಾರ್ಯನಿರ್ವಾಹಕ ಸಲಹೆಗಾರ ಟಿ.ಆರ್. ಪರಶುರಾಮನ್ ಮಾತನಾಡಿ, ಆವಿಷ್ಕಾರಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಬೇಕು. ಅಂಥ ಬದಲಾವಣೆಗೆ ಯುವಜನರು ಮುಂದಾಗಬೇಕು’ ಎಂದು ತಿಳಿಸಿದರು.

ಮಾರ್ಕೆಟಿಂಗ್, ಮಾನವ ಸಂಪನ್ಮೂಲ, ಹಣಕಾಸು, ಆಪರೇಷನ್ ಮ್ಯಾನೇಜ್‌ಮೆಂಟ್, ಉದ್ಯಮಶೀಲತೆ, ಅನಲಿಟಿಕ್ಸ್ ಮತ್ತು ಇಂಟರ್‌ನ್ಯಾಷನಲ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಸಹಿತ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಚಿನ್ನ, ಬೆಳ್ಳಿ ಪದಕ ಪ್ರದಾನ ಮಾಡಲಾಯಿತು. ಲಿಪ್ಸಿತಾದಾಸ್ ಸ್ಮರಣಾರ್ಥ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿ, ಅಭಿನವ್ ಗುಪ್ತಾ ಸ್ಮರಣಾರ್ಥ ನಗದು ಪ್ರಶಸ್ತಿ ನೀಡಲಾಯಿತು.

ಗೋಕುಲ ಎಜುಕೇಶನ್ ಫೌಂಡೇಶನ್‌ನ ನಿರ್ದೇಶಕ ಆನಂದರಾಮ್, ಜಿಎಎಫ್ ಆರ್ಥಿಕ ವಿಭಾಗದ ಮುಖ್ಯಸ್ಥ ಜಿ. ರಾಮಚಂದ್ರ, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕರಾದ ಮಾನಸಾ ನಾಗಭೂಷಣಂ, ಮೌಲ್ಯಮಾಪನ ಕುಲಸಚಿವರಾದ ಸವಿತಾರಾಣಿ ರಾಮಚಂದ್ರನ್ ಇದ್ದರು.




ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಘಟಿಕೋತ್ಸವದಲ್ಲಿ ನಮಿತಾ ಎಸ್‌.ಜಿ. ಚಿನ್ನದ ಪದಕ ಸ್ವೀಕರಿಸಿದರು. ರಾಕುಟೆನ್ ಇಂಡಿಯಾ ಚೀಫ್ ಪೀಪಲ್ ಆಫೀಸರ್ ನಳಿನಿ ಜಾರ್ಜ್, ಜಿಎಎಫ್ ಆರ್ಥಿಕ ವಿಭಾಗದ ಮುಖ್ಯಸ್ಥ ಜಿ. ರಾಮಚಂದ್ರ, ಟೊಯೊಟಾ ಸಮೂಹದ ಕಾರ್ಯನಿರ್ವಾಹಕ ಸಲಹೆಗಾರ ಟಿ.ಆರ್‌. ಪರಶುರಾಮನ್ ಗೋಕುಲ ಎಜುಕೇಶನ್ ಫೌಂಡೇಶನ್‌ನ ನಿರ್ದೇಶಕ ಆನಂದರಾಮ್‌, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕರಾದ ಮಾನಸಾ ನಾಗಭೂಷಣಂ ಇದ್ದರು.

## ಮಳೆ ಕೊರತೆಯಿಂದ ಲೋಡ್ ಶೆಡ್ಡಿಂಗ್: ರಾಮಲಿಂಗಾರೆಡ್ಡಿ

**ರಾಮನಗರ:** ‘ರಾಜ್ಯದಲ್ಲಿ ಬರಗಾಲವಿರುವುದರಿಂದ ಜಲಾಶಯಗಳಲ್ಲೂ ನೀರು ಕಡಿಮೆಯಾಗಿದೆ. ಇದರಿಂದಾಗಿ ವಿದ್ಯುತ್ ಉತ್ಪಾದನೆ ಕುಸಿದಿದ್ದು, ಸ್ವಲ್ಪ ಲೋಡ್ ಶೆಡ್ಡಿಂಗ್ ಇದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಅಘೋಷಿತ ಲೋಡ್ ಶೆಡ್ಡಿಂಗ್ ಕುರಿತು ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ವಿದ್ಯುತ್‌ಗಾಗಿ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮನವಿ ಮಾಡಿದ್ದಾರೆ. ಜೊತೆಗೆ ನೆರೆಯ ರಾಜ್ಯಗಳ ಮೊರೆ ಹೋಗಲಾಗಿದೆ’ ಎಂದರು.

**ಅನುದಾನ ಕಡಿತ ನಿಜ:** ‘ಬಿಜೆಪಿ ಶಾಸಕ ಮುನಿರತ್ನ ಅವರ ರಾಜರಾಜೇಶ್ವರಿ ನಗರ ಕ್ಷೇತ್ರಕ್ಕೆ ಅನುದಾನ ಕಡಿತವಾಗಿರುವುದು ನಿಜ. ಐದು ವರ್ಷದ ಹಿಂದಿನ ಸ್ಥಿತಿ ಹೇಗಿತ್ತು ಎಂಬುದನ್ನು ಮುನಿರತ್ನ ಒಮ್ಮೆ ನೆನಪಿಸಿಕೊಳ್ಳಲಿ. ಆಗ ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ ಅವರು ಕ್ಷೇತ್ರಕ್ಕೆ ₹400 ಕೋಟಿ ಅನುದಾನ ಕೊಟ್ಟಿದ್ದರು. ಬಿಜೆಪಿ ಬಂದ ಬಳಿಕ ₹260 ಕೋಟಿ ಕಡಿತ ಮಾಡಿದ್ದರು’ ಎಂದು ಗಮನ ಸೆಳೆದರು.

‘ನಂತರ ಅಧಿಕಾರಕ್ಕೆ ಬಂದ ಬಿಜೆಪಿಯವರು ಕಾಂಗ್ರೆಸ್ ಶಾಸಕರಿಗೆ ನೀಡಿದ್ದ ₹7 ಸಾವಿರ ಕೋಟಿ ಅನುದಾನದ ಪೈಕಿ, ₹5 ಸಾವಿರ ಕೋಟಿ ಕಡಿತ ಮಾಡಿದ್ದರು. ಬೆಂಗಳೂರಿನ 14 ಬಿಜೆಪಿ ಶಾಸಕರು ₹9 ಸಾವಿರ ಕೋಟಿ ಅನುದಾನ ತೆಗೆದುಕೊಂಡಿದ್ದರು.12 ಕಾಂಗ್ರೆಸ್ ಶಾಸಕರಿಗೆ ಕೇವಲ ₹1,450 ಕೋಟಿ ಕೊಟ್ಟಿದ್ದರು. ಅನುದಾನ ಕಡಿತವಾಗಿದೆ ಎನ್ನುವವರು ಹಿಂದೆ ಏನಾಗಿತ್ತು ಎಂಬುದನ್ನು ಸಹ ಹೇಳಬೇಕಲ್ಲವೆ? ಬಿಜೆಪಿಯವರು ಮಾಡಿದ್ದನ್ನು ಜನರ ಮುಂದಿಡಬೇಕಲ್ಲವೆ? ಆದರೂ, ಮುನಿರತ್ನ ಅವರಿಗೆ ಅನುದಾನ ಕೊಡಿ ಎಂದು ಡಿಸಿಎಂ ಶಿವಕುಮಾರ್‌ಗೆ ಹೇಳುತ್ತೇನೆ’ ಎಂದರು.

#### ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.







#### ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಬದಲಾವಣೆ: ಆಂದೋಲನದ ಎಚ್ಚರಿಕೆ


# ಬಸವನಗುಡಿ ವಾರ್ಡ್ ಹೆಸರು ಬದಲಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವಾರ್ಡ್ ಮರುವಿಂಗಡಣೆಯಲ್ಲಿ ಬಸವನಗುಡಿ ವಾರ್ಡ್ ಹೆಸರನ್ನು ದೊಡ್ಡ ಗಣಪತಿ ಎಂದು ಬದಲಿಸಿರುವುದಕ್ಕೆ ಸ್ಥಳೀಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಾರ್ಡ್ ಮರು ವಿಂಗಡಣೆಯ ಕರಡು ಪಟ್ಟಿಯಲ್ಲಿ ಬಸವನಗುಡಿ ವಿಧಾನಸಭೆ ಕ್ಷೇತ್ರದ 198ನೇ ವಾರ್ಡ್ ಹೆಸರು ಬಸವನಗುಡಿ ಎಂದಿತ್ತು. ಆದರೆ, ಅಂತಿಮ ಅಧಿಸೂಚನೆಯಲ್ಲಿ ಇದನ್ನು ‘ದೊಡ್ಡ ಗಣಪತಿ’ ಎಂದು ಬದಲಿಸಲಾಗಿದೆ. ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಧಿಸೂಚನೆಯಾಗಿದ್ದು, ಇದನ್ನು ಕೂಡಲೇ ಬದಲಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

‘ಬಸವನಗುಡಿಗೆ 130ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ರಾಜ್ಯದಲ್ಲಷ್ಟೇ ಅಲ್ಲ, ವಿದೇಶಗಳಲ್ಲೂ ಬಸವನಗುಡಿಗೆ ‘ಐಕಾನಿಕ್’ ಸ್ಥಾನವಿದೆ. ಇತಿಹಾಸ ಪ್ರಸಿದ್ಧವಾದ ದೊಡ್ಡ ಬಸವನ ದೇವಸ್ಥಾನದಿಂದಲೇ ಬಸವನಗುಡಿಯಾಗಿದ್ದು, ಇದನ್ನು ಬದಲಿಸಲಾಗಿದೆ. ಇದಕ್ಕೆ ಅನುಸರಿಸಿರುವ ಮಾನದಂಡವಾದರೂ ಏನು’ ಎಂದು ಸ್ಥಳೀಯರಾದ ಕೆ.ಆರ್. ಮೋಹನ್ ಪ್ರಶ್ನಿಸಿದರು.




‘ಬಸವನಗುಡಿಗೆ ನಾವೆಲ್ಲರೂ ಮಾನಸಿಕವಾಗಿ ಹೊಂದಿಕೊಂಡಿದ್ದೇವೆ. ಇದು ನಮ್ಮ ಜೀವನದ ಭಾಗವಾಗಿದೆ. ಆದರೆ ವಾರ್ಡ್ ಹೆಸರನ್ನು ಯಾವ ಕಾರಣಕ್ಕೆ ಬದಲಾಯಿಸಲಾಗಿದೆ ಎಂಬ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೂ ಮಾಹಿತಿ ಇಲ್ಲ. ಸ್ಥಳೀಯ ಶಾಸಕ ರವಿ ಸುಬ್ರಮಣ್ಯ ಅವರಿಗೂ ಗೊತ್ತಿಲ್ಲ. ಯಾರು ಹೆಸರು ಬದಲಿಸಿದರು ಎಂಬುದಕ್ಕೆ ಉತ್ತರ ಸಿಗುತ್ತಿಲ್ಲ. ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ನಗರಾಭಿವೃದ್ಧಿ ಇಲಾಖೆಗೆ ಇ–ಮೇಲ್ ಕಳುಹಿಸಲಾಗಿದೆ. ಕೂಡಲೇ ದೊಡ್ಡ ಗಣಪತಿ ಎಂಬ ಹೆಸರಿನ ಬದಲು ಹಿಂದಿನಂತೆ ಬಸವನಗುಡಿ ಎಂದೇ ಹೆಸರಿಸಬೇಕು ಎಂದು ಮನವಿ ಮಾಡಿಕೊಳ್ಳಲಾಗಿದೆ’ ಎಂದು ಸ್ಥಳೀಯ ನಿವಾಸಿ ಸತ್ಯಲಕ್ಷ್ಮಿ ರಾವ್ ಹೇಳಿದರು.

‘ಸ್ಥಳೀಯರ ಅಭಿಪ್ರಾಯವಿಲ್ಲದೆ ಹೆಸರು ಬದಲಿಸಲಾಗಿದೆ. ಶಾಸಕರು, ಮಾಜಿ ಕಾರ್ಪೊರೇಟರ್‌ಗಳು ಯಾರಿಗೂ ಇದರ ಮಾಹಿತಿ ಇಲ್ಲ. ಸ್ಥಳೀಯರಿಗೆ ಹೆಸರು ಬದಲಿಸಿರುವ ಬಗ್ಗೆ ಸಮ್ಮತಿ ಇಲ್ಲ. ಹೀಗಾಗಿ ನಾವೆಲ್ಲ ಸಹಿ ಸಂಗ್ರಹ ಮಾಡಿದ್ದೇವೆ. ಬಸವನಗುಡಿ ವಾರ್ಡ್ ಎಂದೇ ಹೆಸರಿಸಬೇಕು ಎಂದು ಹೋರಾಟ ಮಾಡಲಿದ್ದೇವೆ. ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರಿಗೂ ಮನವಿ ಮಾಡಲಿದ್ದೇವೆ. ನಮ್ಮ ಬಸವನಗುಡಿಯನ್ನು ನಮಗೆ ಉಳಿಸಿಕೊಡಿ ಎಂಬುದೇ ನಮ್ಮ ಆಗ್ರಹ’ ಎಂದು ಭೂಷಣ್ ಮಾಹಿತಿ ನೀಡಿದರು.

ಬಸವನಗುಡಿ ವಿಧಾನಸಭೆ ಕ್ಷೇತ್ರದಲ್ಲಿ ಆರು ವಾರ್ಡ್‌ಗಳಿವೆ. ಇದರಲ್ಲಿ ಮೂರು ವಾರ್ಡ್‌ಗಳ ಹೆಸರನ್ನು ಅಂತಿಮ ಅಧಿಸೂಚನೆಯಲ್ಲಿ ಬದಲಿಸಲಾಗಿದೆ. 196– ಹನುಮಂತನಗರ ವಾರ್ಡ್ ಗವಿ ಗಂಗಾಧರೇಶ್ವರ; 198– ಬಸವನಗುಡಿ ವಾರ್ಡ್ ದೊಡ್ಡ ಗಣಪತಿ; 200– ಗಿರಿನಗರ ವಾರ್ಡ್ ಸ್ವಾಮಿ ವಿವೇಕಾನಂದ ಎಂದು ಬದಲಾಗಿದೆ. 197– ಶ್ರೀನಗರ, 199– ವಿದ್ಯಾಪೀಠ ವಾರ್ಡ್ ಹೆಸರು ಬದಲಾಗಿಲ್ಲ.

# ‘ವಲಯ ಆಯುಕ್ತರಿಗೆ ಸಂಪೂರ್ಣ ಅಧಿಕಾರ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾರ್ವಜನಿಕರ ದೂರುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಪರಿಹಾರ ಕಲ್ಪಿಸಬೇಕು ಎಂದು ಹೊಸದಾಗಿ ಅಧಿಕಾರ ಸ್ವೀಕರಿಸಿದ ಬಿಬಿಎಂಪಿಯ ಎಂಟು ವಲಯ ಆಯುಕ್ತರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು.

ನೂತನ ವಲಯ ಆಯುಕ್ತರೊಂದಿಗೆ ಗುರುವಾರ ಸಭೆ ನಡೆಸಿ ಅವರು ಮಾತನಾಡಿದರು.

ಸಾರ್ವಜನಿಕ ಕೆಲಸ ಸುಗಮವಾಗಲು ವಲಯ ಆಯುಕ್ತರನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ತಮ್ಮ ವಲಯ ವ್ಯಾಪ್ತಿಯ ಸಂಪೂರ್ಣ ಅಧಿಕಾರ ನಿರ್ವಹಣೆ, ಸರ್ಕಾರದ ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಬೇಕು. ಸಾರ್ವಜನಿಕರ ಅಹವಾಲುಗಳನ್ನು ವಲಯ ಆಯುಕ್ತರ ಕಚೇರಿಗಳಲ್ಲೇ ಬಗೆಹರಿಯಬೇಕು ಎಂದು ಹೇಳಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಇದ್ದರು.

**ವಲಯ ಆಯುಕ್ತರು:** ಪೂರ್ವ– ಆರ್. ಸ್ನೇಹಲ್, ಪಶ್ಚಿಮ– ಡಾ.ಆರ್. ಎಲ್. ದೀಪಕ್, ದಕ್ಷಿಣ– ಆರ್. ವಿನೋಥ್ ಪ್ರಿಯಾ, ಯಲಹಂಕ– ಕರೀಗೌಡ, ಮಹದೇವಪುರ– ಇಬ್ರಾಹಿಂ ಮೈಗೂರು, ಬೊಮ್ಮನಹಳ್ಳಿ– ಎಸ್. ರಮ್ಯಾ, ರಾಜರಾಜೇಶ್ವರಿ ನಗರ– ವಿಕಾಸ್ ಕಿಶೋರ್ ಸುರೋಳ್ಕರ್, ದಾಸರಹಳ್ಳಿ –ಪ್ರೀತಿ ಗೆಹ್ಲೋಟ್.



# ರಾಜ್ಯಮಟ್ಟದ ಕವನ ವಾಚನ ಸ್ಪರ್ಧೆ 31ಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಕಲಾ ಕಾಲೇಜಿನ ಕರ್ನಾಟಕ ಸಂಘ ಮತ್ತು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಸಂಯುಕ್ತವಾಗಿ ಪದವಿ ವಿದ್ಯಾರ್ಥಿಗಳಿಗೆ ಅ.31ರಂದು ‘ಕಾವ್ಯಾನಂದ ಸ್ಮರಣಾರ್ಥ’ ರಾಜ್ಯಮಟ್ಟದ ಕವನ ವಾಚನ ಸ್ಪರ್ಧೆಯನ್ನು ಏರ್ಪಡಿಸಿದೆ.

‘ಕಾವ್ಯಾನಂದ’ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ.ಸಿದ್ದಯ್ಯ ಪುರಾಣಿಕರ ಸ್ಮರಣಾರ್ಥ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆಯುವ ಈ ಸ್ಪರ್ಧೆಗೆ ಆಸಕ್ತ ಪದವಿ ವಿದ್ಯಾರ್ಥಿಗಳು ಕಾಲೇಜಿನ ಪ್ರಾಂಶುಪಾಲರ ದೃಢೀಕರಣ ಪತ್ರದೊಂದಿಗೆ ಭಾಗವಹಿಸಬಹುದು. ಒಂದು ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರವೇಶ ಉಚಿತ.

ವಾಚಿಸುವ ಕವನ ಸ್ವಂತದ್ದಾಗಿರಬೇಕು. ಆಯ್ದ ಕವನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು. ಪ್ರಥಮ ಬಹುಮಾನ ₹10,000, ದ್ವಿತೀಯ ಬಹುಮಾನ ₹8,000, ತೃತೀಯ ಬಹುಮಾನ ₹5,000 ಹಾಗೂ ಎರಡು ಸಮಾಧಾನಕರ ಬಹುಮಾನ ತಲಾ ₹ 2,000. ಆಸಕ್ತರು ಸಂಪರ್ಕಿಸಿ ಕಾರ್ಯದರ್ಶಿ, ಕರ್ನಾಟಕ ಸಂಘ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು -01, ವಾಟ್ಸ್‌ಆ್ಯಪ್ ಸಂಖ್ಯೆ 90604 00677

# ಕನ್ನಡ ಅಧ್ಯಾಪಕರ ಒಕ್ಕೂಟದ ಪದಾಧಿಕಾರಿಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ನಗರ ವಿಶ್ವವಿದ್ಯಾಲಯದ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟಕ್ಕೆ ವಿ.ವಿ ಪುರ ಪ್ರಥಮದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಬೊಮ್ಮೇಗೌಡ ಆಯ್ಕೆಯಾಗಿದ್ದಾರೆ.

ಜಗದ್ಗುರು ರೇಣಕಾಚಾರ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ನಡೆದ ಒಕ್ಕೂಟದ (2023–26) ಚುನಾವಣೆಯಲ್ಲಿ ಕಾರ್ಯದರ್ಶಿಯಾಗಿ ಸರ್ಕಾರಿ ಕಲಾ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ರುದ್ರೇಶ್ ಅದರಂಗಿ, ಖಜಾಂಚಿಯಾಗಿ ಶೇಷಾದ್ರಿಪುರ ವಾಣಿಜ್ಯ ಕಾಲೇಜಿನ ಕನ್ನಡ ಉಪನ್ಯಾಸಕಿ ಪೂರ್ಣಿಮಾ ಎಸ್. ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



## PUBLIC NOTICE

My client intends to purchase the Property mentioned and described in the Schedule hereunder from **(1) Mrs. Natasha Ravindran, (2) Ms. Upasini Ashit** and **(3) Ms. Sangeetha Purushothaman**, all three daughters of Late Mooliyil Purushothaman (“**Owners**”). The Owners represent that they are the absolute owners of the Schedule Property and have a good marketable, right, title and interest therein and that apart from them there are no other person/s having any right or claim over the Schedule Property. The Owners further represents that, they have not entered into any Agreements/ MoU entered with any third party and that the Owners have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within Fifteen (15) days** from the date of this Notice with the Undersigned, failing which, my client shall proceed with the above-mentioned transaction.

**SCHEDULE**

All that piece and parcel of the property bearing BBMP Khata No.1 (earlier bearing House No.10), BBMP PID No.76-111-1, situated at Palmgrove Road, Victoria Layout, in BBMP Ward No.111, Bengaluru, measuring **East to West 72.75 feet and North to South 134.5 feet, totally measuring 9,996 square feet** and bounded on the :

East by : Property bearing Old No.6 and Victoria Road
West by : Palmgrove Road
North by : Victoria Road
South by : Property bearing Old No.9 and Palmgrove Road.

**Jayanth M Pattanshetti**
Advocate,
**Jayanth Pattanshetti Associates LLP**
102, Ground Floor, “Rams Infantry Manor”, No. 70, Infantry Road, Bengaluru-560 001.
Ph: 080 25593195/25581469
Bengaluru
Date: 12-10-2023


75 Years of Prestige
AWARDED Superbrands INDIA Consumer Validated 2023
ಪ್ರೆಸ್ಟೀಜ್
ಶುಭ ಉತ್ಸವ
ನಾವೀನ್ಯತೆಯ 75 ವರ್ಷಗಳ ಸಂಭ್ರಮ.
16ನೇ ಸೆಪ್ಟೆಂಬರ್ - 15 ನವೆಂಬರ್, 2023
ಖರೀದಿಸಿ
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ ಪ್ರೆಷರ್ ಕುಕ್ಕರ್ 1 ಯೂನಿಟ್
@15% ರಿಯಾಯಿತಿ*
+
ಪಡೆಯಿರಿ ಉಚಿತ*
ಫ್ರೈ ಪ್ಯಾನ್ 18 ಸೆ.ಮೀ 1 ಯೂನಿಟ್
ಮೌಲ್ಯ ₹710.00*
ಖರೀದಿಸಿ
ಎಂಡ್ಯುರಾ 1000 ವ್ಯಾಟ್ ಮಿಕ್ಸರ್ ಗ್ರೈಂಡರ್ 6 ಜಾರ್ 1 ಯೂನಿಟ್
@25% ರಿಯಾಯಿತಿ*
ಹಿಟ್ಟು ಕಲಸುವುದು, ತರಕಾರಿ ಕತ್ತರಿಸುವುದು, ಜ್ಯೂಸ್ ತಯಾರಿಕೆ, ಚಟ್ನಿ ಮತ್ತು ಮಸಾಲ ಗ್ರೈಂಡ್ ಮಾಡುವುದು ಹಾಗೂ ಸ್ಟೋರ್ ಮಾಡುವುದು
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*
ಖರೀದಿಸಿ
3 ಯುನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್ 1 ಸೆಟ್*
ಮೌಲ್ಯ ₹3 825.00*
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*
ಖರೀದಿಸಿ
ಇಂಡಕ್ಷನ್ ಕುಕ್‌ಟಾಪ್ PIC 3.1 V3 1 ಯೂನಿಟ್
@25% ರಿಯಾಯಿತಿ*
ಆಟೊಮ್ಯಾಟಿಕ್ ವಿಸಲ್ ಕೌಂಟರ್‌ನೊಂದಿಗೆ
+
ಪಡೆಯಿರಿ ಉಚಿತ*
ಓಮ್ನಿ ತವಾ 28 ಸೆ.ಮೀ 1 ಯೂನಿಟ್
ಮೌಲ್ಯ ₹1 400.00*
ಖರೀದಿಸಿ
ರಾಯಲ್ ಪ್ಲಸ್ 3ಬಿ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್ 1 ಯೂನಿಟ್
@35% ರಿಯಾಯಿತಿ*
10 YEAR WARRANTY ON GLASS
+
ಪಡೆಯಿರಿ ಉಚಿತ*
ಸ್ಟೈನ್‌ಲೆಸ್ ಸ್ಟೀಲ್ ಸ್ವಚ್ಛ್ 3ಲೀ. ಪ್ರೆಷರ್ ಕುಕ್ಕರ್ 1 ಯೂನಿಟ್
ಮೌಲ್ಯ ₹2 420.00*
ಖರೀದಿಸಿ
ಪ್ರೊವೊ ಚಿಮಣಿ 1 ಯೂನಿಟ್
@40% ರಿಯಾಯಿತಿ*
+
ಪಡೆಯಿರಿ ಉಚಿತ*
ಸ್ವಚ್ಛ್ ಹಾಬ್ 3ಬಿ 1 ಯೂನಿಟ್
ಮೌಲ್ಯ ₹15 995.00*
ಪರಿಚಯಿಸುತ್ತಿದ್ದೇವೆ
JUDGE® By Prestige®
ಗುಣಮಟ್ಟ ಕೈಗೆಟುಕುವ ದರದಲ್ಲಿ
ಪ್ರೆಷರ್ ಕುಕ್ಕರ್ 3ಲೀ
1 ಯೂನಿಟ್ ಆರಂಭಿಕ ಬೆಲೆ
₹899.00*
ಕುಕ್‌ವೇರ್
1 ಯೂನಿಟ್ ಆರಂಭಿಕ ಬೆಲೆ
₹449.00*
ಗ್ಯಾಸ್ ಸ್ಟವ್
1 ಯೂನಿಟ್ ಆರಂಭಿಕ ಬೆಲೆ
₹1 899.00*
ಮಿಕ್ಸರ್ ಗ್ರೈಂಡರ್
1 ಯೂನಿಟ್ ಆರಂಭಿಕ ಬೆಲೆ
₹1 999.00*
ಡಿನ್ನರ್ ಸೆಟ್
1 ಸೆಟ್ ಆರಂಭಿಕ ಬೆಲೆ
₹1 499.00*
ಪ್ರೆಸ್ಟೀಜ್ ಜಡ್ಜ್‌ನ ಉತ್ಪನ್ನ ಶ್ರೇಣಿಗಳ ಮೇಲೆ ಹೇಳಲಾದ ಬೆಲೆಗಳು ಉತ್ಪನ್ನದ ಆಫರ್ ಬೆಲೆಯನ್ನು ಪ್ರತಿನಿಧಿಸುತ್ತದೆ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ)
*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. 3 ಯುನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್‌ನಲ್ಲಿ ಫ್ರೈ ಪ್ಯಾನ್ –22 ಸೆ.ಮೀ., ಗ್ಲಾಸ್ ಮುಚ್ಚಳದೊಂದಿಗೆ ಕಡಾಯಿ–22ಸೆ.ಮೀ, ಗ್ಲಾಸ್ ಮುಚ್ಚಳದೊಂದಿಗೆ ಸಾಸ್ ಪ್ಯಾನ್ – 16 ಸೆ.ಮೀ ಒಳಗೊಂಡಿರುತ್ತದೆ. ಕೊಡುಗೆಗಳು ಆಯ್ದ ಮಾದರಿಗಳ ಮೇಲೆ ದಾಸ್ತಾನು ಇರುವವರೆಗೆ ಮಾತ್ರ. ಕೊಡುಗೆಗಳು ಆಯ್ದ ಸ್ಟೋರ್‌ಗಳಲ್ಲಿ ಮಾತ್ರ ಲಭ್ಯವಿರುತ್ತದೆ. ಸ್ಟೈನ್‌ಲೆಸ್ ಸ್ಟೀಲ್ ಪ್ರೆಷರ್‌ಕುಕ್ಕರ್‌ನ ಕೊಡುಗೆಗಳು ಕೇವಲ ಎಸ್‌ಎಸ್ ಡಿಲಕ್ಸ್ ಆಲ್ಫಾ ಸ್ವಚ್ಛ್ ಶ್ರೇಣಿಗೆ ಮಾತ್ರ ಅನ್ವಯಿಸುತ್ತದೆ. ಕೊಡುಗೆಗಳು ತಮಿಳುನಾಡು, ಕರ್ನಾಟಕ, ಗೋವಾ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅನ್ವಯಿಸುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ಜಡ್ಜ್® ಲೋಗೋ ಭಾರತದಲ್ಲಿ ಹಾರ್ವುಡ್ ಹೋಮ್‌ವೇರ್ಸ್ ಲಿಮಿಟೆಡ್‌ನ ನೋಂದಾಯಿತ ಟ್ರೇಡ್‌ಮಾರ್ಕ್ ಆಗಿದೆ. ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಹತ್ತಿರದ ನಿಮ್ಮ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್/ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.
Prestige®
ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?
CUSTOMER CARE NO# 080-6000 4411
#Reach out to us on our new Customer Care No. effective from September - 2023
Follow 'TTK Prestige' on
PRESTIGE XPERT on WhatsApp 97423 34411
Shop Online on shop.ttkprestige.com
ttk
Prestige Xclusive
Outer Ring Road: Hennur Coco, Ph: 7204250679; Tumkur Rd. 8th Mile T.Dasarahalli, Ph: 9972541116; Koramangala, Ph: 9742901122; Bull Temple Rd, Ph: 26609012; Malleswaram, Ph: 9448282470; Rt Nagar Main Rd, Ph: 41698761; Ganganagar Cbi Rd, Ph: 43705914; Wheeler Rd, Ph: 25803080; Kattriguppe Circle, Ph: 40900685; Vijayanagar, Ph: 41330034; Hsr Bda Cmplx, Ph: 25726991; Marathahalli, Ph: 42197088; Sanjaynagar, Ph: 41258300; Banaswadi Ring Rd, Ph: 41634115; Jayanagar, Ph: 9845066549; J.P.Nagar, Ph: 41122235; Rajarajeshwaringr, Ph: 28603540, 9008418800; Kengeri Stl Town, Ph: 28485296; Rajajinagar, Ph: 41731224; B.T.M.Layout, Ph: 40939168; Sarjapura Rd, Ph: 42038646; Konankunte Cross, Ph: 26860350; Nagharabhavi Bda Cmplx, Ph: 9739004750; Begur, Ph: 8073408322; Vidyaranayapura, Ph: 9845518824; Wilson Garden, Ph: 9480010720; Brookefield, Ph: 28541555; Ramamurthynagar, Ph: 08042049545; Kr Puram, Ph: 8861494277; Cambridge Layout, Ph: 42074468; Kaggadaspura, Ph: 7306666610; Kammanahalli, Ph: 41606044; Whitefield, Ph: 40907273; Chandapura, Ph: 9036190725; Hoskote, Ph: 27932227; Dommasandra, Ph: 9611423555; Hesarghatta Road, Ph: 28370400; Uttarahalli, Ph: 9986879095; Anjananagr Magadi Rd, Ph: 23281206; Kadugodi, Ph: 8123042234; Hosur Rd Huskur Gate, Ph: 9606406009; Yelahanka Newtown, Ph: 8668034376; Jayamahal Ext, Ph: 41616484; Mahalakshmi Lyt, Ph: 23572233; Jpnagar 7th Phase, Puttenahalli, Ph: 41465855; Kumaraswamy Lyt, Ph: 9739011252; Chandralyt, Ph: 9845146418; Channasandra, Ph: 9986369569; Sheshadripuram, Ph: 8711090976; Kasturinagar, Ph: 08049923166; Tc Palya, Ph: 9740333334; Attibele, Ph: 9341221525; Jigani, Ph: 8762069852; Sarjapura Town, Ph: 9036373175l; Hosa Rd Junction, Ph: 9845597099; Mathikere, Ph: 6366636592; Basaveshwaranagar, Ph: 9739591008; Thalagatapura, Vajarahalli, Ph: 9964116888; Hegganahalli, Ph: 28360289; Gottigere, Ph: 8431241099; Amruthahalli, Ph: 9141169883; Ullal, Ph: 9686646565; Jayanagar 4th Block East Extension, Ph: 9945446335; Nelamangala, Ph: 9632356627; Kolar, Ph: 9738882584; Channapatna, Ph: 9686661294; Madhugiri, Ph: 9611552805; Gauribidanur, Ph: 8317399465; Gubbi: Ph: 9035195120/8095459040; Banshankari Stage 2, Bda Complex, Ph: 49890679, 9740677740; Vijayabank Colony, Bilekahalli, Ph: 8970366139; Whitefield, Ph: 08040907273; Malur, Ph: 9845028859; Kumbalagodu, Ph: 9845014860; Devanahalli, Ph: 9845737576; Thanisandra, Ph: 9686340159; E.City Phase 1, Ph: 7557000060; Hulimavu, Ph: 8904654433; Singanayakanahalli, Ph: 9591059156; Anekal, Ph: 8660070202; Tiptur, Ph: 9164688773; Ramnagar, Ph: 9686661294; Bhyadarahalli, Ph: 9845982089; Hennur Bande, Ph: 9980097982; Tc Palya Road, Ph: 9148775224; Chikkajaala, Ph: 9036202892.
Pai INTERNATIONAL
GIRIAS
LuLu

# ಸಿನಿಮಾ ಪುರವಣಿ



ಹರ್ಷಿಕಾ

**ಮಾಲಾಶ್ರೀ, ಹರ್ಷಿಕಾ ಪೂಣಚ್ಚ ಮುಖ್ಯಭೂಮಿಕೆಯಲ್ಲಿರುವ 'ಮಾರಕಾಸ್ತ್ರ' ಸಿನಿಮಾ ಇಂದು(ಅ.13) ತೆರೆ ಕಾಣುತ್ತಿದೆ. ಸಿನಿಮಾ ಹಾಗೂ ತಮ್ಮ ಮುಂದಿನ ಯೋಜನೆಗಳ ಕುರಿತು ಹರ್ಷಿಕಾ ಮಾತಿಗೆ ಸಿಕ್ಕರು.**

## 'ಭೋಜ್‌ಪುರಿಯ ಅವಕಾಶ ತಾನಾಗಿಯೇ ಅರಸಿ ಬಂತು'

ವಿನಾಯಕ ಕೆ.ಎಸ್.

**• ಈ ಸಿನಿಮಾದಲ್ಲಿ ನಿಮ್ಮ ಪಾತ್ರವೇನು?**

ವರದಿಗಾರ್ತಿಯಾಗಿ ಕಾಣಿಸಿಕೊಂಡಿದ್ದೇನೆ. ಸುದ್ದಿ ವಾಹಿನಿಯಲ್ಲಿ ಕೊಲೆಯ ಸುದ್ದಿಗಳನ್ನು ನೀಡುವ ಕ್ರೈಂ ರಿಪೋರ್ಟರ್. ಮೊದಲ ಸಲ ಈ ರೀತಿ ಪಾತ್ರ ಮಾಡಿರುವೆ. ನನಗೆ ರಕ್ತ ಎಂದರೆ ಭಯ. ಆದರೆ ಸದಾ ರಕ್ತದೊಂದಿಗೆ ಕೆಲಸ ಮಾಡುವವರ ಕಥೆ ಹೇಗಿರಬಹುದೆಂದು ಈ ಪಾತ್ರದಿಂದ ಅರಿವಾಯಿತು.

**• ರಕ್ತಸಿಕ್ತ ಜಗತ್ತಿನ ಚಿತ್ರೀಕರಣದ ಅನುಭವ ಹೇಗಿತ್ತು?**

ಇಲ್ಲಿ ಕ್ರೂರತೆ ಹೆಚ್ಚಿದೆ. ಭಯಾನಕ ಕೊಲೆಗಳು ನಡೆಯುತ್ತಿರುತ್ತವೆ. 20–25 ದಿನಗಳ ಕಾಲ ಚಿತ್ರೀಕರಣದಲ್ಲಿ ಭಾಗಿಯಾಗಿದ್ದೆ. ಮಾಲಾಶ್ರೀ ಅವರು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಅವರ ಜೊತೆಗಿನ ದೃಶ್ಯಗಳು ಹೆಚ್ಚಿವೆ. ರಾಮು ಅವರು ಬದುಕಿದ್ದಾಗಲೇ ಅವರ ನಿರ್ಮಾಣ ಸಂಸ್ಥೆಯ ಒಂದೆರಡು ಸಿನಿಮಾಗಳಲ್ಲಿ ನಟಿಸುವ ಅವಕಾಶ ಬಂದಿತ್ತು. ಆದರೆ ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ಈ ಚಿತ್ರದಲ್ಲಿ ಮಾಲಾಶ್ರೀ ಅವರ ಜೊತೆ ಅಭಿನಯಿಸಿದ ಖುಷಿಯಿದೆ.

**• ನಿಮ್ಮ ಮುಂದಿನ ಯೋಜನೆಗಳು ಯಾವುವು?**

ಈ ವರ್ಷ ನನ್ನ ಪಾಲಿಗೆ ಅತ್ಯುತ್ತಮವಾಗಿತ್ತು. ನನ್ನ ನಟನೆಯ 'ಕಾಸಿನ ಸರ', 'ಬೇರ', 'ಸ್ತಬ್ಧ' ಚಿತ್ರಗಳು ಈಗಾಗಲೇ ಬಿಡುಗಡೆಗೊಂಡಿವೆ. 'ಹಗ್ಗ' ಎಂಬ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. 'ಕಾಲ ನಾಗಿಣಿ' ಎಂಬ ಚಿತ್ರದಲ್ಲಿ ನಟಿಸಿರುವೆ. ಸದ್ಯದಲ್ಲೇ ಇನ್ನೊಂದು ಚಿತ್ರ ಸೆಟ್ಟೇರುತ್ತಿದೆ. ಭೋಜ್‌ಪುರಿಯಲ್ಲಿ ಒಂದು ಸಿನಿಮಾಕ್ಕೆ ಸಹಿ ಹಾಕಿರುವೆ.

**• ನೀವು ಇಲ್ಲಿಂದ ಭೋಜ್‌ಪುರಿ ಕಡೆಗೆ ಹೋಗಿದ್ದು ಹೇಗೆ?**

ಹೋಗಿದ್ದಲ್ಲ, ಅವಕಾಶ ಒದಗಿಬಂದಿದ್ದು. ನಿರ್ಮಾಪಕರೊಬ್ಬರು ಹಿಂದಿಯಲ್ಲಿ ಸಿನಿಮಾ ಮಾಡಬೇಕು ಎಂದು ಬಂದಿದ್ದರು. ನಂತರ ಅವರೇ ಭೋಜ್‌ಪುರಿಯಲ್ಲಿ ಸಿನಿಮಾ ಮಾಡಿದಾಗ ಅವಕಾಶ ಒದಗಿಬಂತು. ಅಲ್ಲಿ ನನ್ನ ನಟನೆಯ ಮೂರು ಸಿನಿಮಾಗಳು ಬಿಡುಗಡೆಯಾಗಿವೆ. ಮೂರೂ ಸೂಪರ್ ಹಿಟ್. ಜೊತೆಗೆ ಅಲ್ಲಿನ ಟಾಪ್ ನಾಯಕರ ಜೊತೆ ಕಾಣಿಸಿಕೊಂಡಿರುವೆ. ಬಹುಶಃ 'ಜಾಕಿ' ಸಿನಿಮಾದಿಂದಾಗಿ ಇದೆಲ್ಲ ಸಾಧ್ಯವಾಗಿದ್ದು.

**• ಪತಿ ಭುವನ್ ಜೊತೆ ಸಿನಿಮಾ ಮಾಡುವ ಆಲೋಚನೆ ಇದೆಯಾ?**

ಗಂಡ–ಹೆಂಡತಿ ಇಬ್ಬರೂ ಒಂದೇ ಸಿನಿಮಾದಲ್ಲಿ ನಟಿಸುವ ಆಸೆ ಖಂಡಿತ ಇದೆ. ಸರಿಯಾದ ಕಥೆ ಸಿಗಬೇಕು. ಅದಕ್ಕಾಗಿ ಕಾಯುತ್ತಿದ್ದೇವೆ. ಈಗಾಗಲೇ ನಮ್ಮ ನಿರ್ಮಾಣ ಸಂಸ್ಥೆಯಲ್ಲಿ 'ಭುವನಂ ಶರಣಂ ಗಚ್ಛಾಮಿ' ಸಿನಿಮಾದ ಕೆಲಸ ಶುರುವಾಗಿದೆ. ಆ ಚಿತ್ರದಲ್ಲಿ ಭುವನ್ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಬಾಕ್ಸಿಂಗ್ ಕಥೆ. ಆದರೆ ಆ ಚಿತ್ರದಲ್ಲಿ ನನಗೆ ನಾಯಕಿ ಪಾತ್ರ ಕೊಟ್ಟಿಲ್ಲ. ಸದ್ಯಕ್ಕೆ ಫೈನಾನ್ಸ್ ಜವಾಬ್ದಾರಿ ನೀಡಿದ್ದಾರೆ. ಮುಂದೆ ಒಟ್ಟಿಗೆ ಸಿನಿಮಾ ಮಾಡುವ ಆಲೋಚನೆಯಿದೆ. ❖

## 'ಲವ್ ರೆಡ್ಡಿ'ಗೆ ಪ್ರದೀಪ್ ಈಶ್ವರ್ ಬೆಂಬಲ



ಶ್ರಾವಣಿ

**ಚಿಕ್ಕಬಳ್ಳಾಪುರದ** ಪ್ರತಿಭೆಗಳೇ ಸೇರಿ ನಿರ್ಮಿಸಿರುವ 'ಲವ್ ರೆಡ್ಡಿ' ಸಿನಿಮಾದ ಫಸ್ಟ್ ಲುಕ್ ಅನ್ನು ಸ್ಥಳೀಯ ಶಾಸಕ ಪ್ರದೀಪ್ ಈಶ್ವರ್ ಇತ್ತೀಚೆಗಷ್ಟೇ ಬಿಡುಗಡೆ ಮಾಡಿದರು. ಅಂಜನ್ ರಾಮಚಂದ್ರ ನಾಯಕನಾಗಿದ್ದು, ನಟಿ ಶ್ರಾವಣಿ ಜೋಡಿಯಾಗಿದ್ದಾರೆ. ಸ್ಮರಣ್ ರೆಡ್ಡಿ ಆ್ಯಕ್ಷನ್‌-ಕಟ್ ಹೇಳಿದ್ದಾರೆ.

ಪ್ರದೀಪ್ ಈಶ್ವರ್ ಮಾತನಾಡಿ, 'ಅಂಜನ್ ರಾಮಚಂದ್ರ ನಮ್ಮ ಜಿಲ್ಲೆಯ ಹುಡುಗ. ಇಲ್ಲಿಯೇ ನಡೆದ ನೈಜ ಘಟನೆ ಇಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ. ಕನ್ನಡಿಗರು ಈ ಚಿತ್ರವನ್ನು ನೋಡಿ ಹೊಸ ತಂಡಕ್ಕೆ ಪ್ರೋತ್ಸಾಹಿಸಬೇಕು' ಎಂದು ಶುಭ ಹಾರೈಸಿದರು.

'ಈ ಸಿನಿಮಾ ಕನ್ನಡ ಹಾಗೂ ತೆಲುಗು ಎರಡು ಭಾಷೆಯಲ್ಲಿ ಮೂಡಿಬರುತ್ತಿದೆ. ಏಳು ವರ್ಷಗಳಿಂದ ಸಿನಿಮಾ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದೇವೆ. ಪ್ರತಿಯೊಬ್ಬರೂ ಈ ಸಿನಿಮಾದಲ್ಲಿ ಅದ್ಭುತವಾಗಿ ನಟಿಸಿದ್ದಾರೆ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ' ಎಂದು ಸ್ಮರಣ್ ರೆಡ್ಡಿ ತಿಳಿಸಿದರು. ಚಿಕ್ಕಬಳ್ಳಾಪುರ ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆಸಲಾಗಿದೆ. ಪ್ರಿನ್ಸ್ ಹೆನ್ರಿ ಸಂಗೀತ ಸಂಯೋಜನೆ, ಅಷ್ಕರ್ ಅಲಿ ಛಾಯಾಗ್ರಾಹಣ, ಬಾಹುಬಲಿ ಖ್ಯಾತಿಯ ಕೋಟಗಿರಿ ವೆಂಕಟೇಶ್ವರ ರಾವ್ ಸಂಕಲನ ಚಿತ್ರಕ್ಕಿದೆ. ❖

## ಕೋಳಿ ಹಿಡಿದು ಬಂದ ಆನಂದ್!

'ನಾನು ಕೋ ಕೋ ಕೋಳಿಕ್ಕೆ ರಂಗ...' ಈ ಹಾಡನ್ನು ಕೇಳದವರೇ ಇಲ್ಲ. ಇದೇ ಹಾಡನ್ನು ಶೀರ್ಷಿಕೆಯಾಗಿಸಿಕೊಂಡು ಮಾಸ್ಟರ್ ಆನಂದ್ ನಟಿಸಿರುವ 'ನಾ ಕೋಳಿಕ್ಕೆರಂಗ' ಸಿನಿಮಾ ನವೆಂಬರ್ 10ರಂದು ತೆರೆಗೆ ಬರಲಿದೆ.

'ಕೋವಿಡ್‌ಗೆ ಮೊದಲು ಚಿತ್ರ ಶುರುವಾಗಿತ್ತು. 'ಮರೆಯೋದುಂಟೆ ಮೈಸೂರ ದೊರೆಯ' ಹಾಡು ಚಿತ್ರದಲ್ಲಿದೆ. ಅದರಲ್ಲಿ ಮೈಸೂರು ದಸರಾ ಮತ್ತು ಮಹಾರಾಜರ ವಿಷಯಗಳು ಬರುತ್ತವೆ. ಹಾಗಾಗಿ ದಸರಾ ವೇಳೆ ಸಿನಿಮಾ ರಿಲೀಸ್ ಮಾಡುವ ಉದ್ದೇಶವಿತ್ತು. ಆದರೆ ಸ್ವಲ್ಪ ತಡವಾಗಿ ತೆರೆಗೆ ಬರುತ್ತಿದ್ದೇವೆ' ಎಂದರು ಮಾಸ್ಟರ್ ಆನಂದ್.



ಮಾಸ್ಟರ್ ಆನಂದ್

ಗೊರವಾಲೆ ಮಹೇಶ್ ನಿರ್ದೇಶನದ ಚಿತ್ರಕ್ಕೆ ಎಸ್.ಟಿ. ಸೋಮಶೇಖರ್ ಬಂಡವಾಳ ಹೂಡಿದ್ದಾರೆ. 'ಅಮ್ಮನಾಗಿ ಹಿರಿಯ ನಟಿ ಭವ್ಯಾ ಕಾಣಿಸಿಕೊಂಡಿದ್ದಾರೆ. ಮಂಡ್ಯ ಭಾಗದಲ್ಲೇ ಶೇ. 90ರಷ್ಟು ಚಿತ್ರೀಕರಣ ಮಾಡಿದ್ದೇವೆ' ಎಂದು ಮಹೇಶ್ ತಿಳಿಸಿದರು.

ರಾಜೇಶ್ವರಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಧನಪಾಲ್ ಮತ್ತು ಬೆಟ್ಟೇಗೌಡ ಅವರ ಛಾಯಾಗ್ರಹಣವಿದೆ. ಶೋಭರಾಜ್, ಹೊನ್ನವಳ್ಳಿ ಕೃಷ್ಣ, ಪುಂಗ, ಶಕೀಲಾ ಮತ್ತಿರರು ನಟಿಸಿದ್ದಾರೆ. ❖

## ಅಡುಗೆ ಮುಗಿಸಿದ 'ಶೆಫ್ ಚಿದಂಬರ'



ರೆಚೆಲ್ ಡೇವಿಡ್, ಅನಿರುದ್ಧ್, ನಿಧಿ ಸುಬ್ಬಯ್ಯ

**ಅನಿರುದ್ಧ್** ಜತಕರ್ ನಾಯಕರಾಗಿ ನಟಿಸಿರುವ, 'ರಾಘು' ಚಿತ್ರದ ಖ್ಯಾತಿಯ ಎಂ.ಆನಂದರಾಜ್ ನಿರ್ದೇಶನದ 'chef ಚಿದಂಬರ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯವಾಗಿದೆ. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್. ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

'ಇದೊಂದು ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಹಾಸ್ಯಮಯ ಚಿತ್ರ. ಅನಿರುದ್ಧ್ ಅವರು ಶೆಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಧಿ ಸುಬ್ಬಯ್ಯ ಈತನಕ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರೆಚೆಲ್ ಡೇವಿಡ್ ಅವರ ಪಾತ್ರ ಕೂಡ ವಿಭಿನ್ನವಾಗಿದೆ. ಶರತ್ ಲೋಹಿತಾಶ್ವ, ಶಿವಮಣಿ, ಶ್ರೀಧರ್, ಮಾಹಂತೇಶ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ' ಎಂದರು ನಿರ್ದೇಶಕ ಆನಂದರಾಜ್.

ಇಪ್ಪತ್ತೊಂಬತ್ತು ದಿನಗಳ ಕಾಲ ಬೆಂಗಳೂರು, ಮಂಗಳೂರು, ತುಮಕೂರು, ದೇವರಾಯನದುರ್ಗ ಮುಂತಾದ ಕಡೆ ಈ ಚಿತ್ರದ ಚಿತ್ರೀಕರಣ ನಡೆದಿದೆ.'ನಾನು ಯಾವತ್ತಿಗೂ ಅಡುಗೆಮನೆ ಕಡೆ ಹೋದವನಲ್ಲ. ಈ ಚಿತ್ರದಲ್ಲಿ ಮೊದಲ ಬಾರಿಗೆ ಬಾಣಸಿಗನ ಪಾತ್ರ ನಿರ್ವಹಿಸಿದ್ದೇನೆ. ತರಬೇತಿ ಪಡೆದು ಈ ಪಾತ್ರ ನಿರ್ವಹಣೆ ಮಾಡಿದ್ದೇನೆ. ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಾದರೂ, ನಿರ್ದೇಶಕರು ಕಥೆಯನ್ನು ಹಾಸ್ಯದ ಮೂಲಕ ಹೇಳಿದ್ದಾರೆ' ಎಂದರು ನಾಯಕ ಅನಿರುದ್ಧ್ ಜತಕರ್.

'ನಾನು ಈವರೆಗೂ ಮಾಡಿರದ ಪಾತ್ರವನ್ನು ನಿರ್ದೇಶಕರು ಸೃಷ್ಟಿಸಿದ್ದಾರೆ. ಈ ಪಾತ್ರ ಎಲ್ಲರಿಗೂ ಮೆಚ್ಚುಗೆಯಾಗಲಿದೆ ಎಂಬ ವಿಶ್ವಾಸವಿದೆ' ಎನ್ನುತ್ತಾರೆ ನಾಯಕಿ ನಿಧಿ ಸುಬ್ಬಯ್ಯ.

'ಅನು ಎಂಬುದು ನನ್ನ ಪಾತ್ರದ ಹೆಸರು. ನನ್ನ ಪಾತ್ರ ಹೇಗಿರಲಿದೆ ಎಂಬುದನ್ನು ನೀವು ಚಿತ್ರದಲ್ಲಿಯೇ ನೋಡಬೇಕು. ಅಷ್ಟು ಸೊಗಸಾದ ಪಾತ್ರವಿದು' ಎಂದರು ರೆಚೆಲ್ ಡೇವಿಡ್.

ಚಿತ್ರಕ್ಕೆ ನಿರ್ದೇಶಕರೆ ಕಥೆ ರಚಿಸಿದ್ದು, ಉದಯಲೀಲಾ ಛಾಯಾಗ್ರಹಣ, ವಿಜೇತ್ ಚಂದ್ರ ಸಂಕಲನ, ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನವಿದೆ. ❖





## ಜಲಪಾತ, ಕುದ್ರು ತೆರೆಗೆ

**ಈ ವಾರ ತೆರೆಗೆ**

**ಕುದ್ರು:** ಭಾಸ್ಕರ್ ನಾಯ್ಕ್ ನಿರ್ದೇಶಿಸಿ, ನಿರ್ಮಿಸಿರುವ 'ಕುದ್ರು' ಚಿತ್ರ ಇಂದು(ಅ.13) ತೆರೆ ಕಾಣುತ್ತಿದೆ. ಕರಾವಳಿ ಭಾಗದ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ಭಾವೈಕ್ಯದ ಕಥೆ ಇದೆ. 'ಕುದ್ರು' ಎಂದರೆ ನೀರಿನಿಂದ ಸುತ್ತುವರೆದ ದ್ವೀಪ. ಇಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮೂರು ಕಟುಂಬಗಳು ಸಹಬಾಳ್ವೆಯಿಂದ ಜೀವನ ನಡೆಸುತ್ತಿರುತ್ತಾರೆ. ಆ ಸಮಯದಲ್ಲಿ ವಾಟ್ಸಪ್ ಸಂದೇಶವೊಂದರಿಂದ ಎಲ್ಲರಲ್ಲಿಯೂ ಮನಸ್ತಾಪ ಬರುತ್ತದೆ. ಅದರಿಂದ ಸಮಾಜದಲ್ಲಿ ಆಗುವ ಅನಾಹುತಗಳನ್ನು ಹೇಳಲಾಗಿದೆ' ಎನ್ನುತ್ತಾರೆ ನಿರ್ದೇಶಕರು. ಉಡುಪಿ, ಮಲೆನಾಡು, ಗೋವಾ ಹಾಗೂ ಸೌದಿ ಅರೇಬಿಯಾದಲ್ಲಿ ಚಿತ್ರೀಕರಣವಾಗಿದೆ. ಡೈನ ಡಿಸೋಜ, ಫರ್ಹಾನ್, ಹರ್ಷಿತ್ ಶೆಟ್ಟಿ ಮೊದಲಾದವರು ಚಿತ್ರದಲ್ಲಿದ್ದಾರೆ. ಪ್ರತೀಕ್ ಕುಂದು ಸಂಗೀತ ನಿರ್ದೇಶನ ಹಾಗೂ ಶ್ರೀನಿವಾಸ್ ಕಲಾಲ್ ಸಂಕಲನವಿದೆ.

**ಜಲಪಾತ:** ಮಲೆನಾಡಿನ ಭಾಷೆ ಸೊಗಡು, ಸಂಸ್ಕೃತಿ ಮತ್ತು ಪರಿಸರ ಕಾಳಜಿಯ ಕಥಾಹಂದರವುಳ್ಳ 'ಜಲಪಾತ' ಇಂದು ತೆರೆ ಕಾಣುತ್ತಿದೆ. ರಮೇಶ್ ಬೇಗಾರ್ ನಿರ್ದೇಶನದ ಚಿತ್ರದಲ್ಲಿ ನಾಯಕನಾಗಿ 'ಪದವಿ ಪೂರ್ವ' ಸಿನಿಮಾ ಖ್ಯಾತಿಯ ರಜನೀಶ್, ನಾಯಕಿಯಾಗಿ ರಂಗಕಲಾವಿದೆ ನಾಗಶ್ರೀ ನಟಿಸಿದ್ದಾರೆ. ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ ಸಹಿತ ಬಹುತೇಕ ಮಲೆನಾಡು ಭಾಗದ ರಂಗಭೂಮಿ ಕಲಾವಿದರು ಅಭಿನಯಿಸಿರುವ ಚಿತ್ರ ಇದಾಗಿದೆ. ಪ್ರಮೋದ್ ಶೆಟ್ಟಿ, ವಿಶ್ವನಾಥ್ ಮೊದಲಾದವರಿದ್ದಾರೆ. ಚಿತ್ರಕ್ಕೆ ಸಾದ್ವಿನಿ ಕೊಪ್ಪ ಸಂಗೀತ, ಶಶಿರ ಛಾಯಾಗ್ರಹಣ , ಅವಿನಾಶ್ ಸಂಕಲನವಿದೆ. ❖

## 'ಪ್ರೀತಿಯ ಅರಸಿ' ಹೊರಟ ರಕ್ಷಾ



**ರಮೇಶ್** ಇಂದಿರಾ ನಿರ್ದೇಶನದ 'ಪ್ರೀತಿಯ ಅರಸಿ' ಎಂಬ ಶೀರ್ಷಿಕೆಯ ಧಾರಾವಾಹಿಯೊಂದು ಉದಯ ವಾಹಿನಿಯಲ್ಲಿ ಅ.16ರಿಂದ ಆರಂಭವಾಗಲಿದೆ. ಪ್ರತಿ ದಿನ 9ಕ್ಕೆ ಇದು ಪ್ರಸಾರವಾಗಲಿದೆ. ಶೃತಿ ನಾಯ್ಡು ನಿರ್ಮಿಸಿ, ರಮೇಶ್ ಇಂದಿರಾ ನಿರ್ದೇಶಿಸುತ್ತಿರುವ ಈ ಧಾರಾವಾಹಿಯ ಮುಖ್ಯಭೂಮಿಕೆಯಲ್ಲಿ ರಕ್ಷಾ ನಿಂಬರ್ಗಿ, ಪೃಥ್ವಿ ಶೆಟ್ಟಿ ನಟಿಸಿದ್ದಾರೆ. 'ಅಂಜಲಿ' ಎಂಬ ಪಾತ್ರದಲ್ಲಿ ರಕ್ಷಾ ನಟಿಸಿದ್ದು, 'ರಾಕಿ'ಯಾಗಿ ಪೃಥ್ವಿ ಕಾಣಿಸಿಕೊಳ್ಳಲಿದ್ದಾರೆ. ಅಂಜಲಿ ಮತ್ತು ರಾಕಿ, ಇಬ್ಬರೂ ಸಾಮಾನ್ಯ ಜಗತ್ತಿನಲ್ಲಿ ಅಸಾಮಾನ್ಯ ಯೋಚನಾಲಹರಿ ಹೊಂದಿರುವವರು. ತನ್ನ ಉದ್ಯೋಗದಲ್ಲಿ ಅತ್ಯುನ್ನತ ಮಟ್ಟಕ್ಕೇರುವುದು ಅಂಜಲಿಯ ಕನಸು. ಕುಟುಂಬವೇ ಸರ್ವಸ್ವ, ಮನೆಯೇ ಎಲ್ಲಕ್ಕಿಂತ ಮುಖ್ಯ ಅನ್ನುವುದು ರಾಕಿಯ ನಿರ್ಧಾರ. ಇವರಿಬ್ಬರ ಅಪರೂಪದ ಪ್ರೇಮ ಕಥೆ ಪ್ರೀತಿಯ ಅರಸಿ ಎಂದಿದೆ ತಂಡ.

ಮುಖ್ಯಪಾತ್ರಗಳಲ್ಲಿ ಜೈಜಗದೀಶ್, ಗಿರಿಜಾ ಲೋಕೇಶ್ ಮತ್ತು ಪದ್ಮಾ ವಾಸಂತಿ ಅಭಿನಯಿಸಿದ್ದಾರೆ. ಇವರೊಂದಿಗೆ ಮಿಥುನ್ ತೇಜಸ್ವಿ, ನಾಗೇಂದ್ರ ಅರಸ್ ಮತ್ತು ರಾಧಾ ಜೈರಾಮ್ ತಾರಾಬಳಗದಲ್ಲಿದ್ದಾರೆ. ❖

## ಆರು ನಾಯಕಿಯರ ಕಥೆ!



ಸುಶ್ಮಿತಾ

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

**ನಿರ್ದೇಶಕ** ಪ್ರೇಮ್ ಆರು ನಾಯಕರ ಚಿತ್ರವೊಂದನ್ನು ಮಾಡುವುದಾಗಿ ಈ ಹಿಂದೆ ಹೇಳಿದ್ದರು. ಆದರೆ ಚಿತ್ರ ಇಲ್ಲಿಯತನಕ ಸೆಟ್ಟೇರಲಿಲ್ಲ. ನಟ ವಿನಯ್ ರತ್ನಸಿದ್ದಿ ಆರು ನಾಯಕಿಯರ 'ಪ್ರೇಮಂ ಟುಟು' ಚಿತ್ರವನ್ನು ತೆರೆಗೆ ತರಲು ಸಜ್ಜಾಗಿದ್ದಾರೆ. 'ಇಂಜಿನಿಯರ್ಸ್' ಮತ್ತು 'ಗಂಡುಲಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ವಿನಯ್ ರತ್ನಸಿದ್ದಿ ನಟಿಸಿ, ನಿರ್ದೇಶಿಸಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಶಕುಂತಲಾ, ವೈಷ್ಣವಿ, ಸುಶ್ಮಿತಾ ಸೇರಿ 6 ಜನ ನಾಯಕಿಯರೇ ಈ ಚಿತ್ರದ ಆಕರ್ಷಣೆ. ರತ್ನಸಿದ್ದಿ ಫಿಲ್ಮ್ಸ್ ಮೂಲಕ ಹಲವು ಗೆಳೆಯರು ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. 'ಪರಿಶುದ್ಧವಾದ ಪ್ರೇಮಕ್ಕೆ ಎಂದೂ ಸಾವಿಲ್ಲ ಎಂದು ಹೇಳುವ ಕಥೆ ಚಿತ್ರದಲ್ಲಿದೆ. ಮೊದಲ ಲಾಕ್‌ಡೌನ್‌ನಲ್ಲಿ ಎರಡು ಪಾತ್ರಗಳನ್ನಿಟ್ಟುಕೊಂಡು ಈ ಚಿತ್ರವನ್ನು ಪ್ರಾರಂಭಿಸಿದ್ದೆವು. ಒಟ್ಟು 200 ಪಾತ್ರಗಳು ಚಿತ್ರದಲ್ಲಿದೆ. ಹೆಡ್ಡನಂತಿರುವ ನಾಯಕನ ಜೀವನದಲ್ಲಿ ಬರುವ ತಿರುವುಗಳು, ಪ್ರೀತಿ, ಆ ಪ್ರೀತಿಯಿಂದಾಗುವ ತೊಳಲಾಟಗಳು, ಅದರಿಂದ ಆತ ಹೇಗೆ ಹೊರಬರುತ್ತಾನೆ ಎನ್ನುವುದೇ ಚಿತ್ರದ ಕಥೆ' ಎಂದರು ವಿನಯ್.

'ಚಿತ್ರದಲ್ಲಿ ಬಿಟ್ ಸೇರಿ ನಾಲ್ಕು ಹಾಡುಗಳು, ನಾಲ್ಕು ಫೈಟ್‌ಗಳಿವೆ. ನಾಯಕನ ಜೀವನದಲ್ಲಿ ಆರು ಜನ ನಾಯಕಿಯರು ಒಂದೊಂದು ಹಂತದಲ್ಲಿ ಬಂದು ಪ್ರೀತಿಯ ಅನುಭವ ತೋರಿಸುತ್ತಾರೆ. ಅವರಲ್ಲಿ ಯಾರದು ಪರಿಶುದ್ಧವಾದ ಪ್ರೀತಿ? ಅದು ಆತನಿಗೆ ಸಿಗುತ್ತೋ ಇಲ್ಲವೋ? ಎನ್ನುವುದು ಚಿತ್ರದ ಕೊನೆಯಲ್ಲಿ ಗೊತ್ತಾಗುತ್ತದೆ. ಈ ಆರು ಜನ ನಾಯಕಿಯರು ಕಥೆಗೆ ಪೂರಕವಾಗಿಯೇ ಬರುತ್ತಾರೆ. ತುಮಕೂರು ಬಳಿಯ ಹೊನ್ನುಡಿಕೆಯಲ್ಲಿ ಬಹುತೇಕ ಚಿತ್ರೀಕರಣ ನಡೆಸಲಾಗಿದೆ' ಎಂದು ನಿರ್ದೇಶಕರು ತಿಳಿಸಿದರು.

ಚಿತ್ರಕ್ಕೆ ಅಜಯ್ ಶ್ರೀನಿವಾಸಮೂರ್ತಿ ಸಂಗೀತ ಸಂಯೋಜನೆಯಿದ್ದು, ಆನಂದ್ ಇಳಯರಾಜಾ, ಅರುಣ್ ಮತ್ತು ಮನು ಛಾಯಾಗ್ರಹಣವಿದೆ. ಚಂದ್ರಪ್ರಭ, ಲೋಕೇಶ್ ರಾಜಣ್ಣ,ಉಮೇಶ್ ಕಿನ್ನಾಳ ಮುಂತಾದವರ ತಾರಬಳಗವಿದೆ. ❖

ಕೆ.ಆರ್. ಪುರ ರೈಲು ಮತ್ತು ಮೆಟ್ರೊ ನಿಲ್ದಾಣ ಎದುರಿನ ರಸ್ತೆಗಳಲ್ಲಿ ಸಂಚಾರ ದಟ್ಟಣೆ

# ‘ಟೆಕ್’ ರಸ್ತೆಯಲ್ಲಿ ಪ್ರಯಾಸದ ಪ್ರಯಾಣ!

• ಖಲೀಲಅಹ್ಮದ ಶೇಖ



ಕೆ. ಆರ್. ಪುರಂ ರೈಲು ನಿಲ್ದಾಣದ ಬಳಿಯ ಐಟಿಪಿಎಲ್ ಮುಖ್ಯರಸ್ತೆಯಲ್ಲಿ ಗುರುವಾರ ಉಂಟಾದ ಸಂಚಾರ ದಟ್ಟಣೆಯಿಂದ ವಾಹನ ಸವಾರರು ಪರದಾಡಿದರು.



ಕೆ.ಆರ್. ಪುರ ರೈಲು ನಿಲ್ದಾಣ ಬಳಿ ಅರ್ಧಕ್ಕೆ ನಿಂತಿರುವ ಸ್ಕೈವಾಕ್ ಕಾಮಗಾರಿ. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.



ಕೆ.ಆರ್. ಪುರ ರೈಲು ನಿಲ್ದಾಣದ ನ್ಯೂಲೈಟ್ ಜಂಕ್ಷನ್ ರಸ್ತೆಯನ್ನು ದಾಟುತ್ತಿರುವ ಪ್ರಯಾಣಿಕರು.

**ಬೆಂಗಳೂರು:** ಕಣ್ಣು ಹಾಯಿಸಿದಷ್ಟೂ ಮುಗಿಯದ ಸಾಲುಗಟ್ಟಿ ನಿಂತಿರುವ ವಾಹನಗಳು... ಅರ್ಧಕ್ಕೆ ನಿಂತಿರುವ ಸ್ಕೈವಾಕ್ ಕಾಮಗಾರಿ...ಸಂಚಾರ ಸಿಗ್ನಲ್‌ಗಳಿಲ್ಲದ ರಸ್ತೆ, ಜೀವಭಯದಲ್ಲೇ ಮುಖ್ಯರಸ್ತೆ ದಾಟುವ ಸಾರ್ವಜನಿಕರು...

ಇವು ಕೆ.ಆರ್. ಪುರದ ರೈಲು ಮತ್ತು ಮೆಟ್ರೊ ನಿಲ್ದಾಣಗಳ ಸಮೀಪದ ನಾಲ್ಕು ರಸ್ತೆಗಳು ಸೇರುವ ನ್ಯೂಲೈಟ್ ಜಂಕ್ಷನ್‌ನ ಸುತ್ತ ಕಂಡು ಬರುವ ಸಾಮಾನ್ಯ ದೃಶ್ಯಗಳು.

ಮಂಗಳೂರು–ವಲ್ಲಿಪುರಂ ರಸ್ತೆ, ಬೆಂಗಳೂರು–ತಿರುಪತಿ ಹೆದ್ದಾರಿ, ಹೊರವರ್ತುಲ ರಸ್ತೆ ಮತ್ತು ಐಟಿಪಿಎಲ್ ರಸ್ತೆ ಈ ಜಂಕ್ಷನ್ ಮೂಲಕ ಹಾದು ಹೋಗುತ್ತವೆ. ಇದರಲ್ಲಿ ಪ್ರಮುಖವಾದ ಐಟಿಪಿಎಲ್ ರಸ್ತೆಯು ವೈಟ್‌ಫೀಲ್ಡ್, ಮಹದೇವಪುರ, ಮಾರತ್‌ಹಳ್ಳಿ ಮತ್ತು ಸಿಲ್ಕ್‌ಬೋರ್ಡ್‌ಗೆ ಸಂಪರ್ಕ ಕಲ್ಪಿಸುತ್ತದೆ.

ನಗರದ ವಿವಿಧ ಭಾಗಗಳಿಂದ ಐಟಿ–ಬಿಟಿ ಕಂಪನಿಗಳಿಗೆ ಉದ್ಯೋಗಕ್ಕಾಗಿ ಬರುವ ಟೆಕಿಗಳು ಕೆ.ಆರ್. ಪುರ ರೈಲು ಮತ್ತು ಮೆಟ್ರೊ ನಿಲ್ದಾಣಕ್ಕೆ ಬಂದು, ಈ ರಸ್ತೆ ಮೂಲಕವೇ ಕಚೇರಿಗಳಿಗೆ ತೆರಳುತ್ತಾರೆ. ಕೆಲವರು ಸ್ವಂತ ವಾಹನಗಳಲ್ಲೂ ಬರುತ್ತಾರೆ. ಹಾಗಾಗಿ, ಇಲ್ಲಿ ಜನ–ವಾಹನ ದಟ್ಟಣೆ ಎರಡೂ ಹೆಚ್ಚಾಗಿದೆ. ಇಷ್ಟು ದಟ್ಟಣೆಯಿರುವ ರಸ್ತೆಗೆ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆಯೇ ಇಲ್ಲ. ನಾಲ್ಕು ರಸ್ತೆಗಳಿಂದ ಗಕ್ಕನೆ ಬಂದು ನಿಲ್ಲುವ ವಾಹನಗಳ ಮಧ್ಯ ಸಾರ್ವಜನಿಕರು ಜೀವಭಯದಲ್ಲಿ ರಸ್ತೆ ದಾಟುವಂತಾಗಿದೆ.

ಪ್ರತಿನಿತ್ಯ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೂ ದಟ್ಟಣೆ ಹೆಚ್ಚಿರುತ್ತದೆ. ಕೇವಲ ಮೂವರು ಸಂಚಾರ ಪೊಲೀಸರು ಇಲ್ಲಿನ ಸಂಚಾರ ದಟ್ಟಣೆ ನಿರ್ವಹಿಸುತ್ತಿದ್ದಾರೆ. ಕೆ.ಆರ್. ಪುರ ರೈಲು ನಿಲ್ದಾಣದಲ್ಲಿ 10–15 ನಿಮಿಷಕ್ಕೊಂದು ಸಂಚರಿಸುವ ರೈಲುಗಳಿಂದ ಸಾವಿರಾರು ಪ್ರಯಾಣಿಕರು ಇಳಿದು ಕೆ.ಆರ್. ಪುರ ಮೆಟ್ರೊ ನಿಲ್ದಾಣದ ಮೂಲಕ ಬೆಂಗಳೂರು ನಗರ ಮತ್ತು ಕಚೇರಿಗಳಿಗೆ ಪ್ರಯಾಣಿಸುತ್ತಾರೆ. ಇಲ್ಲಿ ರಸ್ತೆ ದಾಟುವುದೇ ದೊಡ್ಡ ಸವಾಲು.

ರೈಲು ಮತ್ತು ಮೆಟ್ರೊ ನಿಲ್ದಾಣ ಬಳಿ ಗೇಟಿಂಗ್ ವ್ಯವಸ್ಥೆ ಮಾಡಿಕೊಂಡಿರುವ ಸಂಚಾರ ಪೊಲೀಸರು ವಾಹನಗಳನ್ನು ನಿಲ್ಲಿಸುವ ಮೂಲಕ ಜನರನ್ನು ರಸ್ತೆ ದಾಟಿಸುವ ಸಾಹಸ ಮಾಡುತ್ತಿದ್ದಾರೆ. ಇಲ್ಲಿ ಮೆಟ್ರೊ ನಿಲ್ದಾಣ ಬಂದ ಮೇಲೆ ಪರಿಸ್ಥಿತಿ ಇನ್ನೂ ಬಿಗಡಾಯಿಸಿದೆ. ಇಲ್ಲಿಂದ ಸಂಪರ್ಕ ಬಸ್‌ಗಳು ವ್ಯವಸ್ಥೆ ಚೆನ್ನಾಗಿರುವುದರಿಂದ ಈ ಪ್ರದೇಶ ಹೆಚ್ಚು ಬೇಡಿಕೆಯಲ್ಲಿದೆ. ಹೀಗಾಗಿ ದಟ್ಟಣೆ ತಪ್ಪಿಲ್ಲ. ಐಟಿಪಿಎಲ್, ಹೂಡಿ, ಕುಂದಲಹಳ್ಳಿ ಜಂಕ್ಷನ್, ಫೀನಿಕ್ಸ್ ಮಾಲ್ ಅದರ ಸುತ್ತಲಿನ ಬೃಹತ್ ಅಪಾರ್ಟ್‌ಮೆಂಟ್ ನಿವಾಸಿಗಳು, ಕೆ.ಆರ್ ಪುರ ರೈಲು ನಿಲ್ದಾಣ ಬಳಸುವ ಪ್ರಯಾಣಿಕರು ಹೆಚ್ಚು ಪರದಾಡುವಂತಾಗಿದೆ.

‘ಈ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾದರೆ 1 ಕಿ.ಮೀ ಸಂಚರಿಸಲು ಕನಿಷ್ಠ 30 ನಿಮಿಷಗಳು ಬೇಕಾಗುತ್ತದೆ. ಇದರಿಂದ, ಬಿಗ್ ಬಜಾರ್, ವಿವೇಕಾನಂದ ರಸ್ತೆ, ಹಲಸೂರಿನವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಜೊತೆಗೆ ಹೊರ ವರ್ತುಲ ರಸ್ತೆ, ಹೆಬ್ಬಾಳ, ರಾಮಮೂರ್ತಿನಗರ, ಕಲ್ಯಾಣನಗರ, ನಾಗವಾರ ಮತ್ತು ಹೊರಮಾವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಹೆಚ್ಚಾಗುತ್ತದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

‘ಬಿಎಂಟಿಸಿ ಬಸ್‌ಗಳು ಪ್ರಯಾಣಿಕರನ್ನು ಇಳಿಸಲು, ಹತ್ತಿಸಿಕೊಳ್ಳಲು ರಸ್ತೆಯಲ್ಲಿ ನಿಲ್ಲುವುದು ಕೂಡ ಸಮಸ್ಯೆಗಳನ್ನು ತಂದೊಡ್ಡಿದೆ. ಟಿನ್ ಫ್ಯಾಕ್ಟರಿ ಬಳಿ ಬಸ್‌ಗಳು ರಸ್ತೆಯಿಂದ ಸ್ವಲ್ಪ ಒಳಗೆ ಬಂದು ನಿಲ್ಲುವ ‘ಬಸ್‌ಬೇ’ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿಯ ವ್ಯವಸ್ಥೆಯನ್ನು ಕೆ.ಆರ್. ಪುರ ರೈಲ್ವೆ ಮತ್ತು ಮೆಟ್ರೊ ನಿಲ್ದಾಣದ ಬಳಿಯ ತಂಗುದಾಣಗಳಿಗೆ ಮಾಡಿದರೆ ಬಸ್‌ಗಳು ರಸ್ತೆಯಲ್ಲಿ ನಿಲ್ಲುವುದು ತಪ್ಪಲಿದೆ. ಇದರಿಂದ ಸಂಚಾರ ದಟ್ಟಣೆ ಕಡಿಮೆಯಾಗಲಿದೆ’ ಎಂದು ತಿಳಿಸಿದರು.

‘ಇಲ್ಲಿ ಬಿಎಂಟಿಸಿ ಅಥವಾ ಖಾಸಗಿ ಬಸ್‌ಗಳಿಗಾಗಿ ಸೂಕ್ತ ಬಸ್ ತಂಗುದಾಣಗಳು ತುರ್ತು ಆಗಬೇಕಿದೆ. ನಿತ್ಯ ಇಲ್ಲಿ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ’ ಎಂದು ಹೋಟೆಲ್ ಮಾಲೀಕ ರಮೇಶ ಬೇಸರ ವ್ಯಕ್ತಪಡಿಸಿದರು.

ಹಳೆ ಮದ್ರಾಸ್ ರಸ್ತೆಯ ಟ್ರಿನಿಟಿ ವೃತ್ತದಿಂದ ಕೆ.ಆರ್.ಪುರ ರೈಲ್ವೆ ನಿಲ್ದಾಣಕ್ಕೆ ಸಂಪರ್ಕಿಸುವ 8.9 ಕಿ.ಮೀ ತಲುಪಲು ಕನಿಷ್ಠ 45 ನಿಮಿಷ ಅವಧಿ ಬೇಕಾಗುತ್ತದೆ. ಈ ಮಾರ್ಗದಲ್ಲಿರುವ ಹಲಸೂರು, ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣ, ವಿಶ್ವೇಶ್ವರಯ್ಯ ರಸ್ತೆ, ಬೈಯಪ್ಪನಹಳ್ಳಿ, ಗೋಪಾಲನ್ ಮಾಲ್ ಮತ್ತು ಟಿನ್ ಫ್ಯಾಕ್ಟರಿ ಭಾಗಗಳಲ್ಲಿ ಹೆಚ್ಚು ಸಂಚಾರ ದಟ್ಟಣೆಯಾಗುತ್ತಿದೆ.



**ಸಂಚಾರ ತ್ರಾಸ ಜನರ ಪ್ರಯಾಸ**

## ಜನರು ಏನಂತಾರೆ?



ನ್ಯೂಲೈಟ್ ಜಂಕ್ಷನ್ ರಸ್ತೆಯಲ್ಲಿ ಅಂಡರ್‌ಪಾಸ್ ಮತ್ತು ಸ್ಕೈವಾಕ್ ಇಲ್ಲದ ಪರಿಣಾಮ ಸಂಚಾರ ದಟ್ಟಣೆಯಾಗುತ್ತಿದೆ. ಇಲ್ಲೊಂದು ಮೇಲ್ಸೇತುವೆ ನಿರ್ಮಿಸಬೇಕು.
**ಸುರೇಶ್,** ಬಾಗ್‌ಮನೆ ಟೆಕ್ ಪಾರ್ಕ್



ನ್ಯೂಲೈಟ್ ಜಂಕ್ಷನ್ ರಸ್ತೆಯನ್ನು ಪ್ರತಿನಿತ್ಯ ಸಾವಿರಾರೂ ಪ್ರಯಾಣಿಕರು ಜೀವಭಯದಲ್ಲಿ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೊಂದು ಶಾಶ್ವತ ಪರಿಹಾರ ಕಲ್ಪಿಸಬೇಕು.
**ಪಳನಿ**
ಖಾಸಗಿ ಕಂಪನಿ ಉದ್ಯೋಗಿ



ದಟ್ಟಣೆನಿವಾರಣೆಗೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಈ ರಸ್ತೆಯಲ್ಲಿ ವ್ಯವಸ್ಥಿತ ಟ್ರಾಫಿಕ್ ಸಿಗ್ನಲ್ ಅಳವಡಿಸಬೇಕು. ರಸ್ತೆ ಮಧ್ಯದಲ್ಲಿ ನಿಲ್ಲಿಸುವ ವಾಹನಗಳಿಗೆ ದಂಡ ಹಾಕಬೇಕು.
**ಸುಕನ್ಯಾ,** ಸಾಫ್ಟ್‌ವೇರ್ ಉದ್ಯೋಗಿ



ಇಲ್ಲಿನ ಸ್ಕೈವಾಕ್ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಬೇಕು. ಇಲ್ಲದಿದ್ದರೆ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ.
**ಆನಂದ್**
ಬ್ಯಾಂಕ್ ಉದ್ಯೋಗಿ



ಕೆ.ಆರ್. ಪುರ ರೈಲು ನಿಲ್ದಾಣದಿಂದ ಮೆಟ್ರೊ ನಿಲ್ದಾಣಕ್ಕೆ ವೃದ್ಧರು ಮಕ್ಕಳು ಮತ್ತು ಮಹಿಳೆಯರು ಹೋಗುವುದೇ ಕಷ್ಟವಾಗಿದೆ. ಕೂಡಲೇ ಇಲ್ಲೊಂದು ಅಂಡರ್‌ಪಾಸ್ ನಿರ್ಮಿಸಬೇಕು.
**ಬಾಬಾಜಾನ್** ಬಡಗಿ

## ಅಂಡರ್‌ಪಾಸ್ ಒಂದೇ ಪರಿಹಾರ

ಕೆ.ಆರ್. ಪುರ ರೈಲು ಮತ್ತು ಮೆಟ್ರೊ ನಿಲ್ದಾಣ ಕಾಮಗಾರಿ ಮಾಡುವ ಸಂದರ್ಭದಲ್ಲಿ ಮೆಟ್ರೊ ಮತ್ತು ರೈಲು ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್ ನಿರ್ಮಿಸಬೇಕಿತ್ತು. ಆದರೆ, ಅವೈಜ್ಞಾನಿಕವಾಗಿ ಕೈಗೊಂಡಿರುವ ಕಾಮಗಾರಿಯಿಂದಾಗಿ ಪ್ರತಿನಿತ್ಯ ಸಾರ್ವಜನಿಕರು ಜೀವಭಯದಲ್ಲಿ ರಸ್ತೆ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ.

‘ವಾರಕ್ಕೆ ಎರಡು ಮೂರು ಬಾರಿ ಕೆ.ಆರ್. ಪುರ ರೈಲು ನಿಲ್ದಾಣಕ್ಕೆ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ ಮತ್ತು ವಿವಿಧ ರಾಜ್ಯಗಳಿಂದ ಬರುವ ಸಾವಿರಾರೂ ಪ್ರಯಾಣಿಕರನ್ನು ರಸ್ತೆ ದಾಟಿಸುವುದು ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಕೇವಲ ಮೂರು ಜನ ಸಿಬ್ಬಂದಿಯಿಂದ ಸಂಚಾರ ದಟ್ಟಣ ನಿರ್ವಹಣೆ ಮಾಡುವುದು ಕಷ್ಟವಾಗಿದ್ದು, ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಬೇಕು. ಇಲ್ಲದಿದ್ದರೆ, ಟ್ರಾಫಿಕ್ ಸಿಗ್ನಲ್ ಅಳವಡಿಸಬೇಕು’ ಎಂದು ಸಂಚಾರ ಪೊಲೀಸರು ಸಲಹೆ ನೀಡಿದರು.

## ದಟ್ಟಣೆ: ನಿಮ್ಮ ಸಂಕಷ್ಟ ಹೇಳಿ

ನಗರದ ರಸ್ತೆಗಳಲ್ಲಿನ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ ‘ಸಂಚಾರ ತ್ರಾಸ, ಜನರ ಪ್ರಯಾಸ’ ಸರಣಿ ವರದಿಯನ್ನು ‘ಪ್ರಜಾವಾಣಿ’ ಪ್ರಕಟಿಸುತ್ತಿದೆ. ದಟ್ಟಣೆಯಿಂದಾಗಿರುವ ಸಮಸ್ಯೆ, ಪ್ರಯಾಸವನ್ನು 50 ಪದಗಳಲ್ಲಿ ಬರೆದು ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ವಿಳಾಸ ಇರಲಿ.

**96060 38256**

## ಸುದ್ದಿ 2 ನಿಮಿಷ

### ರಾಜ್ಯದಲ್ಲಿ ಕತ್ತಲೆ ಹರಡಿ ಜಾರ್ಜ್ ನಾಪತ್ತೆ: ಬಿಜೆಪಿ ವ್ಯಂಗ್ಯ

**ಬೆಂಗಳೂರು:** ‘ಕರ್ನಾಟಕದಲ್ಲೆಲ್ಲಾ ಕತ್ತಲೆ ಹರಡಿ ನಾಪತ್ತೆಯಾಗಿರುವ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಹುಡುಕಿಕೊಡಿ. ರಾಜ್ಯದ ಜನ ಸಂಕಷ್ಟದಲ್ಲಿದ್ದಾರೆ’ ಎಂದು ಬಿಜೆಪಿ ‘ಎಕ್ಸ್’ ಮೂಲಕ ಕಿಡಿಕಾರಿದೆ.

‘ಕಾಂಗ್ರೆಸ್ ಬಂತೋ ಕರುನಾಡ ತುಂಬಾ ಕಗ್ಗತ್ತಲು ತಂತೋ. ಎಲ್ಲೆಲ್ಲೂ ಕತ್ತಲು, ನ್ಯಾಯ ನೀಡುವ ನ್ಯಾಯಾಲಯದಲ್ಲೂ ಕತ್ತಲು. ಶಾಸಕರ ಸಭೆಯಲ್ಲೂ ಕತ್ತಲೋ ಕತ್ತಲು. ಸಿಎಂ ಸಿದ್ದರಾಮಯ್ಯ ಅವರೇ ಮೊದಲ ಅವಧಿಯಲ್ಲೂ ಮೊಬೈಲ್ ಟಾರ್ಚ್ ಹಿಡಿದು ಬಜೆಟ್ ಮಂಡಿಸಿದ ಸಾಧನೆ ನಿಮ್ಮದು’ ಎಂದು ಬಿಜೆಪಿ ಲೇವಡಿ ಮಾಡಿದೆ.

‘ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಕರುನಾಡಿಗೆ ಕತ್ತಲೆಯ ಗ್ಯಾರಂಟಿ ಕೊಟ್ಟಿದೆ. ಎಲ್ಲಿ ನೋಡಿದರೂ ಪವರ್‌ಕಟ್, ರೈತರ ಪಂಪ್‌ಸೆಟ್‌ಗಳಿಗೆ, ಶಾಲೆ–ಕಾಲೇಜುಗಳಿಗೆ, ಕೈಗಾರಿಕೆಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ಪವರ್ ಕಟ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕೆ.ಜೆ.ಜಾರ್ಜ್ ಅವರೇ ನಿಮ್ಮ ಮನೆಯಲ್ಲಿ ಜನರೇಟರ್ ಇದೆಯೋ ಅಥವಾ ಸೀಮೆಎಣ್ಣೆ ಬುಡ್ಡಿ ಹಚ್ಚುತ್ತಿದ್ದೀರೋ’ ಎಂದು ಕುಟುಕಿದೆ.

**ರೈತ ವಿರೋಧಿ ಸರ್ಕಾರ:** ‘ಸಿದ್ದರಾಮಯ್ಯ ಸರ್ಕಾರ ಸಂಪೂರ್ಣ ರೈತ ವಿರೋಧಿ ನಿಲುವನ್ನು ತಾಳಿದೆ’ ಎಂದು ವಿಧಾನಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

‘ಏಳು ಗಂಟೆ ಕೊಡಬೇಕಿದ್ದ ವಿದ್ಯುತ್ ಎರಡು ಗಂಟೆಗೆ ಇಳಿಸಿದ್ದಾರೆ. ಬಿತ್ತನೆ ಬೀಜ ಹಾಳಾಗಿದೆ, ಗೊಬ್ಬರದ ಸಮಸ್ಯೆ ಇದೆ. ಇದರ ನಡುವೆ ಲೋಡ್ ಶೆಡ್ಡಿಂಗ್ ಜಾರಿಯಿಂದ ಬೆಳೆ ಉಳಿಸಿಕೊಳ್ಳಲು ಆಗಿಲ್ಲ. ಹೇಗಾದರೂ ವಿದ್ಯುತ್ ಖರೀದಿ ಮಾಡಿ. ರೈತರ ಬಾಳಲ್ಲಿ ಚೆಲ್ಲಾಟ ಆಡಬೇಡಿ’ ಎಂದು ಹೇಳಿದ್ದಾರೆ.

### ಶೇಷಾದ್ರಿಪುರ ಕಾಲೇಜಿಗೆ ಎನ್‌ಎಸ್‌ಎಸ್ ಪ್ರಶಸ್ತಿ



**ಬೆಂಗಳೂರು:** ರಾಜ್ಯ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನೀಡುವ ರಾಷ್ಟ್ರೀಯ ಸೇವಾ ಯೋಜನೆಯ ಅತ್ಯುತ್ತಮ ಘಟಕ ಹಾಗೂ ಕಾರ್ಯಕ್ರಮ ಅಧಿಕಾರಿ ರಾಜ್ಯ ಪ್ರಶಸ್ತಿಗೆ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಕಾಲೇಜು ಭಾಜನವಾಗಿದೆ.

ಕಾಲೇಜಿನ ಪ್ರಾಂಶುಪಾಲ ವಿದ್ಯಾ ಶಿವಣ್ಣವರ್ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಲಕ್ಷ್ಮಿ ನಾರಾಯಣ ಎಚ್.ಎನ್. ಈ ಗೌರವಕ್ಕೆ ಪಾತ್ರರಾದರು. ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಕರ್ನಾಟಕ ಒಲಿಂಪಿಕ್ಸ್ ಆಸೋಸಿಯೆಶನ್ ಅಧ್ಯಕ್ಷ ಕೆ. ಗೋವಿಂದರಾಜು, ರಾಜ್ಯ ಎನ್ನೆಸ್ಸೆಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಇದ್ದರು.

# ಬಾಲಕಿ ಮೇಲೆ ದೌರ್ಜನ್ಯ: ಭದ್ರತಾ ಸಿಬ್ಬಂದಿಗೆ ಜೈಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ಹೋಗಿದ್ದ 7 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ಚಿದಾನಂದ್‌ನಿಗೆ (35) ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಮಲ್ಲೇಶ್ವರ ಠಾಣೆಯಲ್ಲಿ 2022 ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

‘ಬಾಲಕಿಯು ಪೋಷಕರ ಜೊತೆ ಸಂಬಂಧಿಕರ ಮನೆಗೆ ಹೋಗಿದ್ದರು. ಪೋಷಕರು, ಸಂಬಂಧಿಕರ ಮನೆಯ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಬಾಲಕಿ, ಆಟವಾಡಲೆಂದು ಬಹುಮಹಡಿ ಕಟ್ಟಡದ ನೆಲಮಹಡಿಗೆ ಹೋಗಿದ್ದಳು. ಅದೇ ಕಟ್ಟಡದಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ ಆರೋಪಿ, ಬಾಲಕಿ ಬಳಿ ಹೋಗಿದ್ದ. ಬಾಯಿ ಹಾಗೂ ಗಲ್ಲಕ್ಕೆ ಮುತ್ತು ಕೊಟ್ಟು ಅಸಭ್ಯವಾಗಿ ವರ್ತಿಸಿ ದೌರ್ಜನ್ಯ ಎಸಗಿದ್ದ’ ಎಂದು ಪೊಲೀಸರು ಹೇಳಿದರು.

‘ಘಟನೆ ಬಗ್ಗೆ ಗೊತ್ತಾಗುತ್ತಿದ್ದಂತೆ ಬಾಲಕಿಯ ಪೋಷಕರು ಠಾಣೆಗೆ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಚಂದ್ರಶೇಖರ್, ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು’ ಎಂದು ತಿಳಿಸಿದರು.

## ಲಾರಿ– ಬೈಕ್ ಡಿಕ್ಕಿ: ಸವಾರ ಸಾವು

**ಬೆಂಗಳೂರು:** ದಾಸರಹಳ್ಳಿ ಜಂಕ್ಷನ್‌ನಲ್ಲಿ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಸವಾರ ಎಚ್.ಎಸ್. ನಾಗಭೂಷಣ್ (32) ಅವರು ಮೃತಪಟ್ಟಿದ್ದಾರೆ.

‘ಮಧುಗಿರಿ ತಾಲ್ಲೂಕಿನ ನಾಗಭೂಷಣ್ ಅವರು ಆರ್.ಎಂ.ಸಿ ಯಾರ್ಡ್ ಬಳಿಯ ದಿನಸಿ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಯಶವಂತಪುರದ ಕೊಠಡಿಯೊಂದರಲ್ಲಿ ವಾಸವಿದ್ದರು’ ಎಂದು ಪೀಣ್ಯ ಸಂಚಾರ ಪೊಲೀಸರು ಹೇಳಿದರು.

‘ನಾಗಭೂಷಣ್ ಅವರು ಕೆಲಸ ನಿಮಿತ್ತ ಬುಧವಾರ ಎಂಟನೇ ಮೈಲಿಗೆ ಹೋಗಿದ್ದರು. ಕೆಲಸ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಯಶವಂತಪುರದತ್ತ ರಾತ್ರಿ ಬರುತ್ತಿದ್ದರು. ದಾಸರಹಳ್ಳಿ ಜಂಕ್ಷನ್ ಬಳಿ ಇವರ ವಾಹನಕ್ಕೆ ಲಾರಿಯೊಂದು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡ ನಾಗಭೂಷಣ್ ಮೃತಪಟ್ಟಿದ್ದಾರೆ.’

‘ಲಾರಿ ಚಾಲಕನ ಅತೀ ವೇಗದ ಚಾಲನೆ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿದರು.

# ಪಟಾಕಿ ದುರಂತ: ಚಿಕಿತ್ಸೆಗೆ ಹಣ ಪಡೆದ ಆಸ್ಪತ್ರೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ತಿಬೆಲೆ ಪಟಾಕಿ ದುರಂತದಲ್ಲಿ ತೀವ್ರ ಗಾಯಗೊಂಡಿದ್ದ ವೆಂಕಟೇಶ್ (25) ಅವರಿಂದ ಚಿಕಿತ್ಸೆಗೆ ಹಣ ಪಡೆದಿದ್ದ ಆರೋಪದಡಿ ನಗರದ ಸೇಂಟ್ ಜಾನ್ಸ್ ಆಸ್ಪತ್ರೆ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರು ದೂರು ನೀಡಿದ್ದಾರೆ. ಸೇಂಟ್ ಜಾನ್ಸ್ ಆಸ್ಪತ್ರೆ ಹಾಗೂ ವೈದ್ಯರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದುರಂತದಲ್ಲಿ ಗಾಯಗೊಂಡಿರುವ ಎಲ್ಲರ ಚಿಕಿತ್ಸೆ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಸೇಂಟ್ ಜಾನ್ಸ್ ಆಸ್ಪತ್ರೆಯ ಮುಖ್ಯಸ್ಥರ ಜೊತೆ ಮಾತನಾಡಿದ್ದ ಜಿಲ್ಲಾ ಆರೋಗ್ಯಾಧಿಕಾರಿ, ‘ಗಾಯಾಳುಗಳಿಗೆ ಚಿಕಿತ್ಸೆ ನೀಡಿ. ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ’ ಎಂದಿದ್ದರು.’

‘ಗಾಯಾಳು ವೆಂಕಟೇಶ್ ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಪೋಷಕರಿಗೆ ಕರೆ ಮಾಡಿದ್ದ ಆಸ್ಪತ್ರೆ ವೈದ್ಯ, ಚಿಕಿತ್ಸೆಗೆ ಹಣ ಪಾವತಿಸುವಂತೆ ಒತ್ತಾಯಿಸಿದ್ದರು. ಅದರಂತೆ, ವೆಂಕಟೇಶ್ ಅವರ ಪೋಷಕರು ₹ 70 ಸಾವಿರ ಪಾವತಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಚಿಕಿತ್ಸೆ ಪಡೆಯುತ್ತಿದ್ದ ವೆಂಕಟೇಶ್ ಗುರುವಾರ ಮೃತಪಟ್ಟಿದ್ದಾರೆ. ಇದೇ ಸಂದರ್ಭ ಜಿಲ್ಲಾಧಿಕಾರಿ ದಯಾನಂದ್, ಆಸ್ಪತ್ರೆಗೆ ಭೇಟಿ ನೀಡಿದ್ದರು. ಚಿಕಿತ್ಸೆ ವೆಚ್ಚ ಪಾವತಿಸಿರುವ ಬಗ್ಗೆ ಪೋಷಕರು ದಾಖಲೆಗಳನ್ನು ನೀಡಿದ್ದರು. ಆಸ್ಪತ್ರೆಯವರನ್ನು ತರಾಟೆಗೆ ತೆಗೆದುಕೊಂಡ ಜಿಲ್ಲಾಧಿಕಾರಿ, ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದು ಮೂಲಗಳು ಹೇಳಿವೆ.

## ಮತ್ತೊಬ್ಬ ಗಾಯಾಳು ಸಾವು



ವೆಂಕಟೇಶ್

**ಆನೇಕಲ್:** ಅತ್ತಿಬೆಲೆ ಪಟಾಕಿ ದುರಂತದಲ್ಲಿ ತೀವ್ರವಾಗಿ ಗಾಯಗೊಂಡು ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೆಂಕಟೇಶ್ (25) ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಇದರೊಂದಿಗೆ ದುರಂತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 16ಕ್ಕೆ ಏರಿದೆ.

ಕಾರ್ಯಕ್ರಮವೊಂದಕ್ಕೆ ಪಟಾಕಿ ತರಲು ವೆಂಕಟೇಶ್ ಸ್ನೇಹಿತನೊಂದಿಗೆ ಶನಿವಾರ ಅತ್ತಿಬೆಲೆಗೆ ಹೋದಾಗ ಗೋದಾಮಿಗೆ ಬೆಂಕಿ ತಗುಲಿತ್ತು. ಒಳಗೆ ಸಿಲುಕಿದ್ದ ವೆಂಕಟೇಶ್ ಅವರ ಬೆನ್ನು, ತಲೆ, ಕೈ ಮತ್ತು ಕಾಲುಗಳಿಗೆ ಸುಟ್ಟ ಗಾಯಗಳಾಗಿದ್ದವು. ಅವರನ್ನು ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಜೊತೆಗಿದ್ದ ಸ್ನೇಹಿತ ಪಾರಾಗಿದ್ದರು.

ವೃತ್ತಿಯಿಂದ ಛಾಯಾಗ್ರಾಹಕರಾಗಿದ್ದ ಅವರು, ದೇಹದಾರ್ಢ್ಯಪಟು ಕೂಡ ಆಗಿದ್ದರು. ರಾಜ್ಯ ಮತ್ತು ರಾಷ್ಟ್ರ ಮಟ್ಟದ ದೇಹದಾರ್ಢ್ಯ ಸ್ಪರ್ಧೆಗಳಲ್ಲಿ ಹಲವು ಪ್ರಶಸ್ತಿ ಗಳಿಸಿದ್ದರು.

ಆಂಧ್ರಪ್ರದೇಶದ ಪುಂಗನೂರಿನವರಾದ ಅವರು, ಬೆಂಗಳೂರು ನಗರ ಜಿಲ್ಲೆಯ ಗಾರೆಭಾವಿಪಾಳ್ಯದಲ್ಲಿ ವಾಸವಾಗಿದ್ದರು. ಅವರಿಗೆ ತಂದೆ, ತಾಯಿ, ತಂಗಿ ಇದ್ದಾರೆ. ದುರಂತದಲ್ಲಿ ಗಾಯಗೊಂಡಿದ್ದ ತಮಿಳು ನಾಡಿನ ದಿನೇಶ್ ಬುಧವಾರ ಮೃತಪಟ್ಟಿದ್ದರು.

ಐಐಎಚ್‌ಆರ್ ಜತೆಗೆ ಸಂಶೋಧನೆಯಲ್ಲಿ ಸಹಯೋಗ

# ಕ್ವೀನ್ಸ್‌ಲ್ಯಾಂಡ್ ವಿವಿ ನಿಯೋಗ ಭೇಟಿ

ಪ್ರಜಾವಾಣಿ ವಾರ್ತೆ



ಹೆಸರಘಟ್ಟದಲ್ಲಿರುವ ಐಐಎಚ್‌ಆರ್‌ಗೆ ಭೇಟಿ ನೀಡಿದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದ ನಿಯೋಗದೊಂದಿಗೆ ಚರ್ಚೆ ನಡೆಯಿತು

**ಹೆಸರಘಟ್ಟ:** ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನೆ ಸಂಸ್ಥೆಗೆ (ಐಐಎಚ್‌ಆರ್) ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯ ನಿಯೋಗ ಬುಧವಾರ ಭೇಟಿ ನೀಡಿತು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ವಿನಿಮಯ, ತೋಟಗಾರಿಕಾ ಸಂಶೋಧನೆ ಮತ್ತು ಶಿಕ್ಷಣದಲ್ಲಿ ಜಂಟಿ ಸಹಯೋಗದ ಕುರಿತು ಚರ್ಚೆ ನಡೆಯಿತು.

ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದ ಕುಲಪತಿ ಪೀಟರ್ ವರ್ಗೀಸ್ ನೇತೃತ್ವದ ನಿಯೋಗವನ್ನು ಸಂಸ್ಥೆಯ ಪ್ರಭಾರ ನಿರ್ದೇಶಕ ಪ್ರಕಾಶ್ ಪಾಟೀಲ್ ಸ್ವಾಗತಿಸಿದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿ(ಐಸಿಎಆರ್) ಮತ್ತು ಐಐಎಚ್‌ಆರ್‌ನ ಸಂಶೋಧನೆ ಮತ್ತು ಸಾಧನೆಗಳ ಕುರಿತು ಹಣ್ಣುಗಳ ಬೆಳೆ ವಿಭಾಗದ ಮುಖ್ಯಸ್ಥ ಎಂ. ಶಂಕರನ್ ವಿವರಿಸಿದರು.

ಸ್ಮಾರ್ಟ್ ಪ್ರಸರಣ ತಂತ್ರಜ್ಞಾನ, ತೋಟಗಾರಿಕಾ ಬೆಳೆಗಳ ಆರ್ಥಿಕ ಗುಣಲಕ್ಷಣಗಳ ಸುಧಾರಣೆಗಾಗಿ ಜೀನೋಮಿಕ್ಸ್, ವೇಗದ ಸಂತಾನೋತ್ಪತ್ತಿ ಮತ್ತು ಜೀನೋಮ್ ಎಡಿಟಿಂಗ್ ತರಹದ ನವೀನ ತಳಿ ತಂತ್ರಜ್ಞಾನ, ತೋಟಗಾರಿಕಾ ಪರಿಸರ ವ್ಯವಸ್ಥೆಯಲ್ಲಿ ಕೀಟ ಮತ್ತು ರೋಗ ನಿರ್ವಹಣೆಯ ಪರಿಣಾಮಕಾರಿ ವಿಧಾನ, ಡ್ರೋನ್ ಆಧಾರಿತ ಕೀಟ ಕಣ್ಗಾವಲು ವ್ಯವಸ್ಥೆ, ಕೃತಕ ಬುದ್ಧಿಮತ್ತೆಯ ನೆರವಿನಿಂದ ರೋಗ ಮುನ್ಸೂಚನೆ, ತೋಟಗಾರಿಕೆ ಬೆಳೆಗಳ ಸಂರಕ್ಷಿತ ಕೃಷಿ, ರೊಬೊಟಿಕ್ಸ್ ತಂತ್ರಜ್ಞಾನದ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

ಕ್ವೀನ್ಸ್ ಲ್ಯಾಂಡ್ ವಿಶ್ವವಿದ್ಯಾಲಯದ ಕುಲಪತಿ ಪೀಟರ್ ವರ್ಗೀಸ್, ಉಪ ಕುಲಪತಿ ಡೆಬೋರಾ ಟೆರ್ರಿ, ಬ್ರಿಟ್ ಲವ್ ಗ್ರೋವ್, ಅಲೆಗ್ಸಾಂಡರ್ ರಾಕಿಕ್, ಥೋವಾ ಹ್ಯಾರಿಂಗ್, ಅನ್ವೇಶಾ ಮುಜುಂದರ್, ಸಸ್ಯ ಸಂರಕ್ಷಣಾ ವಿಭಾಗದ ಮುಖ್ಯಸ್ಥ ಎಸ್. ಶ್ರೀರಾಮ್ ಇದ್ದರು.

ಗ್ರಾಹಕರ ಸೋಗಿನಲ್ಲಿ ಬಂದಿದ್ದ ಆರೋಪಿಗಳು • ಸ್ಥಳೀಯರಿಗೂ ಬಂದೂಕು ತೋರಿಸಿ ಬೆದರಿಕೆ

# ಮಾಲೀಕನಿಗೆ ಗುಂಡೇಟು: ಚಿನ್ನ ದರೋಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬ್ಯಾಡರಹಳ್ಳಿಯ ದೊಡ್ಡ ಗೊಲ್ಲರಹಟ್ಟಿಯಲ್ಲಿರುವ ‘ವಿನಾಯಕ್ ಜ್ಯುವೆಲರ್ಸ್’ ಮಳಿಗೆಗೆ ನುಗ್ಗಿದ್ದ ನಾಲ್ವರು ದುಷ್ಕರ್ಮಿಗಳು, ಮಾಲೀಕನ ತೊಡೆಗೆ ಗುಂಡು ಹೊಡೆದು ಸುಮಾರು 1 ಕೆ.ಜಿ ಚಿನ್ನಾಭರಣ ದೋಚಿದ್ದಾರೆ.

‘ಗುರುವಾರ ಬೆಳಿಗ್ಗೆ 10.45ರ ಸುಮಾರಿಗೆ ದರೋಡೆ ನಡೆದಿದೆ. ಗುಂಡೇಟಿಯಿಂದ ಗಾಯಗೊಂಡಿರುವ ಮಾಲೀಕ ಮನೋಜ್ ಲೋಹರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಹಾಗೂ ಸ್ಥಳೀಯರ ಹೇಳಿಕೆ ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಹೇಳಿದರು.

‘ಸ್ಥಳೀಯ ನಿವಾಸಿ ಮನೋಜ್ ಅವರು ಗೊಲ್ಲರಹಟ್ಟಿಯ ಪೈಪ್‌ಲೈನ್ ರಸ್ತೆಯಲ್ಲಿ ‘ವಿನಾಯಕ್ ಜ್ಯುವೆಲರ್ಸ್’ ಮಳಿಗೆ ಇಟ್ಟುಕೊಂಡಿದ್ದಾರೆ. ಎಂದಿನಂತೆ ಗುರುವಾರ ಬೆಳಿಗ್ಗೆ ಮಳಿಗೆಗೆ ಬಂದಿದ್ದ ಮನೋಜ್, ವ್ಯಾಪಾರದಲ್ಲಿ ತೊಡಗಿದ್ದರು. ಎರಡು ದ್ವಿಚಕ್ರ ವಾಹನಗಳಲ್ಲಿ ಆರೋಪಿಗಳು ಮಳಿಗೆ ಬಳಿ ಬಂದಿದ್ದರು. ಗ್ರಾಹಕರ ಸೋಗಿನಲ್ಲಿ ಮಳಿಗೆ ಪ್ರವೇಶಿಸಿದ್ದರು. ಅವರನ್ನು ಬರಮಾಡಿ ಕೊಂಡಿದ್ದ ಮನೋಜ್, ‘ಏನು ಬೇಕು’ ಎಂದು ವಿಚಾರಿಸಿದ್ದರು. ಆರೋಪಿಗಳು, ಚಿನ್ನದ ಉಂಗುರ ತೋರಿಸುವಂತೆ ಹೇಳಿದ್ದರು’ ಎಂದು ಪೊಲೀಸ್ ಮೂಲಗಳು ವಿವರಿಸಿವೆ.

‘ಖರೀದಿಗೆ ಬಂದಿರಬಹುದೆಂದು ತಿಳಿದಿದ್ದ ಮನೋಜ್, ಹಲವು ಬಗೆಯ ಉಂಗುರಗಳನ್ನು ತೋರಿಸಿದ್ದರು. ಇದೇ ಸಂದರ್ಭದಲ್ಲಿ ಇಬ್ಬರು ಆರೋಪಿಗಳು, ಮನೋಜ್‌ರನ್ನು ಸುತ್ತುವರೆದು ಬಿಗಿಯಾಗಿ ಹಿಡಿದಿದ್ದರು. ಇನ್ನಿಬ್ಬರು, ತಮ್ಮ ಬ್ಯಾಗ್‌ನಲ್ಲಿದ್ದ ಬಂದೂಕು ತೆಗೆದು ಮಾಲೀಕನಿಗೆ ತೋರಿಸಿ ಬೆದರಿಸಿ, ಮಳಿಗೆಯಲ್ಲಿರುವ ಚಿನ್ನಾಭರಣ ನೀಡುವಂತೆ ಹೆದರಿಸಿದ್ದರು. ಆಭರಣ ಕೊಡಲು ಮಾಲೀಕ ಒಪ್ಪಿರಲಿಲ್ಲ. ಆಗ ಆರೋಪಿಗಳು, ಮಾಲೀಕನ ತೊಡೆಗೆ ಗುಂಡು ಹೊಡೆದಿದ್ದರು. ಮಾಲೀಕ ಕುಸಿದು ಬೀಳುತ್ತಿದ್ದಂತೆ ಮಳಿಗೆಯಲ್ಲಿದ್ದ ಸುಮಾರು 1 ಕೆ.ಜಿ ಚಿನ್ನಾಭರಣವನ್ನು ಬ್ಯಾಗ್‌ಗಳಲ್ಲಿ ತುಂಬಿಕೊಂಡು ಪರಾರಿಯಾಗಿದ್ದಾರೆ’ ಎಂದು ಮೂಲಗಳು ಹೇಳಿವೆ.

**ಸ್ಥಳೀಯರಿಗೂ ಬೆದರಿಕೆ:** ‘ಮಾಲೀಕನ ಕೂಗಾಟ ಕೇಳಿ ಸ್ಥಳೀಯರು ರಕ್ಷಣೆಗೆ ಹೋಗಿದ್ದರು. ಅವರಿಗೂ ಬಂದೂಕು ತೋರಿಸಿದ್ದ ಆರೋಪಿಗಳು, ಕೊಲೆ ಬೆದರಿಕೆಯೊಡ್ಡಿ ಬೈಕ್ ಸಮೇತ ಸ್ಥಳದಿಂದ ಹೊರಟು ಹೋಗಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗಾಯಗೊಂಡಿದ್ದ ಮಾಲೀಕ ಮನೋಜ್ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಯಿತು. ಮಳಿಗೆ ಬಗ್ಗೆ ಗೊತ್ತಿರುವ ವ್ಯಕ್ತಿಗಳೇ ಸಂಚು ರೂಪಿಸಿ ಕೃತ್ಯ ಎಸಗಿರುವ ಅನುಮಾನವಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

# ಮಂಡಳಿಗೆ ಮೌಲ್ಯಮಾಪನದ ಹೊಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ (ಎಸ್‌ಎ-2) ಹಾಗೂ ವಾರ್ಷಿಕ ಪರೀಕ್ಷೆಗಳನ್ನು ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯನ್ನು ಸಕ್ಷಮ ಪ್ರಾಧಿಕಾರವನ್ನಾಗಿ ನೇಮಿಸಲಾಗಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲಾ-ಕಾಲೇಜುಗಳಿಗೂ ಪರೀಕ್ಷಾ ಮಂಡಳಿಯೇ ಇನ್ನು ಮುಂದೆ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ. ಈ ಆದೇಶ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿದ ಆದೇಶದಲ್ಲಿ ವಿವರಿಸಿದೆ.

**ಆದೇಶಕ್ಕೆ ಆಕ್ಷೇಪ:** ಶೈಕ್ಷಣಿಕ ಅವಧಿಯ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆಗಳನ್ನು ನೀಡಲಾಗುತ್ತದೆ. ಇದು ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನದ ಭಾಗವಾಗಿ ಶಾಲಾ ಹಂತದಲ್ಲಿ ವಿಷಯ ಶಿಕ್ಷಕರು ಮಾಡಬೇಕಾದ ಮೌಲ್ಯಮಾಪನ. ಇದನ್ನು ಮಂಡಳಿಗೆ ವಹಿಸುವ ಅಗತ್ಯ ಏನಿದೆ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಪ್ರಶ್ನಿಸಿದ್ದಾರೆ.

ಈ ನಿಯಮ ಸಿಬಿಎಸ್‌ಇ, ಐಸಿಎಸ್‌ಇ, ಬಿಎಸ್‌ಬಿ ಪಠ್ಯಕ್ರಮ ಶಾಲೆಗಳಿಗೆ ಅನ್ವಯಿಸುವುದಿಲ್ಲ. ಈ ಆದೇಶ ರಾಜ್ಯ ಪಠ್ಯಕ್ರಮ ಶಾಲೆಗಳನ್ನು ಮುಚ್ಚಿಸಲು ಮುನ್ನುಡಿಯಾಗಲಿದೆ ಎಂದು ಹೇಳಿದ್ದಾರೆ.

ಎಚ್‌ಡಿಕೆ ನೇತೃತ್ವದ ಮೈತ್ರಿ ಸರ್ಕಾರ ಕೈಗೊಂಡಿದ್ದ ನಿರ್ಧಾರ ● ಟಿ.ಜಿ. ಹಳ್ಳಿ ಜಲಾನಯನಕ್ಕೆ ತಂದ ಕಂಟಕ

# ‘ಎಂಪ್ರಿ’ ವರದಿ ಉಲ್ಲಂಘಿಸಿ ‘ಬಫರ್’ ಮೊಟಕು

● ಆರ್. ಮಂಜುನಾಥ್

**ಬೆಂಗಳೂರು:** ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಬಫರ್ ವಲಯದಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂದು ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ವರದಿ ನೀಡಿದ್ದರೂ, ಐದು ವರ್ಷದ ಹಿಂದಿದ್ದ ಮೈತ್ರಿ ಸರ್ಕಾರ ಅದನ್ನು ಉಲ್ಲಂಘಿಸಿದೆ.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಪತನವಾಗುವುದಕ್ಕೆ ಮೂರು ದಿನ ಮುನ್ನ ಹೊಸ ಆದೇಶವನ್ನು ಹೊರಡಿಸಲಾಗಿದ್ದು, ಬಫರ್ ವಲಯವನ್ನು ಕಡಿಮೆಗೊಳಿಸಲಾಗಿದೆ.


ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶ ಸಂರಕ್ಷಣೆಗೆ 2003ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, 2013ರಲ್ಲಿ ಕೆಲವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಸ್ಥಳ ಪರಿಶೀಲನೆ ನಡೆಸಿ, ವಾಸ್ತವ ಪರಿಸ್ಥಿತಿಯ ಬಗ್ಗೆ ವರದಿ ಸಲ್ಲಿಸಲು ಎಂಪ್ರಿಗೆ ಹೈಕೋರ್ಟ್ ಸೂಚಿಸಿತ್ತು. 2015ರ ಆಗಸ್ಟ್‌ನಲ್ಲಿ ಎಂಪ್ರಿ ವರದಿ ಸಲ್ಲಿಸಿದೆ.

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ವಲಯ–1ರಲ್ಲಿ 550 ಹಳ್ಳಿಗಳು, ದೊಡ್ಡಬಳ್ಳಾಪುರ, ಪೀಣ್ಯ, ಸೋಂಪುರ, ದಾಬಸ್‌ಪೇಟೆ ಕೈಗಾರಿಕೆ ಪ್ರದೇಶಗಳಿವೆ. ಈ ಪ್ರದೇಶಗಳಲ್ಲಿ ವಸತಿ ಹಾಗೂ ಕೈಗಾರಿಕೆ ಪ್ರದೇಶಗಳ ತ್ಯಾಜ್ಯಗಳು ನೇರವಾಗಿ ನದಿಯ ಒಡಲಿಗೆ ಸೇರಿಕೊಳ್ಳುತ್ತಿವೆ. ಇದಲ್ಲದೆ, ಘನತ್ಯಾಜ್ಯ, ಕಟ್ಟಡ ನಿರ್ಮಾಣ ತ್ಯಾಜ್ಯಗಳನ್ನೂ ಹಾಕಲಾಗುತ್ತಿದೆ. ವಲಯ– 2ರಲ್ಲಿ, ನಾಲ್ಕು ತಾಲ್ಲೂಕುಗಳ 33 ಹಳ್ಳಿಗಳಿದ್ದು, 19 ಬಡಾವಣೆಗಳು ಹಾಗೂ ಎರಡು ಉಗ್ರಾಣಗಳು ನಿರ್ಮಾಣವಾಗಿವೆ. ಇವುಗಳು ನದಿಯ ಹರಿವನ್ನೇ ಬದಲಿಸಿವೆ.

ವಲಯ– 3 ಮತ್ತು ವಲಯ– 4ರಲ್ಲಿ ಮರಳು ಗಣಿಗಾರಿಕೆ, ಕಲ್ಲು ಗಣಿಗಾರಿಕೆಯಿಂದ ನೈಸರ್ಗಿಕ ಕಾಲುವೆ ಹಾಳಾಗುತ್ತಿದೆ. ಘನ– ದ್ರವ ತ್ಯಾಜ್ಯಗಳು ನೇರವಾಗಿ ಜಲಾಶಯದ ನೀರಿಗೆ ತಲುಪುತ್ತಿವೆ. ಕೈಗಾರಿಕೆ ಹಾಗೂ ಕೃಷಿಗಾಗಿ ಈ ಭಾಗದಲ್ಲಿ ನೀರನ್ನು ಅತಿಹೆಚ್ಚಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಅರ್ಕಾವತಿ ನದಿ ಪಾತ್ರದಲ್ಲಿರುವ ಕೈಗಾರಿಕೆಗಳು ತಮ್ಮ ರಾಸಾಯನಿಕ ತ್ಯಾಜ್ಯಗಳನ್ನು ನೇರವಾಗಿ ನದಿಗೆ ಹರಿಬಿಟ್ಟಿದ್ದು, ನೀರು ಅತ್ಯಂತ ಕಲ್ಮಶವಾಗಿದೆ ಎಂದು ಎಂಪ್ರಿ ವರದಿ ನೀಡಿದೆ.

ನದಿ ಪುನಶ್ಚೇತನಕ್ಕೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದು ಸೇರಿದಂತೆ ಹತ್ತಾರು ಸಲಹೆಗಳನ್ನು ನೀಡಿರುವ ಎಂಪ್ರಿ, ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಸಂರಕ್ಷಣೆಗೆ ಕಾನೂನುಬದ್ಧವಾದ ಪ್ರಾಧಿಕಾರ ರಚಿಸುವವರೆಗೂ 2003ರ ಆದೇಶದಂತೆಯೇ ಬಫರ್ ವಲಯವನ್ನು ಸಂರಕ್ಷಿಸಬೇಕು ಎಂದು ಹೇಳಿದೆ. ಆದರೆ, ಸಂರಕ್ಷಣೆಯ ಯಾವ ಸಲಹೆಗಳನ್ನೂ ಅನುಷ್ಠಾನ ಮಾಡದಿದ್ದ ಹಿಂದಿನ ಸರ್ಕಾರ, ಬಫರ್ ವಲಯದ ವ್ಯಾಪ್ತಿಯನ್ನು ಕಡಿಮೆ ಮಾಡಿ ಆದೇಶಿಸಿತ್ತು.

ಪ್ರಜಾವಾಣಿ ವಿಶೇಷ




## ರಾತ್ರೋರಾತ್ರಿ ಸಾಧನೆ ಸಾಧ್ಯವಿಲ್ಲ!

ನದಿ ಪುನಶ್ಚೇತನವನ್ನು ರಾತ್ರೋರಾತ್ರಿ ಸಾಧಿಸಲಾಗುವುದಿಲ್ಲ. ನಮ್ಮ ಗುರಿಯನ್ನು ಸಾಧಿಸಬೇಕಾದರೆ 20 ವರ್ಷ ಸಂರಕ್ಷಣಾ ಕಾರ್ಯಗಳನ್ನು ನಡೆಸಬೇಕು. ಯೋಜನೆಯ ಸಮಗ್ರ ಚಿತ್ರಣವನ್ನು ರೂಪಿಸಿ, ಲಭ್ಯವಿರುವ ಕನಿಷ್ಠ ಸಂಪನ್ಮೂಲಗಳಿಂದ ಗುರಿ ಸಾಧನೆಯನ್ನು ಯೋಜಿಸಬೇಕು ಎಂದು ಎಂಪ್ರಿ ವರದಿ ಹೇಳಿತ್ತು. ಈ ಸಲಹೆಯನ್ನು 2013ರಿಂದಾದರೂ ಅಳವಡಿಸಿಕೊಂಡಿದ್ದರೆ ಇಷ್ಟೊತ್ತಿಗೆ ನದಿ ಉಳಿಸುವ ಅಲ್ಪ ಹಾದಿಯನ್ನಾದರೂ ಕ್ರಮಿಸಬಹುದಿತ್ತು ಎಂಬುದು ಪರಿಸರ ಕಾಳಜಿಯುಳ್ಳವರ ವಾದ.

**ಎಂಪ್ರಿ ಸಲಹೆಗಳು**

- ನದಿ ಪಾತ್ರದ ಸಂರಕ್ಷಣೆಗೆ ಬಹುಶಿಸ್ತೀಯ ಸಮಿತಿ ಸ್ಥಾಪನೆ
- ಅಕ್ರಮ, ಅನಧಿಕೃತ ಅಡೆತಡೆಗಳ ತೆರವು
- ಅನಧಿಕೃತ ಕ್ವಾರಿ, ಮರಳು ಗಣಿಗಾರಿಕೆಗೆ ನಿಷೇಧ
- ನದಿ, ಕೆರೆ ದಡದ ಒತ್ತುವರಿ ತೆರವು
- ನದಿ ಹರಿಯಲು ಕೆರೆ ಜಾಲದ ಪುನಶ್ಚೇತನ
- ಕೈಗಾರಿಕೆ ತ್ಯಾಜ್ಯ ನದಿಗೆ ಹರಿಯುವುದಕ್ಕೆ ತಡೆ
- ತ್ಯಾಜ್ಯ ನಿರ್ವಹಣೆ, ಸಂಸ್ಕರಣೆ ಬಗ್ಗೆ ತಂತ್ರಜ್ಞಾನ ಅಳವಡಿಕೆ
- ಅಂತರ್ಜಲ ಬಳಕೆಯಲ್ಲಿ ನಿಯಂತ್ರಣ ಮತ್ತು ನಿರ್ವಹಣೆ

## ರಾಜಕೀಯ, ರಿಯಲ್ ಎಸ್ಟೇಟ್ ಲಾಬಿಗೆ ಮನ್ನಣೆ



ನದಿ ರಕ್ಷಿಸಬೇಕು, ನದಿಪಾತ್ರ ಉಳಿಸಿಕೊಳ್ಳಬೇಕು, ಜನರಿಗೆ ಶುದ್ಧವಾದ ನೀರು ಕೊಡಬೇಕು ಎಂಬ ರಾಜಕೀಯ ಇಚ್ಛಾಶಕ್ತಿ ಕಾಣಿಸುತ್ತಿಲ್ಲ. ರಾಜಕೀಯ ಹಾಗೂ ರಿಯಲ್ ಎಸ್ಟೇಟ್ ಲಾಬಿಗೆ ಮಣಿದು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಬಫರ್ ವಲಯವನ್ನು ಕಡಿಮೆ ಮಾಡಲಾಗುತ್ತಿದೆ. 2003ರಲ್ಲಿದ್ದ ಆದೇಶವನ್ನು ಜಾರಿಗೆ ತಂದಿದ್ದರೆ ಈ 20 ವರ್ಷಗಳಲ್ಲಿ ನಾವು ಪರಿಸರಯುಕ್ತ, ಶುದ್ಧ ನೀರಿನ ಹರಿವನ್ನು ಇಲ್ಲಿ ಕಾಣಬಹುದಿತ್ತು. ಆದರೆ, ಆದೇಶ ಜಾರಿ ಮಾಡಿ ಸುಮ್ಮನೆ ಕುಳಿತುಕೊಂಡು ಅಕ್ರಮ, ಅನಧಿಕೃತ ನಿರ್ಮಾಣಗಳಾಗಲು ರಾಜಕಾರಣಿಗಳೇ ಕಾರಣರಾಗಿದ್ದಾರೆ. ಭೂತಾಯಿಯ ಮೇಲೆ ದೌರ್ಜನ್ಯ ಎಸಗಿರುವ ಕ್ರಿಮಿನಲ್‌ಗಳು ಇವರು. ಈ ಹಿಂದೆ ಟೌನ್‌ಶಿಪ್ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದ್ದರೂ, ಅಂದಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಅದರ ವಿರುದ್ಧ ಕ್ರಮ ಕೈಗೊಂಡಿದ್ದರು. ಸಚಿವ ಸಂಪುಟ ಸಭೆಯಲ್ಲಿ ಟೌನ್‌ಶಿಪ್ ನಿರ್ಮಾಣಕ್ಕೆ ಸಮ್ಮತಿ ನಿರಾಕರಿಸಿ, ನ್ಯಾಯಾಲಯ ನಿಂದನೆಯಾದರೂ ಎದುರಿಸುತ್ತೇವೆ ಎಂದಿದ್ದರು. ಅವರ ಅಂದಿನ ನಿರ್ಧಾರದಿಂದಲೇ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ಇಷ್ಟಾದರೂ ಉಳಿದುಕೊಂಡಿದೆ

**ಯಲ್ಲಪ್ಪರೆಡ್ಡಿ,** ಪರಿಸರ ತಜ್ಞ

## ಕುಡಿಯುವ ನೀರು ನೀಡುವ ಉದ್ದೇಶವಿದ್ದರೆ ಬಫರ್ ವಲಯ ಉಳಿಸಲು ಒತ್ತಾಯ



ಬೆಂಗಳೂರಿನ ಶೇ 25ರಷ್ಟು ಪ್ರದೇಶಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯುವ ನೀರು ಪೂರೈಸಲಾಗುತ್ತಿತ್ತು. ಆದರೆ ಇಂದು ಅಲ್ಲಿನ ನೀರು ಹರಿಯುವ ಪ್ರದೇಶವನ್ನೇ ಹಾಳು ಮಾಡಲಾಗಿದೆ. ಬಫರ್ ವಲಯದಲ್ಲಿ ಗಿಡ–ಮರ, ಹುಲ್ಲು–ಕಂಟಿ ಇರಬೇಕು. ಅವುಗಳು ಮಳೆ ನೀರನ್ನು ಹಿಡಿದುಕೊಂಡು ಜಲ ಜಿನುಗುವಂತೆ ಮಾಡುತ್ತವೆ. ಪ್ರಾಣಿ–ಪಕ್ಷಿಗಳಿರಬೇಕು. ಇದೇ ಪರಿಸರ ವೈವಿಧ್ಯ. ಇವುಗಳಿಲ್ಲದೆ ಕಟ್ಟಡಗಳನ್ನು ಉಳಿಸುವುದಕ್ಕಾಗಿ ಬಫರ್ ವಲಯ ಕಡಿಮೆ ಮಾಡಲು ಹೊರಟಿರುವುದು ದುರಂತ. ಸಾವಿರಾರು ಕೋಟಿ ವೆಚ್ಚ ಮಾಡಿ ನೂರಾರು ಕಿ.ಮೀ ದೂರದಿಂದ ಕುಡಿಯುವ ನೀರು ತರುತ್ತಿದ್ದೇವೆ. ಇಲ್ಲಿರುವ ನೀರನ್ನು ಕಲುಷಿತಗೊಳಿಸಿ, ಕೈಗಾರಿಕೆಗಳಿಗೆ ಅನುವು ಮಾಡಿಕೊಡುತ್ತಿರುವುದು ವಿಷಾದನೀಯ. ನಾಳೆಯ ಬೆಂಗಳೂರಿಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯುವ ನೀರು ಕೊಡಬೇಕು ಎಂಬ ಮನಸ್ಸು ಸರ್ಕಾರಕ್ಕೆ ಇದ್ದರೆ ಬಫರ್ ವಲಯ ಕಡಿಮೆ ಮಾಡಬಾರದು. 2003ರ ಆದೇಶದಲ್ಲಿರುವುದಕ್ಕಿಂತ ಇನ್ನೂ ಹೆಚ್ಚಿನ ಬಫರ್ ವಲಯ ಇದ್ದರೇ ಒಳ್ಳೆಯದು.

**ಸುರೇಶ್ ಹೆಬ್ಳೀಕರ್,** ಚಲನಚಿತ್ರ ನಟ ಹಾಗೂ ಪರಿಸರ ಕಾರ್ಯಕರ್ತ

# ಮಹಿಳಾ ‘ಸ್ವಾವಲಂಬನೆ’ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೊಮ್ಮನಹಳ್ಳಿ:** ಗ್ರಾಮೀಣ ಮಹಿಳಾ ಉದ್ಯಮಶೀಲತೆಯನ್ನು ಉತ್ತೇಜಿಸುವ ‘ಸ್ವಾವಲಂಬನೆ’ ಯೋಜನೆಗೆ ಗುರುವಾರ ಚಾಲನೆ ನೀಡಲಾಯಿತು.

ಬನ್ನೇರುಘಟ್ಟ ರಸ್ತೆಯ ಐಐಎಂಬಿ ಸಂಸ್ಥೆಯಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಕಾರ್ಯಾಗಾರದಲ್ಲಿ ಈ ಯೋಜನೆಯನ್ನು ಉದ್ಘಾಟಿಸಲಾಯಿತು. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಉತ್ತೇಜನಾ ಸಂಸ್ಥೆ ಹಾಗೂ ಐಐಎಂಬಿ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಾಗಾರ ನಡೆಯಿತು.

‘ಗ್ರಾಮೀಣ ಕರ್ನಾಟಕ ಭಾಗದಲ್ಲಿ ಮಹಿಳಾ ಒಡೆತನದಲ್ಲಿರುವ ಕೃಷಿಯೇತರ ವ್ಯವಹಾರಗಳನ್ನು ಉತ್ತೇಜಿಸಲು ಈ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಗುಡಿ ಕೈಗಾರಿಕೆಗಳಿಗೆ ಜಾಗತಿಕ ಮಾರುಕಟ್ಟೆ ಕಲ್ಪಿಸುವ ಉದ್ದೇಶ ಹೊಂದಿದೆ. ಕರ್ನಾಟಕದ ಈ ಪ್ರಯತ್ನ ದೇಶಕ್ಕೆ ಮಾದರಿ’ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಚರಣಜಿತ್ ಸಿಂಗ್ ಮೆಚ್ಚುಗೆ ವ್ಯಕ್ತಪಡಿಸಿದರು.

‘ಮಹಿಳಾ ಉದ್ಯಮಶೀಲತೆಗೆ ನೆರವು ನೀಡಲು ಅರ್ಹ ಸ್ವಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ನಾಲ್ಕು ಸಾವಿರ ಅರ್ಜಿ ಸ್ವೀಕೃತವಾಗಿದ್ದು, ಅದರಲ್ಲಿ 150 ಗುಂಪುಗಳನ್ನು ಆಯ್ಕೆ ಮಾಡಲಾಗಿದೆ. ಈ ಗುಂಪುಗಳಿಗೆ ಉದ್ಯಮ ನಡೆಸಲು ಅಗತ್ಯ ಹಣಕಾಸಿನ ನೆರವು, ಬಡ್ಡಿರಹಿತ ಸಾಲ, ಉದ್ಯಮಕ್ಕೆ ಸಂಬಂಧಿಸಿ ಐಐಎಂಬಿ ವತಿಯಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ನೆರವು ಸಿಗಲಿದೆ’ ಎಂದು ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹದೇವನ್ ಹೇಳಿದರು.

ಗ್ರಾಮೀಣ ಉದ್ಯಮಶೀಲತೆಯ ದೃಷ್ಟಿಕೋನಗಳು, ಗ್ರಾಮೀಣ ಮಹಿಳೆಯರ ಜೀವನ ಉತ್ತಮಗೊಳಿಸುವುದು, ಮಹಿಳಾ ಉದ್ಯಶೀಲತೆಯ ವ್ಯಾಪ್ತಿ, ಸಣ್ಣ ಉದ್ಯಮಗಳಿಗೆ ಸಾಲದ ಅರ್ಹತೆ, ಬ್ರಾಂಡಿಂಗ್ ಮತ್ತು ಮಾರುಕಟ್ಟೆಯ ಮಹತ್ವ, ಕಾನೂನು ಅರಿವು ವಿಷಯಗಳ ಕುರಿತು ಪ್ರತ್ಯೇಕ ಚರ್ಚೆ ನಡೆಯಲಿದೆ ಎಂದು ಐಐಎಂಬಿ ಸಂಸ್ಥೆಯ ಉದ್ಯಮಶೀಲತೆ ವಿಭಾಗದ ಪ್ರಾಧ್ಯಾಪಕಿ ಶ್ರೀವರ್ಧಿನಿ ಝಾ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ರಾಜ್ಯದ ಗ್ರಾಮೀಣ ಭಾಗದ ಇನ್ನೂರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಸ್ವಾತಿ ಶರ್ಮ, ರಾಷ್ಟ್ರೀಯ ಜೀವನೋಪಾಯ ಅಭಿಯಾನ ನಿರ್ದೇಶಕಿ ರಾಗಪ್ರಿಯಾ, ಮುಖ್ಯ ಕಾರ್ಯಾಚರಣೆ ಅಧಿಕಾರಿ ಕೆ. ಅನುಪಮಾ ಇದ್ದರು.

# ಕಾಮಗಾರಿ ಗುತ್ತಿಗೆ ಕಂಪನಿಗಳ ಮೇಲೆ ದಾಳಿ ನಡೆಸಿದ ಐಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರದ ಹಲವು ಕಾಮಗಾರಿಗಳನ್ನು ಗುತ್ತಿಗೆ ಪಡೆದಿದ್ದ ಎರಡು ಕಂಪನಿಗಳಿಗೆ ಸಂಬಂಧಪಟ್ಟ 25 ಸ್ಥಳಗಳ ಮೇಲೆ ಆದಾಯ ತೆರಿಗೆ (ಐಟಿ) ಅಧಿಕಾರಿಗಳು ಗುರುವಾರ ದಾಳಿ ಮಾಡಿ, ಶೋಧ ನಡೆಸಿದರು.

ತೆರಿಗೆ ವಂಚನೆ ಆರೋಪದಡಿ ಐಟಿ ಅಧಿಕಾರಿಗಳು ಈ ದಾಳಿ ನಡೆಸಿದರು. ಸಹಕಾರನಗರ, ಸಂಜಯನಗರ ಹಾಗೂ ಇತರೆ ಸ್ಥಳಗಳಲ್ಲಿರುವ ಕಂಪನಿ ಕಚೇರಿ ಹಾಗೂ ಕಂಪನಿಗೆ ಸಂಬಂಧಪಟ್ಟ ವ್ಯಕ್ತಿಗಳ ಮನೆಯಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಕಂಪನಿಯ ವಹಿವಾಟಿಗೆ ಸಂಬಂಧಪಟ್ಟ ದಾಖಲೆಗಳನ್ನು ಸುಪರ್ದಿಗೆ ಪಡೆದು ಮಾಹಿತಿ ಕಲೆ ಹಾಕಿದರು. ಕಂಪನಿಗಳಿಗೆ ಸಂಬಂಧಪಟ್ಟ ಆಡಳಿತ ಮಂಡಳಿ ಸದಸ್ಯರು ಹಾಗೂ ಇತರರ ಮನೆಗಳಲ್ಲಿಯೂ ಶೋಧ ನಡೆಯಿತು. ಶೋಧದ ಸಂದರ್ಭದಲ್ಲಿ ನಗದು ಹಾಗೂ ಹಲವು ದಾಖಲೆಗಳನ್ನು ಅಧಿಕಾರಿಗಳು ಜಪ್ತಿ ಮಾಡಿರುವುದಾಗಿ ಗೊತ್ತಾಗಿದೆ.

ಬೆಂಗಳೂರಿನ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಇದೇ ಎರಡು ಕಂಪನಿಗಳು ಇತ್ತೀಚೆಗಷ್ಟೇ ಗುತ್ತಿಗೆ ಪಡೆದಿದ್ದವು.




**ಸಂಭ್ರಮ** ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ಪೌರಕಾರ್ಮಿಕರ ಮಹಾಸಂಘವು ನಗರದ ಪುರಭವನದಲ್ಲಿ ಗುರುವಾರ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆಯಲ್ಲಿ ಸಂಘದ ಸದಸ್ಯರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

# ‘ಅನುದಾನ ಬಿಡುಗಡೆ ಮಾಡುತ್ತಿಲ್ಲ’

## ಮಹದೇವಪುರ ಕ್ಷೇತ್ರದ ಶಾಸಕಿ ಮಂಜುಳಾ ಲಿಂಬಾವಳಿ ಅಸಮಾಧಾನ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮಹದೇವಪುರ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಶಾಸಕಿ ಮಂಜುಳಾ ಲಿಂಬಾವಳಿ ಬೇಸರ ವ್ಯಕ್ತಪಡಿಸಿದರು.

ಕೆ.ಆರ್.ಪುರ ಸಮೀಪದ ರಾಂಪುರದಲ್ಲಿ ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾರತಮ್ಯ ಮಾಡುತ್ತಿದ್ದಾರೆ. ನನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಪುನರಾರಂಭಿಸಲು, ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಅನುದಾನ ನೀಡದೆ ಹೋದರೆ ಕ್ಷೇತ್ರದ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಫಲಾನುಭವಿಗಳಿಗೆ ಶಾಸಕಿ ಮಂಜುಳಾ ಲಿಂಬಾವಳಿ ಹಕ್ಕು ಪತ್ರಗಳನ್ನು ವಿತರಿಸಿದರು (ಬಲದಿಂದ ಮೂರನೇಯವರು)

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಾದ ಪ್ರಧಾನಮಂತ್ರಿ ಕಿಸಾನ್ ಯೋಜನೆ, ಮಹಿಳಾ ಸಂಘಗಳಿಗೆ ಸಂಜೀವಿನಿ ಯೋಜನೆಯಡಿ ಸಾಲ ಮತ್ತು ಸಹಾಯಧನ, ಮನೆ ಕಟ್ಟಿಕೊಳ್ಳಲು ಆಶ್ರಯ ವಸತಿ ಯೋಜನೆಯಡಿ ಸಹಾಯಧನ, ಅಂಗವಿಕಲರಿಗೆ ಸಹಾಯಧನ ಯೋಜನೆಯ ಸದುಪಯೋಗ ಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 17 ಫಲಾನುಭವಿಗಳಿಗೆ 94 ಸಿಸಿ ಹಕ್ಕುಪತ್ರಗಳನ್ನು ನೀಡಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಹಾಯಧನ, ಅಂಗವಿಕಲರಿಗೆ ಪ್ರೋತ್ಸಾಹಧನ, ಹಿರಿಯ ನಾಗರಿಕರಿಗೆ ಕಂಬಳಿ ವಿತರಿಸಲಾಯಿತು. ಕಾರ್ಯ ನಿರ್ವಾಹಕ ಅಧಿಕಾರಿ ವಸಂತ್ ಕುಮಾರ್, ಗ್ರಾ.ಪಂ. ಅಧ್ಯಕ್ಷ ರಾಂಪುರ ಚಂದ್ರಪ್ಪ, ಉಪಾಧ್ಯಕ್ಷೆ ಅಂಬಿಕಾ ಮಂಜುನಾಥ, ಪಿಡಿಒ ರೋಹಿತ್ ಇದ್ದರು.

# ಕಚ್ಚಾ ಬಾಂಬ್ ಪತ್ತೆ: ದೂರು

**ಬ್ರಹ್ಮಾವರ (ಉಡುಪಿ):** ಕಾಡು ಹಂದಿಗಳನ್ನು ಕೊಲ್ಲುವ ಉದ್ದೇಶದಿಂದ 17 ಕಚ್ಚಾ ಬಾಂಬ್‌ಗಳನ್ನು ಮಂದಾರ್ತಿ ಸಮೀಪದ ಕಾಡಿನಲ್ಲಿ ಬಚ್ಚಿಟ್ಟ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂದಾರ್ತಿಯ ಸುಧೀರ ಪೂಜಾರಿ ಬುಧವಾರ ಸಂಜೆ ಮನೆಯ ಹತ್ತಿರ ಸ್ನೇಹಿತರೊಂದಿಗೆ ಆಟವಾಡುತ್ತಿರುವಾಗ ಕಾಡಿನಲ್ಲಿ ಪಟಾಕಿ ಸಿಡಿಸಿದ ಶಬ್ದ ಕೇಳಿಸಿದ್ದು, ಗುರುವಾರ ಬೆಳಿಗ್ಗೆ ಕಾಡಿಗೆ ಹೋಗಿ ನೋಡಿದಾಗ ಅವರ ನಾಯಿ ವಿಕಾರವಾಗಿ ಮೃತಪಟ್ಟಿತ್ತು. ಸಂಶಯಗೊಂಡು ನೋಡಿದಾಗ ಅಲ್ಲಿ ಕಾಡುಹಂದಿಗಳನ್ನು ಕೊಲ್ಲುವ ಉದ್ದೇಶದಿಂದ 17 ಕಚ್ಚಾ ಬಾಂಬ್‌ಗಳನ್ನು ಇಟ್ಟು ಅದರ ಮೇಲೆ ಸೊಪ್ಪುಗಳನ್ನು ಮುಚ್ಚಿಟ್ಟಿರುವುದು ಕಂಡುಬಂದಿತ್ತು. ಮನುಷ್ಯನ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅಪರಿಚಿತರು ಕಚ್ಚಾಬಾಂಬ್ ತಯಾರಿಸಿ ಸಂಜೀವ ಎನ್ನುವವರ ಹಾಡಿಯಲ್ಲಿ ಇಟ್ಟು ನಾಯಿಯ ಸಾವಿಗೆ ಕಾರಣವಾಗಿದ್ದಾರೆ ಎಂದು ಅವರು ದೂರು ನೀಡಿದ್ದಾರೆ.

# ಇಸ್ರೇಲ್‌ನಿಂದ ಮರಳಿದ ಸುಮೇಶ್

ಪ್ರಜಾವಾಣಿ ವಾರ್ತೆ

**ಧಾರವಾಡ:** ‘ಇಸ್ರೇಲ್‌ನಲ್ಲಿ ಸಿಲುಕಿದ್ದ ಕೃಷಿ ವಿಶ್ವವಿದ್ಯಾಲಯದ ವಿಜಯಪುರದ ಸಂಶೋಧನಾ ಕೇಂದ್ರದ ಹವಾಮಾನ ವಿಭಾಗದ ಪ್ರಾಧ್ಯಾಪಕ ಸುಮೇಶ್ ಅವರು ಸುರಕ್ಷಿತವಾಗಿ ದೇಶಕ್ಕೆ ಗುರುವಾರ ಮರಳಿದ್ದಾರೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್. ಪಾಟೀಲ ತಿಳಿಸಿದರು.

‘ಸುಮೇಶ್ ಅವರು ನಮ್ಮ ಜತೆ ಫೋನ್ ಸಂಪರ್ಕದಲ್ಲಿ ಇದ್ದಾರೆ. ಬೆಂಗಳೂರು ತಲುಪಿ, ರೈಲಿನಲ್ಲಿ ವಿಜಯಪುರಕ್ಕೆ ಪ್ರಯಾಣಿಸಿದ್ದಾರೆ.’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

# ಭಯೋತ್ಪಾದಕ ದಾಳಿ: ಭಾರತ ಹೇಳಿಕೆ

**ಇಸ್ರೇಲ್ ಸಂಘರ್ಷ**

**ನವದೆಹಲಿ (ಪಿಟಿಐ):** ಇಸ್ರೇಲ್ ಮೇಲೆ ಹಮಾಸ್ ನಡೆಸಿರುವ ಆಕ್ರಮಣವನ್ನು ‘ಭಯೋತ್ಪಾದನಾ ದಾಳಿ’ ಎಂದು ಭಾರತ ಗುರುವಾರ ಕರೆದಿದೆ.

ಇಸ್ರೇಲ್–ಹಮಾಸ್ ನಡುವಿನ ಸಂಘರ್ಷ ಕುರಿತು ಇದೇ ಮೊದಲ ಬಾರಿಗೆ ಭಾರತ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ‘ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಬಿಕ್ಕಟ್ಟು ಕುರಿತಂತೆ ಈ ಹಿಂದಿನಿಂದಲೂ ತಳೆದಿರುವ ನಿಲುವಿಗೆ ಭಾರತ ಬದ್ಧ’ ಎಂದರು.

‘ಉಭಯ ದೇಶಗಳು ಮಾತುಕತೆ ಮೂಲಕ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಬೇಕು. ಇಸ್ರೇಲ್‌ನೊಂದಿಗೆ ಶಾಂತಿಯಿಂದ ಇರುವ ಸಾರ್ವಭೌಮ, ಸ್ವತಂತ್ರ ಹಾಗೂ ನ್ಯಾಯಬದ್ಧ ಪ್ಯಾಲೆಸ್ಟೀನ್ ರಾಷ್ಟ್ರ ಸ್ಥಾಪನೆಯಾಗಬೇಕು ಎಂದು ಭಾರತ ಈ ಹಿಂದಿನಿಂದಲೂ ಪ್ರತಿಪಾದಿಸುತ್ತಲೇ ಬಂದಿದೆ. ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದರು.

‘ಎರಡು ರಾಷ್ಟ್ರಗಳ ಸ್ಥಾಪನೆಯೇ ಈ ಬಿಕ್ಕಟ್ಟಿಗೆ ಪರಿಹಾರ’ ಎಂಬ ಭಾರತದ ನಿಲುವನ್ನೂ ಪುನರುಚ್ಚರಿಸಿದರು.

‘ಎಲ್ಲ ಬಗೆಯ ಭಯೋತ್ಪಾದಕ ಕೃತ್ಯಗಳ ವಿರುದ್ಧ ಹೋರಾಡುವುದು ಜಾಗತಿಕ ಹೊಣೆಗಾರಿಕೆಯಾಗಿದೆ. ಜೊತೆಗೆ, ಮನುಕುಲದ ಹಿತ ಬಯಸುವ ಕಾನೂನುಗಳನ್ನು ಪಾಲನೆ ಮಾಡಬೇಕಾದ ಸಾರ್ವತ್ರಿಕ ಬಾಧ್ಯತೆಯೂ ಎಲ್ಲರ ಮೇಲಿದೆ’ ಎಂದು ಬಾಗ್ಚಿ ಹೇಳಿದರು.

‘ಇಸ್ರೇಲ್‌ನಲ್ಲಿರುವವರ ಪೈಕಿ ತಾಯ್ನಾಡಿಗೆ ಮರಳಲು ಬಯಸುವ ತನ್ನ ಪ್ರಜೆಗಳನ್ನು ಸುರಕ್ಷಿತವಾಗಿ ಕರೆತರುವುದರ ಮೇಲೆ ಭಾರತ ಸದ್ಯ ಗಮನ ಕೇಂದ್ರೀಕರಿಸಿದೆ’ ಎಂದು ಹೇಳಿದರು.

# ಮುನಿರತ್ನ ನಾಯಕತ್ವದಲ್ಲೇ ಅವ್ಯವಹಾರ: ಸುರೇಶ್

ಪ್ರಜಾವಾಣಿ ವಾರ್ತೆ

**ರಾಮನಗರ:** ‘ಬೆಂಗಳೂರಿನ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ಮುನಿರತ್ನ ಅವರ ಅಪ್ಪಣೆ ಇಲ್ಲದೆ ಒಂದು ಇರುವೆ ಕೂಡ ಅಲುಗಾಡುವುದಿಲ್ಲ. ಹೀಗಿರುವಾಗ, ಅವರ ನಾಯಕತ್ವದಲ್ಲೇ ಅವ್ಯವಹಾರ ನಡೆದಿದೆ. ಅಂದಹಾಗೆ ನಾವು ಯಾರನ್ನೂ ಟಾರ್ಗೆಟ್ ಮಾಡುತ್ತಿಲ್ಲ’ ಎಂದು ಸಂಸದ ಡಿ.ಕೆ. ಸುರೇಶ್ ಅವರು ತಮ್ಮ ವಿರುದ್ಧದ ಆರೋಪಕ್ಕೆ ತಿರುಗೇಟು ನೀಡಿದರು.

ತಮ್ಮ ಕ್ಷೇತ್ರವನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂಬ ಶಾಸಕ ಮುನಿರತ್ನ ಆರೋಪಕ್ಕೆ ನಗರದಲ್ಲಿ ಗುರುವಾರ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಕ್ಷೇತ್ರದ ವಾರ್ಡ್‌ವೊಂದರಲ್ಲಿ ಅಕ್ರಮವಾಗಿದೆ ಎಂದು ಅವರೇ ಪತ್ರ ಬರೆದು ದೂರಿದ್ದರು. ಅಕ್ರಮದ ತನಿಖೆಯಾಗುವವರೆಗೆ ಬಿಲ್ ಕೊಡಬಾರದು ಎಂದಿದ್ದ ಅವರು, ಈ ಬಗ್ಗೆ ಜಾರಿ ನಿರ್ದೇಶನಾಲಯದಿಂದ (ಇ.ಡಿ) ತನಿಖೆ ಆಗಬೇಕು ಅಂತ ಹೇಳಿದ್ದಾರೆ. ಅದರರ್ಥ ಅವರ ಆಡಳಿತಾವಧಿ ಮತ್ತು ನಾಯಕತ್ವದಲ್ಲೇ ಅವ್ಯವಹಾರವಾಗಿದೆ ಎಂದಲ್ಲವೆ’ ಎಂದರು.

‘ಮಾಜಿ ಸಚಿವರೂ ಆಗಿರುವ ಮುನಿರತ್ನ ಅವರು ದೂರು ಕೊಟ್ಟ ಮೇಲೆ, ಅಲ್ಲಿನ ಅವ್ಯವಹಾರಗಳ ಬಗ್ಗೆ ಸರ್ಕಾರ ತನಿಖೆ ಮಾಡಬೇಕು ತಾನೆ? ಈಗ ಬೇರೆ ಆರೋಪಗಳನ್ನು ಮಾಡುತ್ತಾ ಅದರಿಂದ ನುಣುಚಿಕೊಳ್ಳಲು ಅವರು ಏನೇನೊ ಮಾತನಾಡುತ್ತಿದ್ದಾರೆ. ಪ್ರತಿಭಟನೆ ಮಾಡಿದ್ರೆ ಮಾಡಿಕೊಳ್ಳಲಿ. ನಾವು ಯಾರನ್ನೂ, ಯಾವ ಕ್ಷೇತ್ರವನ್ನೂ ಟಾರ್ಗೆಟ್ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.

**ಕುರುಕ್ಷೇತ್ರ ತಿದ್ದಿದವರು:** ‘ಮುನಿರತ್ನ ಅವರು ನಿರ್ಮಾಪಕರಷ್ಟೇ ಅಲ್ಲ, ನಿರ್ದೇಶಕರು ಕೂಡ. ಅದೆಂತಹದ್ದೊ ಕುರುಕ್ಷೇತ್ರ ಅಂತ ಬರೆದು ಸಿನಿಮಾ ಡೈರೆಕ್ಟ್ ಮಾಡಿದ್ದರು. ಅನುಕೂಲಕ್ಕೆ ತಕ್ಕಂತೆ ಕುರುಕ್ಷೇತ್ರವನ್ನು ತಿದ್ದಿದ್ದರು. ನಾನು ನಿರ್ಮಾಪಕನಾದರೆ ಡಿ.ಕೆ. ಸುರೇಶ್ ವಿತರಕ ಎಂದು ಅವರು ತಪ್ಪಾಗಿ ಹೇಳಿದ್ದಾರೆ. ನಾನು ರಾಜಕಾರಣಕ್ಕೆ ಬರುವುದಕ್ಕೆ ಮುಂಚೆ ಸಿನಿಮಾ ಪ್ರದರ್ಶನ ಮಾಡುತ್ತಿದ್ದೆ. ಅವರು ಮನಸ್ಸಿಗೆ ಬಂದಂತೆ ಏನು ಬೇಕಾದರು ಹೇಳುತ್ತಾರೆ’ ಎಂದು ಸುರೇಶ್ ವ್ಯಂಗ್ಯವಾಡಿದರು.

‘ಲೋಡ್ ಶೆಡ್ಡಿಂಗ್ ಸಮಸ್ಯೆ ಆದಷ್ಟು ಬೇಗ ಬಗೆಹರಿಯಲಿದೆ. ಈ ಕುರಿತು ಅಧಿಕಾರಿಗಳ ಜೊತೆ ಮಾತನಾಡಿದ್ದು, ಸರ್ಕಾರಕ್ಕೂ ಮನವಿ ಮಾಡಿದ್ದೇನೆ. ಕೃಷಿ ಚಟುವಟಿಕೆಗಳಿಗೆ ವಿದ್ಯುತ್ ಅಗತ್ಯವಿದೆ. ರೈತರಿಗೆ ಹಗಲಲ್ಲೇ ತ್ರಿಫೇಸ್ ವಿದ್ಯುತ್ ಕೊಡಬೇಕು. ರಾತ್ರಿ ಕೊಟ್ಟರೆ ಕಾಡಾನೆಗಳ ಕಾಟದಿಂದ ಜಮೀನಿಗೆ ಓಡಾಡಲು ತೊಂದರೆಯಾಗಲಿದೆ’ ಎಂದರು.

**ಬಾಲಕೃಷ್ಣ ಹೇಳಿಕೆ ಸಮರ್ಥನೆ:** ‘ಮತ ಹಾಕಿದ ಬೂತ್‌ನಲ್ಲಿ ಮಾತ್ರ ಅಭಿವೃದ್ಧಿ’ ಎಂಬ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಹೇಳಿಕೆ ಸಮರ್ಥಿಸಿದ ಅವರು, ‘ಹಿಂದೆ ಬಿಜೆಪಿ ಮತ್ತು ಜೆಡಿಎಸ್‌ನವರು ಏನು ಮಾಡಿದ್ದರು ಎಂಬುದನ್ನು ಅವರು ಹೇಳಿದ್ದಾರೆ. ಅವರು ಒಳಗೊಳಗೆ ಮಾಡುತ್ತಿದ್ದರು. ಇವರಿಗೆ ಬಾಯಿ ಸ್ವಲ್ಪ ದೊಡ್ಡದು. ಹಾಗಾಗಿ, ಬಾಯ್ಬಿಟ್ಟು ಹೇಳಿದ್ದಾರೆ. ಆದರೆ, ಅನುದಾನವನ್ನು ಎಲ್ಲರಿಗೂ ಕೊಡುತ್ತೇವೆ’ ಎಂದು ಹೇಳಿದರು.

## ಅನ್ಯ ಜಾತಿ ಯುವಕನನ್ನು ಪ್ರೀತಿಸುತ್ತಿದ್ದ ಮಗಳ ಕೊಂದ ಅಪ್ಪ

# ದೇವನಹಳ್ಳಿ: ಮರ್ಯಾದೆಗೇಡು ಹತ್ಯೆ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ):** ಬೇರೆ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ 20 ವರ್ಷದ ಮಗಳನ್ನು ಅಪ್ಪನೇ ಕತ್ತು ಸೀಳಿ ಹತ್ಯೆ ಮಾಡಿದ ಘಟನೆ ತಾಲ್ಲೂಕಿನ ಬಿದಲೂರು ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ. ಆರೋಪಿ ಪೊಲೀಸ್ ಠಾಣೆಗೆ ತೆರಳಿ ಶರಣಾಗತನಾಗಿದ್ದಾನೆ.



ಕವನಾ



ಮಂಜುನಾಥ್

ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ವಾಲ್ಮೀಕಿ ಸಮುದಾಯದ ಕವನಾ (20) ಎಂಬ ಯುವತಿಯನ್ನು ಆಕೆಯ ಅಪ್ಪ ಮಂಜುನಾಥ್ (45) ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾರೆ.

ತನ್ನದೇ ಗ್ರಾಮದ ಯುವಕನನ್ನು ಕವನಾ ಪ್ರೀತಿಸುತ್ತಿದ್ದರು. ಇಬ್ಬರೂ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಈ ವಿಷಯ ಯುವತಿಯ ಮನೆಯವರಿಗೂ ತಿಳಿದಿತ್ತು. ಯುವಕ ಬೇರೆ ಜಾತಿಯವನಾಗಿದ್ದರಿಂದ ಪ್ರೀತಿ ಸಂಬಂಧ ಮುಂದುವರಿಸದಂತೆ ಅಪ್ಪ, ಮಗಳಿಗೆ ಬುದ್ಧಿವಾದ ಹೇಳಿದ್ದ. ಅಪ್ಪನ ಮಾತಿಗೆ ಮಗಳು ಸಮ್ಮತಿಸಿದ್ದರು. ಆದರೆ, ಈ ವಿಚಾರವಾಗಿ ಇಬ್ಬರ ನಡುವೆ ಮನಸ್ತಾಪ ಮುಂದುವರಿದಿತ್ತು.

‘ಮಗಳು ಮತ್ತೆ ಯುವಕನ ಜತೆ ಓಡಾಡುತ್ತಿರುವುದನ್ನು ಗಮನಿಸಿದ ಮಂಜುನಾಥ್, ಇದೇ ವಿಚಾರವಾಗಿ ಬುಧವಾರ ರಾತ್ರಿ ಮಗಳನ್ನು ತರಾಟೆಗೆ ತೆಗೆದುಕೊಂಡಿದ್ದ. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ತಾರಕಕ್ಕೆ ಏರಿತ್ತು. ಸಿಟ್ಟಿಗೆದ್ದ ಮಂಜುನಾಥ್, ಕೈಗೆ ಸಿಕ್ಕ ಮುದ್ದೆ ಕೋಲಿನಿಂದ ಮಗಳ ತಲೆಗೆ ಹೊಡೆದಿದ್ದ. ಪ್ರಜ್ಞೆತಪ್ಪಿ ಬಿದ್ದಿದ್ದ ಮಗಳ ಕತ್ತಿನ ಭಾಗವನ್ನು ಬೆಳಗಿನ ಜಾವ ಚಾಕುವಿನಿಂದ ಸೀಳಿ ಹಾಕಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿ ಮಂಜುನಾಥ್ ಗುರುವಾರ ಬೆಳಿಗ್ಗೆ ವಿಶ್ವನಾಥಪುರ ಪೊಲೀಸ್ ಠಾಣೆಗೆ ಬಂದು ಮಗಳನ್ನು ತಾನೇ ಕೊಲೆ ಮಾಡಿರುವ ವಿಷಯ ತಿಳಿಸಿದ್ದು, ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪುರುಷೋತ್ತಮ್ ತಿಳಿಸಿದರು.

‘ಬುಧವಾರ ತಡರಾತ್ರಿ ನಡೆದ ಜಗಳದಲ್ಲಿ ಮುದ್ದೆ ಕೋಲಿನಿಂದ ಆರೋಪಿಯು ಮಗಳ ತಲೆ ಭಾಗಕ್ಕೆ ಬಲವಾಗಿ ಹೊಡೆದಿದ್ದಾನೆ. ಪ್ರಜ್ಞೆ ತಪ್ಪಿ ಬಿದ್ದಿದ್ದ ಮಗಳ ಕತ್ತಿನ ಭಾಗವನ್ನು ಬೆಳಗಿನ ಜಾವ ಚಾಕುವಿನಿಂದ ಸೀಳಿ ಕೊಂದಿರುವುದಾಗಿ ಪೊಲೀಸರಿಗೆ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ’ ಎಂದು ತಿಳಿಸಿದರು.

## ಬಿಟ್ ಕಾಯಿನ್ ದೋಚಲು ಬಳಸಿದ್ದ ಲ್ಯಾಪ್‌ಟಾಪ್ ನಾಪತ್ತೆ?

# ಎಸಿಪಿ, ಇನ್‌ಸ್ಪೆಕ್ಟರ್‌ಗಳ ವಿಚಾರಣೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಶ್ರೀಕಿ ಹಾಗೂ ಇತರರ ವಿಚಾರಣೆ ವೇಳೆ ಬಹಿರಂಗ
- ಹಣ ದೋಚಲು ಲ್ಯಾಪ್‌ಟಾಪ್ ಬಳಕೆ
- ಲ್ಯಾಪ್‌ಟಾಪ್ ಮಾಹಿತಿ ಇನ್ನೂ ನಿಗೂಢ

**ಬೆಂಗಳೂರು:** ಬಿಟ್ ಕಾಯಿನ್ ಅಕ್ರಮ ಪ್ರಕರಣದ ಪ್ರಮುಖ ಸಾಕ್ಷ್ಯ ಎನ್ನಲಾದ ಲ್ಯಾಪ್‌ಟಾಪ್ ನಾಪತ್ತೆಯಾಗಿದ್ದು, ಅದಕ್ಕಾಗಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹುಡುಕಾಟ ಆರಂಭಿಸಿದ್ದಾರೆ.

‘ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು ಬಂಧಿಸಿದ್ದ ಸಿಸಿಬಿ ಅಧಿಕಾರಿಗಳು, ಆತನಿಗೆ ಬೇರೆ ವ್ಯಕ್ತಿಯೊಬ್ಬರ ಲ್ಯಾಪ್‌ಟಾಪ್ ಕೊಟ್ಟಿದ್ದರು. ಅದೇ ಲ್ಯಾಪ್‌ಟಾಪ್ ಬಳಸಿಕೊಂಡು ಶ್ರೀಕಿ, ಬಿಟ್ ಕಾಯಿನ್ ವರ್ಗಾವಣೆ ಮಾಡಿದ್ದನೆಂಬ ಮಾಹಿತಿ ಲಭ್ಯವಾಗಿದೆ’ ಎಂದು ಮೂಲಗಳು ಹೇಳಿವೆ.

‘ಬೇರೆ ವ್ಯಕ್ತಿಯ ಲ್ಯಾಪ್‌ಟಾಪ್ ಬಗ್ಗೆ ಸಿಸಿಬಿ ಅಧಿಕಾರಿಗಳು ಎಲ್ಲಿಯೂ ಮಾಹಿತಿ ಉಲ್ಲೇಖಿಸಿಲ್ಲ. ಇತ್ತೀಚೆಗೆ ಶ್ರೀಕಿ ಹಾಗೂ ಇತರರನ್ನು ವಿಚಾರಣೆ ನಡೆಸಿದಾಗ, ಈ ವಿಷಯ ಗೊತ್ತಾಗಿದೆ. ಹೀಗಾಗಿ, ಲ್ಯಾಪ್‌ಟಾಪ್ ಎಲ್ಲಿದೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

**ಸಿಸಿಬಿ ಕಚೇರಿಯಲ್ಲಿ ವಿಚಾರಣೆ:** ‘ಶ್ರೀಕಿ ಹಾಗೂ ಇತರರ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸಾಕ್ಷ್ಯ ನಾಶ ಮಾಡಿದ್ದ ಆರೋಪದಡಿ ಸಿಸಿಬಿಯ ತನಿಖಾಧಿಕಾರಿ ಸೇರಿ ಹಲವು ಅಧಿಕಾರಿಗಳ ವಿರುದ್ಧ ಈಗಾಗಲೇ ಕಾಟನ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸಿಸಿಬಿ ಅಧಿಕಾರಿಗಳೇ, ಲ್ಯಾಪ್‌ಟಾಪ್ ನಾಶ ಮಾಡಿರುವ ಆರೋಪವಿದೆ’ ಎಂದು ಮೂಲಗಳು ಹೇಳಿವೆ.

‘ಬಿಟ್ ಕಾಯಿನ್ ಪ್ರಕರಣದ ತನಿಖೆ ಅವಧಿಯಲ್ಲಿ ಸಿಸಿಬಿಯಲ್ಲಿ ಕೆಲಸ ಮಾಡಿದ್ದ ಎಸಿಪಿ ಹಾಗೂ ಇನ್‌ಸ್ಪೆಕ್ಟರ್ ಅವರನ್ನು ಹಲವು ಬಾರಿ ವಿಚಾರಣೆ ಮಾಡಲಾಗಿದೆ. ಅವರಿಂದ ಲ್ಯಾಪ್‌ಟಾಪ್ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ. ಹೀಗಾಗಿ, ಎಸಿಪಿ–ಇನ್‌ಸ್ಪೆಕ್ಟರ್‌ಗಳ ಸಮೇತ ಚಾಮರಾಜಪೇಟೆಯಲ್ಲಿರುವ ಸಿಸಿಬಿ ಕಚೇರಿಗೆ ಗುರುವಾರ ಹೋಗಿ ವಿಚಾರಣೆ ನಡೆಸಲಾಯಿತು’ ಎಂದು ತಿಳಿಸಿವೆ.


‘ಸಿಸಿಬಿ ತನಿಖಾ ತಂಡದಲ್ಲಿದ್ದ ಎಲ್ಲ ಸಿಬ್ಬಂದಿಯನ್ನು ಎಸಿಪಿ–ಇನ್‌ಸ್ಪೆಕ್ಟರ್ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಯಿತು. ಲ್ಯಾಪ್‌ಟಾಪ್ ಬಗ್ಗೆ ಮಾಹಿತಿ ಇಲ್ಲವೆಂದು ಸಿಬ್ಬಂದಿ ಹೇಳುತ್ತಿದ್ದಾರೆ. ಎಲ್ಲರನ್ನೂ ಪುನಃ ವಿಚಾರಣೆಗೆ ಒಳಪಡಿಸಲಾಗುವುದು’ ಎಂದು ಹೇಳಿವೆ.

**ಹಣ ದೋಚಲು ಲ್ಯಾಪ್‌ಟಾಪ್ ಬಳಕೆ:** ‘ಶ್ರೀಕಿ ಕಡೆಯಿಂದ 2 ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್ ಹಾಗೂ ಆ್ಯಪಲ್ ಮ್ಯಾಕ್‌ಬುಕ್ ಜಪ್ತಿ ಮಾಡಲಾಗಿತ್ತು. ಇವುಗಳನ್ನು ಬಳಸಿಕೊಂಡು ಬಿಟ್ ಕಾಯಿನ್ ವರ್ಗಾವಣೆ ಮಾಡಿಸಿಕೊಂಡರೆ, ಸಾಕ್ಷ್ಯ ಸಿಗುವ ಭಯ ಆರೋಪಿಗಳಿಗೆ ಇತ್ತು. ಇದೇ ಕಾರಣಕ್ಕೆ ವ್ಯಕ್ತಿಯೊಬ್ಬರ ಲ್ಯಾಪ್‌ಟಾಪ್ ಬಳಕೆ ಮಾಡಿರುವ ಅನುಮಾನವಿದೆ’ ಎಂದು ಮೂಲಗಳು ತಿಳಿಸಿವೆ.

‘ಬಿಟ್ ಕಾಯಿನ್ ರೂಪದಲ್ಲಿ ಹಣ ದೋಚುವ ಉದ್ದೇಶದಿಂದ ಆರೋಪಿಗಳು ಕೃತ್ಯ ಎಸಗಿರುವ ಆರೋಪವಿದೆ. ಆದರೆ, ಲ್ಯಾಪ್‌ಟಾಪ್ ಸಿಗಬೇಕಿದೆ. ಸಿಕ್ಕ ಕೂಡಲೇ ಅದನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ವರದಿ ಬಂದ ನಂತರ, ಬಿಟ್ ಕಾಯಿನ್ ವರ್ಗಾವಣೆ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ಮೂಲಗಳು ಹೇಳಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





## ಸುಭಾಷಿತ

ಇಂದು ನಾವು ಪಕ್ಷಿಗಳಂತೆ ಆಕಾಶದಲ್ಲಿ ಹಾರುವುದನ್ನು ಕಲಿತಿದ್ದೇವೆ, ನೀರಿನೊಳಗೆ ಮೀನಿನಂತೆ ಈಜುವುದನ್ನು ಕಲಿತಿದ್ದೇವೆ. ಆದರೆ, ಮನುಷ್ಯಜೀವಿಗಳಾಗಿ ಭೂಮಿಯಲ್ಲಿ ಬದುಕುವುದನ್ನು ಮಾತ್ರ ಕಲಿತಿಲ್ಲ.

–ಜಾರ್ಜ್ ಬರ್ನಾರ್ಡ್ ಶಾ

# ಐದು ರಾಜ್ಯಗಳ ಚುನಾವಣೆ ಬಿಜೆಪಿ, ಕಾಂಗ್ರೆಸ್‌ಗೆ ನಿರ್ಣಾಯಕ

**ಐದು** ರಾಜ್ಯಗಳ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಚುನಾವಣಾ ಆಯೋಗವು ಪ್ರಕಟಿಸಿದೆ. ಮುಂದಿನ ತಿಂಗಳು ಮೂರು ವಾರಗಳಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ. ಲೋಕಸಭಾ ಚುನಾವಣೆಗೆ ಹೋಲಿಸಿದರೆ ವಿಧಾನಸಭಾ ಚುನಾವಣೆಯು ಜನರಿಗೆ ಹೆಚ್ಚು ಮುಖ್ಯ. ಏಕೆಂದರೆ, ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರವೇ ಜನರಿಗೆ ಹತ್ತಿರ. ಅಷ್ಟೇಅಲ್ಲ, ರಾಜ್ಯ ಸರ್ಕಾರದ ನಿರ್ಧಾರಗಳು ಜನರ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನು ಉಂಟು ಮಾಡುತ್ತವೆ. ಪ್ರಜಾಸತ್ತಾತ್ಮಕ, ಸಾಂವಿಧಾನಿಕ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ಮತದಾನವು ಬಹಳ ಮುಖ್ಯವಾದ ಪ್ರಕ್ರಿಯೆ. ಜನಾದೇಶವನ್ನು ಬುಡಮೇಲು ಮಾಡಿದ ಉದಾಹರಣೆಗಳು ನಮ್ಮ ಮುಂದೆ ಇವೆ. 2020ರಲ್ಲಿ ಮಧ್ಯಪ್ರದೇಶದಲ್ಲಿ ಆಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದೇನೇ ಇದ್ದರೂ ಪ್ರಜಾಸತ್ತಾತ್ಮಕ ಆಳ್ವಿಕೆಗೆ ಚುನಾವಣೆಯೇ ಜೀವಾಳ. ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳಲ್ಲಿ ನವೆಂಬರ್ 7ರಿಂದ 30ರ ನಡುವೆ ಮತದಾನ ಪ್ರಕ್ರಿಯೆ ನಡೆಯಲಿದೆ. ಡಿಸೆಂಬರ್ 3ರಂದು ಮತ ಎಣಿಕೆ ಮಾಡಲಾಗುವುದು.



ಈ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವು ಮುಂದಿನ ರಾಜಕೀಯ ಬೆಳವಣಿಗೆಗಳ ದಿಕ್ಸೂಚಿ ಆಗಬಹುದೇ?

ಈ ಐದೂ ರಾಜ್ಯಗಳ ಮತದಾರರು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಭಿನ್ನವಾಗಿ ಮತ ಚಲಾಯಿಸಿದ ನಿದರ್ಶನ ನಮ್ಮ ಮುಂದೆ ಇದೆ. ಹಾಗಿದ್ದರೂ ಈ ರಾಜ್ಯಗಳ ಚುನಾವಣೆಯ ಫಲಿತಾಂಶವು ಮುಂದಿನ ರಾಜಕೀಯ ಬೆಳವಣಿಗೆಗಳ ದಿಕ್ಸೂಚಿ ಆಗಬಹುದೇ ಎಂದು ಹುಡುಕಾಡುವ ಮನಃಸ್ಥಿತಿ ನಮ್ಮಲ್ಲಿ ಇದೆ. ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಗೆ ಈ ರಾಜ್ಯಗಳ ಚುನಾವಣೆಯು ಸೆಮಿಫೈನಲ್ ಎಂದು ಹೇಳುವವರೂ ಇದ್ದಾರೆ. ಇದನ್ನು ಸಂಪೂರ್ಣ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ವಿಸ್ತಾರವಾದ ಪ್ರದೇಶದಲ್ಲಿ ಮತದಾನ ನಡೆಯಲಿದ್ದು, ದೇಶದ ಆರನೇ ಒಂದರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಮತದಾನ ನಡೆಯಲಿರುವ ಐದು ರಾಜ್ಯಗಳ ಪೈಕಿ ಮೂರರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ನಡುವೆ ನೇರ ಸ್ಪರ್ಧೆ ಇದೆ. ತೆಲಂಗಾಣದಲ್ಲಿ ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ಹಣಾಹಣಿ ಇರುವಂತೆ ಕಾಣಿಸುತ್ತಿದೆ. ಆದರೆ, ಬಿಜೆಪಿ ಕೂಡ ಇಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಮಿಜೋರಾಂನಲ್ಲಿ ಆಡಳಿತಾರೂಢ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಮತ್ತು ಹೊಸ ರಾಜಕೀಯ ಪಕ್ಷವಾದ ಜೊರಾಮ್ ಪೀಪಲ್ಸ್ ಮೂವ್‌ಮೆಂಟ್ ನಡುವೆ ಸ್ಪರ್ಧೆ ಇದೆ. ಕಾಂಗ್ರೆಸ್ ಪಕ್ಷವು ಹಲವು ಕ್ಷೇತ್ರಗಳಲ್ಲಿ ಪ್ರಭಾವ ಹೊಂದಿದೆ.

ಛತ್ತೀಸಗಢ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಕಳೆದ ಚುನಾವಣೆಯಲ್ಲಿ ಗೆದ್ದಿತ್ತು. ಈ ಮೂರೂ ರಾಜ್ಯಗಳಲ್ಲಿ ಮತ್ತೆ ಗೆಲ್ಲುವುದು ಕಾಂಗ್ರೆಸ್‌ಗೆ ಬಹಳ ಮುಖ್ಯವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ರೂಪದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೊಸ ನಾಯಕತ್ವ ಸಿಕ್ಕಿದೆ. ರಾಹುಲ್ ಗಾಂಧಿ ಅವರು ಹೆಚ್ಚಿನ ಚೈತನ್ಯದಿಂದ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಜನಕಲ್ಯಾಣದ ಹೊಸ ಹೊಸ ಭರವಸೆಗಳನ್ನು ನೀಡುವ ಮೂಲಕ ಚುನಾವಣೆ ಗೆಲ್ಲಬಹುದು ಎಂಬ ಮಾದರಿಯನ್ನು ಕರ್ನಾಟಕದ ಚುನಾವಣೆಯು ಆ ಪಕ್ಷಕ್ಕೆ ತೋರಿಸಿಕೊಟ್ಟಿದೆ. ಜಾತಿ ಜನಗಣತಿಯ ವಿಚಾರವನ್ನು ಚುನಾವಣೆಯ ಮುಖ್ಯ ವಿಷಯವನ್ನಾಗಿ ಮಾಡುವ ಸೂಚನೆಯನ್ನು ಕಾಂಗ್ರೆಸ್ ನೀಡಿದೆ. ಚುನಾವಣೆಯ ಹೆಚ್ಚಿನ ಹೊಣೆಗಾರಿಕೆಯನ್ನು ರಾಜ್ಯ ಮಟ್ಟದ ನಾಯಕರಿಗೆ ವಹಿಸಲಾಗಿದೆ. ಆದರೆ, ಪಕ್ಷದಲ್ಲಿ ದೊಡ್ಡ ಮಟ್ಟದಲ್ಲಿ ಗುಂಪುಗಾರಿಕೆ ಇದೆ. ಇದಕ್ಕೆ ರಾಜಸ್ಥಾನವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿನ ಮೇಲೆಯೇ ಬಿಜೆಪಿ ಚುನಾವಣೆ ಎದುರಿಸಲಿದೆ. ಕೇಂದ್ರ ಸರ್ಕಾರ ಮಾಡಿರುವ ಕೆಲಸಗಳನ್ನು ಆ ಪಕ್ಷವು ಜನರ ಮುಂದಿರಿಸಬಹುದು. ಹೊಸ ಭರವಸೆಗಳಂತೂ ಇದ್ದೇ ಇರುತ್ತವೆ. ಬಿಜೆಪಿಗೆ ರಾಜ್ಯ ಮಟ್ಟದಲ್ಲಿ ಸಂಘಟನಾತ್ಮಕವಾಗಿ ಸಮಸ್ಯೆಗಳು ಇವೆ. ನಾಯಕತ್ವದ ಬಿಕ್ಕಟ್ಟು ಕೂಡ ಇದೆ. ವಸುಂಧರಾ ರಾಜೇ ಸಿಂಧಿಯಾ ಅವರು ರಾಜಸ್ಥಾನದಲ್ಲಿ ಜನಬೆಂಬಲ ಇರುವ ನಾಯಕಿಯಾದರೂ ಅವರನ್ನು ನೇಪಥ್ಯಕ್ಕೆ ಸರಿಸುವ ಪ್ರಯತ್ನ ನಡೆಯುತ್ತಿದೆ. ಮಧ್ಯಪ್ರದೇಶದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಅವರ ಸ್ಥಿತಿಯೂ ಹೀಗೆಯೇ ಇದೆ. 'ಇಂಡಿಯಾ' ಮೈತ್ರಿಕೂಟ ರೂಪುಗೊಂಡ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಇದು. ಈ ಕೂಟದಲ್ಲಿರುವ ಪಕ್ಷಗಳ ಪೈಕಿ ಕಾಂಗ್ರೆಸ್ ಮಾತ್ರ ಮುಖ್ಯವಾಗಿ ಸ್ಪರ್ಧೆಯಲ್ಲಿ ಇದೆ. ಹಾಗಿದ್ದರೂ 'ಇಂಡಿಯಾ' ಮೈತ್ರಿಕೂಟವು ಚುನಾವಣೆಯಲ್ಲಿ ಯಾವ ಬಗೆಯ ಪರಿಣಾಮ ಬೀರಬಹುದು ಎಂಬ ಸುಳಿವು ಸಿಗಬಹುದು.

## ದಿನದ ಟ್ವೀಟ್

### ಹತ್ಯಾಕಾಂಡ ನಿಲ್ಲಲಿ



**ಗಾಜಾದ ಆರೋಗ್ಯ ವ್ಯವಸ್ಥೆ ಕುಸಿಯಲಾರಂಭಿಸಿದೆ. 1,354 ಮಂದಿ ಮೃತಪಟ್ಟಿದ್ದಾರೆ ಮತ್ತು 6,049 ಮಂದಿ ಗಾಯಗೊಂಡಿದ್ದಾರೆ. ಜೀವ ಉಳಿಸಬಹುದಾದ ಪ್ರಕರಣಗಳಲ್ಲೂ ಆರೋಗ್ಯ ಸಿಬ್ಬಂದಿ, ಸಂಪನ್ಮೂಲ ಮತ್ತು ಹಾಸಿಗೆಯ ಕೊರತೆಯಿಂದ ಅದು ಸಾಧ್ಯ ಆಗುತ್ತಿಲ್ಲ. ಐಸಿಯುಗಳು ತುಂಬಿಹೋಗಿವೆ, ಶಸ್ತ್ರಚಿಕಿತ್ಸಾ ಕೊಠಡಿಗಳು ಭರ್ತಿಯಾಗಿವೆ. ಕಾರಿಡಾರ್‌ಗಳಲ್ಲೂ ಸ್ಥಳಾವಕಾಶ ಇಲ್ಲದಂತಾಗಿದೆ. ಇದು ಹತ್ಯಾಕಾಂಡ.**

**ರೋಹನ್ ತಲ್‌ಬಾಟ್**, 'ಮೆಡಿಕಲ್ ಏಡ್ ಫಾರ್ ಪಾಲೆಸ್ಟೀನಿಯನ್ಸ್' ಸಂಸ್ಥೆಯ ಪ್ರಚಾರಾಂದೋಲನ ವಿಭಾಗದ ನಿರ್ದೇಶಕ

## ಕಿಡಿನುಡಿ

**ಬಿಬಿಎಂಪಿಯು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ) ನಗರದ ಅತ್ಯಂತ ಕೆಟ್ಟ ಶತ್ರು ಎಂದು ಹೈಕೋರ್ಟ್ ತಪ್ಪಾಗಿ ಹೇಳಿದೆ. ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಎಷ್ಟೋ ಹಿಂದೆಯೇ ಈ ಬಿರುದು ಪಡೆದುಕೊಂಡಿದೆ.**



**ಅಶ್ವಿನ್ ಮಹೇಶ್**, ನಗರ ಯೋಜನಾ ತಜ್ಞ

## 25 ವರ್ಷಗಳ ಹಿಂದೆ

ಮಂಗಳವಾರ, 13-10-1998

● **ದೆಹಲಿಯ ಮೊದಲ ಮಹಿಳಾ ಮುಖ್ಯಮಂತ್ರಿ ಸುಷ್ಮಾ**

**ನವದೆಹಲಿ, ಅ. 12 (ಯುಎನ್‌ಐ)**– ದೆಹಲಿಯ ಪ್ರಥಮ ಮಹಿಳಾ ಮುಖ್ಯ-ಮಂತ್ರಿಯಾಗಿ ಭಾರತೀಯ ಜನತಾ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅವರು ಇಂದು ಪ್ರಮಾಣವಚನ ಸ್ವೀಕರಿಸಿದರು.

ಬಿಜೆಪಿಯ ವರಿಷ್ಠರಿಂದ ನಾಯಕತ್ವ ತ್ಯಜಿಸಲು ಸೂಚಿತರಾಗಿದ್ದ ಸಾಹಿಬ್‌ಸಿಂಗ್ ವರ್ಮಾ ನಂತರದ ಮುಖ್ಯಮಂತ್ರಿಯಾಗಿ ಸುಷ್ಮಾ ಅಧಿಕಾರ ವಹಿಸಿಕೊಂಡರು. ಪಕ್ಷದ ವರಿಷ್ಠರ ಜತೆ ಚರ್ಚಿಸಿದ ನಂತರ ಸಂಪುಟ ವಿಸ್ತರಿಸುವುದಾಗಿ ಇಂದು ತಾವೊಬ್ಬರೇ ಪ್ರಮಾಣ ವಚನ ಸ್ವೀಕರಿಸಿದ ಸುಷ್ಮಾ ತಿಳಿಸಿದರು.

ದೆಹಲಿಗೆ ವಿಧಾನಸಭೆಯ ಸ್ಥಾನಮಾನ ನೀಡಿದ ನಂತರ 1993ರಿಂದ ಈಚೆಗೆ ಅಧಿಕಾರಕ್ಕೆ ಬಂದ ಬಿಜೆಪಿಯ 3ನೇ ಮುಖ್ಯಮಂತ್ರಿ ಅವರು. ಈ ಹಿಂದೆ ಮೊದಲ ಮುಖ್ಯಮಂತ್ರಿ ಮದನ್‌ಲಾಲ್ ಖುರಾನ ಅವರು ಹವಾಲ ಹಗರಣದಲ್ಲಿ ಆರೋಪ ಹೊತ್ತಾಗ ಸಾಹಿಬ್‌ಸಿಂಗ್ ವರ್ಮಾ ಅವರಿಗೆ ಸ್ಥಾನ ತೆರವು ಮಾಡಿದ್ದರು.

● **ಮಳೆ ಹಾನಿ ಪರಿಹಾರಕ್ಕೆ 50 ಕೋಟಿ ಬಿಡುಗಡೆ**

**ಬೆಂಗಳೂರು, ಅ. 12**– ರಾಜ್ಯದಲ್ಲಿ ಕೆಲವು ದಿನಗಳಿಂದ ಸತತವಾಗಿ ಬೀಳುತ್ತಿರುವ ಮಳೆಯಿಂದ ಉಂಟಾಗಿರುವ ಹಾನಿಯ ಪರಿಹಾರ ಕಾರ್ಯಗಳಿಗೆ ತಕ್ಷಣವೇ 50 ಕೋಟಿ ರೂಪಾಯಿ ಒದಗಿಸಲು ಇಂದು ಇಲ್ಲಿ ನಡೆದ ರಾಜ್ಯ ಸಚಿವ ಸಂಪುಟದ ಸಭೆ ಒಪ್ಪಿಗೆ ನೀಡಿದೆ. ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಇದುವರೆಗೆ ರಾಜ್ಯದಾದ್ಯಂತ ಒಟ್ಟು 137 ಜನರು ಸತ್ತಿದ್ದು, ಸತ್ತವರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂಪಾಯಿ ನೀಡಲು ಸಭೆ ನಿರ್ಧರಿಸಿದೆ.

## 50 ವರ್ಷಗಳ ಹಿಂದೆ

ಶನಿವಾರ, 13-10-1973

● **ಕಾವೇರಿ ಕಾಮಗಾರಿಗಳು ಐದನೇ ಯೋಜನೆಯಲ್ಲಿ– ರಾಜ್ಯದ ಪ್ರಯತ್ನಕ್ಕೆ ಯಶಸ್ಸು**

**ಬೆಂಗಳೂರು, ಅ. 12**– ಕಾವೇರಿ ಜಲವಿವಾದದ ಇತಿಹಾಸದಲ್ಲಿ ಇದೀಗ ಪ್ರಥಮ ಬಾರಿಗೆ ಈ ನದಿ ಕಣಿವೆಯ ನೀರಾವರಿ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆ ಪರಿಧಿಯಲ್ಲಿ ತಂದು, ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಳ್ಳುವ ಅವಕಾಶ ನಿರ್ಮಿಸುವಲ್ಲಿ ರಾಜ್ಯ ಯಶಸ್ಸು ಪಡೆದಿದೆ.

ಈ ವಾರದ ಆದಿಭಾಗದಲ್ಲಿ ದೆಹಲಿಯಲ್ಲಿ ಕೇಂದ್ರ ನೀರಾವರಿ ಸಚಿವರ ಸಮ್ಮುಖದಲ್ಲಿ ನಡೆದ, ಕಾವೇರಿ ನದಿಗೆ ಸಂಬಂಧಿಸಿದ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ದೊರೆತ ಈ ಫಲಶ್ರುತಿ ನಮ್ಮ ಮಟ್ಟಿಗೆ ಅತ್ಯಂತ ದೊಡ್ಡ ಸಾಧನೆ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ವಿಧಾನ ಪರಿಷತ್ತಿಗೆ ತಿಳಿಸಿದರು.

● **ಬಾಂಬ್ ದಾಳಿ: ನೃತ್ಯ ಕಲಾವಿದೆ ಸಾವು**

**ಡಮಾಸ್ಕಸ್, ಅ. 12**– ಸಿರಿಯಾ ರಾಜಧಾನಿ ಡಮಾಸ್ಕಸ್‌ನಲ್ಲಿ ಇತ್ತೀಚೆಗೆ ನಡೆದ ಇಸ್ರೇಲಿ ಬಾಂಬ್ ದಾಳಿಗೆ ಭಾರತದ ನೃತ್ಯ ಕಲಾವಿದೆ ಶ್ರೀಮತಿ ಉಷಾ ಝಾ ಅವರು ಮೃತಪಟ್ಟಿದ್ದಾರೆ. ಗಾಂಧಿ ಜಯಂತಿ ಅಂಗವಾಗಿ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ಡಮಾಸ್ಕಸ್‌ಗೆ ಹೋಗಿದ್ದಾಗ ಈ ಘಟನೆ ಸಂಭವಿಸಿತು.

ಯುದ್ಧದ ವ್ಯಾಪ್ತಿ ಹಿರಿದಾಗಬಹುದು ಎಂಬ ಸಂಶಯ ಕಾಡತೊಡಗಿದೆ

# ಇಸ್ರೇಲ್ ಯುದ್ಧ ಅನಿರೀಕ್ಷಿತವೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

**ಹಮಾಸ್** ನಡೆಸಿದ ಭಯೋತ್ಪಾದಕ ದಾಳಿಯಿಂದ ಇಸ್ರೇಲ್ ತತ್ತರಿಸಿದೆ. ಪ್ರತೀಕಾರಕ್ಕಾಗಿ ಹಮಾಸ್ ಮೇಲೆ ಇಸ್ರೇಲ್ ಯುದ್ಧ ಸಾರಿದೆ. ಮೇಲ್ನೋಟಕ್ಕೆ ಇದು ಇಸ್ರೇಲ್ ಮತ್ತು ಹಮಾಸ್ ನಡುವಿನ ಸಂಘರ್ಷವಾಗಿ ಕಂಡರೂ ತೆರೆಯ ಹಿಂದಿನ ಲೆಕ್ಕಾಚಾರ ಬೇರೆಯೇ ಇದ್ದಂತಿದೆ.

ಹಮಾಸ್‌ನ ಈ ದಾಳಿ ಅನಿರೀಕ್ಷಿತವೇ? 2006ರಲ್ಲಿ ಗಾಜಾ ಪಟ್ಟಿಯ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡ ಹಮಾಸ್, ಇಸ್ರೇಲ್ ಮೇಲೆ ಈ ಹಿಂದೆ ಅನೇಕ ಬಾರಿ ದಾಳಿ ನಡೆಸಿತ್ತು. ಅದಕ್ಕೆ ಇಸ್ರೇಲ್ ತನ್ನ ಸೇನೆಯ ಮೂಲಕ ತಿರುಗೇಟು ನೀಡಿತ್ತು. ಇಸ್ರೇಲನ್ನು ಯುದ್ಧದಲ್ಲಿ ಮಣಿಸುವ ಸಾಮರ್ಥ್ಯವಾಗಲೀ ಅದರ ಪ್ರತಿದಾಳಿ ತಡೆದುಕೊಳ್ಳುವಷ್ಟು ರಟ್ಟೆಬಲವನ್ನಾಗಲೀ ಹೊಂದಿಲ್ಲದ ಹಮಾಸ್, ಮತ್ತೊಮ್ಮೆ ಇಸ್ರೇಲ್ ಮೇಲೆ ದಾಳಿ ನಡೆಸಿದೆ ಮತ್ತು ಆ ದಾಳಿಯನ್ನು 'ಅಲ್ ಅಕ್ಸಾ ಫ್ಲಡ್' ಎಂದು ಕರೆದಿದೆ!

ಅಲ್ ಅಕ್ಸಾ ಮಸೀದಿಯು ಜೆರುಸಲೇಮ್‌ನಲ್ಲಿರುವ ಪ್ರಮುಖ ಶ್ರದ್ಧಾ ಕೇಂದ್ರ. ಅಲ್ಲಿ ಪ್ಯಾಲೆಸ್ಟೀನಿಯನ್ನರು ಪ್ರಾರ್ಥನೆ ಸಲ್ಲಿಸುತ್ತಾರೆ. ಮುಸ್ಲಿಮರಿಗೆ ಮೀಸಲಾಗಿದ್ದ ಜಾಗದಲ್ಲಿ ಯಹೂದಿಗಳು 2021ರ ಏಪ್ರಿಲ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದರು ಎಂಬ ಕಾರಣಕ್ಕೆ ಮೊದಲಿಗೆ ಘರ್ಷಣೆ ಆರಂಭವಾಯಿತು. ನಂತರ ಇಸ್ರೇಲ್ ಸರ್ಕಾರ ಆ ಭಾಗದಲ್ಲಿ ಭದ್ರತೆಯನ್ನು ಬಿಗಿಗೊಳಿಸಿತು. ಪ್ರಾರ್ಥನೆಗೆ ಬಂದವರನ್ನು ತಡೆಯಲಾಗುತ್ತಿದೆ, ತಪಾಸಣೆಯ ನೆಪದಲ್ಲಿ ಹಿಂಸಿಸಲಾಗುತ್ತಿದೆ, ಶ್ರದ್ಧಾಕೇಂದ್ರವನ್ನು ಅಪವಿತ್ರಗೊಳಿಸಲಾಗಿದೆ ಎಂಬ ಆರೋಪ ಕೇಳಿಬಂತು. ಕಲ್ಲುತೂರಾಟಕ್ಕೆ ಪ್ರತಿಯಾಗಿ ಪೊಲೀಸರು ಲಾಠಿ ಬೀಸಿದರು, ಹಲವರನ್ನು ಬಂಧಿಸಿದರು.

ಹಮಾಸ್ ದಾಳಿಗೆ ಅಲ್ ಅಕ್ಸಾ ಪ್ರಕರಣ ಕಾರಣ ಎಂಬ ವಿಶ್ಲೇಷಣೆಗಳು ಬರುತ್ತಿವೆ. ಅಷ್ಟೇ ಆಗಿದ್ದರೆ, ಇಸ್ರೇಲಿನ ಜನಸಾಮಾನ್ಯರನ್ನು ಹಮಾಸ್ ಬರ್ಬರವಾಗಿ ಕೊಲ್ಲಬೇಕಾಗಿರಲಿಲ್ಲ. ಶವದ ಮೆರವಣಿಗೆಯಲ್ಲಿ ಕೇಕೆ ಹಾಕಬೇಕಿರಲಿಲ್ಲ. ಹಮಾಸ್ ಅಸಹನೆಗೆ ಬೇರೆಯ ಕಾರಣಗಳೂ ಇವೆ. ವಿಶ್ವಸಂಸ್ಥೆಯಲ್ಲಿ ದ್ವಿರಾಷ್ಟ್ರದ ಪ್ರಸ್ತಾವ ಮಂಡನೆಯಾದಾಗ ಗುರುತಿಸಲಾಗಿದ್ದ ಇಸ್ರೇಲ್ ಮತ್ತು ಪ್ಯಾಲೆಸ್ಟೀನಿನ ಭೂಭಾಗಕ್ಕೂ ಇಂದಿನ ಸ್ಥಿತಿಗೂ ಬಹಳ ವ್ಯತ್ಯಾಸವಿದೆ. 1948ರಲ್ಲಿ ಇಸ್ರೇಲ್ ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಒಂದು ರಾಷ್ಟ್ರವಾಗಿ ಎದ್ದುನಿಂತಾಗ, ಪ್ಯಾಲೆಸ್ಟೀನ್ ಪರವಾಗಿ ಮುಸ್ಲಿಂ ಜಗತ್ತು ಒಂದಾಗಿತ್ತು. ಅರಬ್ ರಾಷ್ಟ್ರಗಳು ಇಸ್ರೇಲ್ ಮೇಲೆ ದಾಳಿ ಮಾಡಿದ್ದವು. ಆದರೆ ಯುದ್ಧ ಮುಗಿದಾಗ ಇಸ್ರೇಲ್ ತನ್ನ ಗಡಿಯನ್ನು ವಿಸ್ತರಿಸಿಕೊಂಡಿತ್ತು.

1967ರ ಆರು ದಿನಗಳ ಯುದ್ಧದಲ್ಲಿ, ಜೋರ್ಡನ್ ಸುಪರ್ದಿಯಲ್ಲಿದ್ದ ಪಶ್ಚಿಮದಂಡೆ ಮತ್ತು ಪೂರ್ವ ಜೆರುಸಲೇಮ್, ಈಜಿಪ್ಟಿನ ಹಿಡಿತದಲ್ಲಿದ್ದ ಸಿನಾಯ್ ಪರ್ಯಾಯ ದ್ವೀಪ ಮತ್ತು ಗಾಜಾ ಪಟ್ಟಿ, ಸಿರಿಯಾದ ಗೋಲನ್ ಹೈಟ್ಸ್ ಇಸ್ರೇಲ್ ತೆಕ್ಕೆಗೆ ಬಂದವು. 1973ರ ಅಕ್ಟೋಬರ್ ಯುದ್ಧದಲ್ಲಿ ಈಜಿಪ್ಟ್ ಮತ್ತು ಸಿರಿಯಾ ಇತರ ಅರಬ್ ರಾಷ್ಟ್ರಗಳ ಬೆಂಬಲದೊಂದಿಗೆ ಮತ್ತೊಮ್ಮೆ ಇಸ್ರೇಲಿನ ಮೇಲೆ ಯುದ್ಧ ಸಾರಿದವು. ಆ ಯುದ್ಧ ಮುಗಿದಾಗ ಇಸ್ರೇಲಿನ ನಕ್ಷೆ ಮತ್ತಷ್ಟು ಹಿಗ್ಗಿತ್ತು.

ಐದು ವರ್ಷಗಳ ಬಳಿಕ 1978ರಲ್ಲಿ ಅಮೆರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಮಧ್ಯಸ್ಥಿಕೆಯಲ್ಲಿ ಇಸ್ರೇಲ್ ಮತ್ತು ಈಜಿಪ್ಟ್ ನಡುವೆ ಕ್ಯಾಂಪ್ ಡೇವಿಡ್ ಒಪ್ಪಂದ ಏರ್ಪಟ್ಟಿತು. ಸಿನಾಯ್ ಪರ್ಯಾಯ ದ್ವೀಪವನ್ನು ಈಜಿಪ್ಟಿಗೆ ಮರಳಿಸಿ ಶಾಂತಿ ಒಪ್ಪಂದ ಮಾಡಿಕೊಂಡ ಇಸ್ರೇಲ್, ಅಷ್ಟರಮಟ್ಟಿಗೆ ಪ್ಯಾಲೆಸ್ಟೀನ್ ಪರ ಧ್ವನಿಯನ್ನು ಮಂದವಾಗಿಸಿತು. ದಶಕದ ಬಳಿಕ ಇಸ್ರೇಲ್ ಗೆಳೆತನಕ್ಕೆ ಜೋರ್ಡನ್ ಕೈಚಾಚಿತು.

1993ರಲ್ಲಿ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಮಧ್ಯಸ್ಥಿಕೆಯಲ್ಲಿ ಓಸ್ಲೊ ಒಪ್ಪಂದ ಆಗುವ ಹೊತ್ತಿಗೆ ಪ್ಯಾಲೆಸ್ಟೀನ್ ನಾಯಕ ಯಾಸರ್ ಅರಾಫತ್ ಅವರಿಗೂ ಇಸ್ರೇಲ್ ಎನ್ನುವುದು ವಾಸ್ತವ ಎಂಬುದು ಅರಿವಾಗಿತ್ತು. ಪ್ಯಾಲೆಸ್ಟೀನಿಯನ್ನರನ್ನು ಪ್ರತಿನಿಧಿಸುತ್ತಿದ್ದ ಪಿಎಲ್‌ಒಗೆ (ಪ್ಯಾಲೆಸ್ಟೀನ್ ಲಿಬರೇಷನ್ ಆರ್ಗನೈಸೇಷನ್) ಇಸ್ರೇಲ್ ಮಾನ್ಯತೆ ನೀಡಿತು. ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಒಂದಾಗಿ ಇಟ್ಟ ಬಹುಮುಖ್ಯ ಹೆಜ್ಜೆ ಇದಾಗಿತ್ತು.

ಆದರೆ 2001ರ ಸೆಪ್ಟೆಂಬರ್ 11ರಂದು ಅಮೆರಿಕದ ಮೇಲೆ ನಡೆದ ಭಯೋತ್ಪಾದಕ ದಾಳಿ ಮತ್ತು ನಂತರ ಭಯೋತ್ಪಾದನೆಯ ವಿರುದ್ಧ ಅಮೆರಿಕ ಸಾರಿದ ಸಮರ, ಅಮೆರಿಕದ ಆದ್ಯತೆಯನ್ನು, ಮಧ್ಯಪ್ರಾಚ್ಯದ ರಾಜಕೀಯ ಸಮೀಕರಣವನ್ನು, ಮುಸ್ಲಿಂ ಜಗತ್ತಿನ ಆಲೋಚನಾ ಕ್ರಮವನ್ನು ಬದಲು ಮಾಡಿದವು. ಅದುವರೆಗೂ ಅರಬ್ ರಾಷ್ಟ್ರಗಳ ಯಾವುದೇ ಚರ್ಚೆಯಲ್ಲಿ ಕೇಂದ್ರ ಸ್ಥಾನದಲ್ಲಿ ಇರುತ್ತಿದ್ದ ಪ್ಯಾಲೆಸ್ಟೀನ್ ವಿಷಯ ಬದಿಗೆ ಸರಿಯಿತು. ಸೌದಿ ಅರೇಬಿಯಾ ಮತ್ತು ಯುಎಇ ರಾಷ್ಟ್ರಗಳಲ್ಲಿ ಹೊಸ ನಾಯಕತ್ವ ಬಂತು. ಈ ರಾಷ್ಟ್ರಗಳು ಅಭಿವೃದ್ಧಿ ಮತ್ತು ಆಧುನಿಕತೆಯ ಕುರಿತು ಮಾತನಾಡತೊಡಗಿದವು. ಮುಸ್ಲಿಂ ಜಗತ್ತು ಪ್ಯಾಲೆಸ್ಟೀನ್ ವಿಷಯ ಮರೆತಾಗ, ಇಸ್ರೇಲ್ ಪಶ್ಚಿಮದಂಡೆಯಲ್ಲಿ ತನ್ನ ಹಿಡಿತವನ್ನು ಹೆಚ್ಚಿಸಿಕೊಳ್ಳುತ್ತಾ ಹೋಯಿತು.


ಟ್ರಂಪ್ ಅವರ ಆಡಳಿತ ಅವಧಿಯಲ್ಲಿ ಇಸ್ರೇಲ್ ಜೊತೆಗೆ ಯುಎಇ ಮತ್ತು ಬಹರೇನ್ ಸಂಬಂಧ ವೃದ್ಧಿಸಿಕೊಂಡವು. ಸೌದಿ ಅರೇಬಿಯಾ ಮತ್ತು ಇಸ್ರೇಲ್ ಅನ್ನು ಬೆಸೆಯುವ ಕಾರ್ಯಕ್ಕೆ ಬೈಡನ್ ಕೈಹಾಕಿದರು. ಪ್ಯಾಲೆಸ್ಟೀನ್ ವಿಷಯ ಉಪೇಕ್ಷೆಗೆ ಒಳಗಾಗಿದ್ದು, ಒಂದೊಂದೇ ಅರಬ್ ರಾಷ್ಟ್ರ ಇಸ್ರೇಲ್ ಜೊತೆಗೆ ಹೆಜ್ಜೆಹಾಕತೊಡಗಿದ್ದು, ವಾಸ್ತವಕ್ಕೆ ಬೆನ್ನುತಿರುಗಿಸಿರುವ ಮತ್ತು ಇಸ್ರೇಲ್ ನಾಶವನ್ನೇ ಗುರಿಯಾಗಿಸಿಕೊಂಡಿರುವ ಇರಾನ್ ಮತ್ತು ಹಮಾಸ್ ಅನ್ನು ಕೆರಳಿಸಿತು. ಇದೀಗ ಹಮಾಸ್ ತನ್ನ ಹೀನ ಕೃತ್ಯವನ್ನು 'ಅಲ್ ಅಕ್ಸಾ ಫ್ಲಡ್' ಎಂದು ಕರೆದಿರುವುದು ಮುಸ್ಲಿಂ ಜಗತ್ತಿನ ಗಮನವನ್ನು ಮತ್ತೊಮ್ಮೆ ಪವಿತ್ರ ಭೂಮಿ (ಜೆರುಸಲೇಮ್) ಮತ್ತು ಪ್ಯಾಲೆಸ್ಟೀನ್ ಕಡೆ ಸೆಳೆಯುವ, ಜಾಗತಿಕವಾಗಿ ಮುಸ್ಲಿಮರ ಸಹಾನುಭೂತಿ ಗಳಿಸುವ ಪ್ರಯತ್ನವಷ್ಟೇ.

ಇಲ್ಲಿ ಮತ್ತೊಂದು ಪ್ರಶ್ನೆಯಿದೆ. ಉಕ್ರೇನ್ ಯುದ್ಧ ಮತ್ತು ಇಸ್ರೇಲ್ ಯುದ್ಧವನ್ನು ಪ್ರತ್ಯೇಕವಾಗಿ ನೋಡಬೇಕೆ? ಮಧ್ಯಪ್ರಾಚ್ಯದ ರಾಜಕಾರಣದಲ್ಲಿ ರಷ್ಯಾ ಬಹುಮುಖ್ಯ ಪಾತ್ರಧಾರಿ. ಉಕ್ರೇನ್ ಯುದ್ಧದ ಆರಂಭದಲ್ಲಿ ಅಂದಿನ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರು ರಷ್ಯಾಕ್ಕೆ ಭೇಟಿ ನೀಡಿ ರಷ್ಯಾ- ಉಕ್ರೇನ್ ನಡುವಿನ ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ ವಹಿಸುವ ಪ್ರಯತ್ನ ಮಾಡಿದ್ದರು. ಒಂದೊಮ್ಮೆ ಯುದ್ಧ ತಾರಕಕ್ಕೇರಿದರೆ ತಾನು ಉಕ್ರೇನ್ ಪರ ನಿಲ್ಲಬೇಕಾಗುತ್ತದೆ, ರಷ್ಯಾದ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಮತ್ತು ಅದು ಮಧ್ಯ-ಪ್ರಾಚ್ಯದಲ್ಲಿ ಇಸ್ರೇಲ್‌ಗೆ ಸಂಕಷ್ಟ ತಂದೊಡ್ಡಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು. ರಷ್ಯಾ ಮತ್ತು ಇರಾನ್ ನಡುವಿನ ಸಖ್ಯ, ಹಮಾಸ್ ಮತ್ತು ಇರಾನ್ ನಂಟು ಮತ್ತು ಹಮಾಸ್ ದಾಳಿಯ ಕುರಿತ ರಷ್ಯಾದ ಪ್ರತಿಕ್ರಿಯೆಯನ್ನು ಒಟ್ಟಾಗಿ ನೋಡಿದಾಗ ಬೇರೆಯದೇ ಚಿತ್ರಣ ಕಾಣುತ್ತದೆ. ಉಕ್ರೇನ್ ಬೆಂಬಲಕ್ಕೆ ಇಡಿಯಾಗಿ ನಿಂತಿರುವ ಅಮೆರಿಕವನ್ನು ಇನ್ನೊಂದು ಯುದ್ಧದತ್ತ ಎಳೆಯುವ ಪ್ರಯತ್ನ ನಡೆದಿರಬಹುದೇ, ಆಧುನಿಕ ತಂತ್ರಜ್ಞಾನದ, ಸುಲಭಕ್ಕೆ ಭೇದಿಸಲಾಗದ ಗಡಿಬೇಲಿಯನ್ನು ನಿಷ್ಕ್ರಿಯ-ಗೊಳಿಸಿ ಒಳನುಗ್ಗಲು ಹಮಾಸ್‌ಗೆ ಸಾಧ್ಯವಾಗಿದ್ದು ಹೇಗೆ ಎಂಬ ಪ್ರಶ್ನೆಗಳು ಮೂಡುತ್ತವೆ.

ಹಾಗಾದರೆ, ಇಸ್ರೇಲ್ ಯುದ್ಧದ ವ್ಯಾಪ್ತಿ ಹಿರಿದಾಗಬಹುದೇ? ಅಂತಹದೊಂದು ಸಂಶಯ ಅಮೆರಿಕಕ್ಕೆ ಬಂದಂತಿದೆ. ಇಸ್ರೇಲ್ ತನ್ನ ಆಂತರಿಕ ರಾಜಕೀಯ ವಿಪ್ಲವ ಮತ್ತು ಗುಪ್ತಚರ ಇಲಾಖೆಯ ವೈಫಲ್ಯ ಮರೆಮಾಚಲು, ಉನ್ಮಾದದಿಂದ ಯುದ್ಧ ಮಾಡುವಾಗ ಕೊಂಚ ಎಡವಿದರೂ, ಅದು ಇರಾನ್ ಮತ್ತು ಇತರ ರಾಷ್ಟ್ರಗಳನ್ನು ಯುದ್ಧಕ್ಕೆ ಎಳೆಯುವ ಸಾಧ್ಯತೆ ಇದೆ. ಆದರೆ ಅಮೆರಿಕಕ್ಕೆ ಎರಡು ಯುದ್ಧಗಳನ್ನು ಏಕಕಾಲಕ್ಕೆ ಪೋಷಿಸುವ ಶಕ್ತಿ ಸದ್ಯದ ಮಟ್ಟಿಗೆ ಇಲ್ಲ. ಹಾಗಾಗಿಯೇ ಅದು ತನ್ನ ಯುದ್ಧನೌಕೆಯನ್ನು (USS Gerald R. Ford) ಮೆಡಿಟರೇನಿಯನ್ ಸಮುದ್ರದಲ್ಲಿ ಸಜ್ಜಾಗಿಸಿದೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿ ಜೊತೆ ಜಂಟಿ ಹೇಳಿಕೆ ಹೊರಡಿಸಿ ಇಸ್ರೇಲಿಗೆ ಬೆಂಬಲ ಸೂಚಿಸಿದೆ. ಹಮಾಸ್ ಅನ್ನು ಇಸ್ಲಾಮಿಕ್ ಸ್ಟೇಟ್ ಉಗ್ರರಿಗೆ ಹೋಲಿಸಿ ಇದನ್ನು ಭಯೋತ್ಪಾದನೆಯ ವಿರುದ್ಧದ ಸಮರ ಎಂದು ಚಿತ್ರಿಸಲು ನೋಡುತ್ತಿದೆ. ಯುಎಇ ಮೂಲಕ ಹಮಾಸ್ ಬೆಂಬಲಿಸದಂತೆ ಸಿರಿಯಾದ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿದೆ. ಸೌದಿ-ಇಸ್ರೇಲ್ ಒಪ್ಪಂದ ಆಗಿಬಿಡಲಿ ಎಂದು ತುದಿಗಾಲಲ್ಲಿ ನಿಂತಿದೆ.



## ಚುರುಮುರಿ



### ಕೆಸರು ಪಟಾಕಿ!

● ಬಿ.ಎನ್.ಮಲ್ಲೇಶ್

'ಲೇ ಗುಡ್ಡೆ, ಈ ಶ್ವೇತಪತ್ರ ಅಂದ್ರೆ ಏನ್ಲೆ? ನಮ್ ಕುಮಾರಣ್ಣ ಕರೆಂಟ್ ಪ್ರಾಬ್ಲಂ ಬಗ್ಗೆ ಸಿದ್ರಾಮಣ್ಣಂಗೆ ಶ್ವೇತಪತ್ರ ಕೊಡಿ ಅಂತ ಕೇಳಿದ್ರಂತೆ. ಹಂಗಂದ್ರೆ ಏನದು?' ದುಬ್ಬೀರ ಕೇಳಿದ.

'ಅದಾ? ಯಾರೋ ಶ್ವೇತನೋ ಗೀತನೋ ಬರೆದ ಪತ್ರ ಇರ್ಬೇಕು...' ಗುಡ್ಡೆ ನಕ್ಕ.

'ಲೇಯ್, ಕುಮಾರಣ್ಣಂಗೆ ಬರೆದ ಪತ್ರ ಸಿದ್ರಾಮಣ್ಣಂತ ಯಾಕಿರ್ತತಿ? ನೀನು ಈ ಪಿಂಕ್ಲಿ ಎಲ್ಲ ಬಿಟ್ಟು ನೆಟ್ಟಗೆ ಮಾತಾಡು' ತೆಪರೇಸಿ ರೇಗಿದ.

'ಮತ್ತೆ ಕುಮಾರಣ್ಣ ಸುಂಸುಮ್ಕೆ ಯಾಕೆ ಪತ್ರ ಕೇಳ್ತಾರೆ?' ಮಂಜಮ್ಮಗೂ ಕುತೂಹಲ.

ಪರ್ಮೇಶಿಗೆ ಸಿಟ್ಟು ಬಂತು. 'ಎಲ್ಲ ತಗಡುಗಳು ಸೇರ್ಕಂಡ್ರೆ ಹಿಂಗೇ ಆಗಾದು. ಶ್ವೇತಪತ್ರ ಅಂದ್ರೆ ಹಿಂಗಿಂಗೆ, ಈತರಕೀತರ, ಇಷ್ಟಿಷ್ಟು ಅಂತ ಕರೆಕ್ಟಾಗಿ ಮಾಹಿತಿ ಕೊಡಾದು. ಸುಳ್ಳೇಳಂಗಿಲ್ಲ. ಈಗ ಕುಮಾರಣ್ಣ ಕರೆಂಟ್ ಬಗ್ಗೆ ಮಾಹಿತಿ ಕೇಳಿದಾರೆ, ಕರೆಕ್ಟಾಗಿ ಕೊಟ್ರಾತು' ಎಂದ.

'ಓ... ಹಂಗಾ? ಲೇ ಗುಡ್ಡೆ, ನಿನ್ನ ಹಳೆ ಪ್ರೇಮ ಪುರಾಣಗಳ ಬಗ್ಗೆ ಒಂದು ಶ್ವೇತಪತ್ರ ಕೊಡಾಲೆ ನೋಡಾಣ, ಸುಳ್ಳೇಳಂಗಿಲ್ಲ' ಎಂದ ದುಬ್ಬೀರ.

'ಅಯ್ಯೋ ಅವನ ಪ್ರೇಮ ಪುರಾಣನಾ? ಬ್ಯಾಡ ಸುಮ್ಕಿರೋ' ತೆಪರೇಸಿ ತಡೆದ.

'ಯಾಕೆ?'

'ಅವನೇನೋ ಪತ್ರ ಕೊಡ್ತಾನೆ, ಆದ್ರೆ ಆ ದರಿದ್ರಾನ ಓದೋನ್ಯಾವನು?' ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

'ಅದಿರ್ಲಿ, ಈ ಪಟಾಕಿ ಬ್ಯಾನ್ ಮಾಡಿದ್ದು ಪಾಡಾತು ಅಲ್ವಾ?' ಪರ್ಮೇಶಿ ಮಾತು ಬದಲಿಸಿದ.

'ಆದ್ರೆ ಹಸಿರು ಪಟಾಕಿ ಹೊಡಿಬೋದಂತೆ'.

'ಯಾವ ಪಟಾಕಿ ಬ್ಯಾನ್ ಆದ್ರೂ ಈ 'ಕೆಸರು ಪಟಾಕಿ' ಬ್ಯಾನ್ ಮಾಡಾಕೆ ಯಾರ ಕೈಗೂ ಆಗಲ್ಲ ಬಿಡ್ರಲೆ' ಗುಡ್ಡೆ ಒಗಟಾಗಿ ಮಾತಾಡಿದ.

'ಕೆಸರು ಪಟಾಕಿನಾ? ಅದೆಂಥದು?' ಮಂಜಮ್ಮ ಕೇಳಿದಳು.

'ಅಂದ್ರೇ ರಾಜಕಾರಣಿಗಳ ಮಾತಿನ ಪಟಾಕಿ! ಕೆಸರೆರಚಿದಂಗೆ ಒಬ್ಬರ ಮೇಲೊಬ್ರು ಪಟಾಕಿ ಹಚ್ಚಿ ಎಸೆದು 'ಡಂ' ಅನ್ನೋದು'.

ಗುಡ್ಡೆ ಮಾತಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

## ಚರ್ಚೆ

# ಧರ್ಮದೊಂದಿಗೆ ಕೈಜೋಡಿಸಿದೆ ವ್ಯಾಮೋಹ!

ಈ ಹೊತ್ತಿನ ರಾಜಕೀಯವು ಜನಕೇಂದ್ರಿತವಾಗದೆ ಧರ್ಮಕೇಂದ್ರಿತ ಚಿಂತನೆಗೆ ಮಣೆ ಹಾಕಿದೆ

● ಹಿ.ಶಿ.ರಾಮಚಂದ್ರೇಗೌಡ

**ಸನಾತನಧರ್ಮ** ಕುರಿತ ಸದ್ದು ಇತ್ತೀಚಿನ ದಿನಗಳಲ್ಲಿ ಜೋರಾಗಿ ಕೇಳಿಬರುತ್ತಿದೆ. ಸನಾತನಧರ್ಮ ಮತ್ತು ಹಿಂದೂಧರ್ಮ ಬೇರೆ ಬೇರೆಯಲ್ಲ ಎಂದು ಹೇಳುವವರೂ ಇದ್ದಾರೆ. ಸಹಜವಾಗಿಯೇ ಹಿಂದುತ್ವ ವರ್ಸಸ್ ವೈಚಾರಿಕ ಸಂಘರ್ಷ ಮುನ್ನೆಲೆಗೆ ಬಂದಿದೆ. ಇದೇನೂ ಹೊಸ ವಿದ್ಯಮಾನ ಅಲ್ಲ. ಧರ್ಮ ಮತ್ತು ವ್ಯಕ್ತಿತ್ವಗಳು ತಮ್ಮನ್ನು ಪುನರ್‌ನಿರ್ಮಿಸಿಕೊಳ್ಳಲು ಯಾವುದೇ ಧರ್ಮದಲ್ಲಿ ಇಂಥ ಚಟುವಟಿಕೆಗಳು ನಡೆಯುತ್ತವೆ.

ಆದರೆ ಈ ಹೊತ್ತಿನ ವಿದ್ಯಮಾನ ಬೇರೆಯೇ ಆಗಿದೆ. ಕೇಂದ್ರದ ರಾಜಕೀಯವು ಜನಕೇಂದ್ರಿತ ಚಿಂತನೆಗಿಂತ ಧರ್ಮಕೇಂದ್ರಿತ ಚಿಂತನೆಗೆ ಮಣೆ ಹಾಕಿದೆ. ಅದರಲ್ಲೂ ಅದು ಉಗ್ರ ಸನಾತನಧರ್ಮೀಯವಾಗಿದೆ. ಇದಕ್ಕೆ ಪೂರಕವೆಂಬಂತೆ, ಮುಸ್ಲಿಂ ಧಾರ್ಮಿಕ ಮೂಲಭೂತವಾದ ಕೂಡ ಕೈಜೋಡಿಸಿದೆ. ಈ ಇಬ್ಬರ ನಡಾವಳಿ ಸಮಾಜದಲ್ಲಿ ಆತಂಕ ಉಂಟುಮಾಡಿದೆ.

ಸನಾತನಿಗಳು ತಮ್ಮ ಸಮರ್ಥನೆಗಾಗಿ ಮುಸ್ಲಿಂ ಮೂಲಭೂತವಾದವನ್ನು ಮುಂದೊಡ್ಡುತ್ತಿದ್ದಾರೆ. ಈ ನಡೆ ರಾಜಕೀಯ ಮತ್ತು ಧಾರ್ಮಿಕತೆಯನ್ನು ಒಂದುಗೂಡಿಸಿದೆ. ಈ ಎರಡೂ ದೈತ್ಯಶಕ್ತಿಗಳ ಒಗ್ಗೂಡುವಿಕೆ ಸಮಾಜಕ್ಕೆ ಅಪಾಯಕಾರಿಯಾಗಿದೆ. ಏಕೆಂದರೆ, ಸ್ವಭಾವದಲ್ಲಿ ಈ ಎರಡೂ ಬಂಡವಾಳಶಾಹಿ ಶಕ್ತಿಗಳು.

ಹಿಂದೂ ಧರ್ಮವನ್ನು ವಿರೋಧಿಸುವವ-ರಲ್ಲಿ ಎರಡು ಪಂಗಡಗಳಿವೆ. ಒಂದು, ಹಿಂದೂ ಧರ್ಮವನ್ನು ಸಾರಾಸಗಟು ವಿರೋಧಿಸುವವರು. ಮತ್ತೊಂದು ಗುಂಪಿನವರು, ಹಿಂದೂ ಧರ್ಮದ ಮಿತಿಗಳನ್ನು ಎತ್ತಿ ಹೇಳುತ್ತ, ಪರಿಷ್ಕೃತ ರೂಪದಲ್ಲಿ ಅದನ್ನು ಒಪ್ಪಿಕೊಳ್ಳುವವರು. ಆದರೆ ಸನಾತನಿಗಳು ಈ ಎರಡೂ ಬಗೆಯ ನಡವಳಿಕೆಯನ್ನು ಸಹಿಸಿಕೊಳ್ಳುತ್ತಿಲ್ಲ. ತಮ್ಮ ಸನಾತನತೆಯ ಸಂರಕ್ಷಣೆಗೆ ಮುಸ್ಲಿಂ ಮೂಲಭೂತವಾದದ ಜೊತೆಗೆ ಒಟ್ಟು ಮುಸ್ಲಿಂ ಜನವರ್ಗವನ್ನೇ ಖಳನಾಯಕ ಸ್ಥಾನದಲ್ಲಿ ಇರಿಸುತ್ತಿದ್ದಾರೆ. ಇದು ಆರೋಗ್ಯಕರ ನಡವಳಿಕೆ ಅಲ್ಲ.

ಇಂದಿನ ಜಾಗತಿಕ ಸಂದರ್ಭದಲ್ಲಿ ಧರ್ಮವೆಂಬುದು ಯುದ್ಧಕ್ಕಿಂತ ಭಯಂಕರ ಅಸ್ತ್ರವಾಗಿದೆ. ಇಂಥ ಸ್ವಧರ್ಮದ ವ್ಯಾಮೋಹದ ಜೊತೆಗೆ ಪ್ರಾದೇಶಿಕ ಸ್ವಕೀಯತೆ ಮತ್ತು ಜನಾಂಗೀಯ ಅಸ್ಮಿತೆಗಳೆಂಬ ವ್ಯಾಮೋಹಗಳು ಕೈಜೋಡಿಸಿವೆ. ಈ ನಡವಳಿಕೆ ಹಿಟ್ಲರಿಸಂನ ಪುನರುತ್ಥಾನದಂತೆ ಕಾಣಿಸುತ್ತಿದೆ. ಧರ್ಮವು ಒಂದು ಸಮುದಾಯದ ಅಸ್ಮಿತೆ ಆಗುವುದಕ್ಕೆ ಬದಲಾಗಿ ಆಯುಧವಾಗುತ್ತಿದೆ. ಭಾರತವು ಪ್ರಸ್ತುತ ಇಂಥ ದುರಂತಕ್ಕೆ ಸಿಲುಕಿದೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಿಂದೂಧರ್ಮದ ಬಗೆಗಿನ ವಿಮರ್ಶೆ ಕಠಿಣವಾಗಿಯೇ ಇತ್ತು. ಸ್ವಧರ್ಮೀಯರೂ ಪರಧರ್ಮೀಯರೂ ಒಟ್ಟುಗೂಡಿಯೇ ಈ ವಿಮರ್ಶೆಯ ಪಾಲುದಾರರಾ-ಗಿದ್ದರು. ಇಂಥ ವಿಮರ್ಶೆಯನ್ನು ಒಪ್ಪುವ ಅಥವಾ ಬಿಡುವ ಮನಃಸ್ಥಿತಿ ಆರೋಗ್ಯಕರವಾಗಿಯೇ ಇತ್ತು. ಹೀಗೆ ನಾವು ಅಂಬೇಡ್ಕರ್ ಅವರನ್ನು ನಮ್ಮ ಸಾಂಸ್ಕೃತಿಕ ನಾಯಕನನ್ನಾಗಿ ಸ್ವೀಕರಿಸಿದೆವು. ಅವರನ್ನು ಖಳನಾಯಕ ಎಂದು ಯಾರೂ ಕರೆದಿರಲಿಲ್ಲ. ಸ್ಥಿತಿಗೆ ಪರಿಸ್ಥಿತಿಯನ್ನು ಮುಖಾಮುಖಿ ಮಾಡುವ ಸಾಂಸ್ಕೃತಿಕ ಸಂಪನ್ನತೆ ಅವರಲ್ಲಿ ಇತ್ತೇ ವಿನಾ ಅಧಾರ್ಮಿಕತೆ ಇರಲಿಲ್ಲ.

ಈ ಹೊತ್ತು ಧರ್ಮವು ಭಯಕ್ಕೆ ಕಾರಣವಾಗುತ್ತಿದೆ. ಎಲ್ಲರ ಅಂತರಂಗ ವಿಮರ್ಶೆ ಕದಡಿ ಹೋಗುತ್ತಿದೆ. ಭವಿಷ್ಯದ ಭಾರತದ ಬಗ್ಗೆ ಕಳವಳವಾಗುತ್ತಿದೆ. ಭಾರತದಲ್ಲಿ ಜಾತಿಯ ವಿನಾ ಬೇರೆ ಸಾಮಾಜಿಕ ಐಡೆಂಟಿಟಿ ಇಲ್ಲ, ಬೇರೆ ಧಾರ್ಮಿಕ ಐಡೆಂಟಿಟಿಯೂ ಇಲ್ಲ. ನಮ್ಮಲ್ಲಿ ಬೇಕಾದಷ್ಟು ಜನಪದ ಧರ್ಮಗಳಿವೆ, ವೃತ್ತಿಧರ್ಮಗಳಿವೆ. ಆದರೆ ಅವು ಭಾರತವನ್ನು ಅಖಂಡವಾಗಿ ಪ್ರತಿನಿಧಿಸಲಾರವು. 'ಭಾರತ ಧರ್ಮ' ಎಂಬುದನ್ನು ಅಖಂಡ ಧರ್ಮವಾಗಿ ಒಪ್ಪಿಕೊಂಡರೆ ಅದರೊಳಗೆ ಅಗತ್ಯವಾಗಿ ಬೇಕಾದ ಸಾಮಾಜಿಕ ವಿಂಗಡಣೆಗಳಿಲ್ಲ. ಅದೊಂದು ಅಮೂರ್ತ ಸ್ವರೂಪಿ. ಅದು 'ಅಖಿಲ ಭಾರತ'. ಜನ ಅವರವರು ಕಂಡುಕೊಂಡ ಸಂಸ್ಕೃತಿಯೊಳಗೆ ಬದುಕಬೇಕು. ಅದೇ ಜೀವನಧರ್ಮ.



ರಾಜಕೀಯ ಸಂಸ್ಕೃತಿ ಬೇರೆ, ಜನಸಂಸ್ಕೃತಿ ಬೇರೆ. ಈಗಿರುವ ಅರ್ಥದ ಹಿಂದೂ ಧರ್ಮವನ್ನು ಒಪ್ಪಿಕೊಂಡರೆ ಜಾತಿಯನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದರೆ ಜಾತಿಯು ತಾರತಮ್ಯದ ಐಡೆಂಟಿಟಿ. ಇದನ್ನು ಒಪ್ಪಿಕೊಳ್ಳಲು ಪ್ರಜ್ಞಾವಂತರಿಗೆ ಸಾಧ್ಯವೇ ಇಲ್ಲ. ಸಾಮಾನ್ಯ ಜನರಿಗೆ ಈ ತಾರತಮ್ಯ ಏನೆಂದೂ ಗೊತ್ತಿಲ್ಲ. ನಾವು ಇರುವುದೇ ಹೀಗೆ ಎಂದು ತಿಳಿದು-ಕೊಂಡಿದ್ದಾರೆ. ಆರ್ಥಿಕ ಅನುಕೂಲಕ್ಕಾಗಿ ಜಾತಿಯ ಹೆಸರು ಹೇಳುತ್ತಾರೆಯೇ ವಿನಾ ಇದು ನಮ್ಮ ಧಾರ್ಮಿಕ ಐಡೆಂಟಿಟಿ ಎಂದು ತಿಳಿದುಕೊಂಡಿಲ್ಲ. ಈ ಮಧ್ಯೆ ಎಡಪಂಥೀಯ ಚಿಂತನೆ ಕಾಲಿಟ್ಟಿತು. ಅದು ಜನರ ಮಧ್ಯೆ 'ಕಾರ್ಮಿಕ' ಎಂಬ ಒಂದು ಐಡೆಂಟಿಟಿಯನ್ನು ಬಳಕೆಗೆ ತಂದಿತು. ಆದರೆ ಅದು ಬಹಳ ಕಾಲ ನಿರ್ದಿಷ್ಟ ಐಡೆಂಟಿಟಿಯಾಗಿ ಉಳಿಯಲಿಲ್ಲ. ಈಗಿರುವ ಕಾರ್ಮಿಕ ಸಂಘಟನೆಗಳು ಜಾತಿ ಗುಂಪುಗಳಾಗಿ ಹಂಚಿಹೋಗಿವೆ.

ಭಾರತದಲ್ಲಿ ಬ್ರಾಹ್ಮಣ ಮತ್ತು ವೈಶ್ಯರನ್ನು ಬಿಟ್ಟರೆ ಉಳಿದವರಿಗೆ ಭದ್ರ ಜಾತಿ ತಳಪಾಯವಿಲ್ಲ. ಕ್ಷತ್ರಿಯ ಎಂಬ ಒಂದು ಶಾಶ್ವತ ಜಾತಿ ಇಲ್ಲ. ಗದ್ದುಗೆ ಏರಿದವನು ರಾಜ. ಈಗ ದುರ್ಬಲ ಜಾತಿಗಳನ್ನು ಜಾತಿಗಳಾಗಿ ಗುರುತಿಸುವುದು ಅವರಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಮಾತ್ರ. ನಿಜದಲ್ಲಿ ಅವರಿಗೆ ಜಾತಿ ಇಲ್ಲ.

ಹಾಗಿದ್ದಲ್ಲಿ ಈ ಹೊತ್ತಿನ ನಮ್ಮ ಸಾಮಾಜಿಕ ಐಡೆಂಟಿಟಿ ಯಾವುದು? ಜಾತಿಯ ಒಳಗಿರುತ್ತ ಜಾತಿಯನ್ನು ವಿರೋಧಿಸುವುದೊ ಅಥವಾ ನಾವು ಸಹಜವಾಗಿ ಬದುಕುತ್ತಿರುವ 'ನಿರ್ಜಾತಿ'ಗೆ ನಾಮಕರಣವೊಂದನ್ನು ಹುಡುಕುವುದೊ ಅಥವಾ ಜಾತಿಯನ್ನೇ 'ನಿರ್ಜಾತೀಕರಣ'ಗೊಳಿಸಿ ಬಳಸಿಕೊಳ್ಳುವುದೊ? ದಾರಿ ಯಾವುದಯ್ಯ...?

## ವಾಚಕರ ವಾಣಿ

### ಜಿಲ್ಲಾಧಿಕಾರಿಗಳ ಅನುಕರಣೀಯ ನಡೆ

ಅನಗತ್ಯ ವೆಚ್ಚ ತಗ್ಗಿಸುವ ಸಲುವಾಗಿ ಉತ್ತರ ಕನ್ನಡದ ಜಿಲ್ಲಾಧಿಕಾರಿ ಗಂಗೂಬಾಯಿ ಅವರು ಕಾರವಾರದಿಂದ 140 ಕಿ.ಮೀ. ದೂರದ ಬನವಾಸಿಗೆ ತಮ್ಮ ಅಧಿಕಾರಿ ವರ್ಗದೊಂದಿಗೆ ಸರ್ಕಾರಿ ಬಸ್ಸಿನಲ್ಲಿ ಪಯಣಿಸಿ ಜನತಾ ದರ್ಶನದಲ್ಲಿ ಪಾಲ್ಗೊಂಡು ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಪುರುಷ ಅಧಿಕಾರಿಗಳು ಟಿಕೆಟ್ ಪಡೆದಿದ್ದರೆ, ಉಳಿದ ಮಹಿಳೆಯರು ಶಕ್ತಿ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಅವರೂ ಜನತಾದರ್ಶನದಲ್ಲಿ ಪಾಲ್ಗೊಳ್ಳಲು ಸಿಬ್ಬಂದಿಯೊಂದಿಗೆ ಬಸ್‌ನಲ್ಲಿ ತೆರಳಿದ್ದರು. ಇಬ್ಬರೂ ಜಿಲ್ಲಾಧಿಕಾರಿಗಳ ನಡೆ ಅನುಕರಣೀಯ.

ಇಂದು ಜಿಲ್ಲಾಧಿಕಾರಿ ಅಥವಾ ಶಾಸಕರು ಹೊರಟರೆಂದರೆ ಪೊಲೀಸ್ ಆದಿಯಾಗಿ ಎಲ್ಲಾ ಇಲಾಖೆಗಳ ಹತ್ತಾರು ವಾಹನಗಳು ಹಿಂದೆ ಮೆರವಣಿಗೆ ಹೊರಡುವುದು ಸರ್ವೇಸಾಮಾನ್ಯ. ಒಂದೆಡೆ, ನಾಗರಿಕರಿಗೆ ಸಂಚಾರ ಸಮಸ್ಯೆ. ಇನ್ನೊಂದೆಡೆ, ಇಂಧನದ ಪೋಲು. ಎಲ್ಲಾ ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು, ಸಚಿವರು ಅವಕಾಶ ಇರುವೆಡೆಯೆಲ್ಲಾ ಸರ್ಕಾರಿ ಬಸ್ಸಿನಲ್ಲಿ ಸಂಚರಿಸಿದರೆ ಬಹಳಷ್ಟು ಹಣ, ಸಮಯ ಹಾಗೂ ಜನರ ನೆಮ್ಮದಿ ಉಳಿಸಬಹುದು. ಸರ್ಕಾರಿ ಆಡಳಿತಯಂತ್ರ ಇತ್ತ ನೋಡೀತೆ?

**ಕೆ.ಶ್ರೀನಿವಾಸರಾವ್**, ಹರಪನಹಳ್ಳಿ

### ಶಾಸಕರಿಗೆ ಇಂಥ ದಯನೀಯ ಸ್ಥಿತಿ ಸಲ್ಲ

ತಾವು ಪ್ರತಿನಿಧಿಸುವ ಕ್ಷೇತ್ರಕ್ಕೆ ನೀಡಿದ್ದ ಅನುದಾನವನ್ನು ರದ್ದುಗೊಳಿಸಬಾರದು ಎಂದು ಮನವಿ ಮಾಡಿ ಬೆಂಗಳೂರಿನ ಆರ್.ಆರ್.ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಾಲಿಗೆ ಬೀಳಲು ಮುಂದಾದ ಸುದ್ದಿಯನ್ನು ಓದಿದವರಿಗೆ ಅಸಹ್ಯವೆನಿಸದೇ? ಜನರಿಂದ ಆಯ್ಕೆಯಾದ ಶಾಸಕನೊಬ್ಬ ಆ ಕ್ಷೇತ್ರದ ಜನರ ಪ್ರತಿನಿಧಿಯಾಗಿರುವಾಗ, ತನ್ನ ನಡವಳಿಕೆಯಲ್ಲಿ ತನ್ನನ್ನು ಆಯ್ಕೆ ಮಾಡಿದ ಜನತೆಯ ಗೌರವ ಅಡಗಿರುತ್ತದೆ ಎನ್ನುವುದನ್ನು ಮರೆಯಬಾರದಲ್ಲವೇ? ಈ ಮೂಲಕ, ಮುನಿರತ್ನ ಅವರು ತಮ್ಮನ್ನು ಕುಬ್ಜರನ್ನಾಗಿಸಿಕೊಳ್ಳುವ ಅಗತ್ಯವಿತ್ತೇ? ಅನುದಾನಕ್ಕಾಗಿ ಮಂತ್ರಿಯ ಮುಂದೆ ಗೋಗರೆಯುತ್ತ ಕಾಲಿಗೆ ಬೀಳುವ ದಯನೀಯ ಸ್ಥಿತಿಯನ್ನು ಜನಪ್ರತಿನಿಧಿಗಳು ತಂದುಕೊಳ್ಳಬಾರದು. ಈ ಕಾರಣಕ್ಕಾಗಿ ಜನತೆ ಅವರನ್ನು ಶಾಸಕನನ್ನಾಗಿ ಆಯ್ಕೆ ಮಾಡಿರುವುದಿಲ್ಲ. ಅನುದಾನವನ್ನು ರದ್ದುಗೊಳಿಸಿದ್ದರೆ ಅದಕ್ಕೆ ಕಾರಣಗಳೇನು ಎಂಬುದನ್ನು ಕ್ಷೇತ್ರದ ಜನರ ಮುಂದೆ ಬಂದು ವಿವರಿಸುವ ಹಕ್ಕು ಶಾಸಕನಿಗೆ ಇದೆ. ಶಾಸಕರು ಮತ್ತು ಮಂತ್ರಿಗಳು ಜನರ 'ಸೇವಕರು'. ಜನರೇ ಪ್ರಭುಗಳು. ಪ್ರಜಾಪ್ರಭುತ್ವದ ಮೇಲ್ಮೆಯೇ ಇದು.

ಅನುದಾನದ ವಿಚಾರವಾಗಿ ತಮ್ಮೊಡನೆ ಚರ್ಚೆಯ ವೇಳೆ ಮುನಿರತ್ನ ಅವರು, 'ದ್ವೇಷದ ರಾಜಕಾರಣ' ಎಂದದ್ದಕ್ಕೆ, 'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳ ಅನುದಾನಕ್ಕೆ ಏಕೆ ಕತ್ತರಿ ಹಾಕಿದ್ದರು? ಯಡಿಯೂರಪ್ಪ, ಬೊಮ್ಮಾಯಿ ಅವರನ್ನೇ ಕೇಳಿನೋಡಿ. ಅದನ್ನು ಯಾವ ರಾಜಕಾರಣವೆಂದು ಕರೆಯುತ್ತಾರೆ?' ಎಂದು ಶಿವಕುಮಾರ್ ಹೇಳಿದ್ದಾರೆ. ಹಾಗಿದ್ದರೆ ಇವರ ಪ್ರಕಾರ, ಹಿಂದಿನ ಅವಧಿಯ ಸರ್ಕಾರ ಅವಿವೇಕದಿಂದ ವರ್ತಿಸಿತು, ಆದ್ದರಿಂದ ತಮ್ಮ ಸರ್ಕಾರ ಮುಯ್ಯಿಗೆ ಮುಯ್ಯಿ ಎಂಬಂತೆ ಅನುದಾನವನ್ನು ರದ್ದುಗೊಳಿಸಿತು ಎಂದೇ? ಪ್ರಜಾಪ್ರಭುತ್ವ ಎಂದರೆ ಇದೆಯೇ?

**ಸಾಮಗ ದತ್ತಾತ್ರಿ**, ಬೆಂಗಳೂರು

### ನಿರ್ಬಂಧ ತೆರವು: ವಿವೇಕದ ಕ್ರಮವಲ್ಲ

ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಇದ್ದ ನಿರ್ಬಂಧ ತೆರವುಗೊಳಿಸಿ, ಖಾಸಗಿ ಭೂಮಿಯಲ್ಲಿ ರೆಸಾರ್ಟ್, ಸಾ ಮಿಲ್, ಫಾರಂ ಹೌಸ್ ನಿರ್ಮಾಣಕ್ಕೆ ಅನುಮತಿ ನೀಡಲು ಸರ್ಕಾರ ಮುಂದಾಗಿರುವುದು ವಿವೇಕದ ಕ್ರಮವಾಗುವುದಿಲ್ಲ. ಇದರಿಂದ ವನ್ಯಜೀವಿಗಳು ಮತ್ತು ಅರಣ್ಯ ಸಂಪತ್ತಿನ ಮೇಲೆ ಪ್ರತಿಕೂಲ ಪರಿಣಾಮಗಳೇ ಹೆಚ್ಚು. ವನ್ಯಜೀವಿಗಳ ನೈಸರ್ಗಿಕ ಆವಾಸ ವಲಯವನ್ನು ಹೆಚ್ಚಿಸಬೇಕಾಗಿರುವ ಈ ಸಂದರ್ಭದಲ್ಲಿ, ಇಂತಹ ಕ್ರಮವು ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಳಕ್ಕೆ ಕಾರಣವಾಗಬಹುದು. ಸರ್ಕಾರ ಈ ನಿರ್ಧಾರವನ್ನು ಪುನರ್‌ಪರಿಶೀಲಿಸುವುದು ಒಳಿತು.

**ಶಂಕರಪ್ಪ ಎಚ್.ಜಿ.**, ಹೊಳವನಹಳ್ಳಿ, ತುಮಕೂರು

### ಶಾಲೆ ತೊರೆಯುವ ಮಕ್ಕಳು: ನಡೆಯಲಿ ಚಿಂತನೆ

'ಗುಣಮಟ್ಟ ಸರಿ ಇಲ್ಲವೆಂದೇ ಮಕ್ಕಳು ಸರ್ಕಾರಿ ಶಾಲೆ ಬಿಡುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಹೇಳಿರುವುದನ್ನು ಓದಿ ಆಘಾತವಾಯಿತು. ನಾನು ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕ, ಮುಖ್ಯ ಶಿಕ್ಷಕನಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮೂವತ್ತೇಳು ವರ್ಷ ಕೆಲಸ ಮಾಡಿ ಹನ್ನೆರಡು ವರ್ಷಗಳ ಹಿಂದೆ ನಿವೃತ್ತನಾದೆ. ನನ್ನ ಸಹೋದ್ಯೋಗಿಗಳಾಗಿದ್ದವರಲ್ಲಿ ಹೆಚ್ಚಿನವರು ಪ್ರತಿಭಾವಂತರು, ಕರ್ತವ್ಯನಿಷ್ಠರು ಆಗಿದ್ದರು. ಅಲ್ಲದೆ ನಾವು ಮಕ್ಕಳನ್ನು ಪ್ರೀತಿಯಿಂದ ನೋಡುತ್ತಿದ್ದೆವು. ಅವರ ಕಲಿಕೆಗೆ ಮುಖ್ಯವಾಗಿ ಅಡ್ಡಗಾಲಾಗುತ್ತಿದ್ದುದು ಅವರ ಹಿನ್ನೆಲೆ- ಕೌಟುಂಬಿಕ ಹಾಗೂ ಗ್ರಾಮೀಣ ಪರಿಸರ. ಒಂದಷ್ಟು ಮಟ್ಟಿಗೆ ಪ್ರಾಥಮಿಕ ಮಟ್ಟದ ಶಿಕ್ಷಣದಲ್ಲಿನ ನ್ಯೂನತೆ. ಬಹಳಷ್ಟು ಶಾಲೆಗಳಲ್ಲಿ ಮೂಲ ಸೌಕರ್ಯಗಳಲ್ಲಿ ಕೊರತೆ ಇರುತ್ತಿತ್ತು.

ಸಚಿವರಿಗೆ, ಸಾರ್ವಜನಿಕರಿಗೆ ತಿಳಿದಿರುವಂತೆ ಶಿಕ್ಷಕರನ್ನು ಅರ್ಹತಾ ಪರೀಕ್ಷೆಯಲ್ಲಿ ಅವರ ಸಾಧನೆ ಹಾಗೂ ಲಿಖಿತ ಪರೀಕ್ಷೆಯಲ್ಲಿ ಅವರು ಗಳಿಸುವ ರ‍್ಯಾಂಕ್ ಆಧರಿಸಿ ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ ಅತ್ಯಂತ ಯೋಗ್ಯ ಅಭ್ಯರ್ಥಿಗಳೇ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಾಗಿ ನೇಮಕಗೊಳ್ಳುತ್ತಾರೆ. ಹೀಗಿರುವಾಗ, ಮಕ್ಕಳು ಯಾಕೆ ಸರ್ಕಾರಿ ಶಾಲೆಯನ್ನು ಮಧ್ಯದಲ್ಲಿ ತೊರೆಯುತ್ತಾರೆ ಎಂಬುದರ ಕುರಿತು ಶಿಕ್ಷಣ ತಜ್ಞರು ಪರ್ಯಾಲೋಚಿಸುವುದು ಒಳಿತು.

**ಶಿವರಾಮ್ ಎಚ್.ಎಸ್.**, ಮೈಸೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

# ಅಮೆಜಾನ್ ಕಾಡಿನಲ್ಲಿ ಬರ



• ಸುಕೃತ ಎಸ್.

ಭೂಮಿಯ ಮೇಲಿರುವ ಸಿಹಿನೀರಿನ ಒಟ್ಟು ಪ್ರಮಾಣದ ಶೇ 20ರಷ್ಟು ಇರುವುದು ಬ್ರೆಜಿಲ್‌ನ ಅಮೆಜಾನ್ ಮಳೆಕಾಡು ಪ್ರದೇಶದಲ್ಲಿರುವ ಅಮೆಜಾನ್ ನದಿಯಲ್ಲಿ. ಆದರೆ, ಈ ನದಿಯ ಎರಡು ಪ್ರಮುಖ ಉಪನದಿಗಳಾದ ರಿಯೊ ನೆಗ್ರೊ ಹಾಗೂ ಮಡ್ಯೆರಾ ಬತ್ತಿ ಹೋಗಿವೆ. ಸೊಲಿಮೊಸ್, ಜುರುವಾ, ಪ್ಯುರಸ್ ನದಿಗಳಲ್ಲಿನ ನೀರಿನ ಪ್ರಮಾಣವು ಹಿಂದೆಂದೂ ಕಾಣದ ಮಟ್ಟಿಗೆ ಕುಸಿದಿದೆ. ಅಮೆಜಾನ್ ಮಳೆಕಾಡು ಪ್ರದೇಶದ ವ್ಯಾಪ್ತಿ ಕೂಡ ಹಂತ ಹಂತವಾಗಿ ಕುಗ್ಗುತ್ತಾ ಬಂದಿದೆ. ಅಮೆಜಾನ್ ಮಳೆಕಾಡು ಪ್ರದೇಶಕ್ಕೆ ಬರ ಬಡಿದಿದೆ.

ಈ ಪ್ರದೇಶದಲ್ಲಿ ತೀವ್ರ ಪ್ರವಾಹ ಹಾಗೂ ತೀವ್ರ ಬರ ಹೊಸತೇನಲ್ಲ. ಆದರೆ, ಈ ಬಾರಿ ಬಂದಿರುವ ಬರದ ತೀವ್ರತೆ ಹೆಚ್ಚಿದೆ ಮತ್ತು ಈ ರೀತಿಯ ತೀವ್ರ ಬರವು ಭವಿಷ್ಯದಲ್ಲಿ ಸಾಮಾನ್ಯವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನೆಗ್ರೊ ಹಾಗೂ ಮಡ್ಯೆರಾ ನದಿಗಳಿಗೆ ಹೊಂದಿಕೊಂಡಂತೆ ಇರುವ 'ತೇಲುವ ಗ್ರಾಮ'ಗಳಲ್ಲಿ ವಾಸಿಸುತ್ತಿರುವ ಜನರ ಜೀವನವು ಸಂಪೂರ್ಣ ಸ್ಥಗಿತಗೊಂಡಿದೆ. ಇಲ್ಲಿರುವ ಒಟ್ಟು 62 ಪುರಸಭೆಗಳ ಪೈಕಿ 60ರಲ್ಲಿ ಬರ ಆವರಿಸಿದೆ. ಸುಮಾರು 5 ಲಕ್ಷಕ್ಕೂ ಹೆಚ್ಚು ಜನರ ಬದುಕು ಬತ್ತಿ ಹೋಗಿದೆ.

**ಏನಿದು ತೇಲುವ ಗ್ರಾಮ:** ಗ್ರಾಮಗಳ ಸುತ್ತ ನೀರೇ ನೀರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕು ಎಂದರೆ, ರಸ್ತೆ ಅಲ್ಲ ನೀರಿನಲ್ಲೇ ಸಂಚರಿಸಬೇಕು. ಜನರ ಬಳಿ ಬೋಟ್ ಬಿಟ್ಟರೆ ಬೇರೆ ವಾಹನಗಳಿಲ್ಲ. ಜೊತೆಗೆ, ಈ ನದಿಯ ರಭಸ ಮತ್ತು ಹರಿವ ಗುಣದ ಕಾರಣಕ್ಕಾಗಿ ಈ ಗ್ರಾಮಗಳು ತುಸು ಮಟ್ಟಿಗೆ ಸ್ಥಳಾಂತರವಾಗುತ್ತವೆ. ಇದಕ್ಕಾಗಿಯೇ ಇವಕ್ಕೆ ತೇಲುವ ಗ್ರಾಮಗಳು ಎನ್ನಲಾಗುತ್ತದೆ. ಆದರೆ, ಈಗ ನೀರಿಲ್ಲದೇ ಗ್ರಾಮಗಳು 'ತೇಲುವ ಗ್ರಾಮ'ಗಳಾಗಿ ಉಳಿದಿಲ್ಲ.

ತಿನ್ನಲು ಆಹಾರವಿಲ್ಲ, ಕುಡಿಯಲು ನೀರಿಲ್ಲ, ಸುರಕ್ಷಿತ ಪ್ರದೇಶಕ್ಕೆ ಹೋಗಲು ಬರುವುದಿಲ್ಲ ಎನ್ನುವ ಸ್ಥಿತಿಯಲ್ಲಿ ಇಲ್ಲಿ ವಾಸಿಸುವ ವಿವಿಧ ಬುಡಕಟ್ಟು ಸಮುದಾಯಗಳ ಜನರು ದಿನ ದೂಡುತ್ತಿದ್ದಾರೆ. ಮೀನುಗಾರಿಕೆ ಸಂಪೂರ್ಣ ನಿಂತಿದೆ. ಕಾಡಿನ ಹಣ್ಣುಗಳನ್ನು ದೂರದ ಊರುಗಳಿಗೆ ಹೋಗಿ ಮಾರಲಾಗುತ್ತಿತ್ತು. ಇದೂ ನಿಂತಿದೆ. ನೀರಿಲ್ಲದೆ ಪ್ರವಾಸಿಗರೂ ಇಲ್ಲ. ಇದರಿಂದ ಬೋಟಿಂಗ್ ಉದ್ಯಮವೂ ಸ್ಥಗಿತಗೊಂಡಿದೆ. ಕುಡಿಯುವ ನೀರು, ಪಾತ್ರೆಗಳ ಅಂಗಡಿ, ಮನೆಯ ನಿತ್ಯ ಬಳಕೆಯ ವಸ್ತುಗಳ ಅಂಗಡಿಯಂತಹ ಸಣ್ಣ ಉದ್ಯಮ ಕೂಡ ಬಾಗಿಲು ಮುಚ್ಚಿದೆ. 'ದೇವರೇ ಮಳೆ ಸುರಿಸು' ಎಂದು ಬುಡಕಟ್ಟು ಸಮುದಾಯಗಳ ಹಿರಿಯರು, ಬತ್ತಿದ ನದಿಯ ಮುಂದೆ ಕೂತು ಆಕಾಶ ನೋಡುತ್ತಿದ್ದಾರೆ.

**ಸರ್ಕಾರದ ಕ್ರಮ:** ಬರದ ಕಾರಣದಿಂದ ತೊಂದರೆಗೆ ಈಡಾಗಿರುವ ಜನರನ್ನು ರಕ್ಷಿಸಲು ಬ್ರೆಜಿಲ್ ಅಧ್ಯಕ್ಷ ಲೂಯಿ ಇನ್ಯಾಸಿಯೊ ಲುಲ ಡಿಸಿಲ್ವ ನೇತೃತ್ವದ ಸರ್ಕಾರವು ಕಾರ್ಯಪ್ರವೃತ್ತವಾಗಿದೆ. ಆಹಾರ, ಕುಡಿಯುವ ನೀರು ಸೇರಿದಂತೆ ಬರ ಪೀಡಿತ ಪ್ರದೇಶಗಳ ಜನರ ಅಗತ್ಯವನ್ನು ಪೂರೈಸಲು ಮುಂದಾಗಿದೆ. ಇದಕ್ಕಾಗಿ ವಿಶೇಷ ಕಾರ್ಯಪಡೆಯನ್ನು ರಚಿಸಿದೆ.

## ಅರಣ್ಯ ನಾಶ

ಜಾಗತಿಕ ತಾಪಮಾನವು ನಿಯಂತ್ರಣದಲ್ಲಿ ಇರುವಲ್ಲಿ ಅಮೆಜಾನ್ ಕಾಡುಗಳು ಬಹುದೊಡ್ಡ ಪಾತ್ರ ವಹಿಸುತ್ತವೆ. ಈ ಪ್ರದೇಶದಲ್ಲಿ ಇಲ್ಲಿಯವರೆಗೆ ಸುಮಾರು 16 ಸಾವಿರ ಮರಗಳ ತಳಿಗಳು ಪತ್ತೆಯಾಗಿವೆ. ಇನ್ನೂ ನೂರಾರು ಮರಗಳ ತಳಿ ಇರುವ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಆದರೆ, ಈ ಪ್ರದೇಶದಲ್ಲಿ ದೊಡ್ಡ ಮಟ್ಟದ ಅರಣ್ಯ ನಾಶ ಈಗಾಗಲೇ ಆಗಿದೆ. ಇದೂ ಇಂದಿನ ಬರ ಪರಿಸ್ಥಿತಿಗೆ ಕಾರಣ ಎಂದು ಹೇಳಲಾಗುತ್ತಿದೆ.

ಸರಿಸುಮಾರು ಕತಾರ್ ದೇಶದ ವ್ಯಾಪ್ತಿಯಷ್ಟು ಅರಣ್ಯವನ್ನು ಅಮೆಜಾನ್‌ನಲ್ಲಿ 2021ರ ಆ.1ರಿಂದ 2022ರ ಜುಲೈ 31ರ ನಡುವೆ ನಾಶ ಮಾಡಲಾಗಿದೆ ಎಂದು ಬ್ರೆಜಿಲ್‌ನ ನ್ಯಾಷನಲ್ ಸ್ಪೇಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಹೇಳಿದೆ. ಆದರೆ, 2023ರ ಹೊತ್ತಿಗೆ ಕಳೆದ ನಾಲ್ಕು ವರ್ಷಕ್ಕೆ ಹೋಲಿಸಿಕೊಂಡರೆ, 2023ರ ಮೊದಲ ಭಾಗದಲ್ಲಿ ಅರಣ್ಯ ನಾಶ ಪ್ರಮಾಣವು ಶೇ 34ಕ್ಕೆ ಇಳಿದಿದೆ ಎಂದು ಸರ್ಕಾರ ಹೇಳಿದೆ.

ಬ್ರೆಜಿಲ್ ದೇಶವು, ದನದ ಮಾಂಸ ಮಾರಾಟದಲ್ಲಿ ಅಗ್ರಸ್ಥಾನದಲ್ಲಿದೆ. ಇದರಿಂದಾಗಿ ಕಾಡು ಕಡಿದು ದನಗಳಿಗೆ ಮೇಯುವ ಜಾಗವನ್ನು ಮಾಡಿಕೊಳ್ಳಲಾಗುತ್ತಿದೆ. ಅಮೆಜಾನ್ ಕಾಡು ಪ್ರದೇಶದಲ್ಲಿ ತೈಲ ಉತ್ಪಾದನೆಯು ನಡೆಯತೊಡಗಿದೆ. ವಾಹನಗಳಿಗೆ ಎಥೆನಾಲ್ ಬಳಸುವುದರಿಂದ ಕಾಡು ಕಡಿದು ಸೋಯಾಬೀನ್ಸ್ ಕೃಷಿ ಮಾಡಲಾಗುತ್ತಿದೆ. ವಿವಿಧ ಜಾತಿಗಳ ಮರಗಳ್ಳತನವು ದೊಡ್ಡ ಪ್ರಮಾಣದಲ್ಲಿದೆ.

ಆದರೆ, ಸರ್ಕಾರವು ಅರಣ್ಯ ನಾಶ ತಡೆಯಲು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಬುಡಕಟ್ಟು ಸಮುದಾಯಗಳು ವಾಸಿಸುವ ಪ್ರದೇಶಗಳನ್ನು ಮೀಸಲು ಅರಣ್ಯ ಎಂದು ಘೋಷಿಸುವುದು ಇದರಲ್ಲಿ ಒಂದು. 2030ರ ಹೊತ್ತಿಗೆ ಅರಣ್ಯ ನಾಶದ ಪ್ರಮಾಣವನ್ನು ಸೊನ್ನೆಗೆ ಇಳಿಸುವ ಗುರಿಯನ್ನು ಇರಿಸಿಕೊಂಡು, ಇದನ್ನು ಸಾಕಾರಗೊಳಿಸುವುದಕ್ಕಾಗಿ ಆಗಸ್ಟ್‌ನಲ್ಲಿ 'ಅಮೆಜಾನ್ ಶೃಂಗಸಭೆ' ನಡೆದಿದೆ. ಇದನ್ನು ಬ್ರೆಜಿಲ್ ಆಯೋಜಿಸಿತ್ತು. ಅಮೆಜಾನ್ ಮಳೆಕಾಡು ಹಬ್ಬಿಕೊಂಡಿರುವ ಬೊಲಿವಿಯಾ, ಪೆರು, ಕೊಲಂಬಿಯಾ ಸೇರಿದಂತೆ 8 ದೇಶಗಳ ನಾಯಕರು ಇದರಲ್ಲಿ ಭಾಗವಹಿಸಿದ್ದರು.




## ಮಳೆ ಇಲ್ಲ

ಮೊದಲೇ ಉಲ್ಲೇಖಿಸಿದ ಹಾಗೆ ಅಮೆಜಾನ್ ಮಳೆಕಾಡು ಪ್ರದೇಶದಲ್ಲಿ ಬರ ಹಾಗೂ ಪ್ರವಾಹ ಹೊಸತಲ್ಲ. ಪ್ರತಿ 10 ವರ್ಷಗಳಿಗೊಮ್ಮೆ ಇಲ್ಲಿ ಈ ರೀತಿಯ ವೈಪರೀತ್ಯಗಳು ಆಗುತ್ತವೆ. ಎಲ್ ನೀನೊ ಕಾರಣದಿಂದಾಗಿ ಹೀಗಾಗುತ್ತದೆ. ಆದರೆ, ಈ ಬಾರಿಯ ಪರಿಣಾಮವು ಭೀಕರವಾಗಿದೆ. 'ಅಕ್ಟೋಬರ್ ಅಂತ್ಯದ ಹೊತ್ತಿಗೆ ಬರದ ತೀವ್ರತೆಯು ಇನ್ನಷ್ಟು ಹೆಚ್ಚಲಿದೆ. ನವೆಂಬರ್‌ನಲ್ಲಿ ಮಳೆಯಾಗಬಹುದು. ಆದರೆ, ಈ ಮಳೆಯು ಬತ್ತಿ ಹೋದ ನದಿಗಳು ತುಂಬುವುದಕ್ಕೆ ಸಾಕಾಗುವುದಿಲ್ಲ. ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದಷ್ಟೇ' ಎನ್ನುತ್ತಾರೆ ಹವಾಮಾನ ತಜ್ಞರು.


ಸಾಮಾನ್ಯವಾಗಿ ಮೇ ತಿಂಗಳಿನಿಂದ ಅಕ್ಟೋಬರ್ ವರೆಗೆ ಮಳೆಯ ಪ್ರಮಾಣ ಕಡಿಮೆ ಇರುತ್ತದೆ. ಕಾಲ ಕ್ರಮೇಣ ಈ ಮಳೆ ಪ್ರಮಾಣ ಮತ್ತಷ್ಟು ಕಡಿಮೆಯಾಗಿದೆ. ಆದರೆ, ಈ ಬಾರಿ ಇದು ಮತ್ತಷ್ಟು ಕಡಿಮೆಯಾಗಿದೆ. ಸುಮಾರು 50 ವರ್ಷಗಳಲ್ಲಿ ಇಂಥ ಸ್ಥಿತಿ ನಿರ್ಮಾಣವಾಗಿರಲಿಲ್ಲ. 'ಬರ ಬಡಿದಿರುವ ನಮ್ಮ ಪ್ರದೇಶಗಳನ್ನು 'ಹವಾಮಾನ ತುರ್ತು' ಎಂದು ಘೋಷಿಸಿ ಎಂದು 63 ಬುಡಕಟ್ಟು ಸಮುದಾಯಗಳ ಒಕ್ಕೂಟ 'ಎಪಿಐಎಎಂ' ಬ್ರೆಜಿಲ್ ಸರ್ಕಾರವನ್ನು ಒತ್ತಾಯಿಸಿದೆ.

ಎಲ್ ನೀನೊ ಒಂದು ಕಾರಣವಾದರೆ, ಜಾಗತಿಕ ಹವಾಮಾನ ವೈಪರೀತ್ಯ ಇನ್ನೊಂದು ಕಾರಣ. ಜಾಗತಿಕ ತಾಪಮಾನವು ಏರುತ್ತಲೇ ಇದೆ. ಜಗತ್ತಿನಲ್ಲೇ ಸೆಪ್ಟೆಂಬರ್‌ನಲ್ಲಿ ಇದು ತೀವ್ರ ಏರಿಕೆ ಕಂಡುಬಂದಿತ್ತು. ಇದರಿಂದಾಗಿ ಬ್ರೆಜಿಲ್‌ನಲ್ಲಿ ಬಿಸಿಗಾಳಿ ಎದ್ದಿತ್ತು. ಜೊತೆಗೆ, ಇದೇ ತಿಂಗಳಲ್ಲಿ ಅಮೆಜಾನ್‌ನಲ್ಲಿ 7 ಸಾವಿರ ಬಾರಿ ಕಾಳ್ಗಿಚ್ಚು ಕಾಣಿಸಿಕೊಂಡಿತ್ತು. ಇದು 1998ರ ಈಚೆಗೆ ಗರಿಷ್ಠ ಸಂಖ್ಯೆಯ ಕಾಳ್ಗಿಚ್ಚಾಗಿದೆ.

### ಏನಿದು ಎಲ್ ನೀನೊ

ಪೆಸಿಫಿಕ್ ಸಾಗರದಲ್ಲಿ ಸಾಮಾನ್ಯ ಪರಿಸ್ಥಿತಿಯಲ್ಲಿ ಗಾಳಿಯು ಸಮಭಾಜಕ ರೇಖೆ ಉದ್ದಕ್ಕೂ ಪಶ್ಚಿಮಕ್ಕೆ ಚಲಿಸುತ್ತದೆ. ಇದರಿಂದಾಗಿ ದಕ್ಷಿಣ ಅಮೆರಿಕ ಭಾಗದಲ್ಲಿರುವ ಬಿಸಿ ನೀರು ಏಷ್ಯಾದತ್ತ ನುಗ್ಗುತ್ತದೆ. ಈ ಬಿಸಿ ನೀರಿನ ಬದಲಿಗೆ ಸಾಗರದ ಆಳದಿಂದ ತಂಪು ನೀರು ಮೇಲಕ್ಕೆ ಬರುತ್ತದೆ. ಈ ಬಿಸಿಯಾದ ನೀರು ಗಾಳಿಯ ಬಿಸಿಯನ್ನು ಹೆಚ್ಚಿಸಿ ಆ ಮೂಲಕ ಗಾಳಿಯಲ್ಲಿ ತೇವ ಉಂಟಾಗಲು ಕಾರಣವಾಗುತ್ತದೆ. ಪರಿಣಾಮವಾಗಿ ಮೋಡಗಳು ರೂಪುಗೊಳ್ಳುತ್ತವೆ. ಈ ಮೋಡಗಳು ತಂಪು ಗಾಳಿ ಇರುವ ಪೂರ್ವ ಪ್ರದೇಶದತ್ತ ಸಾಗುತ್ತವೆ. ಅಲ್ಲಿರುವ ತಂಪು ಗಾಳಿಯ ಕಾರಣಕ್ಕೆ ಮಳೆಯಾಗಿ ಸುರಿಯುತ್ತದೆ. ಆದರೆ, ಎಲ್ ನಿನೊ ಈ ಪ್ರಕ್ರಿಯೆ ನಡೆಯದಂತೆ ಮಾಡುತ್ತದೆ. ಎಲ್ ನಿನೊದಿಂದಾಗಿ ಸಾಗರದ ಮೇಲಿನ ಮಾರುತವು ದುರ್ಬಲಗೊಳ್ಳುತ್ತದೆ.

ಆಧಾರ: ಎಪಿ, ಎಎಫ್‌ಪಿ, ರಾಯಿಟರ್ಸ್



## ಡಾಲ್ಫಿನ್‌ಗಳ ಸಾವು

ಅಮೆಜಾನ್ ನದಿ ಪ್ರದೇಶದಲ್ಲಿ ಮಾತ್ರವೇ ಅಪರೂಪ ಜಾತಿಯ ಡಾಲ್ಫಿನ್‌ಗಳು (ಪಿಂಕ್ ಡಾಲ್ಫಿನ್ ಅಥವಾ ಬೊಟೊ) ಕಾಣಸಿಗುತ್ತವೆ. ಟೆಫೆ ನಗರದಲ್ಲಿರುವ ಟೆಫೆ ನದಿಯ ನೀರು ಬಿಸಿಯಾಗಿದ್ದರಿಂದ ಸುಮಾರು 125 ಡಾಲ್ಫಿನ್‌ಗಳು ಸತ್ತು ಹೋಗಿವೆ. ಈ ಜಾತಿಯ ಡಾಲ್ಫಿನ್‌ಗಳು ಅಳಿವಿನಂಚಿನಲ್ಲಿವೆ ಎಂದು ವಿಶ್ವಸಂಸ್ಥೆ ಗುರುತಿಸಿದೆ.

ನದಿ ನೀರಿನ ಸಾಮಾನ್ಯ ತಾಪಮಾನವು 30 ಡಿಗ್ರಿ ಸೆಲ್ಸಿಯಸ್. ಆದರೆ, ಸೆ. 28ಕ್ಕೆ ಇದು 39 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಅ.3ರ ಹೊತ್ತಿಗೆ ತಾಪಮಾನವು 36.3 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಿತು. ಬಿಸಿ ತಾಳಲಾರದೆ ಡಾಲ್ಫಿನ್‌ಗಳು ಮೃತಪಟ್ಟಿವೆ. ನದಿಯ ತೀರಕ್ಕೆ ಹೆಣಗಳು ಬಂದು ಬಿದ್ದಿವೆ. ಇವುಗಳ ಸಾವಿಗೆ ಬೇರೆ ಯಾವುದಾದರೂ ಕಾರಣ ಇರಬಹುದೇ ಎಂಬುದರ ಬಗ್ಗೆಯೂ ಅಧ್ಯಯನ ನಡೆಸಲಾಗುತ್ತಿದೆ. ಕೆಲವು ನದಿಗಳು ಬತ್ತಿ ಹೋಗಿರುವ ಕಾರಣ ಮೀನುಗಳು ಸತ್ತಿವೆ. ಸಾವಿರಾರು ಮೀನುಗಳ ಹೆಣಗಳು ನದಿಯಲ್ಲಿ ತೇಲುತ್ತಿವೆ ಮತ್ತು ಕೊಳೆಯುತ್ತಿವೆ. ಡಾಲ್ಫಿನ್ ಹಾಗೂ ಮೀನುಗಳ ಹೆಣಗಳ ಕಾರಣದಿಂದ ನದಿಯಲ್ಲಿ ಉಳಿದಿರುವ ಅಲ್ಪಸ್ವಲ್ಪ ನೀರನ್ನು ಬಳಸಲಾರದ ಸ್ಥಿತಿ ಎದುರಾಗಿದೆ. ಹೆಣಗಳ ವಾಸನೆಯೂ ತಾಳಲಾರದಾಗಿದೆ.

## ಸಿನಿ ಬಿಟ್ಸ್

### 'ಇನಾಮ್ದಾರ್' ಕುಟುಂಬದ ಕಥೆ



ಚಿರಶ್ರೀ ಅಂಚನ್

ಶಿವಾಜಿ ಮಹಾರಾಜರನ್ನು ಆರಾಧಿಸುವ ಉತ್ತರ ಕರ್ನಾಟಕದ ಕುಟುಂಬವೊಂದರ ಕಥೆಯಾಧಾರಿತ 'ಇನಾಮ್ದಾರ್' ಚಿತ್ರದ ಟ್ರೇಲರ್ ಕನ್ನಡ ಸೇರಿ ಐದು ಭಾಷೆಗಳಲ್ಲಿ ಬಿಡುಗಡೆಗೊಂಡಿದೆ. ನಿರಂಜನ್ ಶೆಟ್ಟಿ ತಲ್ಲೂರು ನಿರ್ಮಾಣದ ಚಿತ್ರವನ್ನು ಸಂದೇಶ್ ಶೆಟ್ಟಿ ಆಜ್ರಿ ನಿರ್ದೇಶಿಸಿದ್ದಾರೆ.

'ಶಿವಾಜಿ ಮಹಾರಾಜರನ್ನು ಆರಾಧಿಸುವ 'ಇನಾಮ್ದಾರ್' ಕುಟುಂಬ ಹಾಗೂ ದಕ್ಷಿಣದ ಕರಾವಳಿ ಭಾಗದ ಕಾಡಿನಲ್ಲಿ ವಾಸಿಸುವ ಹಾಗೂ ಶಿವನ ಆರಾಧಕರಾದ ಕಾಡು ಜನರ ನಡುವೆ ನಡೆಯುವ ವರ್ಣಸಂಘರ್ಷದ ಕಥೆಯನ್ನು ಒಳಗೊಂಡಿದೆ. ಬೆಳಗಾವಿ, ಕುಂದಾಪುರ, ಚಾಮರಾಜನಗರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಅಕ್ಟೋಬರ್ 27ರಂದು ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ.

ನಾಯಕ ರಂಜನ್ ಛತ್ರಪತಿಗೆ ಚಿರಶ್ರೀ ಅಂಚನ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ಪ್ರಮೋದ್ ಶೆಟ್ಟಿ, ಎಂ.ಕೆ.ಮಠ, ರಘು ಪಾಂಡೇಶ್ವರ ಮೊದಲಾದವರಿದ್ದಾರೆ. ರಾಕಿ ಸೋನು ಹಾಗೂ ನಕುಲ್ ಅಭಯಂಕರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

### ಹೊರಬಂತು 'ಕ್ಲಾಂತ' ಟೀಸರ್

**ನಟಿ ಸಂಗೀತ ಭಟ್** ಮುಖ್ಯಭೂಮಿಕೆಯಲ್ಲಿರುವ 'ಕ್ಲಾಂತ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ 'ರಂಗನ್ ಸ್ಟೈಲ್' ಸೇರಿದಂತೆ ಕೆಲ ಚಿತ್ರಗಳನ್ನು ನಿರ್ದೇಶಿಸಿರುವ ವೈಭವ್ ಪ್ರಶಾಂತ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಇದು. ದಟ್ಟ ಅರಣ್ಯಕ್ಕೆ ತೆರಳುವ ಇಬ್ಬರು ಪ್ರೇಮಿಗಳ ಮೇಲೆ ತಂಡವೊಂದು ದಾಳಿ ನಡೆಸುತ್ತದೆ. ಈ ಜೋಡಿ ಅವರಿಂದ ಹೇಗೆ ತಪ್ಪಿಕೊಂಡು ಬರುತ್ತದೆ ಎಂಬುದೇ ಕಥೆ. ಕುಕ್ಕೆ ಸುಬ್ರಹ್ಮಣ್ಯ , ಗುಂಡ್ಯ, ಕಳಸ ಸುತ್ತ ಮುತ್ತ ಕಾಡಿನಲ್ಲಿ ಚಿತ್ರೀಕರಣ ನಡೆಸಲಾಗಿದೆ' ಎಂದರು ವೈಭವ್ ಪ್ರಶಾಂತ್.

ಎಂ ವಿಘ್ನೇಶ್ ನಾಯಕನಾಗಿದ್ದು, ಶೋಭರಾಜ್, ವೀಣಾ ಸುಂದರ್ , ಕಾಮಿಡಿ ಕಿಲಾಡಿ ದೀಪಿಕಾ ಮುಂತಾದವರಿದ್ದಾರೆ. ಎಸ್. ಪಿ. ಚಂದ್ರಕಾಂತ್ ಸಂಗೀತ, ಪಿಆರ್ ಸೌಂದರ್ ರಾಜ್ ಸಂಕಲನ, ಮೋಹನ್ ಲೋಕನಾಥ್ ಛಾಯಾಗ್ರಹಣ ಚಿತ್ರಕ್ಕಿದೆ. ಉದಯ್ ಅಮ್ಮಣ್ಣಾಯ ಬಂಡವಾಳ ಹೂಡಿದ್ದಾರೆ.



ಎಂ ವಿಘ್ನೇಶ್, ಸಂಗೀತ ಭಟ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಕೆಂಪಾದ ವಾತಾವರಣ.** ಅಲ್ಲಲ್ಲಿ ಪಟಾಕಿ ಸಿಡಿದಂತೆ ಸಿಡಿಯುವ ದೃಶ್ಯಗಳನ್ನು ಕಟ್ಟಡವೊಂದರಿಂದ ಚಿತ್ರೀಕರಿಸಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಇದು ಇಂದಿನ ಗಾಜಾದ ರಾತ್ರಿ. ಸಾಮೂಹಿಕ ಶಿಕ್ಷೆ. ಭಾರತದ ಕಡೆಯಿಂದ ದೀಪಾವಳಿಯ ಶುಭಾಶಯಗಳು' ಎನ್ನುವಂಥ ಪೋಸ್ಟ್‌ಗಳು ವಿಡಿಯೊದೊಂದಿಗೆ ಹಂಚಿಕೆಯಾಗುತ್ತಿವೆ. ಜೊತೆಗೆ, 'ಉಕ್ರೇನ್‌ನ ಕೀವ್ ಮೇಲೂ ರಷ್ಯಾ ಇದೇ ರೀತಿ ದಾಳಿ ಮಾಡಿತ್ತು. ಆಗ ಅದನ್ನು ನರಮೇಧ ಎನ್ನಲಾಗಿತ್ತು. ಆದರೆ, ಗಾಜಾದಲ್ಲಿ ಆಗುತ್ತಿದ್ದರೆ ಮಾತ್ರ ಯಾರು ಏನೂ ಹೇಳುತ್ತಿಲ್ಲ' ಎಂದೂ ಪೋಸ್ಟ್ ಹಾಕಲಾಗಿದೆ. ಆದರೆ, ಇವು ಇಸ್ರೇಲ್ ಪ್ರತಿದಾಳಿಯ ದೃಶ್ಯಗಳಲ್ಲ.

**ಇದೇ ವರ್ಷದ** ಸೆಪ್ಟೆಂಬರ್‌ನಲ್ಲಿ ಅಲ್ಜೀರಿಯಾದಲ್ಲಿರುವ ಎಂ.ಜಿ. ಅಲ್ಜರ್ ಫುಟ್‌ಬಾಲ್ ಕ್ಲಬ್‌ನ 102ನೇ ಸಂಸ್ಥಾಪನಾ ದಿನಾಚರಣೆ ನಡೆಯಿತು. ಈ ವೇಳೆ ಈ ಕ್ಲಬ್‌ನ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದ್ದರು. ಈ ವಿಡಿಯೊಗಳನ್ನು 'ಎನ್‌ಎಎಸ್ ಇನ್ಫೊ (ಅಲ್ಜೀರಿಯಾ)' ಹಾಗೂ 'ವಿ ಲವ್ ಅಲ್ಜೀರಿಯನ್ ಫುಟ್‌ಬಾಲ್' ಎನ್ನುವ 'ಎಕ್ಸ್' ಖಾತೆ ಹಂಚಿಕೊಂಡಿದೆ. ಗಾಜಾದ್ದು ಎನ್ನಲಾಗುತ್ತಿರುವ ವಿಡಿಯೊದ ಜಿಯೊ ಲೊಕೇಷನ್ ಕೂಡ ಅಲ್ಜೀರಿಯಾವನ್ನೇ ತೋರಿಸುತ್ತಿದೆ. ಹಾಗಾಗಿ, ಇದು ಗಾಜಾ ಮೇಲೆ ಇಸ್ರೇಲ್ ನಡೆಸಿದ ಪ್ರತಿದಾಳಿಯ ದೃಶ್ಯಗಳಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ನುಡಿ ಬೆಳಗು

### ಪ್ರೀತಿಯನ್ನು ಕರಗಿಸಿದ ಯುದ್ಧದ ಉನ್ಮಾದ



ಪ್ರೊ.ಎಂ. ಕೃಷ್ಣೇಗೌಡ

**ಆಗ ಆ ಯುವಕನ** ವಯಸ್ಸು 25 ವರ್ಷ. ಎತ್ತರ ನಿಲುವಿನ ಸುರಸುಂದರಾಂಗ. ಭಾರತದ ಅತ್ಯಂತ ಸಿರಿವಂತ ಉದ್ಯಮಿ ಕುಟುಂಬದ ಹುಡುಗ. ಅಮೆರಿಕದ ಲಾಸ್ ಏಂಜಲೀಸ್‌ನ ಒಂದು ಪ್ರಖ್ಯಾತ ವಾಸ್ತುಶಿಲ್ಪ ಸಂಸ್ಥೆಯ ಉದ್ಯೋಗಿ. ಆ ವಯಸ್ಸು, ವಾತಾವರಣ ಎಲ್ಲವೂ ಆ ಯುವಕನನ್ನು ಪ್ರೀತಿಯಲ್ಲಿ ಬೀಳಿಸಲು ಪೂರಕವಾಗಿದ್ದವು.

ಅಹ್! ಈವರೆಗೆ ಎಲ್ಲಿದ್ದಳೋ ಅವಳು ಆ ಬಿಳಿತೊಗಲಿನ ಗುಳಿಗೆನ್ನೆಯ ಅಮೆರಿಕನ್ ಅಪ್ಸರೆ. ಆ ಅಪ್ಸರೆ ಮತ್ತು ಈ ಯುವಕನ ಕಣ್ಣುಗಳು ಭೇಟಿಯಾದವು. ಮನಸ್ಸಿನ ಆಸೆ ಬಾಯಿಗೆ ಬಂತು. ಅವರು ಪ್ರೇಮಿಗಳಾದರು.

ಯುವಕ ತನ್ನ ಪ್ರೀತಿಯ ಬಗ್ಗೆ ಮನೆಯಲ್ಲಿ ಮಾತಾಡಿದ. ಮನೆಯವರೂ ಒಪ್ಪಿದರು. ಹುಡುಗಿಯ ಮನೆಯವರೂ ಒಪ್ಪಿದ್ದರು. ಎಲ್ಲವೂ ಸುಖಾಂತವಾಗಿ 'ಶುಭಂ' ಎಂದು ಕತೆ ಮುಗಿಯಬೇಕಾಗಿತ್ತು. ಆದರೆ...

ಈ ಕಡೆ ಭಾರತ– ಚೀನಾ ಯುದ್ಧ ಆರಂಭವಾಯಿತು. ಯುದ್ಧಕ್ಕೆ ಬಿದ್ದಿರುವ ದೇಶಕ್ಕೆ ಹೆಣ್ಣು ಕೊಡಲಾಗುವುದಿಲ್ಲ. ಹುಡುಗ ಅಮೆರಿಕದಲ್ಲೇ ಇರುವುದಾದರೆ ಮಾತ್ರ ಮದುವೆ ಎಂದರು ಹುಡುಗಿಯ ಮನೆಯವರು. ಹುಡುಗನಿಗೆ ಅಮೆರಿಕದಲ್ಲೇ ಉಳಿಯಲು ಬಿಲ್ ಕುಲ್ ಇಷ್ಟವಿಲ್ಲ. ಅದಕ್ಕವನೂ ಒಪ್ಪಲಿಲ್ಲ. ಮದುವೆಯ ಪ್ರಸ್ತಾಪ ಮುರಿದು ಬಿತ್ತು. ಆಮೇಲೆ ಹುಡುಗ ಭಾರತಕ್ಕೆ ಮರಳಿಬಿಟ್ಟ.

ಯುದ್ಧದ ಉರಿಗೆ ಅದೊಂದು ಮಧುರ ಪ್ರೇಮ ಉರಿದು ಬಿತ್ತು.

ಅತ್ತ ಅಮೆರಿಕದಲ್ಲಿ ಆ ಅಪ್ಸರೆ ಮತ್ತೊಂದು ಮದುವೆ ಮಾಡಿಕೊಂಡು ಹಾಯಾದಳು. ಇತ್ತ ಭಾರತದಲ್ಲಿ ಆ ಯುವಕ ಮದುವೆಯ ಆಲೋಚನೆ ಬಿಟ್ಟು ಅವಿವಾಹಿತನಾಗೇ ಉಳಿದುಬಿಟ್ಟ. ಅತ್ಯಂತ ಶ್ರದ್ಧೆ ಮತ್ತು ಸಮರ್ಪಣಾ ಭಾವದಿಂದ, ತನ್ನ ಪೂರ್ವಿಕರ ಉದ್ಯಮ ಸಾಮ್ರಾಜ್ಯವನ್ನು ದಿಗಂತವ್ಯಾಪಕವಾಗಿ ವಿಸ್ತರಿಸಿದ. ಆ ಯುವಕ ಬೇರಾರೋ ಅಲ್ಲ. ಭಾರತೀಯ ಕೈಗಾರಿಕೋದ್ಯಮದ ಸೀಮಾಪುರುಷ ಪದ್ಮವಿಭೂಷಣ ರತನ್ ಜೀ ಟಾಟಾ.

ವಾಸ್ತವವಾಗಿ ನಾನು ಹೇಳಹೊರಟಿದ್ದು ರತನ್ ಜೀ ಟಾಟಾ ಅವರ ಪ್ರೇಮದ ಕತೆಯನ್ನಲ್ಲ. ಬದಲಾಗಿ ಯುದ್ಧದ ಕ್ರೌರ್ಯವನ್ನು, ಅದರ ಉನ್ಮಾದವನ್ನು. ಮೊನ್ನೆ ಇಸ್ರೇಲ್- ಪ್ಯಾಲೆಸ್ಟೀನ್ ಯುದ್ಧದಲ್ಲಿ ಈ ಯುದ್ಧೋನ್ಮಾದಿ ಹುಚ್ಚರು ನಲವತ್ತು ಹಸುಳೆಗಳ ತಲೆ ಕಡಿದಿದ್ದಾರೆ. ಯುದ್ಧವೆನ್ನುವುದು ಇದಕ್ಕಿಂತ ಭೀಭತ್ಸ ಕ್ರೂರವಾಗಿರುವುದು ಸಾಧ್ಯವಿಲ್ಲ. ಮನುಷ್ಯನ ಅವಿವೇಕ, ಸೇಡಿನ ಉರಿ ಇಲ್ಲಿಗೆ ತಲುಪಬಹುದೆಂಬುದನ್ನು ಮನುಷ್ಯರೇ ಊಹಿಸಿರಲಿಲ್ಲ. ಇಷ್ಟಾಗುವುದಾದರೆ ಇನ್ನು ಆ ಪ್ರೇಮ ಅದ್ಯಾವ ಲೆಕ್ಕ ಈ ಯುದ್ಧರಾಕ್ಷಸನಿಗೆ.

ಆ ಹಸುಳೆಗಳ ಆಕ್ರಂದನ ಜಗತ್ತನ್ನು ಆಳುತ್ತಿರುವ ಕಿವಿಗಳಿಗೆ, ಮನಸ್ಸುಗಳಿಗೆ ಕೇಳಬಹುದಾ? ಬಹುಶಃ ಇಲ್ಲ. ಯಾಕೆಂದರೆ ಅವರೆಲ್ಲರೂ ಅವರವರ ದೇಶಗಳಿಗಾಗುವ ಲಾಭನಷ್ಟಗಳ ಲೆಕ್ಕಾಚಾರದಲ್ಲಿದ್ದಾರೆ. ಉರಿಯುತ್ತಿರುವ ಊರಿನಲ್ಲಿ ಪತಂಗಗಳ ಹಾರಾಟ ನಡೆಯುತ್ತಿದೆ.

ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ತನ್ನ ಕುಲವನ್ನೇ ಅಳಿಸಿಬಿಡುವಂಥ ಸಿಡಿತಲೆಗಳನ್ನು ಸೃಷ್ಟಿಸಿದ್ದಾನೆ. ಅಣುಬಾಂಬುಗಳ ಕಾಳುಗಳನ್ನು ಬಿತ್ತಿ ಬೆಳೆದಿದ್ದಾನೆ. ಮುಂದೇನು? ಹೆಳವನ ಹೆಗಲ ಮೇಲೆ ಕುರುಡ ಕೂತು ದಾರಿ ತೋರಿಸುತ್ತಿದ್ದಾನೆ. ಎಲ್ಲಿಗೆ ಹೋಗುವೆವೋ? ಎಲ್ಲಿಗಾದರೂ ಹೋಗುವೆವೋ ಅಥವ...

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 13, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಕೃಷ್ಣ ಚತುರ್ದಶಿ ಗಂ. 21-51 ನಕ್ಷತ್ರ: ಉತ್ತರಫಲ್ಗುನಿ ಗಂ. 14-11 ಯೋಗ: ಬ್ರಹ್ಮ ಗಂ 10-05 ಕರಣ: ವಿಷ್ಟಿ ಗಂ. 08-56, ಕನ್ಯಾ ಮಾಸದ 26 ನೇ ದಿನ, ಮಳೆನಕ್ಷತ್ರ: ಚಿತ್ರ 1. ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-24 ಸೂರ್ಯಾಸ್ತ : 06-10 ಮುಸ್ಲಿಂ ದಿನಾಂಕ : 27 ರಬಿಉಲ್ಲಾವಲ್ ದಿನ ವಿಶೇಷ : ವಿಷ ಶಸ್ತ್ರ ಚತುರ್ದಶಿ ಅದೃಷ್ಟ ಸಂಖ್ಯೆ : 8, 10

**ಮೇಷ:** ಕಾರ್ಯದ ಒತ್ತಡದಿಂದ ಭೋಜನದ ಸಮಯದಲ್ಲಿ ವ್ಯತ್ಯಯ ಸಂಭವಿಸಬಹುದು. ಬರವಣಿಗೆ , ಮುದ್ರಣ ಕೆಲಸ ಮಾಡುವವರಿಗೆ ವರಮಾನ ತರಲಿದೆ. ಕುಟುಂಬವರ್ಗದವರ ಆರೋಗ್ಯ ಸುಧಾರಿಸುವುದು.

**ವೃಷಭ:** ಹೊಸ ವ್ಯಾಪಾರ ಆರಂಭಿಸುವ ಬಗ್ಗೆ ತಿಳಿದವರೊಂದಿಗೆ ಮತ್ತು ಮನೆಯವರೊಂದಿಗೆ ಚರ್ಚಿಸಿದ ನಂತರದಲ್ಲಿ ತೀರ್ಮಾನಕ್ಕೆ ಬರುವುದು ಉತ್ತಮ. ಆದಾಯ ಸಂಬಂಧಿತ ಸಮಸ್ಯೆ ಎದುರಾಗಬಹುದು.

**ಮಿಥುನ:** ಇನ್ನೊಬ್ಬರ ಮಾತುಗಳನ್ನು ನಂಬಿ ಯಾವುದೇ ದಾಖಲೆಗಳಿಲ್ಲದೆ ವ್ಯವಹಾರ ಮಾಡುವುದು ಮೂರ್ಖತನದ ಪ್ರದರ್ಶನದಂತೆ ಆಗುವುದು. ಮಹಾಗಣಪತಿ ಆರಾಧನೆಯಿಂದ ಮನೋಕಾಮನೆ ಈಡೇರುವುದು.

**ಕರ್ಕಾಟಕ:** ಛಾಯಾಗ್ರಾಹಕರಿಗೆ ಅಥವಾ ಚಿತ್ರೀಕರಣದವರಿಗೆ ವೃತ್ತಿಯಲ್ಲಿ ಅನುಭವದ ಕೊರತೆ ಕಾಣುವುದು. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡಿ. ಹಿರಿಯರ ಮಾರ್ಗದರ್ಶನ ಪಡೆಯುವುದು ಉತ್ತಮ.

**ಸಿಂಹ:** ಅದೃಷ್ಟದ ದಿನವೆನಿಸಲಿದೆ. ಸರ್ಕಾರಿ ಗುತ್ತಿಗೆ ಕೆಲಸಗಳು ನಿಮ್ಮದಾಗಲಿದೆ. ಅಪೇಕ್ಷಿತರಿಗೆ ಸಾಧಾರಣವಾದ ಉದ್ಯೋಗ ದೊರೆಯಲಿದೆ. ಆ ಕೆಲಸ ಅಗೌರವವೆಂದು ಭಾವಿಸಿ ಅದನ್ನು ತಿರಸ್ಕರಿಸುವುದು ಸರಿಯಲ್ಲ.

**ಕನ್ಯಾ:** ಇನ್ನೊಬ್ಬರ ಹಣ, ವಸ್ತುವನ್ನು ನೀವು ಇಟ್ಟುಕೊಳ್ಳುವುದು ನಿಮ್ಮಿಬ್ಬರಲ್ಲಿರುವ ವಿಶ್ವಾಸವನ್ನು ಹಾಳುಮಾಡಬಹುದು. ಕೇವಲ ಹಣ ಸಂಪಾದನೆಯಲ್ಲ. ಮನುಷ್ಯತ್ವದ ಬಗ್ಗೆಯೂ ಆಲೋಚಿಸುವ ಮನಸ್ಥಿತಿ ಇರಲಿ.

**ತುಲಾ:** ವಿರುದ್ಧದ ಆರೋಪಗಳು ನಿರಾಧಾರ ಎಂದು ಸಾಬೀತುಗೊಂಡು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಬಂಧನದ ಭೀತಿಯಿಂದ ಹೊರಬಂದಂತೆ ಆಗುವುದು. ದಲ್ಲಾಳಿಗಳಿಗೆ ಈ ದಿನ ಅಧಿಕ ಲಾಭ ಆಗುವುದು.

**ವೃಶ್ಚಿಕ:** ದೂರ ಪ್ರಯಾಣದ ಅನಿವಾರ್ಯವಿರುವವರು ರಾಹುಕಾಲದ ನಂತರ ಪ್ರಯಾಣ ಆರಂಭಿಸಿ. ನಿಮ್ಮಂತೆ ಇತರರೂ ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದ ಗೌರವವನ್ನು ಪಡೆದುಕೊಳ್ಳುವಿರಿ.

**ಧನು:** ಕೆಲಸದ ಮೇಲಿನ ಹೆಚ್ಚಿನ ತರಬೇತಿ ಪಡೆದುಕೊಳ್ಳುವುದು ಅನಿವಾರ್ಯವಾಗಲಿದೆ. ಕೆಲಸ ಬದಲಿಸುವ ಯೋಜನೆಯಿಂದ ಹೊರಬರುವುದು ಉತ್ತಮ. ಯೋಜನೆಗೆ, ಮಾತುಗಳಿಗೆ ಎಲ್ಲರಿಂದಲೂ ಮನ್ನಣೆ ದೊರೆಯಲಿದೆ.

**ಮಕರ:** ಸಂತಾನ ಅಪೇಕ್ಷಿಗಳಿಗೆ ಶುಭ ಸಮಾಚಾರ ಕೇಳುವಂತೆ ಆಗುವುದು. ಜೀವನದಲ್ಲಿ ಸಾಂಸಾರಿಕವಾಗಿ ನೆಲೆ ಕಂಡ ಸಂತೃಪ್ತಿ ಭಾವ ನಿಮ್ಮಲ್ಲಿ ಮೂಡಲಿದೆ. ವೃತ್ತಿಯಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ.

**ಕುಂಭ:** ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಉಂಟಾಗುತ್ತದೆ. ಸಹಚರರಲ್ಲಿ ಅಥವಾ ಬಾಂಧವರಲ್ಲಿ ವಿಶ್ವಾಸ ಹೆಚ್ಚಿಸುವ ಮಾತುಗಳನ್ನು ಆಡುವುದು ಒಳ್ಳೆಯದು. ಸಂಜೆಯೊಳಗೆ ಅಚ್ಚರಿಯ ಸುದ್ದಿ ಕೇಳಲಿರುವಿರಿ.

**ಮೀನ:** ಸಂಸಾರದಲ್ಲಿ ಅನುಮಾನ ಪಡುವುದು ಅಥವಾ ಹಲವು ವಿಚಾರಗಳನ್ನು ಮುಚ್ಚಿಡುವ ಕೆಲಸ ಮಾಡುವುದು ಸರಿಯಲ್ಲ. ಟೀಕೆಗಳಿಗೆ ಕಿವಿಯೊಡ್ಡಬೇಡಿ, ಪ್ರಾಮಾಣಿಕತೆಯಿಂದ ಕಾರ್ಯವನ್ನು ಮುಂದುವರೆಸಿ.

## ಪದಬಂಧ 5469


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಆಹಾರ ಸೇವಿಸುತ್ತಿರುವ ಬ್ರಾಹ್ಮಣ! (3)
4.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)
6.ಇದು ಜಗತ್ತಿಗೆ ಸಂಬಂಧಿಸಿದ್ದು (4)
8.ಹೇಗೆ ನೋಡಿದರೂ ಇದು ಹೊಸದು (3)
11.ಬಟ್ಟೆ ಮೇಲೆ ಬಣ್ಣದ ದಾರಗಳಿಂದ ಮಾಡಿದ ಹೆಣಿಗೆ (3)
13.ವೃಕ್ಷದ ಬಳಿಯಿರುವ ಪಚ್ಚೆ (4)
17.ಕೊಬ್ಬಿದ ಆನೆಯಿದು (4)
18.ಲೀಲಾಜಾಲವಾಗಿ ನಡೆದ ಏಲಂ (3)

**ಮೇಲಿಂದ ಕೆಳಕ್ಕೆ**

1.ಆರೈಕೆ ಮಾಡಿಸಿಕೊಂಡವನ ಅಪೇಕ್ಷೆ (3)
2.ವನದಲ್ಲಿಯೇ ಕನ್ನಡಿಗನ ಇನ್‌ಕಮ್! (4)
3.ಸತಿಯು ಕೊಟ್ಟಿರುವ ಒಪ್ಪಿಗೆ (3)
5.ಜಾವದ ಹೊತ್ತಿನಲ್ಲೇ ತೆಗೆದುಹಾಕುವಿಕೆ! (2)
7.ಕಣ್ಣಿಗೆ ಮೆಚ್ಚಾದುದು (3)
9.ಸೊಂಟದಿಂದ ಪ್ರಾರಂಭವಾದ ಕಂಪನ (3)
10.ಹುಟ್ಟುವ ಸ್ಥಳ (3)
12.ಎಳ್ಳು ನೀರು ಬಿಡುವಿಕೆ (4)
14.ಈತ ಕಾಪಾಡುವವನು (3)
15.ಮತ ಹಾಕುವಾಗ ಆವರಿಸಿರುವ ಕತ್ತಲು (2)
16.ಧಾನ್ಯ ಶೇಖರಿಸುವ ನೆಲಮಾಳಿಗೆ (3)



### 5468ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅಜಗಜಾಂತರ 4.ವಿದೂಷಕ
5.ಗಗನ 9.ಮರಣಕಾಲ
13.ನವಿರು 14.ಹಸುಗೂಸು
15.ಮನೋವಿಶ್ಲೇಷಣೆ

**ಮೇಲಿಂದ ಕೆಳಕ್ಕೆ:**
1.ಅಜಗರ 2.ರವಿಸಾ
3.ಮಕರಂದ 6.ನಡುಮನೆ
7.ಇಣಚಿ 8.ಬಲಹೀನ
10.ಹಣಾಹಣಿ 11.ಉರುಟಣೆ
12.ಕುಸುಮ

## ಸುಡೊಕು 5855

| | | | | | | | | |
|---|---|---|---|---|---|---|---|---|
| | 4 | | | | 8 | 2 | 7 | |
| | 5 | | 4 | 9 | | | | 3 |
| | | 8 | | | 2 | | 5 | |
| | 3 | | | 4 | | | 8 | |
| | | 1 | 7 | | 5 | 6 | 2 | |
| | 6 | | | 1 | | | | |
| 6 | | | 5 | 2 | | 1 | | 7 |
| | 1 | | | | 4 | | | |
| 9 | | 5 | | 7 | | 3 | | 8 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5854 ಸುಡೊಕು

| | | | | | | | | |
|---|---|---|---|---|---|---|---|---|
| 2 | 5 | 4 | 8 | 7 | 6 | 1 | 3 | 9 |
| 7 | 9 | 1 | 2 | 5 | 3 | 6 | 4 | 8 |
| 8 | 3 | 6 | 1 | 4 | 9 | 7 | 2 | 5 |
| 4 | 7 | 3 | 5 | 1 | 2 | 8 | 9 | 6 |
| 6 | 1 | 5 | 9 | 8 | 4 | 3 | 7 | 2 |
| 9 | 2 | 8 | 6 | 3 | 7 | 4 | 5 | 1 |
| 1 | 4 | 9 | 3 | 6 | 5 | 2 | 8 | 7 |
| 3 | 6 | 2 | 7 | 9 | 8 | 5 | 1 | 4 |
| 5 | 8 | 7 | 4 | 2 | 1 | 9 | 6 | 3 |

### ಬಿಜೆಪಿ ಮಾಜಿ ಶಾಸಕ ರಾಮಪ್ಪ ಲಮಾಣಿ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಹೇಳಿಕೆ

# ‘ಕಾಂಗ್ರೆಸ್ ಕಡೆಗೆ ಅನ್ಯಪಕ್ಷಗಳ 42 ನಾಯಕರು’

ಪ್ರಜಾವಾಣಿ ವಾರ್ತೆ


ಡಿ.ಕೆ. ಶಿವಕುಮಾರ್

**ಬೆಂಗಳೂರು:** ‘ಕಾಂಗ್ರೆಸ್ ಸೇರಲು ಕಾಯುತ್ತಿರುವ ವಿವಿಧ ಪಕ್ಷಗಳ 42ಕ್ಕೂ ಹೆಚ್ಚು ಮುಖಂಡರ ಅರ್ಜಿಗಳು ನನ್ನ ಮುಂದಿವೆ. ಆ ಮುಖಂಡರ ಹೆಸರು ಈಗ ಬಹಿರಂಗಪಡಿಸುವುದಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶಿರಹಟ್ಟಿಯ ಬಿಜೆಪಿ ಮಾಜಿ ಶಾಸಕ ರಾಮಪ್ಪ ಲಮಾಣಿ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್‌ಗೆ ಬರಮಾಡಿಕೊಂಡ ಬಳಿಕ ಮಾತನಾಡಿದ ಅವರು, ‘ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲು ಉತ್ತರ ಮತ್ತು ದಕ್ಷಿಣ ಕರ್ನಾಟಕದ ನಾಯಕರ ದೊಡ್ಡ ಪಟ್ಟಿಯನ್ನು ತಂದು ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ನನ್ನ ಜೊತೆ ಚರ್ಚಿಸಿದ್ದಾರೆ. ಪಕ್ಷದ ಸ್ಥಳೀಯ ನಾಯಕರ ಜೊತೆ ಚರ್ಚಿಸಿದ ನಂತರ ಅನ್ಯ ಪಕ್ಷಗಳ ನಾಯಕರುಗಳನ್ನು ಸೇರಿಸಿಕೊಳ್ಳುವ ಪ್ರಕ್ರಿಯೆ ನಡೆಯಲಿದೆ’ ಎಂದರು.

‘ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ನಾವು ‘ಇಂಡಿಯಾ’ದಲ್ಲಿ (ವಿರೋಧ ಪಕ್ಷಗಳ ಮೈತ್ರಿ ಕೂಟ) ಗುರುತಿಸಿಕೊಂಡಿದ್ದು, ನಿಮ್ಮ ಜೊತೆ ಕೈ ಜೋಡಿಸುತ್ತೇವೆ ಎಂದಿದ್ದಾರೆ’ ಎಂದರು.

ಕಾಂಗ್ರೆಸ್ ಸೇರಿದ ಬಳಿಕ ಮಾತನಾಡಿದ ರಾಮಪ್ಪ ಲಮಾಣಿ, ‘ಬಿಜೆಪಿಯಲ್ಲಿ ಆಗಿರುವ ನೋವಿನಿಂದ ಆ ಪಕ್ಷ ತೊರೆದಿದ್ದೇನೆ. ಕಾಂಗ್ರೆಸ್ ಪಕ್ಷದ ನಾಯಕರು ಯಾರನ್ನು ಅಭ್ಯರ್ಥಿಯನ್ನಾಗಿ ಮಾಡುತ್ತಾರೋ ಅವರನ್ನು ಗೆಲ್ಲಿಸಲು ಶ್ರಮಿಸುತ್ತೇನೆ’ ಎಂದರು.

‘ಉತ್ತರ ಕರ್ನಾಟಕ ಭಾಗದ ಅನೇಕ ನಾಯಕರಿಗೆ ಜಗದೀಶ ಶೆಟ್ಟರ್ ಮತ್ತು ಡಿ.ಕೆ. ಶಿವಕುಮಾರ್ ಅವರು ಗಾಳ ಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಅನೇಕರು ಕಾಂಗ್ರೆಸ್ ಸೇರಲಿದ್ದಾರೆ. ಮುಂದಿನ 10 ವರ್ಷಗಳ ಕಾಲ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಮಾಡಲಿದೆ’ ಎಂದರು.

ಸಚಿವ ಎಚ್‌.ಕೆ. ಪಾಟೀಲ, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಜಗದೀಶ ಶೆಟ್ಟರ್, ಶಾಸಕರಾದ ಲಕ್ಷ್ಮಣ್ ಸವದಿ, ವಿನಯ್ ಕುಲಕರ್ಣಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಬಿ.ಎನ್. ಚಂದ್ರಪ್ಪ ಇದ್ದರು.

## ‘ಬಿಜೆಪಿ ತಂಡದಿಂದ ಕಾಂಗ್ರೆಸ್ ಶಾಸಕರ ಭೇಟಿ’

‘ಬಿಜೆಪಿ ತಂಡವೊಂದು ಸಿನಿಮೀಯ ರೀತಿಯಲ್ಲಿ ನಮ್ಮ ಪಕ್ಷದ ಶಾಸಕರು, ನಾಯಕರನ್ನು ಭೇಟಿ ಮಾಡುತ್ತಿದೆ. ಈ ಬಗ್ಗೆ ನಮ್ಮ ಪಕ್ಷದ ಮುಖಂಡರು, ಶಾಸಕರು ಎಲ್ಲ ಮಾಹಿತಿಗಳನ್ನು ನೀಡುತ್ತಿದ್ದಾರೆ. ಅದನ್ನು ಈಗ ಬಹಿರಂಗಪಡಿಸುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಕಾಂಗ್ರೆಸ್ ಸರ್ಕಾರ ಪತನವಾಗಲಿದೆ’ ಎಂದು ಜೆಡಿಎಸ್, ಬಿಜೆಪಿ ನಾಯಕರು ಹೇಳಿಕೊಂಡು ಓಡಾಡುತ್ತಿದ್ದಾರೆ. ಈ ಮಾತನ್ನು ಕಾಂಗ್ರೆಸ್ ನಾಯಕರು ಅಲ್ಲಗಳೆದಿದ್ದು, ‘ಅದು ಭ್ರಮೆ’ ಎಂದೂ ಹಂಗಿಸಿದ್ದಾರೆ.

ಈ ಬೆಳವಣಿಗೆಗಳ ಮಧ್ಯೆಯೇ, ಬಿಜೆಪಿ ತಂಡದ ಸಿನಿಮೀಯ ಕಾರ್ಯಾಚರಣೆ ಬಗ್ಗೆ ಶಿವಕುಮಾರ್ ಹೇಳಿರುವುದು ನಾನಾ ರೀತಿಯ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್ ಶಾಸಕರನ್ನು ಸೆಳೆಯಲು ಯತ್ನಿಸುವ ಮೂಲಕ ಸರ್ಕಾರವನ್ನು ಅಭದ್ರಗೊಳಿಸುವ ಹುನ್ನಾರ ತೆರೆಮರೆಯಲ್ಲಿ ನಡೆಯುತ್ತಿದೆ ಎಂಬುದನ್ನು ಕೆಪಿಸಿಸಿ ಅಧ್ಯಕ್ಷರು ಸೂಚ್ಯವಾಗಿ ಹೇಳಿದ್ದಾರೆ ಎಂಬ ಮಾತುಗಳು ಕಾಂಗ್ರೆಸ್ ವಲಯದಿಂದ ಬಂದಿವೆ.

## ‘ಜೆಡಿಎಸ್‌ನಿಂದ ಕುಮಾರಸ್ವಾಮಿ ಅಮಾನತು ಮಾಡಿ’


ವಿಷ್ಣುವರ್ಧನ

**ಬೀದರ್:** ‘ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರ ಗಮನಕ್ಕೆ ತರದೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವುದು ಖಂಡನಾರ್ಹ. ಈ ನಿರ್ಧಾರ ಕೈಗೊಂಡಿರುವ ಶಾಸಕ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಪಕ್ಷದಲ್ಲಿ ಯಾವುದೇ ಸ್ಥಾನಮಾನ ಇಲ್ಲ. ಕೂಡಲೇ ಅವರನ್ನು ಪಕ್ಷದಿಂದ ಅಮಾನತು ಮಾಡಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿಷ್ಣುವರ್ಧನ ವಾಲದೊಡ್ಡಿ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವುದು ಬೇಡ ಎಂದು ಕುಮಾರಸ್ವಾಮಿ ಅವರಿಗೆ ಹೇಳಿದ್ದರೂ ರಾಜ್ಯ ಸಮಿತಿ ಗಮನಕ್ಕೆ ತಾರದೆ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ಅವರ ನಿರ್ಧಾರ ತಪ್ಪು. ಕೂಡಲೇ ಅವರನ್ನು ಪಕ್ಷದಿಂದ ಅಮಾನತುಗೊಳಿಸಬೇಕೆಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರಿಗೆ ಪತ್ರ ಬರೆದು ಒತ್ತಾಯಿಸಿರುವೆ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ದಲಿತರ ಮೇಲೆ ಏನೆಲ್ಲ ದೌರ್ಜನ್ಯಗಳು ನಡೆದವು ಎಂಬುದು ಎಲ್ಲರಿಗೂ ಗೊತ್ತಿದೆ. ಹೀಗಾಗಿಯೇ ಅವರು ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡರು. ಅಲ್ಪಸಂಖ್ಯಾತರು, ದಲಿತರ ವಿರೋಧಿಯಾಗಿರುವ ಬಿಜೆಪಿ ಜನರನ್ನು ಜನರಂತೆ ನೋಡುವುದಿಲ್ಲ. ಅಂತಹ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡಿರುವುದು ಎಷ್ಟರಮಟ್ಟಿಗೆ ಸರಿ. ಪ್ರಾದೇಶಿಕ ಪಕ್ಷ ಎಂಬ ಕಾರಣಕ್ಕೆ ಜೆಡಿಎಸ್ ಸಂಘಟನೆಗೆ ಶ್ರಮಿಸಲಾಗುತ್ತಿದೆ. ಅ. 16ರಂದು ಬೆಂಗಳೂರಿನಲ್ಲಿ ರಾಜ್ಯ ಸಮಿತಿ ಸಭೆ ಕರೆಯಲಾಗಿದ್ದು, ಅಲ್ಲಿ ಅಂತಿಮ ತೀರ್ಮಾನ ಹೊರಬೀಳಲಿದೆ. ಮೈತ್ರಿ ಮುಂದುವರಿದರೆ ಸಿ.ಎಂ. ಇಬ್ರಾಹಿಂ ಕೂಡ ಜೆಡಿಎಸ್‌ನಲ್ಲಿ ಇರುವುದಿಲ್ಲ’ ಎಂದರು.

## ಮೈತ್ರಿಗೆ ವಿರೋಧ : ಜೆಡಿಎಸ್ ಸಭೆ ಕರೆದ ಸಿ.ಎಂ. ಇಬ್ರಾಹಿಂ


ಸಿ.ಎಂ.ಇಬ್ರಾಹಿಂ

**ಬೆಂಗಳೂರು:** ಬಿಜೆಪಿ-ಜೆಡಿಎಸ್ ಮೈತ್ರಿಯ ಕುರಿತು ಚರ್ಚಿಸಲು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅ.16ರಂದು ಪಕ್ಷದ ಸಮಾನಮನಸ್ಕ ನಾಯಕರು, ಕಾರ್ಯಕರ್ತರ ಸಭೆ ಕರೆದಿದ್ದಾರೆ.

ಇಲ್ಲಿನ ನಾಗವಾರ ಮುಖ್ಯರಸ್ತೆಯಲ್ಲಿರುವ ಸಿಎಂಎ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯದ ಹಾಗೂ ಹೊರರಾಜ್ಯದ ಜೆಡಿಎಸ್ ನಾಯಕರು ಭಾಗವಹಿಸಲಿದ್ದಾರೆ ಎಂದು ಇಬ್ರಾಹಿಂ ಹೇಳಿದ್ದಾರೆ.

ಜೆಡಿಎಸ್ ಜಾತ್ಯತೀತ ತತ್ವ, ಸಂವಿಧಾನದಲ್ಲಿ ನಂಬಿಕೆ ಇಟ್ಟಿದೆ. ಬಿಜೆಪಿ ಎಷ್ಟೋ ಬಾರಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿದೆ. ಅಂತಹ ಪಕ್ಷದ ಜತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌. ಡಿ.ಕುಮಾರಸ್ವಾಮಿ ಅವರು ಮೈತ್ರಿ ಮಾಡಿಕೊಂಡಿದ್ದನ್ನು ಪಕ್ಷದ ಎಲ್ಲ ಸಮುದಾಯಗಳ ನಾಯಕರು, ಕಾರ್ಯಕರ್ತರು ವಿರೋಧಿಸಿದ್ದಾರೆ. ಜೆಡಿಎಸ್ ಪಕ್ಷ ಸಂದಿಗ್ಧತೆಯಲ್ಲಿ ಇರುವಾಗ ಬಿಜೆಪಿ ಜತೆ ಮೈತ್ರಿ ಬೇಕೆ? ಬೇಡವೇ ಎನ್ನುವ ಕುರಿತು ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಲ್ಲಿದ್ದರೂ, ಮೈತ್ರಿ ಮಾತುಕತೆಯಲ್ಲೂ ಭಾಗವಹಿಸಿರಲಿಲ್ಲ. ಮೈತ್ರಿ ನಂತರ ಪಕ್ಷದ ವರಿಷ್ಠರ ಜತೆ ಅಂತರ ಕಾಯ್ದುಕೊಂಡಿದ್ದ ಇಬ್ರಾಹಿಂ ಇದೇ ಮೊದಲ ಬಾರಿ ಸಭೆ ಕರೆದಿದ್ದಾರೆ.

## ‘ನಾನೂ ಸಿಎಂ ಸ್ಥಾನದ ಆಕಾಂಕ್ಷಿ’

**ಹೊಸಪೇಟೆ (ವಿಜಯನಗರ):** ‘ಡಿ.ಕೆ.ಶಿವಕುಮಾರ್ ಅಷ್ಟೇ ಅಲ್ಲ, ನಾನು ಕೂಡ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ. ಸದ್ಯ ಐದು ವರ್ಷ ಸಿದ್ದರಾಮಯ್ಯ ಅವರೇ ಸಿಎಂ ಎಂದು ಹೈಕಮಾಂಡ್ ಹೇಳಿದೆ. ನಾಳೆ ಏನಾಗಲಿದೆ ಗೊತ್ತಿಲ್ಲ’ ಎಂದು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ ಹೇಳಿದರು.

‘ಕಾಂಗ್ರೆಸ್‌ನ 136 ಶಾಸಕರೂ ಸಹ ಮುಖ್ಯಮಂತ್ರಿ ಆಗಲು ಯೋಗ್ಯರು. ನಾನು ಏಳು ಬಾರಿ ಚುನಾವಣೆಗೆ ಸ್ಪರ್ಧಿಸಿ ಸೋಲು–ಗೆಲುವು ಕಂಡಿದ್ದೇನೆ. ಪಕ್ಷ ಅಧಿಕಾರಕ್ಕೆ ಬರಲು ಡಿ.ಕೆ. ಶಿವಕುಮಾರ್ ಅವರೂ ಮುಖ್ಯ ಕಾರಣ’ ಎಂದು ಅವರು ಗುರುವಾರ ಇಲ್ಲಿ ಮಾಧ್ಯಮದವರಿಗೆ ತಿಳಿಸಿದರು.

## ಸುದ್ದಿ 2 ನಿಮಿಷ

### ಮರಳಿ ಪಕ್ಷ ಕಟ್ಟುವಲ್ಲಿ ವಿಫಲ: ಸಂಸದ ಸದಾನಂದಗೌಡ

**ಬೆಂಗಳೂರು:** ‘ವಿಧಾನಸಭಾ ಚುನಾವಣಾ ಸೋಲಿನ ಬಳಿಕ ಪಕ್ಷವನ್ನು ಕಟ್ಟುವಲ್ಲಿ ನಾವು ವಿಫಲರಾಗಿದ್ದೇವೆ. ಪಕ್ಷದ ಕೆಲವು ನಾಯಕರು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರುತ್ತಿರುವುದೂ ನಮ್ಮ ವೈಫಲ್ಯ’ ಎಂದು ಸಂಸದ ಡಿ.ವಿ. ಸದಾನಂದಗೌಡ ಹೇಳಿದ್ದಾರೆ.

‘ಪಕ್ಷವನ್ನು ಬಿಟ್ಟು ಹೋಗುತ್ತಿರುವವರನ್ನು ಮನವೊಲಿಸಿ ಉಳಿಸಿಕೊಳ್ಳುವ ಪ್ರಯತ್ನವೂ ನಡೆಯುತ್ತಿಲ್ಲ’ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



‘ಚುನಾವಣೆ ಬಳಿಕ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಿ ಪಕ್ಷವನ್ನು ಕಟ್ಟುವ ಕೆಲಸ ಆಗಿಲ್ಲ. ಇದು ನಿಜಕ್ಕೂ ಬೇಸರದ ಸಂಗತಿ’ ಎಂದರು.

‘ರಾಜ್ಯ ಸರ್ಕಾರ ಎನ್‌ಇಪಿ ರದ್ದು ಮಾಡಿ ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ತರಲು ಹೊರಟಿರುವ ನಿರ್ಧಾರ ಶಿಕ್ಷಣ ವಲಯಕ್ಕೆ ಅಪಾಯಕಾರಿ. ಇದಕ್ಕಾಗಿ ಸರ್ಕಾರ ಆಯೋಗ ರಚನೆ ಮಾಡಿರುವ ಕ್ರಮ ಸರಿಯಲ್ಲ. ಎನ್‌ಇಪಿ ಸಮಗ್ರವಾಗಿ ಅಧ್ಯಯನ ನಡೆಸಿ ಮಾಡಿದ ನೀತಿಯಾಗಿತ್ತು. ಈಗ ತಮ್ಮ ಕಾರ್ಯಸೂಚಿಗೆ ತಕ್ಕಂತೆ ವರದಿ ಪಡೆಯಲು ಸಿದ್ಧತೆ ನಡೆಸಿದ್ದಾರೆ. ಇದು ಶಿಕ್ಷಣ ವ್ಯವಸ್ಥೆಗೆ ಮಾರಕ’ ಎಂದು ಆತಂಕ ವ್ಯಕ್ತಪಡಿಸಿದರು.

### ‘ಸಂಗಾತ’ ಕಾವ್ಯ ಸ್ಪರ್ಧೆ: ಹಸ್ತಪ್ರತಿ ಆಹ್ವಾನ

**ಗಜೇಂದ್ರಗಡ (ಗದಗ ಜಿಲ್ಲೆ):** ಸಮೀಪದ ರಾಜೂರ ಗ್ರಾಮದ ‘ಸಂಗಾತ’ ಪುಸ್ತಕ ಪ್ರಕಾಶನ ಚಿ.ಶ್ರೀನಿವಾಸರಾಜು ಕಾವ್ಯ ಸ್ಪರ್ಧೆ ಆಯೋಜಿಸಿದ್ದು, ಹಸ್ತಪ್ರತಿ ಆಹ್ವಾನಿಸಿದೆ.

45 ವರ್ಷದೊಳಗಿನ ಕವಿಗಳು ಡಿಟಿಪಿ ಮಾಡಿದ ಕವನ ಸಂಕಲನದ ಹಸ್ತಪ್ರತಿ ಕಳಿಸಬಹುದು. ಕನಿಷ್ಠ 40ಕ್ಕಿಂತ ಹೆಚ್ಚು ಕವಿತೆಗಳ ಹಸ್ತಪ್ರತಿ ಇರಬೇಕು. ಹೆಸರು ಮತ್ತು ವಿಳಾಸ ಪ್ರತ್ಯೇಕ ಪುಟದಲ್ಲಿ ನಮೂದಿಸಬೇಕು. ತೀರ್ಪುಗಾರರಿಂದ ಆಯ್ಕೆಯಾದ ಕವನ ಸಂಕಲನವನ್ನು ‘ಸಂಗಾತ ಪುಸ್ತಕ’ ಪ್ರಕಾಶನ ಪ್ರಕಟಿಸಲಿದೆ.

ಅಕ್ಷರ ಸಂಗಾತ ಸಾಹಿತ್ಯ ಮಾಸ ಪತ್ರಿಕೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ ಮತ್ತು ಪ್ರಶಸ್ತಿ ಫಲಕ ನೀಡಲಾಗುವುದು. ಹಸ್ತಪ್ರತಿಗಳನ್ನು ಅಂಚೆ ಮೂಲಕವೇ ಕಳಿಸಬೇಕು. ಅಕ್ಟೋಬರ್ 31 ಹಸ್ತಪ್ರತಿ ಕಳಿಸಲು ಕೊನೆಯ ದಿನ.

**ಹಸ್ತಪ್ರತಿ ಕಳಿಸಬೇಕಾದ ವಿಳಾಸ:** ಟಿ.ಎಸ್.ಗೊರವರ, ಸಂಪಾದಕರು, ಅಕ್ಷರ ಸಂಗಾತ ಸಾಹಿತ್ಯ ಮಾಸ ಪತ್ರಿಕೆ, ಅಂಚೆ: ರಾಜೂರ -582114, ತಾ.ಗಜೇಂದ್ರಗಡ ಜಿ.ಗದಗ ಮೊ.ಸಂ 93417 57653

## ₹2.39 ಕೋಟಿ ಮೌಲ್ಯದ ಪಟಾಕಿ ಜಪ್ತಿ

**ಕೊಪ್ಪಳ:** ಅತ್ತಿಬೆಲೆ ಪಟಾಕಿ ದುರಂತದ ಬೆನ್ನಲ್ಲೇ ಪೊಲೀಸ್ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಜಿಲ್ಲೆಯ ಹಲವು ಕಡೆ ಪಟಾಕಿ ಅಂಗಡಿ ಹಾಗೂ ಗೋದಾಮುಗಳ ಮೇಲೆ ಗುರುವಾರ ದಾಳಿ ನಡೆಸಿದ್ದಾರೆ. ನಿಯಮಬಾಹಿರವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಪಟಾಕಿಗಳನ್ನು ವಶಕ್ಕೆ ಪಡೆದುಕೊಂಡಿದ್ದು, ಇವುಗಳ ಮೌಲ್ಯ ಒಟ್ಟು ₹2.39 ಕೋಟಿ ಎಂದು ಅಂದಾಜಿಸಲಾಗಿದೆ.

ಕೊಪ್ಪಳ ತಾಲ್ಲೂಕಿನ ಕಿಡದಾಳ ಗ್ರಾಮದ ಹೊರವಲಯದ ಗೋದಾಮು ಒಂದರಲ್ಲೇ ಏಳು ಟನ್ ಪಟಾಕಿ ಪತ್ತೆಯಾಗಿದೆ. ಒಟ್ಟು 7,642 ಕೆ.ಜಿ. ಪಟಾಕಿ ವಶಕ್ಕೆ ಪಡೆಯಲಾಗಿದೆ. ಗಂಗಾವತಿ ಕುಷ್ಟಗಿ ತಾಲ್ಲೂಕಿನ ಹನುಮಸಾಗರ, ಕೊಪ್ಪಳ ತಾಲ್ಲೂಕಿನ ಇರಕಲ್ಲಗಡದಲ್ಲಿ ದಾಳಿ ನಡೆದಿದೆ.

‘ದಸರಾ ಹಾಗೂ ದೀಪಾವಳಿ ಸಮೀಪಿಸುತ್ತಿರುವ ಕಾರಣ ಜನನಿಬಿಡ ಪ್ರದೇಶದಲ್ಲಿಯೇ ಹಲವು ಅಂಗಡಿಗಳ ಮಾಲೀಕರು ಪಟಾಕಿ ಮಾರಾಟಕ್ಕೆ ಮುಂದಾಗಿದ್ದರು. ದೊಡ್ಡ ಮಟ್ಟದಲ್ಲಿ ದಾಸ್ತಾನು ಮಾಡಿದ್ದರು. ಕಡಿಮೆ ಬೆಲೆಯಲ್ಲಿ ಸಿಗುತ್ತದೆ ಎನ್ನುವ ಕಾರಣಕ್ಕೆ ಪಟಾಕಿ ಖರೀದಿ ಋತು ಆರಂಭಕ್ಕೂ ಸಾಕಷ್ಟು ಮೊದಲು ಸಗಟು ಮಾರುಕಟ್ಟೆಯಲ್ಲಿ ಖರೀದಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

# ‘ಚಾಮುಂಡಿ ಬೆಟ್ಟ ಪ್ರಾಧಿಕಾರ ಶೀಘ್ರ ರಚನೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರವನ್ನು ಶೀಘ್ರದಲ್ಲಿ ರಚಿಸಿ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘವು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಮುಜರಾಯಿ ಅರ್ಚಕರ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಅರ್ಚಕರಿಗೆ ತಸ್ತೀಕ್ (ವರ್ಷಾಸನ) ₹ 12 ಸಾವಿರ ಇತ್ತು. 2013ರಲ್ಲಿ ಸಿದ್ದರಾಮಯ್ಯ ₹ 24 ಸಾವಿರಕ್ಕೆ ಏರಿಸಿದರು. 2015ರಲ್ಲಿ ₹ 12 ಸಾವಿರ, 2017ರಲ್ಲಿ ₹ 12 ಸಾವಿರ ಏರಿಸಿದ್ದರಿಂದ ಈ ಮೊತ್ತ ₹ 48 ಸಾವಿರ ಆಗಿತ್ತು. ಈ ಬಾರಿ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾದಾಗ ₹ 12 ಸಾವಿರ ಹೆಚ್ಚಳ ಮಾಡಿದ್ದರಿಂದ ತಸ್ತೀಕ್ ₹ 60 ಸಾವಿರ ಆಗಿದೆ. ನಮ್ಮ ಸರ್ಕಾರ ಅರ್ಚಕರ ಜೊತೆಗಿದೆ’ ಎಂದು ಹೇಳಿದರು.

‘ತಸ್ತೀಕ್ ಪಡೆಯಲು ಅರ್ಚಕರನ್ನು ಅಧಿಕಾರಿಗಳು ಅಲೆದಾಡಿಸುತ್ತಾರೆ. ಅದನ್ನು ತಪ್ಪಿಸಲು ಆ್ಯಪ್ ರೂಪಿಸಲಾಗಿದೆ. ಆ್ಯಪ್ ಮೂಲಕ ನೋಂದಣಿ ಮಾಡಿಕೊಂಡು, ನೇರವಾಗಿ ಸಂಬಂಧಪಟ್ಟವರಿಗೇ ಹಣ ತಲುಪುವಂತೆ ಮಾಡಲಾಗುತ್ತಿದೆ’ ಎಂದರು.

‘ಅರ್ಚಕರಿಗೆ ತಿಂಗಳ ಗೌರವಧನ ನೀಡಬೇಕು ಎಂಬುದೂ ಸೇರಿದಂತೆ ನಿಮ್ಮ ಬೇಡಿಕೆಗಳ ಬಗ್ಗೆ ಪ್ರತ್ಯೇಕ ಸಭೆ ನಡೆಸಿ ಚರ್ಚಿಸಲಾಗುವುದು. ಈ ಸಭೆಯಲ್ಲಿ ನಿಮ್ಮ ಸಂಘದಿಂದ 10 ಪದಾಧಿಕಾರಿಗಳು ಭಾಗವಹಿಸಬಹುದು. ಆರ್ಥಿಕ ಇಲಾಖೆಯು ಮುಖ್ಯಮಂತ್ರಿ ಅವರಲ್ಲೇ ಇರುವುದರಿಂದ ಅವರ ಜೊತೆಗೂ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ’ ಎಂದರು. ಸಂಘದ ಅಧ್ಯಕ್ಷ ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ರಾಮ ತೀರ್ಥನ್, ಮುಜರಾಯಿ ಇಲಾಖೆಯ ಅಧಿಕಾರಿಗಳು ಮಾತನಾಡಿದರು.


ರಾಜ್ಯಮಟ್ಟದ ಮುಜರಾಯಿ ಅರ್ಚಕರ ವಿಚಾರಸಂಕಿರಣದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘದ ಅಧ್ಯಕ್ಷ ಶ್ರೀವತ್ಸ ಮನವಿ ಸಲ್ಲಿಸಿದರು. ಕಾಂಗ್ರೆಸ್ ಮುಖಂಡ ಉದಯ್ ಶಂಕರ್, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಎಚ್‌ ಬಸವರಾಜೇಂದ್ರ, ಚಾಮುಂಡಿ ಬೆಟ್ಟದ ಮುಖ್ಯ ಅರ್ಚಕ ಎನ್‌ ಶಶಿಶೇಖರ್ ದೀಕ್ಷಿತ್ ಇದ್ದರು ಪ್ರಜಾವಾಣಿ ಚಿತ್ರ

### ‘ದೇವಸ್ಥಾನದ ಹಣ ಮಸೀದಿ, ಚರ್ಚ್‌ಗೆ ಇಲ್ಲ’

ದೇವಸ್ಥಾನದ ಆದಾಯವನ್ನು ಮಸೀದಿಗೆ, ಚರ್ಚ್‌ಗೆ ಬಳಸಲಾಗುತ್ತದೆ ಎಂದು ವಾಟ್ಸ್‌ಆ್ಯಪ್ ಯೂನಿವರ್ಸಿಟಿಯ ಕಿಡಿಗೇಡಿಗಳು ಹಬ್ಬಿಸುವ ಅಪಪ್ರಚಾರಕ್ಕೆ ಕಿವಿಗೊಡಬೇಡಿ. ಧರ್ಮದಾಯ ದತ್ತಿ ನಿಯಮ ಪ್ರಕಾರ ದೇವಸ್ಥಾನದ ಆದಾಯ ಬೇರೆಡೆ ಬಳಸಲು ಅವಕಾಶವಿಲ್ಲ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಈ ನಿಯಮವನ್ನು ಜಾರಿ ಮಾಡಲಾಗಿದೆ. ಒಂದು ದೇವಸ್ಥಾನದ ಆದಾಯವನ್ನು ಚರ್ಚ್, ಮಸೀದಿ ಬಿಡಿ, ಇನ್ನೊಂದು ದೇವಸ್ಥಾನಕ್ಕೂ ಬಳಸುವಂತಿಲ್ಲ’ ಎಂದರು.

## ಮಹಿಷ ದಸರಾಕ್ಕೆ ಅನುಮತಿ

**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರ ಮಹಿಷ ದಸರಾ ನಡೆಸಲು ಅನುಮತಿ ನಿರಾಕರಿಸಿದ್ದ ಪೊಲೀಸರು, ನಗರದ ಪುರಭವನದ ಆವರಣದಲ್ಲಿ ಕಾರ್ಯಕ್ರಮ ನಡೆಸಲು ಷರತ್ತುಬದ್ಧ ಅನುಮತಿ ನೀಡಿದ್ದಾರೆ. ಪುರಭವನ ಆವರಣ ಹೊರತುಪಡಿಸಿ, ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಎಲ್ಲೆಡೆ ಗುರುವಾರ ರಾತ್ರಿಯಿಂದ ಶನಿವಾರ ಬೆಳಿಗ್ಗೆವರೆಗೆ ನಿಷೇಧಾಜ್ಞೆ ಜಾರಿಯಲ್ಲಿರಲಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್, ‘ಮಹಿಷ ದಸರಾ ಸಮಿತಿಯು ನೀಡಿದ್ದ ಮನವಿಯಂತೆ ಅನುಮತಿ ನೀಡಲಾಗಿದೆ. ನಿಷೇಧಾಜ್ಞೆ ಜಾರಿಯಲ್ಲಿರುವೆಡೆ ಮೆರವಣಿಗೆ, ಪ್ರತಿಭಟನೆ, ಜಾಥಾ, ಬೈಕ್ ಜಾಥಾ ನಡೆಸುವಂತಿಲ್ಲ. ಪರ–ವಿರೋಧ ಘೋಷಣೆ ಕೂಗುವಂತಿಲ್ಲ. ಪಟಾಕಿ ಸಿಡಿಸುವುದು, ಬಹಿರಂಗ ಸಭೆ, ಸಮಾರಂಭ, ಬ್ಯಾನರ್ ಅಳವಡಿಕೆ, ಕರಪತ್ರ ಹಂಚುವಂತಿಲ್ಲ’ ಎಂದರು.

‘ಮಹಿಷ ದಸರಾ ಬೆಂಬಲಿಸಿ ಹಾಗೂ ವಿರೋಧಿಸಿ ವಿವಿಧ ರಾಜ್ಯಗಳಿಂದ ಜನ ಬರುತ್ತಾರೆಂಬ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹರಿದಾಡುತ್ತಿದ್ದು, ಆ ಬಗ್ಗೆಯೂ ಪರಿಶೀಲಿಸುತ್ತಿದ್ದೇವೆ’ ಎಂದರು.

**ಬೆಟ್ಟಕ್ಕೆ ಪ್ರವೇಶ ನಿರ್ಬಂಧ:** ‘ನಿಷೇಧಾಜ್ಞೆ ಹಿನ್ನೆಲೆಯಲ್ಲಿ 13ರಂದು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಬೆಟ್ಟಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ನಿವಾಸಿಗಳು, ತುರ್ತುಸೇವೆಗಳಿಗೆ ಇದು ಅನ್ವಯವಾಗದು’ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

### ಮೈಸೂರು ರೈಲಿಗೆ ಹೆಚ್ಚುವರಿ ಬೋಗಿ

**ಬೆಂಗಳೂರು:** ದಸರಾ ಪ್ರಯುಕ್ತ ಅಧಿಕಗೊಳ್ಳುವ ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು ರೈಲುಗಳಲ್ಲಿ ತಾತ್ಕಾಲಿಕವಾಗಿ ಬೋಗಿ ಹೆಚ್ಚಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಅ.17ರಿಂದ 21ರವರೆಗೆ ಒಟ್ಟು 28 ರೈಲುಗಳಲ್ಲಿ ಸ್ಲೀಪರ್ ಕ್ಲಾಸ್ ಇಲ್ಲವೇ ಸೆಕೆಂಡ್ ಕ್ಲಾಸ್ ಬೋಗಿಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗುತ್ತದೆ. ಬೇಡಿಕೆಗೆ ಅನುಗುಣವಾಗಿ ಒಂದು ಅಥವಾ ಎರಡು ಬೋಗಿಗಳು ಇರಲಿವೆ ಎಂದು ನೈರುತ್ಯ ಅಧಿಕಾರಿಗಳು ತಿಳಿಸಿದ್ದಾರೆ. 28ರಲ್ಲಿ 18 ರೈಲುಗಳು ಮೈಸೂರನ್ನು ಸಂಪರ್ಕಿಸುವ ರೈಲುಗಳಾಗಿವೆ.

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 100.84 | 5,682 | 3,698 |
| ಹಾರಂಗಿ | 2,859 | 2,857.12 | 2,213 | 1,200 |
| ಕಬಿನಿ | 2,284 | 2,276.11 | 2,064 | 2,550 |
| ಹೇಮಾವತಿ | 2,922 | 2,900.75 | 2,404 | 1,360 |
| ಲಿಂಗನಮಕ್ಕಿ | 1,819 | 1,787.55 | 2,673 | 4,739.68 |
| ಸೂಪಾ (ಮೀ) | 564 | 545.85 | 1,238 | 5,421 |
| ಮಾಣಿ | 595 | 581.26 | 446 | 703 |
| ತುಂಗಭದ್ರಾ | 1,633 | 1,615.09 | 180 | 9,049 |
| ಮಲಪ್ರಭಾ | 2079.5 | 2,064.01 | - | 194 |
| ಘಟಪ್ರಭಾ | 2,175 | 2,170.95 | 1,467 | 2,398 |
| ಭದ್ರಾ | 186 | 157.4 | 697 | 2,861 |
| ಆಲಮಟ್ಟಿ (ಮೀ) | 519.6 | 519.17 | 485 | 485 |
| ನಾರಾಯಣಪುರ (ಮೀ) | 492.25 | 490.94 | - | 246 |

*ನೆಲಮಟ್ಟದಿಂದ

## ಕುರುಬರ ಸಂಘ: ಎಂ. ಈರಣ್ಣ ಅಧ್ಯಕ್ಷ


ಎಂ. ಈರಣ್ಣ

**ಬೆಂಗಳೂರು:** ಕರ್ನಾಟಕ ಪ್ರದೇಶ ಕುರುಬರ ಸಂಘದ ನೂತನ ಅಧ್ಯಕ್ಷರಾಗಿ ರಾಯಚೂರು ಜಿಲ್ಲೆಯ ಎಂ. ಈರಣ್ಣ ಆಯ್ಕೆಯಾಗಿದ್ದಾರೆ.

ಕಾರ್ಯಾಧ್ಯಕ್ಷರಾಗಿ ಬೆಳಗಾವಿ ಜಿಲ್ಲೆಯ ಬಸರಾಜ ಲ. ಬಸಲಿಗುಂದಿ, ಪ್ರಧಾನ ಕಾರ್ಯದರ್ಶಿಯಾಗಿ ಕೋಲಾರ ಜಿಲ್ಲೆಯ ಎಂ.ವಿ. ಸೋಮಶೇಖರ್ ಹಾಗೂ ಖಜಾಂಚಿಯಾಗಿ ಕೆ.ಎಂ. ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಹಿರಿಯ ಉಪಾಧ್ಯಕ್ಷರುಗಳಾಗಿ ವಿನಾಯಕ ಅಪ್ಪಸಾಹೇಬ ಬಣಹಟ್ಟಿ (ಬೆಳಗಾವಿ ವಿಭಾಗ), ಎಚ್‌.ಬಿ. ಪರಶುರಾಮಪ್ಪ (ಬೆಂಗಳೂರು ವಿಭಾಗ), ಬಸವರಾಜ್ ಹೆಡೆ (ಕಲಬುರಗಿ ವಿಭಾಗ), ರಾಜೇಶ್ವರಿ ಎಂ. (ಮೈಸೂರು ವಿಭಾಗ) ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಉಪಾಧ್ಯಕ್ಷರು, ಸಹಕಾರ್ಯದರ್ಶಿ ಸೇರಿ ಒಟ್ಟು 35 ಜನರನ್ನು ಆಯ್ಕೆ ಮಾಡಲಾಗಿದೆ.


## 13,352 ಶಿಕ್ಷಕರ ನೇಮಕಕ್ಕೆ ಅಸ್ತು

ಒಂದನೇ ಪುಟದಿಂದ

**ಪ್ರಕರಣವೇನು?:** ವಿವಾಹಿತ ಮಹಿಳೆಯರು ಪತಿಯ ಆದಾಯದ ಆಧಾರದಡಿ ತಮ್ಮ ಆದಾಯ ಪ್ರಮಾಣ ಪತ್ರವನ್ನು ನೇಮಕಾತಿ ವೇಳೆ ಸಲ್ಲಿಸಬೇಕಿತ್ತು. ಅದರ ಬದಲು, ತಂದೆಯ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಎಂಬ ಕಾರಣ ನೀಡಿ 451 ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿತ್ತು. ಇದನ್ನು ಪ್ರಶ್ನಿಸಿ, ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ‘ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರ ಪರಿಗಣಿಸಬೇಕು’ ಎಂದು ಹೇಳಿತ್ತು. ಈ ಆದೇಶವನ್ನು ರದ್ದುಪಡಿಸಬೇಕು ಎಂದು ಮೇಲ್ಮನವಿದಾರರು ಕೋರಿದ್ದರು.

## ಕೆಪಿಸಿಸಿ ವಕ್ತಾರರಾಗಿ ಆಯನೂರು


ಆಯನೂರು ಮಂಜುನಾಥ್

**ಬೆಂಗಳೂರು:** ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದ ಆಯನೂರು ಮಂಜುನಾಥ್ ಅವರನ್ನು ಕೆಪಿಸಿಸಿ ವಕ್ತಾರರನ್ನಾಗಿ ನೇಮಿಸಲಾಗಿದೆ.

‘ಕಾಂಗ್ರೆಸ್ ಪಕ್ಷದ ವಿಚಾರಧಾರೆಗಳನ್ನು ಮತ್ತು ಸರ್ಕಾರದ ಯೋಜನೆಗಳನ್ನು ಮಾಧ್ಯಮಗಳಲ್ಲಿ ಬಿಂಬಿಸಬೇಕೆಂಬ ಉದ್ದೇಶದಿಂದ ಆಯನೂರು ಮಂಜುನಾಥ್ ಅವರಿಗೆ ಈ ಹೊಣೆಗಾರಿಕೆ ನೀಡಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

## ವಾಲ್ಮೀಕಿ ಜಯಂತಿ: ಜಿಲ್ಲೆಗೆ ₹ 1.50 ಲಕ್ಷ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಸಕ್ತ ಸಾಲಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾ ಮಟ್ಟದಲ್ಲಿ ಆಚರಿಸಲು ತಲಾ ₹ 1.50 ಲಕ್ಷ, ತಾಲ್ಲೂಕು ಮಟ್ಟದಲ್ಲಿ ಆಚರಿಸಲು ತಲಾ ₹ 35 ಸಾವಿರ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಮೊತ್ತವನ್ನು ಆಯಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಸಮಾಜ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

## ನಡ್ಡಾ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ

**ಬೆಂಗಳೂರು:** ಕಳೆದ ಜೂನ್‌ನಲ್ಲಿ ವಿಧಾನಸಭೆಗೆ ನಡೆದ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಡಿ ಹಾವೇರಿ ಜಿಲ್ಲೆಯ ಶಿಗ್ಗಾಂವಿ ಪೊಲೀಸ್ ಠಾಣೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.


ತನಿಖೆ ರದ್ದುಪಡಿಸುವಂತೆ ಕೋರಿ ನಡ್ಡಾ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ನಡ್ಡಾ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಎಂ. ವಿನೋದ್ ಕುಮಾರ್, ‘ಅರ್ಜಿದಾರರ ಭಾಷಣದಲ್ಲಿ ಕಾನೂನು ಉಲ್ಲಂಘಿಸುವ ಅಥವಾ ಮತದಾರರಿಗೆ ಆಮಿಷವೊಡ್ಡಿ ಪ್ರಭಾವ ಬೀರುವಂತಹ ಯಾವುದೇ ಅಂಶಗಳಿಲ್ಲ. ಆದ್ದರಿಂದ, ಇದರ ತನಿಖೆಗೆ ತಡೆ ನೀಡಬೇಕು’ ಎಂದು ಕೋರಿದರು.

### ಎಸಿಪಿ ಮಹೇಶ್ ನೇತೃತ್ವದಲ್ಲಿ ತನಿಖೆ, ಇಬ್ಬರ ಮೊಬೈಲ್ ವಶಕ್ಕೆ

# ಉದ್ಯಮಿ ನಿಗೂಢ ಸಾವು: ವ್ಯವಹಾರದ ನಂಟು?

ಪ್ರಜಾವಾಣಿ ವಾರ್ತೆ


ಎಂ.ಆರ್‌.ಕಾಮತ್

**ಮಂಗಳೂರು:** ಇಲ್ಲಿನ ಉದ್ಯಮಿ ಮುಂಡ್ಕೂರು ರಾಮದಾಸ್ ಕಾಮತ್ (ಎಂ.ಆರ್.ಕಾಮತ್) ಅವರು ಈಚೆಗೆ ಅಸಹಜ ರೀತಿಯಲ್ಲಿ ಸಾವಿಗೀಡಾಗಿದ್ದು ಈ ಪ್ರಕರಣಕ್ಕೆ ಹಣಕಾಸು ವ್ಯವಹಾರವೂ ಥಳಕು ಹಾಕಿಕೊಂಡಿರುವ ಸುಳಿವು ತನಿಖೆ ವೇಳೆ ಪೊಲೀಸರಿಗೆ ಸಿಕ್ಕಿದೆ.

ದುಬೈ ಹಾಗೂ ಅಬುಧಾಬಿಯಲ್ಲಿ ಯಶಸ್ವಿ ಉದ್ಯಮಿಯಾಗಿದ್ದ ಎಂ.ಆರ್. ಕಾಮತ್ ಅವರು ಕೆಲ ವರ್ಷಗಳ ಹಿಂದೆ ನಗರಕ್ಕೆ ಮರಳಿದ್ದರು. ನಗರದ ರಥಬೀದಿಯ ಫ್ಲ್ಯಾಟ್‌ವೊಂದರಲ್ಲಿ ಪತ್ನಿ ಜೊತೆ ವಾಸವಾಗಿದ್ದರು. ಅವರ ಪುತ್ರರಿಬ್ಬರು ವಿದೇಶದಲ್ಲಿ ನೆಲೆಸಿದ್ದಾರೆ. ಕೆಲ ವಾರಗಳ ಹಿಂದೆ ಫ್ಲ್ಯಾಟ್‌ನಲ್ಲಿ ಅವರ ಮೃತದೇಹ ಪತ್ತೆಯಾಗಿತ್ತು.

‘ಆರಂಭದಲ್ಲಿ ನಾವು ಇದೊಂದು ಆತ್ಮಹತ್ಯೆ ಪ್ರಕರಣ ಎಂದೇ ಭಾವಿಸಿದ್ದೆವು. ಆದರೆ, ಈ ಸಾವಿನ ಬಗ್ಗೆ, ಅವರದೇ ಸಮುದಾಯದ ಕೆಲವರು ಅನುಮಾನ ವ್ಯಕ್ತಪಡಿಸಿದ್ದರು. ಹಾಗಾಗಿ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಎಸಿಪಿ ಮಹೇಶ್ ಕುಮಾರ್ ಅವರಿಗೆ ವಹಿಸಿದ್ದೆ. ಎಂ.ಆರ್. ಕಾಮತ್ ಅವರ ಜೊತೆ ಸಂಪರ್ಕ ಹೊಂದಿದ್ದ ಅನೇಕರನ್ನು ಎಸಿಪಿಯವರು ವಿಚಾರಣೆಗೆ ಒಳಪಡಿಸಿದ್ದಾರೆ. ಅವರ ಜೊತೆ ಹಣಕಾಸು ವ್ಯವಹಾರ ನಡೆಸಿದ್ದ ಕೆಲವರು ವಂಚಿಸಿರುವ ಕುರಿತೂ ಮಾಹಿತಿ ಸಿಕ್ಕಿದೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಬ್ಬರು ಉದ್ಯಮಿಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಅವರ ಮೊಬೈಲ್‌ಗಳನ್ನೂ ವಶಪಡಿಸಿಕೊಂಡಿದ್ದೇವೆ. ಕಾಮತ್ ಅವರ ಸಾವಿಗೂ ಮುನ್ನ ವಾರದ ಅವಧಿಯಲ್ಲಿ ಯಾರೆಲ್ಲ ಅವರನ್ನು ಭೇಟಿಯಾಗಿದ್ದರು, ಅವರು ಯಾರಿಗೆಲ್ಲ ಕರೆ ಮಾಡಿದ್ದರು ಎಂಬುದನ್ನು ಆಧರಿಸಿಯೂ ತನಿಖೆ ನಡೆಸುತ್ತಿದ್ದೇವೆ. ಕರೆ ವಿವರಗಳನ್ನೂ ಸಂಗ್ರಹಿಸಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದರು.

‘ಕಾಮತ್ ಅವರು ನಗರದಲ್ಲಿ ಅನೇಕ ರಿಯಲ್ ಎಸ್ಟೇಟ್ ಯೋಜನೆಗಳಲ್ಲೂ ಬಂಡವಾಳ ಹೂಡಿಕೆ ಮಾಡಿದ್ದರು. ಕೆಲವು ಕಟ್ಟಡಗಳನ್ನೂ ಖರೀದಿಸಿದ್ದರು. ತಮ್ಮ ಕೆಲವು ಆಸ್ತಿಗಳನ್ನು ಪರಿಚಯಸ್ಥರಿಗೆ ವಹಿಸಿದ್ದರು. ಅವರು ಪ್ರತಿ ತಿಂಗಳು ಬಾಡಿಗೆ ರೂಪದಲ್ಲಿ ಕಾಮತ್ ಅವರಿಗೆ ಸಂದಾಯ ಮಾಡಬೇಕಿದ್ದ ಹಣವನ್ನು ನೀಡಿರಲಿಲ್ಲ. ಕೋವಿಡ್ ಕಾಲದಲ್ಲಿ ಎಲ್ಲ ವಿಧದ ವ್ಯವಹಾರಗಳಿಗೂ ಏಟು ಬಿದ್ದಿದ್ದರಿಂದ ಕಾಮತ್ ಅಷ್ಟಾಗಿ ಈ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ವ್ಯವಹಾರಗಳು ಮೊದಲಿನ ಸ್ಥಿತಿಗೆ ಬಂದ ಬಳಿಕವೂ ಬಾಡಿಗೆ ಬಾರದಿರುವುದು ಕಾಮತ್ ಅವರನ್ನು ಚಿಂತೆಗೀಡು ಮಾಡಿತ್ತು. ಈ ಬಗ್ಗೆ ಎಚ್ಚರಿಕೆ ನೀಡಿದ್ದ ಅವರು ಕಟ್ಟಡಗಳನ್ನು ತಾವೇ ಸ್ವಾಧೀನಕ್ಕೆ ಪಡೆಯಲು ಮುಂದಾಗಿದ್ದರು. ಈ ನಡುವೆ ಅವರು ಮೃತಪಟ್ಟಿದ್ದಾರೆ’ ಎನ್ನುವುದು ಮೂಲಗಳ ಮಾಹಿತಿ.

‘ಮೂರು ವರ್ಷಗಳಿಂದಲೂ ತಮಗೆ ಬರಬೇಕಾದ ಬಾಡಿಗೆ ಹಣವನ್ನು ಕಾಮತ್ ಕೇಳುತ್ತಿದ್ದರು. ಲೆಕ್ಕಪರಿಶೋಧಕರೊಬ್ಬರು ಈ ವಿಚಾರವಾಗಿ ಕಾಮತ್ ಹಾಗೂ ಅವರ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದವರ ನಡುವೆ ಸಂಧಾನಕ್ಕೆ ಪ್ರಯತ್ನಿಸಿದ್ದರು. ಅದು ವಿಫಲವಾಗಿತ್ತು. ಹಾಗಾಗಿ ಆ ಆಸ್ತಿಗಳನ್ನೇ ಮಾರಾಟ ಮಾಡಲು ಕಾಮತ್ ಸಿದ್ಧತೆ ನಡೆಸಿದ್ದರು. ಈ ವಿಚಾರವಾಗಿ ಆ ಆಸ್ತಿಗಳನ್ನು ನಿರ್ವಹಿಸುತ್ತಿದ್ದವರ ನಡುವೆ ಜಗಳವೂ ನಡೆದಿತ್ತು’ ಎಂಬುದು ಈ ಮೂಲಗಳು ನೀಡುವ ವಿವರಣೆ.

‘ಕಾಮತ್ ಅವರು ಯಾರ ಜೊತೆಗೆಲ್ಲ ಹಣಕಾಸಿನ ವ್ಯವಹಾರ ನಡೆಸಿದ್ದರು ಎಂಬ ಮಾಹಿತಿಯನ್ನೂ ಕಲೆಹಾಕುತ್ತಿದ್ದೇವೆ. ಕೆಲವು ಉದ್ಯಮಿಗಳ ಹೆಸರೂ ಥಳಕು ಹಾಕಿಕೊಂಡಿದ್ದು, ಈ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದೇವೆ’ ಎಂದು ಪೊಲೀಸ್ ಕಮಿಷನರ್ ತಿಳಿಸಿದರು.

‘ಹಣಕಾಸಿನ ವಿಚಾರದಲ್ಲಿ ತಾವು ವಿಶ್ವಾಸ ಇಟ್ಟವರೇ ವಂಚನೆ ಮಾಡಿದರಲ್ಲಾ ಎಂಬ ಹತಾಶೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯೂ ಇದೆ. ಇತರರೂ ಅವರಿಗೆ ಕುಮ್ಮಕ್ಕು ನೀಡಿರುವ ಸಾಧ್ಯತೆಗಳೂ ಇವೆ. ತನಿಖೆ ಪೂರ್ಣಗೊಂಡ ಬಳಿಕವಷ್ಟೇ ಈ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ’ ಎಂದರು.

### ಕೊಡುಗೈ ದಾನಿ ಕಾಮತ್

ಕಾಮತ್ ಅವರು ತಮ್ಮ ವರಮಾನದಲ್ಲಿ ಒಂದಂಶವನ್ನು ಸಮಾಜ ಸೇವಾ ಚಟುವಟಿಕೆಗಾಗಿಯೇ ಮುಡಿಪಾಗಿಟ್ಟಿದ್ದರು. ನಗರದ ವೆಂಕಟರಮಣ ದೇವಸ್ಥಾನಕ್ಕೆ ಹತ್ತು ವರ್ಷಗಳ ಹಿಂದೆ ಚಿನ್ನದ ಪೀಠವನ್ನು ದೇಣಿಗೆಯಾಗಿ ನೀಡಿದ್ದರು. ಪಿಲಿಕುಳ ನಿಸರ್ಗ ಧಾಮಕ್ಕೂ ದೇಣಿಗೆ ನೀಡಿದ್ದರು. ಗೌಡಸಾರಸ್ವತ ಬ್ರಾಹ್ಮಣ(ಜಿಎಸ್‌ಬಿ) ಸಮಾಜದ ವಿವಿಧ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿ ನಿಂತಿದ್ದರು. ಎಂ.ಆರ್.ಕಾಮತ್ ಅವರ ಸಾವಿನ ವಾಸ್ತವಾಂಶ ಪತ್ತೆ ಹಚ್ಚಲು ವಿಶೇಷ ತನಿಖಾ ತಂಡ ರಚಿಸಬೇಕು ಎಮದು ಒತ್ತಾಯಿಸಿ, ಕಾಮತ್ ಅವರ ಆಪ್ತರಾಗಿದ್ದ ಉದ್ಯಮಿ ಬಿ.ಆರ್.ಶೆಟ್ಟಿ ಅವರೂ ಈಚೆಗೆ ಮುಖ್ಯಮಂತ್ರಿ, ಗೃಹಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪತ್ರ ಬರೆದಿದ್ದರು.

# ಶಾಲೆಯಲ್ಲೇ ಅಂಕಪಟ್ಟಿ ತಿದ್ದುಪಡಿ

ಒಂದನೇ ಪುಟದಿಂದ

ಶಾಲಾ ಮುಖ್ಯ ಶಿಕ್ಷಕರು ಅಪ್‌ಲೋಡ್ ಮಾಡಿದ ದಾಖಲೆಗಳನ್ನು ಪರೀಕ್ಷಾ ಮಂಡಳಿಯ ಸಿಬ್ಬಂದಿ ಪರಿಶೀಲಿಸಿದ ನಂತರ ಪ್ರಸ್ತಾವನೆಯಲ್ಲಿ ಕೋರಿರುವ ತಿದ್ದುಪಡಿಗಳನ್ನು ಸರಿಪಡಿಸಿ, ಪರಿಷ್ಕೃತ ಅಂಕಪಟ್ಟಿಯನ್ನು ಆಯಾ ಶಾಲೆಗಳಿಗೇ ತ್ವರಿತ ಅಂಚೆಯ ಮೂಲಕ ಕಳುಹಿಸಿಕೊಡುವರು.

**ಸಮಯ ವ್ಯರ್ಥಕ್ಕೆ ತಿಲಾಂಜಲಿ:** ವಿದ್ಯಾರ್ಥಿಗಳು ಇದುವರೆಗೂ ಅಂಕಪಟ್ಟಿಗಳಲ್ಲಿನ ಲೋಪಗಳ ತಿದ್ದುಪಡಿಗೆ ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಂಡ ನಂತರ ತಾವು ಓದಿದ ಶಾಲೆಯ ಮುಖ್ಯಶಿಕ್ಷಕರ ಅನುಮೋದನೆ ಪಡೆದು ಬೆಂಗಳೂರಿನ ಕೇಂದ್ರ ಕಚೇರಿ ಅಥವಾ ಮಂಡಳಿಯ ವಿಭಾಗೀಯ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಬೇಕಿತ್ತು. ತಿದ್ದುಪಡಿಗೆ ಸಲ್ಲಿಸಿದ ದಾಖಲೆಗಳು ಸಮರ್ಪಕವಾಗಿ ಇಲ್ಲದಿದ್ದರೆ ಮತ್ತೆ ಕಚೇರಿಗಳಿಗೆ ಅಲೆಯಬೇಕಿತ್ತು. ಇದರಿಂದ ಮೂರು ತಿಂಗಳಿಗೂ ಹೆಚ್ಚು ಸಮಯ ವ್ಯರ್ಥವಾಗುತ್ತಿತ್ತು.

**ಮೂಲ ಅಂಕಪಟ್ಟಿ ವಾಪಸ್ ಕಡ್ಡಾಯ:** ವಿದ್ಯಾರ್ಥಿಗಳು ಪರಿಷ್ಕೃತ ಅಂಕಪಟ್ಟಿ ಪಡೆಯುವ ಮೊದಲು ಹಿಂದೆ ವಿತರಿಸಿದ್ದ ಮೂಲ ಅಂಕಪಟ್ಟಿಯನ್ನು ತಾವು ಓದಿದ ಪ್ರೌಢಶಾಲೆಯ ಮುಖ್ಯ ಶಿಕ್ಷಕರಿಗೆ ಸಲ್ಲಿಸಬೇಕಿದೆ. ಸಂಗ್ರಹಿಸಿದ ಅಂಕಪಟ್ಟಿಗಳನ್ನು ಪರೀಕ್ಷಾ ಮಂಡಳಿ ತರಿಸಿಕೊಂಡು ಅವುಗಳನ್ನು ನಾಶ ಮಾಡಲಿದೆ.

### ನಕಲಿ ದಾಖಲೆಗೆ ಮುಖ್ಯಶಿಕ್ಷಕರೇ ಹೊಣೆ

ಅಂಕಪಟ್ಟಿಗಳ ತಿದ್ದುಪಡಿಯ ಪ್ರಸ್ತಾವ ಸಲ್ಲಿಸುವ ಅಧಿಕಾರವನ್ನು ಆಯಾ ಪ್ರೌಢಶಾಲೆಗಳ ಮುಖ್ಯಶಿಕ್ಷಕರಿಗೇ ನೀಡಿರುವುದರಿಂದ ದುರುಪಯೋಗದ ಪ್ರಕರಣಗಳು ಕಂಡುಬಂದರೆ ಅವರನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಅಂಥ ಮುಖ್ಯಶಿಕ್ಷಕರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಅಧಿಕಾರವನ್ನು ಮಂಡಳಿಗೆ ನೀಡಲಾಗಿದೆ.

### ಭೌತಿಕ ಅರ್ಜಿ ಸಲ್ಲಿಕೆ ಸ್ಥಗಿತ

ಅಂಕಪಟ್ಟಿ ತಿದ್ದುಪಡಿಗೆ ಭೌತಿಕವಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪರೀಕ್ಷಾ ಮಂಡಳಿ ಸ್ಥಗಿತಗೊಳಿಸಿದೆ. ಈ ಹಿಂದೆ ಸಲ್ಲಿಕೆಯಾದ ಅರ್ಜಿಗಳನ್ನು ಒಂದು ತಿಂಗಳ ಒಳಗೆ ಇತ್ಯರ್ಥಪಡಿಸಿ, ಪರಿಷ್ಕೃತ ಅಂಕಪಟ್ಟಿಗಳನ್ನು ಆಯಾ ಶಾಲೆಗಳಿಗೆ ಕಳುಹಿಸಿಕೊಡಲಾಗುವುದು ಎನ್ನುತ್ತಾರೆ ಮಂಡಳಿಯ ಅಧಿಕಾರಿಗಳು.

ಬರಗಾಲದ ಕಾರಣ ರಾಜ್ಯದಲ್ಲಿ 41.52 ಲಕ್ಷ ಹೆಕ್ಟರ್‌ನಲ್ಲಿ ಬೆಳೆ ನಷ್ಟ: ಕೃಷಿ ಸಚಿವ ಚಲುವರಾಯಸ್ವಾಮಿ

# ಆಹಾರೋತ್ಪಾದನೆ ಶೇ 50ರಷ್ಟು ಕುಸಿತ

ಪ್ರಜಾವಾಣಿ ವಾರ್ತೆ



ಎನ್‌. ಚಲುವರಾಯ ಸ್ವಾಮಿ

ಬೆಂಗಳೂರು: ರಾಜ್ಯದಲ್ಲಿ ಬರದ ಕಾರಣ ಈ ವರ್ಷ ಕೃಷಿ ಉತ್ಪಾದನೆ ಶೇ 50 ರಷ್ಟು ಕುಸಿತಗೊಳ್ಳುವ ಸಾಧ್ಯತೆ ಇದೆ. ಮುಂಗಾರಿನಲ್ಲಿ 111 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ನಿಗದಿ ಮಾಡಲಾಗಿತ್ತು. ಆದರೆ, ಬೆಳೆ ಹಾನಿಯಿಂದಾಗಿ ಸುಮಾರು 58 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯ ಕೈಗೆ ಸಿಗುವುದಿಲ್ಲ.

ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಗುರುವಾರ ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ಹಂಚಿಕೊಂಡರು. ಮುಂಗಾರಿನಲ್ಲಿ ಆಹಾರ ಧಾನ್ಯಗಳ ಉತ್ಪಾದಕತೆ ಕಡಿಮೆಯಾದರೂ ಹಿಂಗಾರಿನಲ್ಲಿ ಆ ಕೊರತೆ ಸರಿದೂಗಿಸಲು ಪ್ರಯತ್ನಿಸಲಾಗುವುದು ಎಂದು ಅವರು ಹೇಳಿದರು.

### ಸಾವಿರ ಹುದ್ದೆ ಭರ್ತಿಗೆ ಸಿಎಂಗೆ ಮನವಿ

ಸುಮಾರು 2,000 ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿ ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 1,000 ಹುದ್ದೆಗಳನ್ನು ಭರ್ತಿ ಮಾಡಲು ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗಿದೆ. ಈ ಸಂಬಂಧ ಅವರು ಹಣಕಾಸು ಇಲಾಖೆಗೆ ಸೂಚನೆ ನೀಡಿದ್ದಾರೆ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.

ಕೃಷಿ ಇಲಾಖೆಯಲ್ಲಿ ಶೇ 57 ರಷ್ಟು ಹುದ್ದೆಗಳು ಖಾಲಿ ಇವೆ. ಮೇಲಿನ ಹಂತದಲ್ಲಿ ಅಧಿಕಾರಿಗಳು ಇದ್ದಾರೆ, ಕೆಳಹಂತದಲ್ಲಿ ಅಧಿಕಾರಿಗಳು ಇಲ್ಲದ ಕಾರಣ, ರೈತರ ಜತೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತಿಲ್ಲ. ಕಳೆದ ಐದು ವರ್ಷಗಳಲ್ಲಿ ಒಂದು ಹುದ್ದೆಗೂ ನೇಮಕಾತಿ ಆಗಿರಲಿಲ್ಲ ಎಂದು ಅವರು ಹೇಳಿದರು. ಕೆಪಿಎಸ್‌ಸಿ ಮೂಲಕ 360 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದೂ ಅವರು ಹೇಳಿದರು.

ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಸೇರಿ ಒಟ್ಟು 41.52 ಲಕ್ಷ ಹೆಕ್ಟರ್‌ನಲ್ಲಿ ಬೆಳೆ ಹಾನಿಯಾಗಿದೆ. ಇದರ ಮೌಲ್ಯ ₹30 ಸಾವಿರ ಕೋಟಿ ಎಂದರು.

ಈ ಬಾರಿ ಬತ್ತ, ಶೇಂಗಾ, ಹತ್ತಿ, ಜೋಳ, ರಾಗಿ, ತೊಗರಿ ಮುಂತಾದ ಬೆಳೆಗಳು ನಷ್ಟಕ್ಕೀಡಾಗಿವೆ. ಆಯಾ ಪ್ರದೇಶಕ್ಕೆ ಅನುಗುಣವಾಗಿ ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ರೈತರಿಗೆ ಸಲಹೆ ನೀಡಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಚ್ಚುಕಟ್ಟು ಪ್ರದೇಶಗಳಲ್ಲಿ ಪರಿಸ್ಥಿತಿ ಪರವಾಗಿಲ್ಲ ಎಂದು ಚಲುವರಾಯಸ್ವಾಮಿ ವಿವರಿಸಿದರು.

**ಫಸಲ್ ಬಿಮಾ ಯೋಜನೆ:** ಈ ಮುಂಗಾರು ಹಂಗಾಮಿನಲ್ಲಿ ಒಟ್ಟು 36 ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಗುರುತಿಸಿದ್ದು, 19.14 ಲಕ್ಷ ರೈತರು (15.10 ಲಕ್ಷ ಹೆಕ್ಟೇರ್ ಪ್ರದೇಶ) ನೋಂದಾಯಿಸಿಕೊಂಡಿದ್ದಾರೆ. ಪಿಎಂ ಕಿಸಾನ್ ಯೋಜನೆಯಡಿ ಈವರೆಗೆ ರಾಜ್ಯದ 53.81 ಲಕ್ಷ ರೈತರ ಪೈಕಿ 46.20 ಲಕ್ಷ ರೈತರಿಗೆ ಇಕೆವೈಸಿ ಮಾಡಲಾಗಿದೆ. ಶೇ 87 ರಷ್ಟು ಪ್ರಗತಿ ಸಾಧಿಸಲಾಗಿದೆ. 216.79 ಲಕ್ಷ ತಾಕುಗಳ ಪೈಕಿ ಈವರೆಗೆ 203.82 ಲಕ್ಷ ತಾಕುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದರು.

**ಬಿಜೆಪಿ ಅವಧಿಯಲ್ಲೇ ಆತ್ಮಹತ್ಯೆ ಹೆಚ್ಚು:** ಈ ವರ್ಷ ಒಟ್ಟು 313 ಮಂದಿ ರೈತರ ಆತ್ಮಹತ್ಯೆ ವರದಿಯಾಗಿದೆ. 2022–23 ನೇ ಸಾಲಿನ ಇದೇ ಅವಧಿಯಲ್ಲಿ ಒಂದು ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಚಲುವರಾಯಸ್ವಾಮಿ ಹೇಳಿದರು.

ರೈತರ ಆತ್ಮಹತ್ಯೆ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂಬ ಮಾಜಿ ಕೃಷಿ ಸಚಿವ ಬಿ.ಸಿ. ಪಾಟೀಲರ ಹೇಳಿಕೆಗೆ ತಿರುಗೇಟು ನೀಡಿದ ಅವರು, ಅಂಕಿ ಅಂಶಗಳ ಪ್ರಕಾರ ಬಿಜೆಪಿ ಸರ್ಕಾರದ ಅವಧಿಯಲ್ಲೇ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರು.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ದಾಳಿ ನಡೆಸಿ ₹5 ಕೋಟಿಗೂ ಅಧಿಕ ಮೌಲ್ಯದ ಬಿತ್ತನೆ ಬೀಜಗಳು, ರಸಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಲಾಗಿದೆ. 148 ಪ್ರಕರಣಗಳನ್ನು ದಾಖಲಿಸಲಾಗಿದೆ. 4 ಬಿತ್ತನೆ ಬೀಜ, 8 ರಸಗೊಬ್ಬರ, 3 ಕೀಟನಾಶಕ ಪರವಾನಗಿಗಳನ್ನು ಅಮಾನತುಗೊಳಿಸಲಾಗಿದೆ ಎಂದು ಹೇಳಿದರು.

### ‘ಎದೆಗಾರಿಕೆಯಿಂದ ರಾತ್ರೋರಾತ್ರಿ ನೀರು ಬಿಟ್ಟ ಎಚ್‌ಡಿಕೆ’

‘ಕುಮಾರಸ್ವಾಮಿ ಅವರಿಗಷ್ಟೇ ಎದೆಗಾರಿಕೆ ಇರುವುದು. ಅವರು ಮುಖ್ಯಮಂತ್ರಿ ಆಗಿದ್ದಾಗ ರಾತ್ರೋರಾತ್ರಿ ಕಾವೇರಿ ನೀರು ಹರಿಸಿದ್ದರು. ಅವರಿಗೆ ಎದೆಗಾರಿಕೆ ಇದೆ’ ಎಂದು ಸಚಿವ ಚಲುವರಾಯಸ್ವಾಮಿ ವ್ಯಂಗ್ಯವಾಡಿದರು.

‘ಕಾವೇರಿ ನೀರು ನಿರ್ವಹಣೆ ಪ್ರಾಧಿಕಾರದ ಶಿಫಾರಸ್ಸನ್ನು ಧಿಕ್ಕರಿಸುವ ಎದೆಗಾರಿಕೆ ಸರ್ಕಾರಕ್ಕಿಲ್ಲ’ ಎಂಬ ಎಚ್‌.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

‘ಬೀದರ್‌ನಲ್ಲಿ ಹಿಂದೊಮ್ಮೆ ಜಲಾಶಯದ ಕೀಲಿ ನನ್ನ ಬಳಿ ಇಲ್ಲ. ಕೇಂದ್ರದ ಬಳಿ ಇದೆ ಎಂದಿದ್ದರು. ಆದ್ದರಿಂದ ಅವರೊಬ್ಬರಿಗಷ್ಟೇ ಎದೆಗಾರಿಕೆ ಇರುವುದು. ಟಿ.ಎ.ಶರವಣ ಅವರಿಗೆ ಇನ್ನೂ ಜಾಸ್ತಿ ಎದೆಗಾರಿಕೆ ಇದೆ ಬಿಡಿ’ ಎಂದು ಕುಟುಕಿದರು.

### ರಾಜ್ಯದಲ್ಲಿ ಬೆಳೆಗಳ ಸ್ಥಿತಿಗತಿ

| | |
|---|---|
| ಬಿತ್ತನೆ ಪ್ರದೇಶ | 118 ಲಕ್ಷ ಹೆಕ್ಟೇರ್ |
| ಬಿತ್ತನೆ ಪ್ರಮಾಣ | 90% |
| ಹಾನಿಯಾದ ಕೃಷಿ ಪ್ರದೇಶ | 39.74 ಲಕ್ಷ ಹೆಕ್ಟೇರ್ |
| ತೋಟಗಾರಿಕೆ ಬೆಳೆ | 1.82 ಲಕ್ಷ ಹೆಕ್ಟರ್ |
| ಕೃಷಿ ಮತ್ತು ತೋಟಗಾರಿಕೆ ಸೇರಿ ಒಟ್ಟು | 41.52 ಲಕ್ಷ ಹೆಕ್ಟೇರ್ |

## 22 ಕೆಇಎಸ್ ಅಧಿಕಾರಿಗಳಿಗೆ ಹಿಂಬಡ್ತಿ: ಇಲಾಖೆ ಆದೇಶ

ಬೆಂಗಳೂರು: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರದ (ಡಯಟ್‌) ಹಿರಿಯ ಉಪನ್ಯಾಸಕರು ಸೇರಿ 22 ಅಧಿಕಾರಿಗಳಿಗೆ ಹಿಂಬಡ್ತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಶಿಕ್ಷಣ ಸೇವೆಯ (ಕೆಇಎಸ್) ಪರೀಕ್ಷೆ ಬರೆದು ಗ್ರೂಪ್ ‘ಬಿ’ ಹುದ್ದೆಗಳಿಗೆ ಆಯ್ಕೆಯಾಗಿದ್ದ ಪ್ರೌಢಶಾಲಾ ಮುಖ್ಯಶಿಕ್ಷಕರು, ಡಯಟ್ ಉಪನ್ಯಾಸಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವರು ನಿಯಮಾನುಸಾರ ಗ್ರೂಪ್ ‘ಎ’ ಕಿರಿಯ ಶ್ರೇಣಿಗೆ ಬಡ್ತಿ ಹೊಂದಿದ್ದರು.

ಅವರ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಎಸಿಬಿ, ಲೋಕಾಯುಕ್ತ ದಾಳಿಗೆ ಒಳಗಾಗಿ ವಿಚಾರಣೆ ಎದುರಿಸುತ್ತಿದ್ದಾರೆ. ಹಣಕಾಸು ದುರುಪಯೋಗ ಸೇರಿ ವಿವಿಧ ಕಾರಣಗಳಿಗಾಗಿ ಇಲಾಖಾ ವಿಚಾರಣೆಯಲ್ಲಿ ತಪ್ಪಿತಸ್ಥರೆಂದು ಸಾಬೀತಾಗಿದೆ. ಅಂತಹ 22 ಅಧಿಕಾರಿಗಳಿಗೆ ನೀಡಿದ್ದ ಬಡ್ತಿಯನ್ನು ಇಲಾಖಾ ಮುಂಬಡ್ತಿ ಸಮಿತಿ ತಡೆಹಿಡಿದ ಬೆನ್ನಲ್ಲೇ ಶಿಕ್ಷಣ ಇಲಾಖೆಯ ಆದೇಶ ಹೊರಬಿದ್ದಿದೆ. ಹಿಂಬಡ್ತಿಗೆ ಒಳಗಾದ ಎಲ್ಲರೂ ಇರುವ ಹುದ್ದೆಗಳ ಕರ್ತವ್ಯದಿಂದ ಬಿಡುಗಡೆಗೊಂಡು ಆಯುಕ್ತರ ಕಚೇರಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಹಿಂಬಡ್ತಿ ಪಡೆದವರು: ಎಸ್‌.ಎ.ಮುಜಾವರ್, ವಿಜಯಪುರ, ಐ.ಎಸ್‌. ಮಹೇಶ, ತುಮಕೂರು, ಎನ್‌.ವಿ. ಸ್ವಾಮಿ, ಚಾಮರಾಜನಗರ, ಪ್ರಭಯ್ಯ ಕಲ್ಲಯ್ಯ, ಧಾರವಾಡ, ಜಿ.ಇ.ರಾಜೀವ, ಶಿವಮೊಗ್ಗ, ಶರೀಫ್ ಸಾಹೇಬ್ ನದಾಫ್, ಬೆಳಗಾವಿ, ಕೆ.ಮಂಜುಳಾ, ಉಡುಪಿ, ವಿಜಯ ಲಕ್ಷ್ಮಣ ಬೆನಕಟ್ಟಿ, ಬೆಳಗಾವಿ, ಎಂ.ಮಂಜುನಾಥ ಸ್ವಾಮಿ, ದಾವಣಗೆರೆ, ಚಂದ್ರಕಾಂತ ರೆಡ್ಡಿ, ಯಾದಗಿರಿ, ರಾಚಪ್ಪ ಭದ್ರಶೆಟ್ಟಿ, ಕಲಬುರಗಿ, ದೇಶಮುಖ ಶಂಕರಪ್ಪ, ಬೀದರ್ (ಡಯಟ್ ಹಿರಿಯ ಉಪನ್ಯಾಸಕ), ಎನ್‌.ಶ್ರೀಧರ, ಹಿರೇಕೆರೂರು, ಚಂದ್ರಹಾಸ ಪದ್ಮನಾಭ ರಾಯ್ಕರ, ಕಾರವಾರ, ಸುಖದೇವ, ದೇವದುರ್ಗ, ವಿಜಯಕುಮಾರ ಜಮಖಂಡಿ, ಕಲಬುರಗಿ ದಕ್ಷಿಣ (ಬಿಇಒಗಳು). ಸಿರಾಜ್ ಸಾಬ್ ಮೆಹಬೂಬ್ ಸಾಬ್ ಹುಡೇದಮನಿ, ಧಾರವಾಡ, ಕೆ.ಕಾನನ ಪ್ರಭು, ರಾಯಚೂರು, ಎಂ. ಚಂದ್ರಶೇಖರ, ಯಾದಗಿರಿ, ಸಂಗ್ರಾಮಪ್ಪ, ಬೀದರ್ (ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿಗಳು), ಬಸವಂತರಾಯ ಯಲ್ಲಪ್ಪ ಜಿಡ್ಡೆ, ಬಿಸಿಯೂಟ ಯೋಜನೆ ಶಿಕ್ಷಣಾಧಿಕಾರಿ-ಬೀದರ್, ಎಂ.ಜಿ.ಕುಮಾರಸ್ವಾಮಿ, ಹಿರಿಯ ಸಹಾಯಕ ನಿರ್ದೇಶಕ, ಆಯುಕ್ತರ ಕಚೇರಿ-ಬೆಂಗಳೂರು.

ಸಣ್ಣ ನೀರಾವರಿ: ಬಾಕಿ ಅಧಿಕ, ಯೋಜನೆಗಳಿಗೂ ತೊಡಕು: ಸಿದ್ದರಾಮಯ್ಯ

## ಬಾಕಿ ಕಾಮಗಾರಿಗೆ ₹12,696 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ನೀರಾವರಿ ಇಲಾಖೆಯಲ್ಲಿ ಹಿಂದೆ ನಡೆಸಿದ ಕಾಮಗಾರಿಗಳ ಬಾಕಿ ಬಿಲ್ ಮೊತ್ತ ₹3,036 ಕೋಟಿ ತಲುಪಿದ್ದು, ಹೊಸ ಕಾಮಗಾರಿಗಳನ್ನು ಆರಂಭಿಸಲಾಗದ ಸ್ಥಿತಿ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗುರುವಾರ ನಡೆದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಅವರು, ಹಿಂದಿನ ಬಿಜೆಪಿ ಸರ್ಕಾರ ಎರಡು ವರ್ಷಗಳ ಅವಧಿಯಲ್ಲಿ ಬಜೆಟ್‌ನಲ್ಲಿ ಮೀಸಲಿಟ್ಟ ಹಣಕ್ಕಿಂತ ಮೂರುಪಟ್ಟು ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. 2018ರಲ್ಲಿ ₹440 ಕೋಟಿ ಇದ್ದ ಬಾಕಿ ಮೊತ್ತ ಈಗ ಭಾರಿ ಪ್ರಮಾಣಕ್ಕೆ ಏರಿದೆ. ಆರಂಭಿಸಬೇಕಾಗಿದ್ದ ಕಾಮಗಾರಿಗಳಿಗೆ ಇದು ತೊಡಕಾಗಿದೆ ಎಂದರು.



ಸಿದ್ದರಾಮಯ್ಯ

ಸಣ್ಣ ನೀರಾವರಿ ಇಲಾಖೆಗೆ ಮಂಜೂರಾದ ಕಾಮಗಾರಿ ಕೈಗೊಳ್ಳಲು ₹22,304 ಕೋಟಿ ಇತ್ತು. ಈ ವರ್ಷದ ಮಾರ್ಚ್ ವೇಳೆಗೆ ₹9,602.37 ಕೋಟಿ ವೆಚ್ಚವಾಗಿದೆ. 2023-24ನೇ ಸಾಲಿಗೆ ಬಾಕಿ ಕಾಮಗಾರಿ ಕೈಗೊಳ್ಳಲು ₹12,696.35 ಕೋಟಿ ಬೇಕಿದೆ. ಕಾಮಗಾರಿ ಪ್ರಾರಂಭವಾಗಿದ್ದರೆ ಅಂತಹ ಯೋಜನೆಗಳನ್ನು ಮುಂದುವರೆಸಬೇಕು. ಪ್ರಾರಂಭವಾಗದ ಕಾಮಗಾರಿಗಳನ್ನು ಕೈಬಿಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ 34 ಸಾವಿರ ಕೆರೆಗಳ ಸಮಗ್ರ ನಿರ್ವಹಣೆ ಕುರಿತು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಕೆರೆ ಬಳಕೆದಾರರ ಸಂಘಗಳ ಬಲವರ್ಧನೆಯ ಪ್ರಸ್ತಾವವನ್ನು ಹಣಕಾಸು ಇಲಾಖೆಗೆ ಕಳುಹಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆ ಬಳಕೆದಾರರ ಸಂಘಗಳಿಗೆ ಅಧಿಕಾರೇತರ ಸದಸ್ಯರ ನೇಮಕ ಮಾಡುವಾಗ ಪರಿಣತರು ಹಾಗೂ ಕಾಳಜಿ ಇರುವವರನ್ನು ಆಯ್ಕೆ ಮಾಡಬೇಕು. ಕೆರೆಗಳಲ್ಲಿ ಮೀನು ಸಾಕಾಣಿಕೆಗೆ ಗುತ್ತಿಗೆ ನೀಡಿ ಸಂಪನ್ಮೂಲ ಸಂಗ್ರಹಿಸಬೇಕು. ಶಿರಸಿ, ಬೆಳಗಾವಿ, ಹಾಸನ, ಚಾಮರಾಜನಗರ, ಮಡಿಕೇರಿ, ಗದಗ ನಗರಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾಮಗಾರಿ ಆರಂಭಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಬೆಂಗಳೂರು ನಗರದ ಹೊರವಲಯದಲ್ಲಿ ₹100 ಕೋಟಿ ವೆಚ್ಚದಲ್ಲಿ ವಿಜ್ಞಾನ ನಗರಿ ನಿರ್ಮಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಅದಕ್ಕಾಗಿ 25 ಎಕರೆ ಜಾಗ ಒದಗಿಸಬೇಕು ಎಂದರು.

ಸಣ್ಣ ನೀರಾವರಿ ಸಚಿವ ಎನ್‌.ಎಸ್‌. ಬೋಸರಾಜು ಇದ್ದರು.

### ‘ಬಿಜೆಪಿ ಎಷ್ಟು ವಿದ್ಯುತ್ ಉತ್ಪಾದನೆ ಹೆಚ್ಚಿಸಿತ್ತು’

ಬೆಂಗಳೂರು: ‘ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ವಿದ್ಯುತ್ ಕೊರತೆ ಎದುರಾಗಿದೆ. ಈ ವಿಚಾರದಲ್ಲಿ ಟೀಕೆ ಮಾಡುವ ಬಿಜೆಪಿ ನಾಯಕರು ತಮ್ಮ ಅಧಿಕಾರ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಎಷ್ಟು ಪ್ರಮಾಣದಲ್ಲಿ ಹೆಚ್ಚಳ ಮಾಡಿದ್ದರು ಎಂಬುದನ್ನು ಹೇಳಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಮಳೆ ಪ್ರಮಾಣ ಕಡಿಮೆ ಆಗಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದರು.

‘ಈ ಹಿಂದೆ ನಮ್ಮ ಸರ್ಕಾರ ಇದ್ದಾಗಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ 10 ಸಾವಿರದಿಂದ 13 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸಿದ್ದೆವು. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ಸರ್ಕಾರ ವಿದ್ಯುತ್ ಉತ್ಪಾದನೆ ಹೆಚ್ಚಿಸಿಲ್ಲ’ ಎಂದರು.

‘ಇನ್ನೂ 10 ಸಾವಿರ ಎಕರೆ ಜಾಗದಲ್ಲಿ ಸೋಲಾರ್ ವಿದ್ಯುತ್ ಮತ್ತು ಪವನ ವಿದ್ಯುತ್ ಉತ್ಪಾದನೆಗೆ ಕಾರ್ಯಕ್ರಮ ರೂಪಿಸುತ್ತಿದೆ’ ಎಂದರು.

### ಪ್ಯಾಲೆಸ್ಟೀನ್ ಪರ ಸ್ಟೇಟಸ್: ವ್ಯಕ್ತಿ ವಶ

ಹೊಸಪೇಟೆ (ವಿಜಯನಗರ): ಪ್ಯಾಲೆಸ್ಟೀನ್ ಪರ ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ ಮತ್ತು ಮೊಬೈಲ್‌ನಲ್ಲಿ ಪ್ಯಾಲೆಸ್ಟೀನ್ ದೇಶದ ಜನರಿಗೆ ಬೆಂಬಲ ನೀಡುವ ವಿಡಿಯೊ ಇಟ್ಟುಕೊಂಡಿದ್ದ ಆರೋಪದ ಮೇರೆಗೆ ಇಲ್ಲಿನ ಸಿದ್ದಲಿಂಗಪ್ಪ ಚೌಕಿಯ ನಿವಾಸಿ, ಅಲ್ಪಸಂಖ್ಯಾತ ಇಲಾಖೆ ಕಚೇರಿಯಲ್ಲಿನ ಅಟೆಂಡರ್ ಆಲಂ ಬಾಷಾ (20) ಎಂಬುವನನ್ನು ಪಟ್ಟಣ ಠಾಣೆಯ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

## ಜಿಲ್ಲಾಸ್ಪತ್ರೆಗಳಲ್ಲಿ ಶ್ವಾಸಕೋಶದ ಕ್ಯಾನ್ಸರ್ ಪತ್ತೆಗೆ ‘ಎಐ’ ಸಾಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್ ಪತ್ತೆ ಹಚ್ಚುವ ಕೃತಕ ಬುದ್ಧಿಮತ್ತೆ(ಎಐ) ಆಧಾರಿತ ಸಾಧನವನ್ನು ರಾಜ್ಯದ 19 ಜಿಲ್ಲಾ ಆಸ್ಪತ್ರೆಗಳಲ್ಲಿ ಅಳವಡಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಈ ತಂತ್ರಜ್ಞಾನವನ್ನು ಅಳವಡಿಸಲು ಮುಂದೆ ಬಂದಿರುವ ಅಸ್ಟ್ರಾಜೆನಿಕಾ ಇಂಡಿಯಾ ಸಂಸ್ಥೆಯೊಂದಿಗೆ ಬುಧವಾರ ವಿಕಾಸಸೌಧದಲ್ಲಿ ನಡೆದ ಒಡಂಬಡಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ವರ್ಷಗಳ ಕಾಲ ಉಚಿತ ಸೇವೆ ಒದಗಿಸಲು ಆರೋಗ್ಯ ಇಲಾಖೆಯೊಂದಿಗೆ ಅಸ್ಟ್ರಾಜೆನಿಕಾ ಇಂಡಿಯಾ ಸಂಸ್ಥೆ ಒಡಂಬಡಿಕೆ ಮಾಡಿಕೊಂಡಿದೆ. ಇದರ ಉಪಯೋಗವನ್ನು ಪರಿಶೀಲಿಸಿ ಉಳಿದ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಎಂದು ಸಚಿವರು ವಿವರಿಸಿದರು.

ಆರಂಭಿಕ ಹಂತದಲ್ಲಿಯೇ ಶ್ವಾಸಕೋಶದ ಕ್ಯಾನ್ಸರ್ ಪತ್ತೆ ಹಚ್ಚುವ ತಂತ್ರಜ್ಞಾನ ಇದು. ಎದೆಯ ಡಿಜಿಟಲ್ ಎಕ್ಸ್‌-ರೇ ಬಳಸಿಕೊಂಡು ರೋಗಿಗಳನ್ನು ಗುರುತಿಸಲು ಸಹಾಯಕಾರಿಯಾಗಿದೆ. ಪ್ರಾಥಮಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆಯಾದರೆ ಚಿಕಿತ್ಸೆ ಸುಲಭ ಎಂದು ತಿಳಿಸಿದರು.

ರಾಜ್ಯದಲ್ಲಿ ಕ್ಯಾನ್ಸರ್ ಪ್ರಮಾಣವು ಪ್ರತಿ ವರ್ಷ ಸುಮಾರು ಶೇ 1ರಷ್ಟು ಹೆಚ್ಚುತ್ತಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ನಡೆಸಿದ ಅಧ್ಯಯನ ತಿಳಿಸಿದೆ. ಈ ಹಿನ್ನೆಲೆಯಲ್ಲಿ ರೋಗಿಗಳ ನೆರವಿಗಾಗಿ ಜಿಲ್ಲಾ ಆಸ್ಪತ್ರೆಗಳಲ್ಲಿ ತಂತ್ರಜ್ಞಾನ ಅಳವಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ಅಸ್ಟ್ರಾಜೆನಿಕಾ ಸಂಸ್ಥೆಯ ಸಂಜೀವ್ ಪಾಂಚಾಲ್ ಪರಸ್ಪರ ಒಡಂಬಡಿಕೆ ಹಸ್ತಾಂತರ ಮಾಡಿಕೊಂಡರು.

## ಅತ್ಯಾಚಾರ: 10 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬಾಲಕಿಯರ ಬಾಲ ಮಂದಿರದಿಂದ ತಪ್ಪಿಸಿಕೊಂಡಿದ್ದ ಇಬ್ಬರು ಬಾಲಕಿಯರನ್ನು ವೇಶ್ಯಾವಾಟಿಕೆಯ ಜಾಲಕ್ಕೆ ತಳ್ಳಿ ಅತ್ಯಾಚಾರಕ್ಕೆ ಕಾರಣವಾಗಿದ್ದ ನಾಲ್ವರು ಸೇರಿ ಹತ್ತು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗದಲ್ಲಿ ಬಾಲಕಿಯೊಂದಿಗೆ ಸುತ್ತಾಡುತ್ತಿದ್ದ ಯುವಕನನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. 16 ವರ್ಷದ ಬಾಲಕಿಯನ್ನು ಲೈಂಗಿಕವಾಗಿ ಬಳಸಿಕೊಂಡಿದ್ದ ಯುವಕನ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ(ಪೋಕ್ಸೊ) ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು. ಬಾಲಕಿಯನ್ನು ಚಿಕ್ಕಮಗಳೂರಿನ ಬಾಲ ಮಂದಿರಕ್ಕೆ ಒಪ್ಪಿಸಿದ್ದರು.

ಬಾಲ ಮಂದಿರದಿಂದ ಮತ್ತೊಬ್ಬ 14 ವರ್ಷದ ಬಾಲಕಿಯೊಂದಿಗೆ ಹೊರಹೋಗಿದ್ದ ಬಾಲಕಿ, ವೇಶ್ಯಾವಾಟಿಕೆ ನಡೆಸುವವರ ಸಂಪರ್ಕಕ್ಕೆ ಸಿಲುಕಿದ್ದಾರೆ. ಈ ಇಬ್ಬರು ಬಾಲಕಿಯರನ್ನು ಹಾಸನದ ಮತ್ತೊಬ್ಬ ಮಧ್ಯವರ್ತಿಯ ಬಳಿ ಚಿಕ್ಕಮಗಳೂರಿನ ಮಧ್ಯವರ್ತಿ ಕಳುಹಿಸಿದ್ದಾರೆ. ಅಲ್ಲಿ ಇಬ್ಬರು ಬಾಲಕಿಯರ ಮೇಲೆ ಹಲವರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬುದು ಮೂಲಗಳ ಮಾಹಿತಿ.

ಅಲ್ಲಿಂದ ಬಸ್ ಹತ್ತಿ ಬೆಂಗಳೂರಿಗೆ ತೆರಳಿ, ಧರ್ಮಸ್ಥಳಕ್ಕೆ ಪ್ರಯಾಣ ಬೆಳೆಸಿದ್ದರು. ಅಷ್ಟರಲ್ಲಿ ಬಾಲ ಮಂದಿರದ ಸಿಬ್ಬಂದಿ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಧರ್ಮಸ್ಥಳದಿಂದ ಬಾಲಕಿಯರನ್ನು ಕರೆತಂದು ವಿಚಾರಿಸಿದಾಗ ವೇಶ್ಯಾವಾಟಿಕೆಗೆ ತಳ್ಳಿದ್ದರಿಂದ ಹಾಸನದಲ್ಲಿ ಹಲವರಿಂದ ಅತ್ಯಾಚಾರ ನಡೆದಿದೆ ಎಂಬುದನ್ನು ಬಾಲಕಿಯರು ಪೊಲೀಸರ ಮುಂದೆ ತಿಳಿಸಿದ್ದಾರೆ.

ಚಿಕ್ಕಮಗಳೂರಿನಿಂದ ಹಾಸನಕ್ಕೆ ಕಳುಹಿಸಿದ ಆರೋಪದಲ್ಲಿ ಮಧ್ಯವರ್ತಿ ದಂಪತಿ, ಹಾಸನದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರು ಎನ್ನಲಾದ ದಂಪತಿ, ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿದ ಆರೋಪದಲ್ಲಿ ಆರು ಮಂದಿ ಸೇರಿ ಹತ್ತು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇನ್ನೂ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಬಾಲ ಮಂದಿರದಿಂದ ವಿದ್ಯಾರ್ಥಿನಿಯರು ತಪ್ಪಿಸಿಕೊಳ್ಳಲು ಅವಕಾಶ ಇಲ್ಲ. ಆಗಿರುವ ಪ್ರಮಾದಕ್ಕೆ ಕಾರಣ ಕೇಳಿ ಕಾವಲುಗಾರರಿಗೆ ಬಾಲ ಮಂದಿರದ ಮುಖ್ಯಸ್ಥರು ನೋಟಿಸ್ ನೀಡಿದ್ದಾರೆ.

## ದಲಿತರ ಕಾಲೊನಿ: ಪೇಜಾವರಶ್ರೀ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಹೆಗ್ಗೇರಿಯ ಭುವನೇಶ್ವರಿ ನಗರದ ದಲಿತರ ಕಾಲೊನಿಯಲ್ಲಿ ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಗುರುವಾರ ಪಾದಯಾತ್ರೆ ನಡೆಸಿದರು. ಭಕ್ತರು ಹೂವು ಸುರಿದು ಭಕ್ತಿ ಸಮರ್ಪಿಸಿದರು. ಜೈಶ್ರೀರಾಮ್, ಬೋಲೋ ಭಾರತ್ ಮಾತಾಕಿ ಜೈ ಘೋಷಣೆ ಕೂಗಿದರು.

ವಿಶ್ವ ಹಿಂದೂ ಪರಿಷತ್ ಹುಬ್ಬಳ್ಳಿ ಮಹಾನಗರದ ಧರ್ಮಚಾರಿ ಸಂಪರ್ಕ ಪ್ರಮುಖ ಯಲ್ಲಪ್ಪ ಬಾಗಲಕೋಟಿ ಅವರ ಮನೆಗೆ ಭೇಟಿ ನೀಡಿದ ಸ್ವಾಮೀಜಿ, ಫಲಮಂತ್ರಾಕ್ಷತೆ ವಿತರಿಸಿದರು. ವಿಶ್ವ ಹಿಂದೂ ಪರಿಷತ್ ಉತ್ತರ ಪ್ರಾಂತ ಪ್ರಚಾರಕ ಬಸವರಾಜ್ ಅವರು ಕುಟುಂಬ ಸದಸ್ಯರನ್ನು ಸ್ವಾಮೀಜಿಗೆ ಪರಿಚಯಿಸಿದರು.

ಭುವನೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಸ್ವಾಮೀಜಿ, ‘ದೇಶದಲ್ಲಿರುವ ಎಲ್ಲರೂ ಸನಾತನ ಧರ್ಮೀಯರು. ಶ್ರೀರಾಮ ಧರ್ಮದ ಪ್ರತಿರೂಪ. ಶತಮಾನಗಳ ನ್ಯಾಯಯುತ ಹೋರಾಟದ ಫಲವಾಗಿ ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣವಾಗುತ್ತಿದೆ’ ಎಂದರು.



ಹುಬ್ಬಳ್ಳಿಯ ಹೆಗ್ಗೇರಿಯ ಭುವನೇಶ್ವರಿ ಕಾಲೊನಿಯ ದಲಿತರ ಕೇರಿಯಲ್ಲಿ ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಶ್ರೀಗಳು ಗುರುವಾರ ಪಾದಯಾತ್ರೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಯಾರಿಗೂ ಅನ್ಯಾಯ ಮಾಡದೆ ಎಲ್ಲರೂ ಒಂದಾಗಿ ಬಾಳಿದರೆ ಅದು ದೇವರಿಗೆ ಸಲ್ಲಿಸುವ ದೊಡ್ಡ ಪೂಜೆ. ಇನ್ನೊಬ್ಬರನ್ನು ಹೊಡೆಯುತ್ತೇವೆ, ಬಡಿಯುತ್ತೇವೆ ಎನ್ನುವುದು ರಾವಣನ ಸಂಸ್ಕೃತಿ. ಸುಖ, ಶಾಂತಿ, ನೆಮ್ಮದಿ ಬಯಸುವವರು ರಾಮಚಂದ್ರನ ಆದರ್ಶ ಪರಿಪಾಲಿಸಬೇಕು’ ಎಂದರು.

**ನಾಣ್ಯದ ತುಲಾಭಾರ:** ವಿಶ್ವಪ್ರಸನ್ನ ತೀರ್ಥ ಶ್ರೀಗಳ ಷಷ್ಟ್ಯಬ್ದ ಪ್ರಯುಕ್ತ ಅಖಿಲ ಭಾರತ ಮಾಧ್ವ ಮಹಾಮಂಡಲದ ವತಿಯಿಂದ ಹುಬ್ಬಳ್ಳಿಯ ಶ್ರೀಕೃಷ್ಣ ಕಲ್ಯಾಣ ಮಂಟಪದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶ್ರೀಗಳಿಗೆ ನಾಣ್ಯದ ತುಲಾಭಾರ ಮಾಡಲಾಯಿತು.

### ಧರ್ಮಸ್ಥಳ ಯೋಜನೆ: ₹51.72 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಮಂಗಳೂರು: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ 2023-24ರ ಸಾಲಿಗೆ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ₹51.72 ಕೋಟಿ ಅನುದಾನ ವಿನಿಯೋಗಿಸಲಾಗುತ್ತಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲ್‌.ಎಚ್‌. ಮಂಜುನಾಥ್ ತಿಳಿಸಿದ್ದಾರೆ.

ಪ್ರಸಕ್ತ ವರ್ಷ ಕಲ್ಯಾಣ ಕರ್ನಾಟಕದ ವ್ಯಾಪ್ತಿಯಲ್ಲಿ ಹೈನೋದ್ಯಮ ಬಲವರ್ಧನೆಗೆ ಒತ್ತು ನೀಡಲಾಗುತ್ತಿದೆ. ಇಡೀ ರಾಜ್ಯದಲ್ಲಿ ಹೈನುಗಾರಿಕೆಯೊಂದಿಗೆ ಸಾವಯವ ಕೃಷಿ, ನೀರಾವರಿ, ಸಮಗ್ರ ತೋಟಗಾರಿಗೆ, ಕೃಷಿ ಸ್ವ-ಉದ್ಯೋಗ, ಭತ್ತ ಯಾಂತ್ರೀಕರಣ, ಸಿರಿಧಾನ್ಯ ಬೇಸಾಯ, ನರ್ಸರಿ ರಚನೆ, ಜಲಾನಯನ ಮಾದರಿಗಳು, ಪರಿಸರ ಮಾಹಿತಿ ಜಾಗೃತಿ ಶಿಬಿರ, ಶಾಲಾ ಪರಿಸರ ಜಾಗೃತಿ ಮಾಹಿತಿ ಶಿಬಿರಗಳನ್ನು ಆಯೋಜಿಸಲು ಕಾರ್ಯಯೋಜನೆ ರೂಪಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಇದೇ 14ರಂದು ಸಂಜೆ 4.30ಕ್ಕೆ ಧರ್ಮಸ್ಥಳದಲ್ಲಿ ಕೃಷಿ ಸಚಿವ ಚೆಲುವರಾಯ ಸ್ವಾಮಿ ಚಾಲನೆ ನೀಡುವರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಹೇಮಾವತಿ ವೀ. ಹೆಗ್ಗಡೆ, ಡಿ.ಹರ್ಷೇಂದ್ರ ಕುಮಾರ್, ಕೃಷಿ ಇಲಾಖಾ ಅಧಿಕಾರಿಗಳು ಪಾಲ್ಗೊಳ್ಳುವರು ಎಂದು ಹೇಳಿದ್ದಾರೆ.

ರಾಜ್ಯೋತ್ಸವ: ಗಡಿಯಲ್ಲಿ ಎಂಇಎಸ್ ಚಟುವಟಿಕೆ ತೀವ್ರ

## ಗಡಿಯಲ್ಲಿ ಮಹಾರಾಷ್ಟ್ರ ಕಚೇರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿಯಲ್ಲಿ ನವೆಂಬರ್ 1ರಂದು ವೈಭವದ ರಾಜ್ಯೋತ್ಸವ ಆಚರಣೆಗೆ ಜಿಲ್ಲಾಡಳಿತ ಸಿದ್ಧತೆ ನಡೆಸಿದ್ದರೆ, ಕರ್ನಾಟಕ ಗಡಿಯಿಂದ 25 ಕಿ.ಮೀ ದೂರದಲ್ಲಿರುವ ಕೊಲ್ಹಾಪುರದ ಚಂದಗಡದಲ್ಲಿ ಕಚೇರಿ ತೆರೆಯಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ.

‘ಮುಂಬೈನ ಸಚಿವಾಲಯದಲ್ಲಿ ಗುರುವಾರ ನಡೆದ ಗಡಿತಜ್ಞರ ಸಮಿತಿ ಸಭೆಯಲ್ಲಿ ಕಚೇರಿ ತೆರೆಯುವ ಬಗ್ಗೆ ನಿರ್ಧರಿಸಲಾಗಿದೆ. ಹಿರಿಯ ಅಧಿಕಾರಿ ಹಾಗೂ ಸಿಬ್ಬಂದಿ ನೇಮಿಸಿ, ಗಡಿ ವಿವಾದಕ್ಕೆ ಸಂಬಂಧಿಸಿದ ಚಟುವಟಿಕೆ ತೀವ್ರಗೊಳಿಸುವುದು ಮತ್ತು ನಿಗಾ ವಹಿಸುವುದು ಮಹಾರಾಷ್ಟ್ರದ ಯೋಜನೆ’ ಎಂದು ಮೂಲಗಳು ಖಚಿತಪಡಿಸಿವೆ.

ಮಹಾರಾಷ್ಟ್ರ ಸರ್ಕಾರದ ನಿರ್ಣಯದ ಬಗ್ಗೆ ಕರ್ನಾಟಕ ಸರ್ಕಾರ ಗಂಭೀರ ಮತ್ತು ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ನೇತೃತ್ವದಲ್ಲಿ ಕನ್ನಡ ಹೋರಾಟಗಾರರು ಜಿಲ್ಲಾಡಳಿತಕ್ಕೆ ಮನವಿಪತ್ರ ಸಲ್ಲಿಸಿದ್ದಾರೆ.

‘ಗಡಿ ವಿವಾದಕ್ಕೆ ಸಂಬಂಧಿಸಿದ ಕಚೇರಿ ಇಷ್ಟು ವರ್ಷ ಮುಂಬೈನಲ್ಲಿತ್ತು. ಈಗ ಕರ್ನಾಟಕದ ಗಡಿಗೆ ಹತ್ತಿರ ತಂದು, ಚಟುವಟಿಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದು ರಾಜ್ಯಕ್ಕೆ ಸಮಸ್ಯೆ ತರಬಹುದು. ಇದಕ್ಕೆ ಪ್ರತ್ಯುತ್ತರ ನೀಡಲು ಗಡಿ ಸಂರಕ್ಷಣಾ ಆಯೋಗ, ಗಡಿ ಅಭಿವೃದ್ಧಿ ಪ್ರಾಧಿಕಾರದ ಕಚೇರಿಗಳನ್ನು ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಬೇಕು’ ಎಂದು ಅವರು ಕೋರಿದ್ದಾರೆ.

ನವೆಂಬರ್ 1ರಂದು ಕರಾಳ ದಿನಾಚರಣೆಗೆ ಸಿದ್ಧತೆ ನಡೆಸಿರುವ ಎಂಇಎಸ್, ಬೆಳಗಾವಿಗೆ ಬರಲು ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ ದೇಸಾಯಿ ಮತ್ತು ಮಹಾರಾಷ್ಟ್ರ ಗಡಿ ತಜ್ಞರ ಸಮಿತಿ ಅಧ್ಯಕ್ಷ, ಸಂಸದ ಧೈರ್ಯಶೀಲ ಮಾನೆ ಅವರಿಗೆ ಕೋರಿದೆ. ಎಂಇಎಸ್ ಮುಖಂಡರಾದ ರಮಾಕಾಂತ ಕೊಂಡೂಸ್ಕರ್, ಪ್ರಕಾಶ ಮರಗಾಳೆ, ವಿಕಾಸ ಕಲಘಟಗಿ ನೇತೃತ್ವದ ನಿಯೋಗ ಮುಂಬೈನಲ್ಲಿದೆ.

### ‘ಬೆಳಗಾವಿಯಲ್ಲಿ ಅಧಿವೇಶನ ನಡೆಸಿ’



ಯಡಿಯೂರಪ್ಪ

ಶಿವಮೊಗ್ಗ: ‘ಬೆಳಗಾವಿಯಲ್ಲಿ ಕೋಟ್ಯಂತರ ರೂಪಾಯಿ ವ್ಯಯಿಸಿ ಸುವರ್ಣ ಸೌಧ ನಿರ್ಮಿಸಲಾಗಿದೆ. ಅಲ್ಲಿ ಅಧಿವೇಶನ ನಡೆಸದಿದ್ದರೆ ಹೇಗೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಸುವ ನಿಟ್ಟಿನಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಬೇಕು. ಸುವರ್ಣ ಸೌಧದಲ್ಲಿಯೇ ಅಧಿವೇಶನ ನಡೆದರೆ ಸೂಕ್ತ ಎಂದರು.

‘ಕಾವೇರಿ ನದಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಕಾವೇರಿ ನೀರು ನಿರ್ವಹಣಾ ಮಂಡಳಿಯ ತೀರ್ಮಾನ ತೃಪ್ತಿದಾಯಕವಾಗಿಲ್ಲ. ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ರಾಜ್ಯದ ರೈತರಿಗೆ ನ್ಯಾಯ ದೊರಕಿಸಿಕೊಡಬೇಕು. ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಕ್ಷಾಮದ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಬೇಕು ಎಂದು ಕೋರಿದರು.

## ಗೋಕರ್ಣ: 180 ಅನಧಿಕೃತ ಅತಿಥಿ ಗೃಹ!

• ಎಂ.ಜಿ.ನಾಯ್ಕ

ಕುಮಟಾ (ಉತ್ತರ ಕನ್ನಡ ಜಿಲ್ಲೆ): ‘ಗೋಕರ್ಣದಲ್ಲಿರುವ 200 ರೆಸಾರ್ಟ್, ಹೋಮ್ ಸ್ಟೇಗಳಲ್ಲಿ 20 ಮಾತ್ರ ಅಧಿಕೃತ. 180 ಅನಧಿಕೃತ’ ಎಂಬ ಮಾಹಿತಿಯನ್ನು ತಾಲ್ಲೂಕು ಆಡಳಿತ ಬಹಿರಂಗಪಡಿಸಿದೆ.

‘ವಿದೇಶಿ ಪ್ರವಾಸಿಗರನ್ನು ಸೆಳೆಯುವ ಗೋಕರ್ಣದಲ್ಲಿ ಪ್ರತಿ ವರ್ಷ ರೆಸಾರ್ಟ್, ಹೋಮ್ ಸ್ಟೇಗಳ ಸಂಖ್ಯೆ ಹೆಚ್ಚುತ್ತಿದೆ. ಕುಮಟಾ ಭಾಗದಲ್ಲಿ 45, ಗೋಕರ್ಣದಲ್ಲಿ 155 ರೆಸಾರ್ಟ್, ಹೋಂ ಸ್ಟೇಗಳಿವೆ. ಆತಿಥ್ಯಕ್ಕೆ ಹೆಸರುವಾಸಿಯಾದ ಇಲ್ಲಿನ ಅತಿಥಿಗೃಹಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಆದರೆ, ನಿಯಮಾನುಸಾರ ಪರವಾನಗಿ ಪಡೆದ ಅತಿಥಿಗೃಹಗಳ ಸಂಖ್ಯೆ ಕಡಿಮೆ’ ಎಂದು ಅಧಿಕಾರಿಗಳು ಹೇಳುತ್ತಾರೆ.

ಈಚೆಗೆ ತಾಲ್ಲೂಕಿನ ಬಾಡದಲ್ಲಿರುವ ರೆಸಾರ್ಟ್‌ವೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಆರೋಪದ ಮೇಲೆ ಪೊಲೀಸರು ದಾಳಿ ನಡೆಸಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದರು. ಇದರ ಬೆನ್ನಲ್ಲೆ ತಾಲ್ಲೂಕು ಆಡಳಿತ ಎಚ್ಚೆತ್ತು ರೆಸಾರ್ಟ್, ಹೋಂ ಸ್ಟೇಗಳ ಮಾಹಿತಿ ಕಲೆ ಹಾಕಲು ಆರಂಭಿಸಿತ್ತು.



> **ಉತ್ತರ ಕನ್ನಡ ಜಿಲ್ಲೆಯಾದ್ಯಂತ ರೆಸಾರ್ಟ್, ಹೋಂ ಸ್ಟೇಗಳ ಪರಿಶೀಲನೆ ಕಾರ್ಯ ಸದ್ಯದಲ್ಲೇ ನಡೆಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗುವುದು**
> **–ಬೇಬಿ ಮೊಘೇರಾ,**
> ಉಪನಿರ್ದೇಶಕಿ,ಪ್ರವಾಸೋದ್ಯಮ ಇಲಾಖೆ

‘ಸಮುದ್ರ ತೀರದಲ್ಲಿ ರೆಸಾರ್ಟ್ ಅಥವಾ ಹೋಂ ಸ್ಟೇ ಆರಂಭಿಸುವ ಉದ್ದೇಶವಿದ್ದರೆ, ಸಮುದ್ರ ನೀರಿನ ಮಟ್ಟದಿಂದ 500 ಮೀಟರ್ ಅಂತರದಲ್ಲಿ ಕಟ್ಟಡ ನಿರ್ಮಿಸಬಾರದು ಎಂಬುದು ಕರಾವಳಿ ನಿಯಂತ್ರಣ ವಲಯದ (ಸಿ.ಆರ್‌.ಝಡ್) ನಿಯಮ. ಪ್ರವಾಸೋದ್ಯಮ ಸಮಿತಿಯ ಅನುಮೋದನೆ ಪಡೆಯಬೇಕು ಎಂಬ ನಿಯಮವೂ ಇದೆ. ಆದರೆ ಬಹುತೇಕ ರೆಸಾರ್ಟ್ ಮತ್ತು ಹೋಂ ಸ್ಟೇ ಅನುಮತಿಯನ್ನೇ ಪಡೆದಿಲ್ಲ’ ಎಂದು ತಹಶೀಲ್ದಾರ್ ಸತೀಶ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

‘ಗ್ರಾಮ ಪಂಚಾಯ್ತಿಯಿಂದ ನಿರಾಕ್ಷೇಪಣಾ ಪತ್ರ ಪಡೆದು ರೆಸಾರ್ಟ್, ಹೋಂ ಸ್ಟೇ ನಡೆಸಲಾಗುತ್ತಿದೆ. ಈಚೆಗೆ ಬಾಡದ ಘಟನೆ ನಡೆದ ಬಳಿಕ ಪರಿಶೀಲನೆ ನಡೆಸಿದ ಬಳಿಕ ಈ ಮಾಹಿತಿ ಅರಿವಿಗೆ ಬಂದಿದ್ದು ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು’ ಎಂದರು.

ಅಪಾರ ಸಂಖ್ಯೆಯ ಆಕಾಂಕ್ಷಿಗಳಿಗೆ ಅವಕಾಶ ವಂಚಿತರಾಗುವ ಆತಂಕ

## ಅರಣ್ಯ ವೀಕ್ಷಕ: ಲಿಖಿತ ಪರೀಕ್ಷೆ ಕೈಬಿಟ್ಟ ಸರ್ಕಾರ

• ಸಂತೋಷ ಈ. ಚಿನಗುಡಿ

ಬೆಳಗಾವಿ: ರಾಜ್ಯ ಸರ್ಕಾರ 310 ಅರಣ್ಯ ವೀಕ್ಷಕ (ಡಿ ಗ್ರೂಪ್) ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆ. ಆದರೆ, ಲಿಖಿತ ಪರೀಕ್ಷೆ ಕೈಬಿಟ್ಟಿದ್ದು ಹಲವು ಆಕಾಂಕ್ಷಿಗಳ ಆತಂಕಕ್ಕೆ ಕಾರಣವಾಗಿದೆ.

ಅರಣ್ಯ ಇಲಾಖೆಯ 13 ವಲಯಗಳಲ್ಲಿ ಖಾಲಿ ಇರುವ ಅರಣ್ಯ ವೀಕ್ಷಕ ಹುದ್ದೆಗಳ ನೇಮಕಾತಿಗೆ ಸೆಪ್ಟೆಂಬರ್ 27ರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅಕ್ಟೋಬರ್ 26ರವರೆಗೆ ಅವಕಾಶವಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿಸಿ, ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ವೈದ್ಯಕೀಯ ಪರೀಕ್ಷೆ ಬಳಿಕ ನೇಮಕಾತಿ ಆದೇಶ ಕೊಡಲಾಗುತ್ತಿತ್ತು.

ಆದರೆ, ಈ ಬಾರಿ ಪ್ರವೇಶ ಪರೀಕ್ಷೆ ಕೈಬಿಡಲಾಗಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿದ ಬಳಿಕ ಎಸ್ಸೆಸ್ಸೆಲ್ಸಿ ಅಂಕಗಳ ಮೆರಿಟ್ ಆಧರಿಸಿ ನೇಮಕಾತಿ ಮಾಡಿಕೊಳ್ಳುವುದಾಗಿ ಅಧಿಸೂಚನೆ ತಿಳಿಸಿದೆ.

ಕಾರಣವೇನು: ‘2011, 2016 ಹಾಗೂ 2018ರ ನೇಮಕಾತಿ ಸಂದರ್ಭದಲ್ಲಿ ದೈಹಿಕ ಸಾಮರ್ಥ್ಯ ಮತ್ತು ಲಿಖಿತ ಪರೀಕ್ಷೆ ಇತ್ತು. 2019ರಲ್ಲಿ ಕೋವಿಡ್ ಕಾರಣ ನೇಮಕಾತಿ ನಿಯಮ ಬದಲಿಸಿ, ಲಿಖಿತ ಪರೀಕ್ಷೆ ಕೈಬಿಡಲಾಯಿತು. ಆದರೆ, ಆಗ ನೇಮಕಾತಿ ನಡೆಯಲಿಲ್ಲ. ಅದೇ ಹಳೆಯ ಆದೇಶವನ್ನು ಕೋವಿಡ್ ನಂತರದ ನೇಮಕಾತಿಗಳಿಗೂ ಅನ್ವಯ ಮಾಡಲಾಗಿದೆ’ ಎಂದು ಆಕಾಂಕ್ಷಿಗಳು ದೂರುತ್ತಾರೆ.

‘ಅರಣ್ಯ ವೀಕ್ಷಕ ಹುದ್ದೆಗೆ ಎಸ್ಸೆಸ್ಸೆಲ್ಸಿ ಶಿಕ್ಷಣ ಮಾತ್ರ ಮಾನದಂಡ. 2019 ಮತ್ತು 2020ರ ಬ್ಯಾಚ್‌ನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನೆಪ ಮಾತ್ರಕ್ಕೆ ನಡೆಯಿತು. ‘ಕೋವಿಡ್ ಬ್ಯಾಚ್’ನ ಅಪಾರ ಸಂಖ್ಯೆ ವಿದ್ಯಾರ್ಥಿಗಳು ಶೇ 95ಕ್ಕೂ ಹೆಚ್ಚು ಫಲಿತಾಂಶ ಪಡೆದಿದ್ದಾರೆ. ಮೆರಿಟ್ ಆಧಾರದ ಮೇಲೆ ನೇಮಕಾತಿಯಾದರೆ, 19 ರಿಂದ 20 ವರ್ಷದ ವಯೋಮಾನದವರೇ ಹೆಚ್ಚು ನೇಮಕ ಆಗಬಹುದು. 20 ರಿಂದ 30 ವರ್ಷ ವಯೋಮಾನದವರಿಗೆ ಅವಕಾಶ ಸಿಗುವುದಿಲ್ಲ’ ಎಂದು ಅವರು ಹೇಳುತ್ತಾರೆ.

ಮೀಸಲಾತಿಯೂ ಇಲ್ಲ: ‘ಯೋಜನಾ ನಿರಾಶ್ರಿತರಿಗೆ ನೇಮಕಾತಿಯಲ್ಲಿ ಶೇ 5ರಷ್ಟು ಹುದ್ದೆ ಮೀಸಲಿಡಬೇಕು ಎಂಬುದು ನಿಯಮ. ಈ ಬಾರಿಯ ಅಧಿಸೂಚನೆಯಲ್ಲಿ ಅದನ್ನೂ ಕೈಬಿಡಲಾಗಿದೆ. 3ಎ, 3ಬಿ ವರ್ಗಗಳಿಗೂ ಯಾವುದೇ ಮೀಸಲಾತಿ ನಿಗದಿ ಮಾಡಿಲ್ಲ. 2ಎ ವರ್ಗದವರಿಗೆ ಮಾತ್ರ 5 ಸೀಟ್ ಇಡಲಾಗಿದೆ. ಈ ಎಲ್ಲ ಗೊಂದಲ ನಿವಾರಿಸಿ ಹೊಸ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಇಲ್ಲದಿದ್ದರೆ, ತಡೆಯಾಜ್ಞೆ ತರಲು ಮುಂದಾಗುತ್ತೇವೆ’ ಎಂದು ಆಕಾಂಕ್ಷಿ ಮಲ್ಲಪ್ಪ ಅರಕೇರಿ ಹೇಳುತ್ತಾರೆ.

### ‘ಗೆಜೆಟ್ ನೋಟಿಫಿಕೇಷನ್ ಪಾಲನೆ’

‘2019ರಲ್ಲಿ ಮಾಡಿದ ಲಿಖಿತ ಪರೀಕ್ಷೆ ಕೈಬಿಟ್ಟು ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಗಿದೆ. ಅದನ್ನು ಆಧರಿಸಿ ಅರಣ್ಯ ವೀಕ್ಷಕರ ನೇಮಕಾತಿ ಮಾಡಲಾಗುತ್ತಿದೆ. 2019– 20ರಲ್ಲಿ ಎಸ್ಸೆಸ್ಸೆಲ್ಸಿ ಪಾಸಾದವರು ಹೆಚ್ಚು ಅಂಕ ಪಡೆದಿದ್ದಾರೆ ಎಂಬ ಕಾರಣಕ್ಕೆ ಈ ನೇಮಕಾತಿಗೆ ತಕರಾರು ಮಾಡುವುದು ಸರಿಯಲ್ಲ. ಆಗ ಕೋವಿಡ್ ಕಾರಣ ಮಕ್ಕಳಿಗೆ ಪಾಠಗಳೇ ನಡೆದಿಲ್ಲ ಎಂಬುದನ್ನೂ ಗಮನಿಸಬೇಕು’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥ ಬ್ರಿಜೇಶ್‌ಕುಮಾರ್ ದೀಕ್ಷಿತ ‘ಪ್ರಜಾವಾಣಿ’ಗೆ ತಿಳಿಸಿದರು.

> **2019ರಲ್ಲಿ ಅನಿವಾರ್ಯ ಕಾರಣ ಬದಲಾಯಿಸಿದ ನಿಯಮವನ್ನು ಈಗಲೂ ಮುಂದುವರಿಸಿದ್ದು ಸರಿಯಲ್ಲ. ಸರ್ಕಾರ ಹೊಸ ಆದೇಶ ಹೊರಡಿಸಬೇಕು –**
> **ಮಲ್ಲಪ್ಪ ಅರಕೇರಿ,**
> ಉದ್ಯೋಗಾಕಾಂಕ್ಷಿ, ಬಾಗಲಕೋಟೆ

> **ಐದು ವರ್ಷಗಳ ನಂತರ ಸರ್ಕಾರ ನೇಮಕಾತಿ ಮಾಡಿಕೊಳ್ಳುತ್ತಿದೆ. ಮೆರಿಟ್ ಆಧಾರದಲ್ಲಿ ನೇಮಕ ಮಾಡಿದರೆ ಹಳೆಯ ಬ್ಯಾಚ್‌ನವರಿಗೆ ಅನ್ಯಾಯವಾಗುತ್ತದೆ-**
> **ಕಿರಣ್ ರಾಜ್,**
> ಉದ್ಯೋಗಾಕಾಂಕ್ಷಿ, ಬೆಳಗಾವಿ

## ಕಾಂಗ್ರೆಸ್ ಸಿಇಸಿ ಸಭೆ

ನವದೆಹಲಿ (ಪಿಟಿಐ): ಛತ್ತೀಸಗಢ ಮತ್ತು ಮಿಜೋರಾಂನಲ್ಲಿ ಪಕ್ಷದ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಕಾಂಗ್ರೆಸ್‌ನ ಕೇಂದ್ರೀಯ ಚುನಾವಣಾ ಸಮಿತಿ (ಸಿಇಸಿ) ಸಭೆ ಗುರುವಾರ ಇಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆಯಿತು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸಿಇಸಿ ಸದಸ್ಯರಾದ ಅಂಬಿಕಾ ಸೋನಿ, ಮಧುಸೂದನ್ ಮಿಸ್ತ್ರಿ, ಅಧೀರ್ ರಂಜನ್ ಚೌಧರಿ ಮತ್ತು ಟಿ.ಎಸ್. ಸಿಂಗ್ ಸಭೆಯಲ್ಲಿದ್ದರು. ಚುನಾವಣೆ ಘೋಷಣೆಯಾಗಿದ್ದರೂ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಇನ್ನೂ ಪ್ರಕಟಿಸಿಲ್ಲ.

‘ಮಿಜೋರಾಂ ಜನರು ಬದಲಾವಣೆ ಬಯಸಿದ್ದಾರೆ. ಅಲ್ಲಿನ ಜನರು ಈ ಬಾರಿ ಪಕ್ಷಕ್ಕೆ ಅವಕಾಶ ನೀಡುವರೆಂಬ ವಿಶ್ವಾಸವಿದೆ’ ಎಂದು ಸಭೆ ಬಳಿಕ ಖರ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಛತ್ತೀಸಗಢ ಕುರಿತಂತೆ ಮತ್ತೊಂದು ಪೋಸ್ಟ್ ಹಾಕಿದ್ದಾರೆ. ಸಿಇಸಿ ಸಭೆಯ ಫೋಟೊ ಕೂಡ ಹಾಕಿದ್ದಾರೆ. ರಾಜಸ್ಥಾನದ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಸಿಇಸಿ ಶುಕ್ರವಾರ ಮತ್ತೆ ಸಭೆ ಸೇರಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

## 250 ತುಕಡಿಗಳ ನಿಯೋಜನೆ

ನವದೆಹಲಿ (ಪಿಟಿಐ): ಮುಂಬರುವ ವಿಧಾನಸಭಾ ಚುನಾವಣೆಗಾಗಿ ಐದು ರಾಜ್ಯಗಳಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ಮತ್ತು ರಾಜ್ಯ ಪೊಲೀಸ್ ಪಡೆಗಳಿಂದ ಅಂದಾಜು 250 ತುಕಡಿಗಳನ್ನು ನಿಯೋಜಿಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ ಮತ್ತು ಮಿಜೋರಾಂನಲ್ಲಿ ನ. 7ರಿಂದ 30ರವರೆಗೆ ಚುನಾವಣೆ ನಡೆಯಲಿದೆ. ಡಿ. 3ರಂದು ಮತ ಎಣಿಕೆ ನಡೆಯಲಿದೆ.

### ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಅಖಾಡ: ಉತ್ತಮ ಸಾಧನೆ ಅನಿವಾರ್ಯ • ನಾಲ್ವರು ಕೇಂದ್ರ ಸಚಿವರಿಗೆ ಟಿಕೆಟ್

# ಸಂಸದರಿಗೆ ಮಣೆ: ಬಿಜೆಪಿಯ ಹೊಸ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಹೀನಾಯ ಸೋಲು ಕಂಡ ಬಳಿಕ ಬಿಜೆಪಿ ಹೈಕಮಾಂಡ್ ಸಂಸದರಿಗೆ ವಿಧಾನಸಭಾ ಚುನಾವಣೆಗೆ ಟಿಕೆಟ್ ನೀಡುವ ವಿಷಯದಲ್ಲಿ ನಿಲುವು ಬದಲಿಸಿದೆ.

ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ವಿಧಾನಸಭಾ ಚುನಾವಣೆಗಳಿಗೆ ಈವರೆಗೆ 18 ಸಂಸದರನ್ನು ಕಣಕ್ಕೆ ಇಳಿಸಿದೆ. ಇದರಲ್ಲಿ ನಾಲ್ವರು ಕೇಂದ್ರ ಸಚಿವರು ಸೇರಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೊಪ್ಪಳ ಕ್ಷೇತ್ರದಿಂದ ಕಣಕ್ಕೆ ಇಳಿಯಲು ಅಲ್ಲಿನ ಸಂಸದ ಸಂಗಣ್ಣ ಕರಡಿ ಭಾರಿ ಪ್ರಯತ್ನ ನಡೆಸಿದ್ದರು. ಆದರೆ, ಅವರಿಗೆ ಟಿಕೆಟ್ ಕೊಟ್ಟಿರಲಿಲ್ಲ. ಟಿಕೆಟ್ ನೀಡದಿದ್ದರೆ ಸಂಗಣ್ಣ ಪಕ್ಷ ತ್ಯಜಿಸಲಿದ್ದಾರೆ ಎಂಬ ಸುಳಿವು ಸಿಕ್ಕ ಕೂಡಲೇ ಬಿಜೆಪಿ ವರಿಷ್ಠರು ಸಂಸದರ ಸೊಸೆಗೆ ಟಿಕೆಟ್ ನೀಡಿದ್ದರು. ಅದೇ ರೀತಿ, ನಾಲ್ಕೈದು ಸಂಸದರು ರಾಜ್ಯ ರಾಜಕಾರಣಕ್ಕೆ ಬರಲು ಪರೋಕ್ಷ ಆಸೆ ವ್ಯಕ್ತಪಡಿಸಿದ್ದರು. ಆದರೆ, ಅವರಿಗೆ ಯಾರಿಗೂ ಅವಕಾಶ ಸಿಕ್ಕಿರಲಿಲ್ಲ.

ಲೋಕಸಭಾ ಚುನಾವಣೆಗೆ ಮುನ್ನ ನಡೆಯಲಿರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡುವುದು ಬಿಜೆಪಿಗೆ ಅನಿವಾರ್ಯ. ಮಧ್ಯಪ್ರದೇಶದಲ್ಲಿ ಬಿಜೆಪಿಗೆ ಆಡಳಿತ ವಿರೋಧಿ ಅಲೆ ಪ್ರಬಲವಾಗಿದೆ. ಈ ಅಲೆ ತಗ್ಗಿಸಲು ಬಿಜೆಪಿ ನಾನಾ ಪ್ರಯೋಗ ಮಾಡುತ್ತಿದೆ. ಅದರಲ್ಲಿ ಸಂಸದರಿಗೆ ಟಿಕೆಟ್ ಕೊಟ್ಟಿರುವುದು ಒಂದು.

ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಪ್ರಹ್ಲಾದ ಸಿಂಗ್ ಪಟೇಲ್; ಫಗ್ಗನ್ ಸಿಂಗ್ ಕುಲಸ್ತೆ ಸೇರಿದಂತೆ ಏಳು ಸಂಸದರನ್ನು ಹುರಿಯಾಳುಗಳನ್ನಾಗಿ ಮಾಡಿದೆ. ತೋಮರ್ ಅವರು ದಿಮಾನಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. 2018ರ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಬಿಜೆಪಿ ಸೇರುವ ಉದ್ದೇಶದಿಂದ ಅಲ್ಲಿನ ಶಾಸಕ ಗಿರಿರಾಜ್ ದಿಂಡೋಟಿಯಾ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಪರಮಾಪ್ತರಾಗಿರುವ ಅವರು 2020ರ ಉಪಚುನಾವಣೆಯಲ್ಲಿ ಸೋತಿದ್ದರು. ಆ ಕ್ಷೇತ್ರವನ್ನು ಕೈವಶ ಮಾಡಿಕೊಳ್ಳುವ ಉದ್ದೇಶದಿಂದ ಕಮಲ ಪಡೆಯು ತೋಮರ್ ಅವರಿಗೆ ಮಣೆ ಹಾಕಿದೆ. ತೋಮರ್ ಅಭ್ಯರ್ಥಿಯನ್ನಾಗಿ ಘೋಷಿಸಿ 15 ದಿನಗಳು ಕಳೆದಿವೆ. ಆದರೆ, ಅವರು ಈ ತನಕ ಕ್ಷೇತ್ರದತ್ತ ಸುಳಿದಿಲ್ಲ.

ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಕುಲಸ್ತೆ ಎಸ್‌ಟಿ ಮೀಸಲು ಕ್ಷೇತ್ರ ನಿವಾಸ್‌ನಿಂದ ಸ್ಪರ್ಧಿಸ ಲಿದ್ದಾರೆ. 2018ರಲ್ಲಿ ಈ ಕ್ಷೇತ್ರ ‘ಕೈ’ ಪಾಲಾಗಿತ್ತು. ರಾಜ್ಯದಲ್ಲಿ ಈ ತನಕ 136 ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿ ಗಳನ್ನು ಪ್ರಕಟಿಸಿದೆ. ಮುಂದಿನ ಪಟ್ಟಿಯಲ್ಲಿ ಇನ್ನಷ್ಟು ಸಂಸದರಿಗೆ ಟಿಕೆಟ್ ಲಭಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

| ಛತ್ತೀಸಗಢ | |
|---|---|
| ವಿಜಯ್ ಬಘೇಲ್ | ಪಟಾನ್ |
| ಅರುಣ್ ಸಾವೋ | ಲೋರ್ಮಿ |
| ರೇಣುಕಾ ಸಿಂಗ್ | ಭರತ್ಪುರ್-ಸೋನ್ಹತ್ |
| ಗೋಮತಿ ಸಾಯಿ | ಪಾತಾಳ್‌ಗಾಂವ್ |

ರಾಜಸ್ಥಾನದಲ್ಲಿ 41 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ 7 ಸಂಸದರ ಹೆಸರು ಇದೆ. ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೆ ಕಠಿಣ ಸ್ಪರ್ಧೆ ನೀಡುವ ಉದ್ದೇಶದಿಂದ ಸಂಸದ ವಿಜಯ್ ಬಘೇಲ್ ಅವರನ್ನು ಹುರಿಯಾಳುವನ್ನಾಗಿ ಮಾಡಿದೆ. ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಸಂಸದ ಅರುಣ್ ಸಾವೋ, ಕೇಂದ್ರ ಸಚಿವೆ ರೇಣುಕಾ ಸಿಂಗ್ ಹಾಗೂ ಸಂಸದೆ ಗೋಮತಿ ಸಾಯಿ ಅವರು ರಾಜ್ಯ ರಾಜಕಾರಣದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

| ರಾಜಸ್ಥಾನ | |
|---|---|
| ರಾಜ್ಯವರ್ಧನ್ ಸಿಂಗ್ ರಾಥೋಡ್ | ಝೋತ್ವಾರಾ |
| ದಿಯಾ ಕುಮಾರಿ | ವಿದ್ಯಾಧರ್ ನಗರ್ |
| ನರೇಂದ್ರಕುಮಾರ್ | ಮಾಂಡವಾ |
| ಬಾಬಾ ಬಾಲಕ್‌ನಾಥ್ | ತಿಜಾರಾ |
| ಭಾಗೀರಥ್ ಚೌಧರಿ | ಕಿಶನ್‌ಗಢ |
| ದೇವ್‌ಜಿ ಪಟೇಲ್ | ಸಂಚೋರ್ |
| ಕಿರೋಡಿಲಾಲ್ ಮೀನಾ | ಸವಾಯಿ ಮಾಧೋಪುರ |

| ವಿಧಾನಸಭಾ ಕಣದಲ್ಲಿ ಸಂಸದರು | |
|---|---|
| ಮಧ್ಯಪ್ರದೇಶ | |
| ಹೆಸರು | ಕ್ಷೇತ್ರ |
| ನರೇಂದ್ರಸಿಂಗ್ ತೋಮರ್ | ದಿಮಾನಿ |
| ಪ್ರಹ್ಲಾದ ಸಿಂಗ್ ಪಟೇಲ್ | ನರಸಿಂಗ್‌ಪುರ |
| ಫಗ್ಗನ್ ಸಿಂಗ್ ಕುಲಸ್ತೆ | ನಿವಾಸ್ |
| ರಾಕೇಶ್ ಸಿಂಗ್ | ಜಬಲ್‌ಪುರ ಪಶ್ಚಿಮ |
| ಗಣೇಶ್ ಸಿಂಗ್ | ಸತ್ನಾ |
| ರೀತಿ ಪಾಠಕ್ | ಸಿಧಿ |
| ಉದಯ್ ಪ್ರತಾಪ್ ಸಿಂಗ್ | ಗದರ್ವಾರ |

### ಮಧ್ಯಪ್ರದೇಶ: ಸಭೆಯಲ್ಲಿ 12 ಗ್ಯಾರಂಟಿ ಘೋಷಿಸಿದ ಪ್ರಿಯಾಂಕಾ

# ಉಚಿತ ಶಿಕ್ಷಣ, ರೈತರ ಸಾಲಮನ್ನಾ

ಮಂಡ್ಲಾ, ಮಧ್ಯಪ್ರದೇಶ (ಪಿಟಿಐ): ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಹನ್ನೆರಡನೇ ತರಗತಿವರೆಗೆ ಉಚಿತ ಶಿಕ್ಷಣ, ₹ 500ರಿಂದ–₹1500ರವರೆಗೆ ಮಾಸಿಕ ವಿದ್ಯಾರ್ಥಿವೇತನ ಸೇರಿದಂತೆ 12 ‘ಗ್ಯಾರಂಟಿ’ ನೀಡುವುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಗುರುವಾರ ಇಲ್ಲಿ ಪ್ರಕಟಿಸಿದರು.

ಹಳೆ ಪಿಂಚಣಿ ಯೋಜನೆಯ ಮರು ಜಾರಿ, ರೈತರ ಸಾಲ ಮನ್ನಾ, ಜಾತಿಗಣತಿಗೆ ಚಾಲನೆ, ಸಬ್ಸಿಡಿಯಲ್ಲಿ ಅಡುಗೆ ಅನಿಲ ಮತ್ತು ವಿದ್ಯುತ್ ಪೂರೈಕೆ ಹಾಗೂ ಎಸ್‌ಸಿ, ಎಸ್‌ಟಿಗಳ ಖಾಲಿ ಹುದ್ದೆಗಳ ಭರ್ತಿ ಮಾಡುವುದಾಗಿಯೂ ಅವರು ಆಶ್ವಾಸನೆ ನೀಡಿದರು.

ಬುಡಕಟ್ಟು ಜನರು ಹೆಚ್ಚಿರುವ ಮಂಡ್ಲಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಮಧ್ಯ ಪ್ರದೇಶದಲ್ಲಿ ಬಿಜೆಪಿಯ 18 ವರ್ಷಗಳ ಆಡಳಿತಾವಧಿಯಲ್ಲಿ 250 ಹಗರಣಗಳು ನಡೆದಿವೆ ಎಂದು ರಾಜ್ಯ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ನಡೆಸಿದರು.


‘ಬಿಜೆಪಿಯ ಭ್ರಷ್ಟಾಚಾರದಿಂದ ಜನರು ಬೇಸತ್ತಿದ್ದಾರೆ. ಅವರೀಗ ಬದಲಾವಣೆ ಬಯಸಿದ್ದಾರೆ. ಇಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಸರ್ಕಾರ ರಚಿಸಲಿದೆ’ ಎಂದರು.

ಇತರ ಹಿಂದುಳಿದ ವರ್ಗ (ಒಬಿಸಿ), ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದ ಜನರಿಗೆ ನ್ಯಾಯ ಒದಗಿಸಲು ಜಾತಿಗಣತಿ ಅಗತ್ಯ ಎಂದು ಹೇಳಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, 1-12ನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಜೊತೆಗೆ, 1–8ನೇ ತರಗತಿವರೆಗಿನ ಮಕ್ಕಳಿಗೆ ತಿಂಗಳಿಗೆ ₹ 500 ಮತ್ತು 9–10ನೇ ತರಗತಿ ಮಕ್ಕಳಿಗೆ ₹ 1000 ಮತ್ತು 11–12ನೇ ತರಗತಿ ವಿದ್ಯಾರ್ಥಿಗಳಿಗೆ ₹1500 ನೆರವು ನೀಡುವುದಾಗಿ ಭರವಸೆ ನೀಡಿದರು.

₹ 500ಕ್ಕೆ ಅಡುಗೆ ಅನಿಲ, ಮಹಿಳೆಯರಿಗೆ ಮಾಸಿಕ ₹1500, 100 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಮತ್ತು 200 ಯೂನಿಟ್ ಬಳಕೆಗೆ ಅರ್ಧ ದರ, ರೈತರಿಗೆ ಉಚಿತ ವಿದ್ಯುತ್ ನೀಡುವುದಾಗಿ ಹೇಳಿದರು.

ಮಾಜಿ ಪ್ರಧಾನಿ, ತಮ್ಮ ಅಜ್ಜಿ ಇಂದಿರಾಗಾಂಧಿ ಅವರನ್ನು ಸ್ಮರಿಸಿದ ಅವರು, ‘ನಾನು ಕೆಲಮಟ್ಟಿಗೆ ಅವರನ್ನು ಹೋಲುತ್ತೇನೆ. ಇದರಿಂದ ಜನರಿಗಾಗಿ ವಿಶೇಷವಾಗಿ ಬುಡಕಟ್ಟು ಜನರಿಗಾಗಿ ಹೆಚ್ಚು ಹೊಣೆಗಾರಿಕೆಯಿಂದ ವರ್ತಿಸಬೇಕಿದೆ’ ಎಂದರು.

ಮಧ್ಯಪ್ರದೇಶದಲ್ಲಿ ನ.17 ರಂದು ವಿಧಾನಸಭೆ ಚುನಾವಣೆ ನಡೆಯಲಿದೆ.



ಮಧ್ಯಪ್ರದೇಶದ ಮಂಡ್ಲಾದಲ್ಲಿ ಗುರುವಾರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಅವರು ಬಿಲ್ಲು–ಬಾಣ ಹಿಡಿದು ಬುಡಕಟ್ಟು ಮಹಿಳೆಯರ ಜತೆ ಸಂಭ್ರಮಿಸಿದರು ಪಿಟಿಐ ಚಿತ್ರ

> **ಬಿಜೆಪಿಯ 225 ತಿಂಗಳ ಅಧಿಕಾರಾವಧಿಯಲ್ಲಿ ವ್ಯಾಪಂ, ಮಧ್ಯಾಹ್ನದ ಬಿಸಿಯೂಟ ಮತ್ತು ವಿದ್ಯಾರ್ಥಿವೇತನ ಹಗರಣ ಸೇರಿ 250 ಹಗರಣಗಳು ನಡೆದಿವೆ**
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

## ಮದ್ಯ ನಿಷೇಧ ಗುರಿ; ಖೇರಾ

ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ಮದ್ಯ ನಿಷೇಧ ಮಾಡುವುದು ಕಾಂಗ್ರೆಸ್ ಸರ್ಕಾರದ ಗುರಿಯಾಗಿದೆ. ಹಂತ ಹಂತವಾಗಿ ಇದನ್ನು ಮಾಡಲಾಗುವುದು ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಿದರೆ, ಛತ್ತೀಸಗಢದ ಆಸ್ತಿಗಳನ್ನು ಅದಾನಿಗೆ ಹಸ್ತಾಂತರಿಸಿದಂತೆ ಆಗುತ್ತದೆ’ ಎಂದರು.

2018ರ ಚುನಾವಣೆಯಲ್ಲಿ ನೀಡಿದ್ದ ಮದ್ಯ ನಿಷೇಧ ಆಶ್ವಾಸನೆ ಈಡೇರದ ಬಗ್ಗೆ ಕೇಳಿದ ಪ್ರಶ್ನೆಗೆ, ‘ಕ್ರಮ ಕೈಗೊಳ್ಳಲಾಗಿದೆ. ಐದು ವರ್ಷಗಳಲ್ಲಿ 100 ಮದ್ಯದ ಅಂಗಡಿಗಳನ್ನು ಮುಚ್ಚಲಾಗಿದೆ. ನಾವು ಪ್ರಧಾನಿ ಅವರಂತೆ ಅಲ್ಲ. ನೋಟು ರದ್ದತಿಯಂತೆ ಇದನ್ನು ಮಾಡಲು ಸಾಧ್ಯವಿಲ್ಲ. ₹ 2000 ನೋಟನ್ನು ಏಳು ವರ್ಷಗಳವರೆಗೆ ಕೂಡ ಬಳಸಲು ಆಗಲಿಲ್ಲ. ಈಗ 75 ವರ್ಷಗಳಲ್ಲಿ ನಾವು ಮಾಡಿದ್ದೇನು ಎಂದು ಅವರು ಕೇಳುತ್ತಾರೆ’ ಎಂದು ಲೇವಡಿ ಮಾಡಿದರು.

## ಕಾಂಗ್ರೆಸ್ ಜತೆ ವಿಲೀನ ಇಲ್ಲ–ಶರ್ಮಿಳಾ

ಹೈದರಾಬಾದ್ (ಪಿಟಿಐ): ಕಾಂಗ್ರೆಸ್ ಜೊತೆ ವಿಲೀನ ಸಾಧ್ಯತೆ ತಳ್ಳಿ ಹಾಕಿದ ವೈಎಸ್‌ಆರ್ ತೆಲಂಗಾಣ ಪಕ್ಷದ ಸ್ಥಾಪಕಿ ವೈ.ಎಸ್. ಶರ್ಮಿಳಾ, ರಾಜ್ಯ ವಿಧಾನಸಭೆಯ 119 ಸ್ಥಾನಗಳಿಗೂ ಸ್ಪರ್ಧಿಸಲಾಗುವುದು ಎಂದು ಹೇಳಿದರು.

ಗುರುವಾರ ಪಕ್ಷದ ಸಭೆಯಲ್ಲಿ ಮಾತನಾಡಿದ ಶರ್ಮಿಳಾ, ‘ಪಕ್ಷವನ್ನು ವಿಲೀನಗೊಳಿಸುವ ಅಥವಾ ಹಳೆಯ ಪಕ್ಷದೊಂದಿಗೆ ಕೆಲಸ ಮಾಡುವ ಪ್ರಸ್ತಾಪದ ಬಗ್ಗೆ ಕಾಂಗ್ರೆಸ್ ನಾಯಕರ ಪ್ರತಿಕ್ರಿಯೆಗಾಗಿ ನಾಲ್ಕು ತಿಂಗಳಿಂದ ಕಾಯುತ್ತಿದ್ದೆ. ಕಾಂಗ್ರೆಸ್‌ನಿಂದ ಯಾವುದೇ ಪ್ರತಿಕ್ರಿಯೆ ಬರದ ಕಾರಣ, ಎಲ್ಲಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

‘ಆಡಳಿತ ವಿರೋಧಿ ಮತಗಳು ವಿಭಜನೆಯಾಗದಂತೆ ನೋಡಿಕೊಳ್ಳಲು ಕಾಂಗ್ರೆಸ್ ಜತೆ ಹೋಗಲು ಬಯಸಿದ್ದೆವು. ಆಡಳಿತ ವಿರೋಧಿ ಮತಗಳು ವಿಭಜನೆಯಾದರೆ ಅದು ಅಂತಿಮವಾಗಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರಿಗೆ ಲಾಭವಾಗಲಿದೆ. ಆದರೆ, ಅದು (ಕಾಂಗ್ರೆಸ್ ಜೊತೆಗಿನ ಒಡನಾಟ) ಆಗಲಿಲ್ಲ ಎಂದರು.

‘ಪಾಲೇರು ಕ್ಷೇತ್ರದಿಂದ ನಾನು ಸ್ಪರ್ಧಿಸುತ್ತೇನೆ. ಆದರೆ, ಮತ್ತೊಂದು ಕ್ಷೇತ್ರದಿಂದ ಸ್ಪರ್ಧಿಸುವಂತೆಯೂ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ. ಅಲ್ಲದೇ ಪತಿ ಅನಿಲ್ ಕುಮಾರ್, ತಾಯಿ ವಿಜಯಮ್ಮ ಸಹ ಸ್ಪರ್ಧಿಸಬೇಕೆಂಬ ಬೇಡಿಕೆ ಇದೆ’ ಎಂದರು.

## ಶೆಖಾವತ್‌ಗೆ ರಾಜಸ್ಥಾನ ಪೊಲೀಸರ ನೋಟಿಸ್

ಜೈಪುರ (ಪಿಟಿಐ): ಬ್ಯಾಂಕ್ ಖಾತೆಗಳ ವಿವರ ಮತ್ತು ಹಣಕಾಸು ವಹಿವಾಟು ವಿವರ ಒದಗಿಸುವಂತೆ ರಾಜಸ್ಥಾನ ಪೊಲೀಸರು ತಮಗೆ ನೋಟಿಸ್ ನೀಡಿದ್ದಾರೆ ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಹೇಳಿದರು.

‘ಮುಖ್ಯಮಂತ್ರಿ ಅಶೋಕ್ ಗೆಹಲೋತ್ ನನ್ನ ವಿರುದ್ಧ ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ ಎಂದು ಆರೋಪಿಸಿದ್ದರಿಂದಲೇ ನನಗೆ ನೋಟಿಸ್ ನೀಡಲಾಗಿದೆ’ ಎಂದು ಆರೋಪಿಸಿದರು.

‘ಜೋಧ್‌ಪುರದ ನಿವಾಸಕ್ಕೆ ಈ ನೋಟಿಸ್ ಕಳುಹಿಸಲಾಗಿದೆ. ಇದೇ ಮೊದಲ ಬಾರಿಗೆ ನನಗೆ ನೋಟಿಸ್ ನೀಡಲಾಗಿದೆ. ಇದಕ್ಕೂ ಮೊದಲು ಯಾವುದೇ ತನಿಖೆಗೆ ಕರೆದಿರಲಿಲ್ಲ ಅಥವಾ ನೋಟಿಸ್ ನೀಡಿರಲಿಲ್ಲ’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ನೋಟಿಸ್‌ನಲ್ಲಿ ಕೇಳಿರುವ ವಿವರಗಳು ಈಗಾಗಲೇ ವಿಶೇಷ ಕಾರ್ಯಾಚರಣೆ ತಂಡದ ಬಳಿ ಇವೆ ಎಂದ ಅವರು, ‘ಎರಡು ವರ್ಷಗಳ ಹಿಂದೆ ನನ್ನ ವಿರುದ್ಧ ಮಾಧ್ಯಮಗಳಲ್ಲಿ ಆರೋಪ ಕೇಳಿ ಬಂದಾಗಲೇ ವಿಶೇಷ ಕಾರ್ಯಾಚರಣೆ ತಂಡಕ್ಕೆ ನಾನು ನನ್ನ ಪ್ರತಿನಿಧಿ ಮೂಲಕ ವಿವರಗಳನ್ನು ನೀಡಿದ್ದೇನೆ. ಆರೋಪಗಳು ಸುಳ್ಳು ಮತ್ತು ಇದು ರಾಜಕೀಯ ಪಿತೂರಿ ಎಂದು ತಿಳಿಸಿದ್ದೇನೆ’ ಎಂದು ಹೇಳಿದರು.

ಈಗ ಮತ್ತೆ ವಿವರಗಳನ್ನು ನೀಡುವುದಾಗಿಯೂ ಹೇಳಿದರು.

‘ನನ್ನಿಂದ ಸಣ್ಣ ತಪ್ಪಾಗಿದ್ದರೂ ಕ್ರಮ ತೆಗೆದುಕೊಳ್ಳುವ ಅವಕಾಶವನ್ನು ಗೆಹಲೋತ್ ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಇದು ರಾಜಕೀಯ ಪಿತೂರಿಯಷ್ಟೆ. ನನ್ನನ್ನು ಕ್ರಿಮಿನಲ್ ಎಂದು ಬಿಂಬಿಸಲು ಗೆಹಲೋತ್ ಯತ್ನಿಸುತ್ತಿದ್ದಾರೆ’ ಎಂದು ಆಪಾದಿಸಿದರು.

ಸಂಜೀವಿನಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಹಗರಣದಲ್ಲಿ ಶೆಖಾವತ್ ಅವರು ಭಾಗಿಯಾಗಿರುವುದಾಗಿ ಮುಖ್ಯಮಂತ್ರಿ ಗೆಹಲೋತ್ ಆರೋಪಿಸುತ್ತಲೇ ಬಂದಿದ್ದಾರೆ. ರಾಜಸ್ಥಾನ ಪೊಲೀಸರ ವಿಶೇಷ ಕಾರ್ಯಾಚರಣೆ ತಂಡ ಇದರ ತನಿಖೆ ನಡೆಸುತ್ತಿದೆ.

ಆದರೆ ಕೇಂದ್ರ ಸಚಿವರು ತಮ್ಮ ವಿರುದ್ಧದ ಆರೋಪಗಳು ಆಧಾರರಹಿತ ಮತ್ತು ತಮ್ಮ ವರ್ಚಸ್ಸಿಗೆ ಧಕ್ಕೆ ತರಲು ನಡೆಸಿರುವ ರಾಜಕೀಯ ಪಿತೂರಿ ಎಂದಿದ್ದಾರೆ. ಗೆಹಲೋತ್ ವಿರುದ್ಧ ದೆಹಲಿಯಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

**‘ಮುಖ್ಯಮಂತ್ರಿ ಸ್ಥಾನದ ಸ್ಪರ್ಧಿಯಲ್ಲ’:** ಮುಖ್ಯಮಂತ್ರಿ ಸ್ಥಾನಕ್ಕೆ ತಾವು ಸ್ಪರ್ಧಿಯಲ್ಲ ಎಂದು ಸಚಿವ ಶೆಖಾವತ್ ಸ್ಪಷ್ಟಪಡಿಸಿದ್ದಾರೆ.

ಇತರೆಡೆಯಂತೆ ರಾಜಸ್ಥಾನದಲ್ಲಿಯೂ ಕಾಂಗ್ರೆಸ್ ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಯ ಹೆಸರು ಘೋಷಿಸಿಲ್ಲ. ಒಂದು ವೇಳೆ ಪಕ್ಷ ಗೆದ್ದರೆ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅಥವಾ ಶೆಖಾವತ್ ಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ.

# ಆಹಾರ ಖರೀದಿಗೆ ಮುಗಿಬಿದ್ದ ಪ್ಯಾಲೆಸ್ಟೀನ್ ಜನ

ಜೆರುಸಲೇಂ (ಎಪಿ): ಗಾಜಾದಲ್ಲಿನ ಪ್ಯಾಲೆಸ್ಟೀನ್ ನಾಗರಿಕರು ಗುರುವಾರ ಬೇಕರಿಗಳು ಹಾಗೂ ದಿನಸಿ ಅಂಗಡಿಗಳಿಗೆ ತೆರಳಿ ಅಗತ್ಯ ವಸ್ತುಗಳನ್ನು ಖರೀದಿಸಿದರು. ಗಾಜಾ ಮೇಲೆ ವೈಮಾನಿಕ ದಾಳಿ ನಡೆಸುತ್ತಿರುವ ಇಸ್ರೇಲ್, ಅಲ್ಲಿ ಭೂಸೇನೆಯ ಮೂಲಕ ದಾಳಿ ನಡೆಸಲು ಸಿದ್ಧತೆ ನಡೆಸುತ್ತಿರುವುದಾಗಿ ಹೇಳಿದೆ.

ಭೂಸೇನೆಯ ಮೂಲಕ ದಾಳಿ ನಡೆಸಲು ಇಸ್ರೇಲ್‌ನ ನಾಯಕರಿಂದ ಆದೇಶ ಇನ್ನೂ ಬಂದಿಲ್ಲ. ಬೇಕರಿಗಳು ಹಾಗೂ ದಿನಸಿ ಅಂಗಡಿಗಳು ಗುರುವಾರ ತುಸು ಹೊತ್ತು ಬಾಗಿಲು ತೆರೆಯುವ ಧೈರ್ಯ ತೋರಿದವು. ಆಗ ಅವುಗಳ ಮುಂದೆ ಜನರು ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದಿದ್ದರು. ಗಾಜಾದ ವಿದ್ಯುತ್ ಉತ್ಪಾದನಾ ಘಟಕವು ಬುಧವಾರದಿಂದ ಕೆಲಸ ನಿಲ್ಲಿಸಿದೆ.

‘ವಿದ್ಯುತ್ ಉತ್ಪಾದನೆ ಇಲ್ಲವಾದಾಗ ಆಸ್ಪತ್ರೆಗಳಿಗೆ ವಿದ್ಯುತ್ ಪೂರೈಕೆ ಇರುವುದಿಲ್ಲ. ಇದರಿಂದಾಗಿ ನವಜಾತ ಶಿಶುಗಳನ್ನು ಇನ್‌ಕ್ಯುಬೇಟರ್‌ನಲ್ಲಿ ಇರಿಸುವುದಕ್ಕೆ, ವೃದ್ಧ ರೋಗಿಗಳಿಗೆ ಆಮ್ಲಜನಕ ಪೂರೈಸುವುದಕ್ಕೆ ತೊಂದರೆ ಆಗುತ್ತದೆ. ಡಯಾಲಿಸಿಸ್ ಸೇವೆ ಇರುವುದಿಲ್ಲ. ಎಕ್ಸ್‌ರೇ ನಡೆಸಲು ಆಗುವುದಿಲ್ಲ. ಆಸ್ಪತ್ರೆಗಳೇ ಶವಾಗಾರಗಳಾಗುವ ಅಪಾಯವಿದೆ’ ಎಂದು ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ ಹೇಳಿದೆ.

ಒತ್ತೆಯಾಳುಗಳನ್ನು ಬಿಡುಗಡೆ ಮಾಡುವವರೆಗೆ ಗಾಜಾಕ್ಕೆ ಏನನ್ನೂ ಪೂರೈಸುವುದಿಲ್ಲ ಎಂದು ಇಸ್ರೇಲ್‌ನ ಇಂಧನ ಸಚಿವ ಇಸ್ರೇಲ್ ಕಟ್ಸ್ ಎಚ್ಚರಿಸಿದ್ದಾರೆ. ಹಮಾಸ್‌ನ ಮಿಲಿಟರಿ ನಾಯಕತ್ವ ಹಾಗೂ ಅದರ ಆಡಳಿತ ವ್ಯವಸ್ಥೆಯ ನಾಯಕತ್ವವನ್ನು ಕೆಳಗಿಳಿಸಲು ಈಗ ಗಮನ ನೀಡಲಾಗಿದೆ ಎಂದು ಇಸ್ರೇಲ್ ಹೇಳಿದೆ.

ರಫಾ ಕ್ರಾಸಿಂಗ್ ಮೂಲಕ ಗಾಜಾಕ್ಕೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಈಜಿಪ್ಟ್ ನಾಯಕತ್ವವು ಇಸ್ರೇಲ್ ಮತ್ತು ಅಮೆರಿಕದ ಜೊತೆ ಮಾತುಕತೆ ನಡೆಸುತ್ತಿದೆ.



ವೈಮಾನಿಕ ದಾಳಿ ಬಳಿಕ ದಕ್ಷಿಣ ಗಾಜಾ ಪಟ್ಟಿಯ ನಿರಾಶ್ರಿತ ಶಿಬಿರದಿಂದ ಗಾಯಾಳುವನ್ನು ಪ್ಯಾಲೆಸ್ಟೀನಿಯನ್ನರು ಆಸ್ಪತ್ರೆಗೆ ಕರೆದೊಯ್ದರು ಪಿಟಿಐ–ಎಪಿ ಚಿತ್ರ

ಇಸ್ರೇಲ್–ಹಮಾಸ್ ಸಮರ

### ರೈಸಿ ಚರ್ಚೆ

ರಿಯಾದ್ (ಎಎಫ್‌ಪಿ): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಸಂಘರ್ಷ ಕುರಿತು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಮತ್ತು ಸೌದಿ ಅರೇಬಿಯಾ ದೊರೆ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಗುರುವಾರ ದೂರವಾಣಿಯಲ್ಲಿ ಮಾತುಕತೆ ನಡೆಸಿದರು.

ದೊರೆ ಮೊಹಮ್ಮದ್ ಅವರಿಗೆ ಕರೆ ಮಾಡಿದ ರೈಸಿ, ಗಾಜಾ ಮತ್ತು ಅದರ ಸುತ್ತಮುತ್ತಲಿನ ಪ್ರಸ್ತುತ ಮಿಲಿಟರಿ ಪರಿಸ್ಥಿತಿ ಕುರಿತು ಚರ್ಚಿಸಿದರು.

ಸಂಘರ್ಷ ನಿಲ್ಲಿಸುವ ಕುರಿತು ರಿಯಾದ್ ಎಲ್ಲಾ ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳೊಂದಿಗೆ ಸಂವಹನ ನಡೆಸುತ್ತಿದೆ ಎಂದು ಮೊಹಮ್ಮದ್ ಅವರು ರೈಸಿಗೆ ತಿಳಿಸಿದರು ಎಂದು ಸೌದಿ ಪ್ರೆಸ್ ಏಜೆನ್ಸಿ (ಎಸ್‌ಪಿಎ) ಅಧಿಕಾರಿ ಹೇಳಿದ್ದಾರೆ.

## ತಾಯ್ನಾಡಿಗೆ ಧಾವಿಸಿದ ಮೀಸಲು ಪಡೆ ಯೋಧರು

ನ್ಯೂಯಾರ್ಕ್/ದುಬೈ (ರಾಯಿಟರ್ಸ್): ಇಸ್ರೇಲ್ ಮೀಸಲು ಪಡೆಯ ಯೋಧರ ಪೈಕಿ ಕೆಲವರು ಮಧುಚಂದ್ರಕ್ಕೆ ತೆರಳಿದ್ದರು. ಇನ್ನು ಕೆಲವರು ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮತ್ತೆ ಕೆಲವರು ವಿದೇಶಗಳಲ್ಲಿ ಹೊಸ ಜೀವನ ಕಟ್ಟಿಕೊಳ್ಳಲು ಹವಣಿಸುತ್ತಿದ್ದರು. ಆದರೆ, ಇಸ್ರೇಲ್ ದೇಶವು ಹಮಾಸ್ ವಿರುದ್ಧ ಯುದ್ಧ ಘೋಷಿಸಿ, ಮೀಸಲು ಪಡೆಯ ಯೋಧರಿಗೆ ಕರೆ ನೀಡಿದಾಗ ಎಲ್ಲರೂ ತಾಯ್ನಾಡಿನ ಕಡೆ ಧಾವಿಸಿದರು...

‘ಎಲ್ಲರೂ ವಾಪಸ್ ಬರುತ್ತಿದ್ದಾರೆ. ಯಾರೂ ಒಲ್ಲೆ ಎನ್ನುತ್ತಿಲ್ಲ...’ ಎಂದು ನ್ಯೂಯಾರ್ಕ್‌ನಿಂದ ಇಸ್ರೇಲ್‌ಗೆ ಮರಳಿ ಬಂದಿರುವ ಯೊನಾತನ್ ಸ್ಟೈನರ್ ಹೇಳುತ್ತಾರೆ. ಅವರು ನ್ಯೂಯಾರ್ಕ್‌ನಲ್ಲಿ ಕೆಲಸದಲ್ಲಿದ್ದರು. ಈಗ ಅವರು ಸೇನೆಯ ವೈದ್ಯಕೀಯ ವಿಭಾಗದಲ್ಲಿ ಕರ್ತವ್ಯದಲ್ಲಿದ್ದಾರೆ. ಅವರನ್ನು ಲೆಬನಾನ್ ಗಡಿಯ ಬಳಿ ನಿಯೋಜಿಸಲಾಗಿದೆ.

ಯುದ್ಧ ಘೋಷಿಸಿದ ನಂತರ ಇಸ್ರೇಲ್ ತನ್ನ 3.60 ಲಕ್ಷ ಮೀಸಲು ಯೋಧರನ್ನು ಕರೆಸಿಕೊಳ್ಳುತ್ತಿದೆ. ಮೀಸಲು ಯೋಧರಲ್ಲಿ ಬಹುತೇಕರು ಇಸ್ರೇಲ್‌ನಲ್ಲೇ ಇದ್ದರು. ಹಲವರು ಬೇರೆ ಬೇರೆ ಕಾರಣಗಳಿಗಾಗಿ ವಿದೇಶಗಳಲ್ಲಿದ್ದರು. ಅವರೆಲ್ಲ ತಮ್ಮ ಕೆಲಸಗಳನ್ನು ಬಿಟ್ಟು ವಾಪಸ್ಸಾಗಿದ್ದಾರೆ.

‘ನನ್ನ ಸ್ನೇಹಿತರು ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ನನ್ನ ಕುಟುಂಬಕ್ಕೆ ರಕ್ಷಣೆ ಬೇಕಿದೆ. ಈ ಹೊತ್ತಿನಲ್ಲಿ ನಾನು ವೈದ್ಯಕೀಯ ವಿಜ್ಞಾನ ವ್ಯಾಸಂಗ ಮುಂದುವರಿಸಲು ಆಗದು’ ಎಂದು ಲಿಥುವೇನಿಯಾದಲ್ಲಿ ವ್ಯಾಸಂಗ ಮಾಡುತ್ತಿದ್ದ ನಿಮ್ರೋದ್ ನೆದಾನ್ ಹೇಳುತ್ತಾರೆ. ಎಲ್.ಕೆ. ಹೆಸರಿನ ವಾಯುಸೇನಾ ಪೈಲಟ್ ಒಬ್ಬರು ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದರು. ಕರೆ ಬಂದ ತಕ್ಷಣ ಅವರು ತಮ್ಮ ಪತ್ನಿ, ಮಕ್ಕಳನ್ನು ಬಿಟ್ಟು ಇಸ್ರೇಲ್‌ಗೆ ಮರಳಿದ್ದಾರೆ.

ಇಸ್ರೇಲ್‌ನಲ್ಲಿ 18 ವರ್ಷ ವಯಸ್ಸಾದಾಗ ಮಿಲಿಟರಿಯಲ್ಲಿ ಸೇವೆ ಸಲ್ಲಿಸಬೇಕಿರುವುದು ಕಡ್ಡಾಯ. ಯುವಕರು 32 ತಿಂಗಳು, ಯುವತಿಯರು 24 ತಿಂಗಳು ಕಡ್ಡಾಯವಾಗಿ ಮಿಲಿಟರಿಯಲ್ಲಿ ಸೇವೆ ಸಲ್ಲಿಸಬೇಕು. ಮೀಸಲು ಪಡೆಯ ಯೋಧರು ಯುದ್ಧದ ಸಮಯದಲ್ಲಿ ಇತರ ಯೋಧರ ಜೊತೆ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಾರೆ.

ಯುದ್ಧ ಘೋಷಣೆಯ ನಂತರದಲ್ಲಿ ಹಲವು ವಿಮಾನಯಾನ ಕಂಪನಿಗಳು ಟೆಲ್ ಅವೀವ್‌ಗೆ ಪ್ರಯಾಣ ರದ್ದುಮಾಡಿವೆ. ಆದರೆ, ಇಸ್ರೇಲ್‌ನ ವಿಮಾನಯಾನ ಕಂಪನಿಗಳು ವಿದೇಶಿ ಮಾರ್ಗಗಳಲ್ಲಿ ವಿಮಾನ ಸಂಚಾರ ಹೆಚ್ಚು ಮಾಡಿ, ಅಲ್ಲಿಂದ ಇಸ್ರೇಲಿಗಳನ್ನು ಕರೆಸಿಕೊಳ್ಳಲು ನೆರವಾಗುತ್ತಿವೆ. ಇಸ್ರೇಲ್ ಮಿಲಿಟರಿಯು ಯುರೋಪಿನ ಕೆಲವು ನಗರಗಳಿಗೆ ಸರಕು ಸಾಗಣೆ ವಿಮಾನಗಳನ್ನು ಕಳುಹಿಸಿ, ಯೋಧರನ್ನು ಕರೆಸಿಕೊಳ್ಳುತ್ತಿದೆ.



ರೋದನ... ಹಮಾಸ್ ಬಂಡುಕೋರರ ದಾಳಿಯಲ್ಲಿ ತನ್ನ ಸಂಬಂಧಿಗಳನ್ನು ಕಳೆದುಕೊಂಡ ಮಹಿಳೆಯೊಬ್ಬರು ಅಂತ್ಯಸಂಸ್ಕಾರದ ವೇಳೆ ರೋದಿಸಿದರು ಎಪಿ/ಪಿಟಿಐ ಚಿತ್ರ

## 220 ಯೋಧರ ಸಾವು

ಜೆರುಸಲೇಂ (ರಾಯಿಟರ್ಸ್): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಘರ್ಷಣೆಯಲ್ಲಿ ಈವರೆಗೂ ದೇಶದ 220 ಯೋಧರು ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನಾ ವಕ್ತಾರ ಡೇನಿಯಲ್ ಹಗರಿ ತಿಳಿಸಿದ್ದಾರೆ.

ಗಾಜಾದಲ್ಲಿ ಹಮಾಸ್ ಬಂಡುಕೋರರು ಒತ್ತೆಯಾಗಿರಿಸಿಕೊಂಡಿರುವ 97 ಮಂದಿಯ ಗುರುತು ದೃಢೀಕರಿಸಲು ಸಾಧ್ಯವಾಯಿತು. ಮಕ್ಕಳು, ನಾಗರಿಕರು, ಮಹಿಳೆಯರು ಮತ್ತು ಸೈನಿಕರು, ವಿದೇಶಿ ಪ್ರಜೆಗಳು ಒತ್ತೆಯಲ್ಲಿದ್ದಾರೆ. ಮುಂದಿನ ಹಂತದ ಯುದ್ಧದ ಕುರಿತು ಸೇನೆ ಸಿದ್ಧತೆ ನಡೆಸುತ್ತಿದೆ ಅವರು ಹೇಳಿದ್ದಾರೆ.

> **ಇಸ್ರೇಲ್ ಮೇಲಿನ ದಾಳಿಗೆ ಪ್ರತೀಕಾರವಾಗಿ ಹಮಾಸ್ ಅನ್ನು ಸಂಪೂರ್ಣ ನಾಶಪಡಿಸಲಾಗುವುದು. ಹಮಾಸ್‌ನ ಪ್ರತಿಯೊಬ್ಬ ಸದಸ್ಯನೂ ಸತ್ತ ವ್ಯಕ್ತಿ ಆಗುತ್ತಾನೆ**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

### ಯುದ್ಧದ ಸುತ್ತ...

- ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯ ಹಿಂದೆ ಇರಾನ್ ನೇರವಾಗಿ ಭಾಗಿಯಾಗಿರುವ ಬಗ್ಗೆ ಯಾವುದೇ ಸುಳಿವು ಇಲ್ಲ ಎಂದು ಫ್ರಾನ್ಸ್ ವಿದೇಶಾಂಗ ಸಚಿವಾಲಯ ಹೇಳಿದೆ.
- ಹಮಾಸ್ ದಾಳಿ ಹಿನ್ನೆಲೆಯಲ್ಲಿ ಹಲವಾರು ಜಾಗತಿಕ ಕಂಪನಿಗಳು ಇಸ್ರೇಲ್‌ನಲ್ಲಿ ಕೆಲವು ಕಾರ್ಯಾಚರಣೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿವೆ, ಉದ್ಯೋಗಿಗಳನ್ನು ಮನೆಯಿಂದ ಕೆಲಸ ಮಾಡಲು ಕೋರಿವೆ.
- ಎರಡು ಹೆರಾನ್ ಟಿಪಿ ಯುದ್ಧ ಡ್ರೋನ್‌ಗಳನ್ನು ಬಳಸಲು ಇಸ್ರೇಲ್‌ಗೆ ಅವಕಾಶ ನೀಡಲಾಗುವುದು ಎಂದು ಜರ್ಮನಿ ರಕ್ಷಣಾ ಸಚಿವ ಬೋರಿಸ್ ಪಿಸ್ಟೋರಿಯಸ್ ಹೇಳಿದ್ದಾರೆ.



ವೈಮಾನಿಕ ದಾಳಿ ಪರಿಣಾಮ ಗಾಜಾದಲ್ಲಿ ಹೊಗೆ ಆವರಿಸಿದೆ ಎಎಫ್‌ಪಿ ಚಿತ್ರ

### ಹಮಾಸ್ ಬಂಡುಕೋರರ ಕೃತ್ಯ ಬಿಚ್ಚಿಟ್ಟ ಬಾಲಕಿ

# ಕಣ್ಮುಂದೆಯೇ ಅಪ್ಪನ ಕೊಂದರು..

ಜೆರುಸಲೇಂ: ಇಸ್ರೇಲ್-ಹಮಾಸ್ ಬಂಡುಕೋರರ ನಡುವಿನ ಸಂಘರ್ಷ ಮಕ್ಕಳ ಮನಸ್ಸಿನ ಮೇಲೆ ಅಳಿಸಲಾಗದ ಕರಾಳ ನೆನಪು ಉಳಿಸಿದೆ. ಕೆಲವರು ಬಂಡುಕೋರರ ಒತ್ತೆಯಲ್ಲಿದ್ದಾರೆ. ಮತ್ತೆ ಕೆಲವರು ಅನಾಥರಾಗಿದ್ದಾರೆ. ಇನ್ನೂ ಕೆಲವರು ತಮ್ಮ ಪ್ರೀತಿಪಾತ್ರರನ್ನು ಕಣ್ಮುಂದೆಯೇ ಹತ್ಯೆಗೀಡಾಗುವುದನ್ನು ನೋಡಿ ಆಘಾತಕ್ಕೆ ಒಳಗಾಗಿದ್ದಾರೆ.

ಬಾಲಕಿ ದರಿಯಾ ಎದುರೇ ಆಕೆಯ ತಂದೆ ಹಾಗೂ ಅವರ ಜೊತೆಗಾತಿಯನ್ನು ಹಮಾಸ್ ಬಂಡುಕೋರರು ಗುಂಡಿಕ್ಕಿ ಕೊಂದಿದ್ದಾರೆ.

ಇಸ್ರೇಲ್ ಸರ್ಕಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಘಟನೆ ಬಗ್ಗೆ ದರಿಯಾ ವಿವರಿಸಿದ್ದಾಳೆ. ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ ವೇಳೆ ದರಿಯಾ ತನ್ನ ಸಹೋದರ ಲಾವಿ ಜತೆ ಗಾಜಾ ಗಡಿ ಸಮೀಪವಿರುವ ಕಿಬ್ಬುಟ್ಸ್‌ನಲ್ಲಿರುವ ತನ್ನ ತಂದೆ ಭೇಟಿ ಮಾಡಲು ಹೋಗಿದ್ದಳು.

‘ನಾನು ನಿದ್ದೆಯಿಂದ ಎಚ್ಚರಗೊಂಡು ಕಣ್ಣು ಬಿಟ್ಟಾಗ ತಂದೆ ದ್ವಿರ್ ಕರಪ್ ಅವರು ಕೈಯಲ್ಲಿ ಮಚ್ಚು ಮತ್ತು ಚಾಕು ಹಿಡಿದು ಬಂಡುಕೋರರತ್ತ ಓಡುವುದನ್ನು ನೋಡಿದೆ. ಅವರು ಅಪ್ಪ ಮತ್ತು ಅವರ ಜೊತೆಗಾತಿ ಸ್ವಾವಳನ್ನು ಗುಂಡಿಟ್ಟು ಕೊಂದರು. ಇದು ನನ್ನ ಕಣ್ಮುಂದೆಯೇ ನಡೆಯಿತು’ ಎಂದು ದರಿಯಾ ಹೇಳಿದ್ದಾಳೆ.

‘ಭಯಗೊಂಡು ಕಂಬಳಿಯಲ್ಲಿ ಬಚ್ಚಿಟ್ಟುಕೊಂಡಿದ್ದೆ. ಅವರು ಅದನ್ನು ತೆಗೆದು, ನನ್ನನ್ನು ನೋಡಿ ಹೊರಟು ಹೋದರು. ನಾನು ಅಮ್ಮನಿಗೆ ಸಂದೇಶ ಕಳುಹಿಸಿದೆ’ ಎಂದಳು.

‘ಅಮ್ಮಾ, ಇದು ದರಿಯಾ, ಅವರು ತಂದೆ ಮತ್ತು ಸ್ವಾವ್ ಅವರನ್ನು ಕೊಲೆ ಮಾಡಿದ್ದಾರೆ. ಸಹಾಯ ಮಾಡಿ!’ ಎಂದು ಮಗಳು ಕಳುಹಿಸಿರುವ ಸಂದೇಶವನ್ನು ತಾಯಿ ರೆಯುತ್ ಓದಿರುವ ದೃಶ್ಯವೂ ವಿಡಿಯೊದಲ್ಲಿದೆ.

ಆ ದಿನವನ್ನು ತನ್ನ ಜೀವನದ ಅತ್ಯಂತ ಕೆಟ್ಟ ದಿನ ಎಂದು ವಿವರಿಸಿದ ದರಿಯಾ, ‘ನನ್ನ ತಾಯಿ ಹಾಗೂ ಯಾರನ್ನೂ ಮತ್ತೆ ನೋಡಲ್ಲವೇನೋ ಎಂದು ಭೀತಳಾಗಿದ್ದೆ’ ಎಂದಿದ್ದಾಳೆ.

‘ಅಲ್-ಖಸ್ಸಾಮ್ ಜನರು ಚಿಕ್ಕ ಮಕ್ಕಳನ್ನು ಕೊಲ್ಲುವುದಿಲ್ಲ’ ಎಂದು ಸ್ವಾವ್ ಅವರ ಲಿಪ್‌ಸ್ಟಿಕ್ ಬಳಸಿ ಗೋಡೆ ಮೇಲೆ ಬಂಡುಕೋರರು ಬರೆದಿದ್ದರು.

ಅಲ್ ಖಸ್ಸಾಮ್ ಬ್ರಿಗೇಡ್ ಎಂಬುದು ಹಮಾಸ್ ಸಂಘಟನೆಯ ಸೇನೆಯ ಒಂದು ತುಕಡಿ.

## ಸಿರಿಯಾಕ್ಕೆ ವಿಸ್ತರಿಸಿದ ದಾಳಿ

ಒಂದನೇ ಪುಟದಿಂದ

ಹಮಾಸ್‌ನ ದಾಳಿಗೆ ತುತ್ತಾಗಿರುವ ಇಸ್ರೇಲ್‌ಗೆ ಬೆಂಬಲ ಸೂಚಿಸಲು ಬ್ಲಿಂಕನ್ ಅವರು ಇಲ್ಲಿಗೆ ಬಂದಿದ್ದಾರೆ. ‘ನೀವು (ಇಸ್ರೇಲಿನ ಜನ) ನಿಮ್ಮನ್ನು ಏಕಾಂಗಿಯಾಗಿ ರಕ್ಷಿಸಿಕೊಳ್ಳಲು ಸಮರ್ಥರಿರಬಹುದು. ಆದರೆ ಅಮೆರಿಕ ಇರುವವರೆಗೆ ನೀವು ಒಬ್ಬಂಟಿಯಲ್ಲ. ನಾವು ಯಾವತ್ತಿಗೂ ನಿಮ್ಮ ಜೊತೆ ಇರುತ್ತೇವೆ’ ಎಂದು ಬ್ಲಿಂಕನ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗಿನ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್ ಜೊತೆ ದೃಢವಾಗಿ ನಿಲ್ಲುವುದಾಗಿ ಘೋಷಿಸಿದ್ದಾರೆ. ಅಲ್ಲದೆ, ಹಮಾಸ್ ವಿರುದ್ಧದ ಕಾರ್ಯಾಚರಣೆಯಲ್ಲಿ ಸಂಯಮ ಪ್ರದರ್ಶಿಸಬೇಕು ಎಂದು ಹೇಳಿಲ್ಲ. ಆದರೆ ಬ್ಲಿಂಕನ್ ಅವರು ಶಾಂತಿ ಒಪ್ಪಂದವೊಂದು ಅಗತ್ಯ ಎಂಬ ಸೂಚನೆಯನ್ನು ನೀಡಿದ್ದಾರೆ.

‘ಶಾಂತಿ ಮತ್ತು ನ್ಯಾಯವನ್ನು ಬಯಸುವ ಯಾವುದೇ ವ್ಯಕ್ತಿ ಹಮಾಸ್‌ನ ಭಯೋತ್ಪಾದನೆಯನ್ನು ಖಂಡಿಸಬೇಕು. ಹಮಾಸ್ ಸಂಘಟನೆಯು ಪ್ಯಾಲೆಸ್ಟೀನ್ ಜನರನ್ನು ಪ್ರತಿನಿಧಿಸುವುದಿಲ್ಲ. ಘನತೆಯಿಂದ ಬದುಕುವ ಅವರ ನ್ಯಾಯಬದ್ಧ ಬಯಕೆಯನ್ನೂ ಪ್ರತಿನಿಧಿಸುವುದಿಲ್ಲ’ ಎಂದು ಬ್ಲಿಂಕನ್ ಹೇಳಿದ್ದಾರೆ.

ರಾಜತಾಂತ್ರಿಕ ಶಿಷ್ಟಾಚಾರಗಳನ್ನು ಬದಿಗಿರಿಸಿ ಮಾತನಾಡಿದ ಬ್ಲಿಂಕನ್, ‘ನಾನು ಇಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿ ಮಾತ್ರ ಬಂದಿಲ್ಲ. ಇಲ್ಲಿಗೆ ನಾನು ಒಬ್ಬ ಯಹೂದಿಯಾಗಿಯೂ ಬಂದಿದ್ದೇನೆ...’ ಎಂದರು. ಬ್ಲಿಂಕನ್ ಜೊತೆಯಲ್ಲೇ ನಿಂತು ಮಾತನಾಡಿದ ನೆತನ್ಯಾಹು, ‘ಐಎಸ್‌ಐಎಸ್ ಸಂಘಟನೆಯನ್ನು ಹೊಸಕಿಹಾಕಿದ ಮಾದರಿಯಲ್ಲೇ ಹಮಾಸ್ ಸಂಘಟನೆಯನ್ನೂ ಹೊಸಕಿಹಾಕಲಾಗುವುದು’ ಎಂದಿದ್ದಾರೆ.

## ‘ದಿಗ್ಬಂಧನ ಕಾನೂನುಬಾಹಿರ’

ಗಾಜಾ ಪ್ರದೇಶದಲ್ಲಿ ಇಸ್ರೇಲ್ ವಾಯುದಾಳಿ ನಡೆಸುತ್ತಿರುವ ಕಾರಣ ಅಲ್ಲಿನ ಸ್ಮಶಾನಗಳಿಗೆ ಹೋಗುವುದೂ ಅಪಾಯಕಾರಿ ಆಗಿದೆ. ಹೀಗಾಗಿ ಗಾಜಾ ಪ್ರದೇಶದ ಜನರು ತಮ್ಮ ಕುಟುಂಬದಲ್ಲಿ ಯಾರಾದರೂ ಮೃತಪಟ್ಟರೆ ಅವರ ಮೃತದೇಹವನ್ನು ಸನಿಹದ ಖಾಲಿ ಜಾಗಗಳಲ್ಲಿ ಹೂಳುತ್ತಿದ್ದಾರೆ.


ಗಾಜಾ ಪಟ್ಟಿಯ ಆಸ್ಪತ್ರೆಗಳಿಗೆ ಇಂಧನ ಪೂರೈಕೆ ಮಾಡಬೇಕು ಎಂದು ರೆಡ್ ಕ್ರಾಸ್ ಸಂಸ್ಥೆ ಮನವಿ ಮಾಡಿದೆ. ಆದರೆ, ಗಾಜಾ ಪಟ್ಟಿಗೆ ದಿಗ್ಬಂಧನ ಮುಂದುವರಿಯಲಿದೆ, ಯಾವ ವಿನಾಯಿತಿಯನ್ನೂ ನೀಡುವುದಿಲ್ಲ ಎಂದು ಇಸ್ರೇಲ್ ಗುರುವಾರ ಹೇಳಿದೆ. ದಿಗ್ಬಂಧನ ವಿಧಿಸಿರುವ ಕ್ರಮವು ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಎಂದು ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿ ವಿಭಾಗದ ಮುಖ್ಯಸ್ಥ ಜೋಸೆಫ್ ಬೋರೆಲ್ ಹೇಳಿದ್ದಾರೆ.

## ಇರಾನ್ ಕರೆ

ಟೆಹರಾನ್ (ಎಎಫ್‌ಪಿ): ಇಸ್ಲಾಮಿಕ್ ದೇಶಗಳು, ಅರಬ್ ದೇಶಗಳು ಇಸ್ರೇಲ್ ವಿರುದ್ಧ ಒಂದಾಗಬೇಕು ಎಂದು ಇರಾನ್ ಕರೆ ನೀಡಿದೆ.

ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅವರು ‘ಇಸ್ರೇಲ್ ಆಡಳಿತವು ದೌರ್ಜನ್ಯಕ್ಕೆ ಗುರಿಯಾಗಿರುವ ಪ್ಯಾಲೆಸ್ಟೀನ್ ದೇಶದ ವಿರುದ್ಧ ನಡೆಸುತ್ತಿರುವ ಅಪರಾಧ ಕೃತ್ಯಗಳನ್ನು ತಡೆಯಲು ಎಲ್ಲ ಇಸ್ಲಾಮಿಕ್ ಹಾಗೂ ಅರಬ್ ದೇಶಗಳು ಒಂದಾಗಬೇಕು’ ಎಂದು ಹೇಳಿದ್ದಾರೆ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,811 |
| ಇಂದಿನ ಅಂತ್ಯ | 19,794 |
| ▼ | 17 |
| ದಿನದ ಕನಿಷ್ಠ | 19,772 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹555 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹562 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1550 (1570) |
| ಸೋಯಾ (ರಿಫೈನ್ಡ್) | ₹867 (855) |
| ಸೂರ್ಯಕಾಂತಿ (ರಿಫೈನ್ಡ್) | ₹870 (865) |
| ಪಾಮೋಲಿನ್ | ₹810 (805) |

**ವಿನಿಮಯ ದರ**

| | |
|---|---|
| $ ಡಾಲರ್ | 83.27 |
| £ ಪೌಂಡ್ | 102.37 |
| € ಯುರೊ | 88.36 |
| ¥ ಯೆನ್ (100ಕ್ಕೆ) | 56 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ತಿಪಟೂರು | ₹7500-8700 |
| ತುಮಕೂರು | ₹3450-4500 |
| ತುರುವೇಕೆರೆ | ₹8400-8400 |

**ರಾಮನಗರ ರೇಷ್ಮೆಗೂಡು ಧಾರಣೆ**


| | |
|---|---|
| ಮಿಶ್ರತಳಿ (ಸಿ.ಬಿ) | ₹285-444 |
| ದ್ವಿತಳಿ (ಬಿ.ವಿ) | ₹335-612 |


**ಮುದ್ರೆಮನೆ ಕಾಫಿ** (50 ಕೆಜಿಗೆ)

| | |
|---|---|
| ಎಪಿ | ₹10400 |
| ಎಸಿ | ₹6075 |
| ಆರ್‌ಪಿ | ₹9000 |
| ಆರ್‌ಸಿ | ₹5830 |

# ಸಿರಿವಂತರ ಪಟ್ಟಿ: ಅಂಬಾನಿ ನಂ.1

ಪ್ರಜಾವಾಣಿ ವಾರ್ತೆ


ಮುಕೇಶ್ ಅಂಬಾನಿ


ಗೌತಮ್ ಅದಾನಿ

**ಬೆಂಗಳೂರು:** ಫೋರ್ಬ್ಸ್ ನಿಯತಕಾಲಿಕ ಪ್ರಕಟಿಸಿರುವ 2023ರ ಭಾರತದ 100 ಸಿರಿವಂತರ ಪಟ್ಟಿಯಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಅವರು ಗೌತಮ್ ಅದಾನಿ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಸಂಪತ್ತು ಮೌಲ್ಯವು ₹7.63 ಲಕ್ಷ ಕೋಟಿಗೆ ತಲುಪುವ ಮೂಲಕ ಅವರು ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಅದಾನಿ ಸಮೂಹದ ವಿರುದ್ಧ ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರದಲ್ಲಿ ಗೌತಮ್ ಅದಾನಿ ಅವರ ಸಂಪತ್ತು ಮೌಲ್ಯವು ₹6.80 ಲಕ್ಷ ಕೋಟಿಯಿಂದ ₹5.64 ಲಕ್ಷ ಕೋಟಿಗೆ ಕುಸಿತ ಕಂಡಿದೆ. ಹೀಗಾಗಿ ಅವರು ಮತ್ತೆ ಎರಡನೇ ಸ್ಥಾನಕ್ಕೆ ಬರುವಂತಾಯಿತು ಎಂದು ಅದು ಹೇಳಿದೆ.

**ಮೂವರು ಹೊಸಬರು:** ಈ ವರ್ಷ ಮೂವರು ಹೊಸಬರು ಸಿರಿವಂತರ ಪಟ್ಟಿಗೆ ಸೇರಿದ್ದಾರೆ. ಲ್ಯಾಂಡ್‌ಮಾರ್ಕ್ ಸಮೂಹದ ಅಧ್ಯಕ್ಷೆ ರೇಣುಕಾ ಜೆ. ಅವರ ಸಂಪತ್ತು ಮೌಲ್ಯವು ₹39,840 ಕೋಟಿ ಇದ್ದು 44ನೇ ಸ್ಥಾನ ಪಡೆದುಕೊಂಡಿದ್ದಾರೆ. ಏಷ್ಯನ್ ಪೇಂಟ್ಸ್‌ನ ದಾನಿ ಕುಟುಂಬವು ₹66,400 ಕೋಟಿ ಸಂಪತ್ತಿನೊಂದಿಗೆ 22ನೇ ಸ್ಥಾನದಲ್ಲಿದೆ. ಕೆ.ಪಿ.ಆರ್. ಮಿಲ್‌ನ ಸ್ಥಾಪಕ ಕೆ.ಪಿ. ರಾಮಸ್ವಾಮಿ ಅವರು ₹19,090 ಕೋಟಿ ಸಂಪತ್ತು ಹೊಂದುವ ಮೂಲಕ 100 ನೇ ಸ್ಥಾನದಲ್ಲಿದ್ದಾರೆ.

**ಪ್ರಮುಖ 10 ಸಿರಿವಂತರು** (₹ಲಕ್ಷ ಕೋಟಿಗಳಲ್ಲಿ)

| | |
|---|---|
| ಮುಕೇಶ್ ಅಂಬಾನಿ | 7.63 |
| ಗೌತಮ್ ಅದಾನಿ | 5.64 |
| ಶಿವ ನಾಡಾರ್ | 2.43 |
| ಸಾವಿತ್ರಿ ಜಿಂದಾಲ್ | 1.99 |
| ರಾಧಾಕಿಷನ್ ದಮಾನಿ | 1.90 |
| ಸೈರಸ್ ಪೂನಾವಾಲ | 1.71 |
| ಹಿಂದುಜಾ ಕುಟುಂಬ | 1.66 |
| ದಿಲೀಪ್ ಸಾಂಘ್ವಿ | 1.57 |
| ಕುಮಾರ ಬಿರ್ಲಾ | 1.45 |
| ಶಾಪೂರ್ ಮಿಸ್ತ್ರಿ ಮತ್ತು ಕುಟುಂಬ | 1.40 |

## ಸೆಪ್ಟೆಂಬರ್‌ನಲ್ಲಿ ಶೇ 5.02ಕ್ಕೆ ಇಳಿಕೆ ಕಂಡ ಹಣದುಬ್ಬರ: ಎನ್‌ಎಸ್‌ಒ ಮಾಹಿತಿ

# ಚಿಲ್ಲರೆ ಹಣದುಬ್ಬರ 3 ತಿಂಗಳ ಕನಿಷ್ಠ


**ನವದೆಹಲಿ (ಪಿಟಿಐ):** ದೇಶದ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇ 5.02ಕ್ಕೆ ಇಳಿಕೆ ಕಂಡಿದೆ. ತರಕಾರಿಗಳು, ಆಹಾರ ವಸ್ತುಗಳ ಬೆಲೆ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಸರ್ಕಾರ ಹೇಳಿದೆ.

ಚಿಲ್ಲರೆ ಹಣದುಬ್ಬರವು ಎರಡು ತಿಂಗಳ ಬಳಿಕ ಆರ್‌ಬಿಐ ಹಾಕಿಕೊಂಡಿರುವ ಗರಿಷ್ಠ ಮಿತಿಯಾದ ಶೇ 6ಕ್ಕಿಂತಲೂ ಕೆಳಕ್ಕೆ ಬಂದಿದೆ. ಗ್ರಾಹಕರ ದರ ಸೂಚ್ಯಂಕ ಆಧರಿಸಿದ ಹಣದುಬ್ಬರವು ಜುಲೈನಲ್ಲಿ ಶೇ 7.41 ಮತ್ತು ಆಗಸ್ಟ್‌ನಲ್ಲಿ ಶೇ 6.83ರಷ್ಟು ಗರಿಷ್ಠ ಮಟ್ಟದಲ್ಲಿ ಇತ್ತು.

ಇದೇ ವರ್ಷದ ಜೂನ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 4.87ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಆಹಾರ ಹಣದುಬ್ಬರವು ಶೇ 9.94 ರಿಂದ ಶೇ 6.56ಕ್ಕೆ ಇಳಿಕೆ ಕಂಡಿದೆ. ತರಕಾರಿಗಳ ಬೆಲೆಯು ಶೇ 26.14ರಿಂದ ಶೇ 3.39ಕ್ಕೆ ಇಳಿಕೆ ಕಂಡಿದೆ.

ಮುಂಗಾರು ಮಳೆಯ ಕೊರತೆ, ಬೇಳೆಕಾಳು ಮತ್ತು ಎಣ್ಣೆಕಾಳುಗಳಂತಹ ಮುಂಗಾರು ಬೆಳೆಗಳ ಬಿತ್ತನೆ ಪ್ರಮಾಣ ಕಡಿಮೆ ಆಗಿರುವುದರ ಜೊತೆಗೆ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದು ಆಹಾರ ಹಣದುಬ್ಬದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.




### ಕೈಗಾರಿಕಾ ಉತ್ಪಾದನೆ 14 ತಿಂಗಳ ಗರಿಷ್ಠ

ದೇಶದ ಕೈಗಾರಿಕಾ ಉತ್ಪಾದನೆಯು ಆಗಸ್ಟ್‌ನಲ್ಲಿ ಶೇ 10.3ಕ್ಕೆ ಏರಿಕೆ ಕಂಡಿದೆ. 14 ತಿಂಗಳ ಗರಿಷ್ಠ ಮಟ್ಟ ಇದಾಗಿದೆ. ಕೈಗಾರಿಕಾ ಉತ್ಪಾದನೆ ಸೂಚ್ಯಂಕವು (ಐಐಪಿ) 2022ರ ಆಗಸ್ಟ್‌ನಲ್ಲಿ ಶೇ (–) 0.7ರಷ್ಟು ಇತ್ತು.

ಈ ಹಿಂದೆ 2022ರ ಜೂನ್‌ನಲ್ಲಿ ಐಐಪಿ ಶೇ 12.6ರಷ್ಟು ಗರಿಷ್ಠ ಮಟ್ಟದ ಬೆಳವಣಿಗೆ ಕಂಡಿತ್ತು. ತಯಾರಿಕೆ, ಗಣಿಗಾರಿಕೆ ಮತ್ತು ವಿದ್ಯುತ್ ವಲಯಗಳ ಉತ್ತಮ ಬೆಳವಣಿಗೆಯಿಂದ ಆಗಸ್ಟ್‌ನಲ್ಲಿ ಈ ಪ್ರಗತಿ ಸಾಧ್ಯವಾಗಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ತಯಾರಿಕಾ ವಲಯದ ಉತ್ಪಾದನೆಯು ಶೇ 9.3ಕ್ಕೆ ಏರಿಕೆ ಕಂಡಿದೆ. ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಶೇ (–) 0.5ರಷ್ಟು ಇತ್ತು. ಗಣಿ ವಲಯದ ಉತ್ಪಾದನೆ ಶೇ 3.9ರಿಂದ ಶೇ 12.3ಕ್ಕೆ, ವಿದ್ಯುತ್ ಉತ್ಪಾದನೆಯು ಶೇ 1.4ರಿಂದ ಶೇ 15.3ಕ್ಕೆ ಏರಿಕೆ ಆಗಿದೆ. ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಐಐಪಿ ಶೇ 6.1ರಷ್ಟು ಆಗಿದೆ. 2022–23ರ ಇದೇ ಅವಧಿಯಲ್ಲಿ ಶೇ 7.7ರಷ್ಟು ಇತ್ತು.

## ಜಾಗತಿಕ ಅನಿಶ್ಚಿತ ಸ್ಥಿತಿ: ಹೊಸ ಯೋಜನೆಗಳ ವಿಳಂಬದ ಪರಿಣಾಮ

# ವರಮಾನ ಮುನ್ನೋಟ ತಗ್ಗಿಸಿದ ಇನ್ಫೊಸಿಸ್


ಸಲೀಲ್ ಪಾರೇಖ್

**ನವದೆಹಲಿ (ಪಿಟಿಐ):** ಇನ್ಫೊಸಿಸ್ ಕಂಪನಿಯು ಜಾಗತಿಕ ಅನಿಶ್ಚಿತ ಪರಿಸ್ಥಿತಿಯಿಂದಾಗಿ 2023–24ನೇ ಹಣಕಾಸು ವರ್ಷಕ್ಕೆ ತನ್ನ ವರಮಾನ ಮುನ್ನೋಟವನ್ನು ತಗ್ಗಿಸಿದೆ. ಇಡೀ ಹಣಕಾಸು ವರ್ಷಕ್ಕೆ ವರಮಾನದಲ್ಲಿ ಶೇ 1 ರಿಂದ ಶೇ 2.5ರಷ್ಟು ಹೆಚ್ಚಳ ಆಗಬಹುದು ಎಂದು ಹೇಳಿದೆ. ವರಮಾನವು ಶೇ 1ರಿಂದ ಶೇ 3.5ರವರೆಗೆ ಹೆಚ್ಚಾಗುವ ಅಂದಾಜನ್ನು ಜೂನ್ ತ್ರೈಮಾಸಿಕದಲ್ಲಿ ಕಂಪನಿ ಮಾಡಿತ್ತು.

ಬೇರೆ ಕಂಪನಿಗಳು ಐ.ಟಿ. ಯೋಜನೆಗಳಿಗೆ ವೆಚ್ಚ ಮಾಡುವುದನ್ನು ತಗ್ಗಿಸುತ್ತಿರುವುದು ಹಾಗೂ ಯೋಜನೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ ಆಗುತ್ತಿರುವ ಕಾರಣಗಳಿಂದಾಗಿ ವರಮಾನದ ಮುನ್ನೋಟವನ್ನು ಈ ಪ್ರಮಾಣದಲ್ಲಿ ಕಡಿತ ಮಾಡಿರುವುದಾಗಿ ಕಂಪನಿಯು ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದಾಖಲೆಯ ₹63,910 ಕೋಟಿ ಮೊತ್ತದ ದೊಡ್ಡ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ ಎಂದು ಇನ್ಫೊಸಿಸ್ ಸಿಇಒ ಸಲೀಲ್ ಪಾರೇಖ್ ತಿಳಿಸಿದ್ದಾರೆ. ದೂರಸಂಪರ್ಕ, ಹಣಕಾಸು ಸೇವೆಗಳ ವಲಯಗಳಿಂದ ಬೇಡಿಕೆ ಕಡಿಮೆ ಆಗಿದೆ. ಆದರೆ ತಯಾರಿಕೆ ಮತ್ತು ಲೈಫ್ ಸೈನ್ಸ್ ವಿಭಾಗಗಳಿಂದ ಬೇಡಿಕೆ ಉತ್ತಮವಾಗಿದೆ ಎಂದು ಅವರು ತಿಳಿಸಿದ್ದಾರೆ.

**ಲಾಭ ಹೆಚ್ಚಳ:** ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 3.1ರಷ್ಟು ಹೆಚ್ಚಾಗಿದ್ದು ₹6,215 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹6,026 ಕೋಟಿ ಇತ್ತು. ಕಂಪನಿಯ ವರಮಾನವು ಶೇ 6.7ರಷ್ಟು ಹೆಚ್ಚಾಗಿ ₹38,994 ಕೋಟಿಗೆ ತಲುಪಿದೆ.

ಕಂಪನಿಯ ಉದ್ಯೋಗಿಗಳ ಸಂಖ್ಯೆಯು ಜೂನ್ ತ್ರೈಮಾಸಿಕದಲ್ಲಿ 3.36 ಲಕ್ಷ ಇದ್ದಿದ್ದು ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ 3.28 ಲಕ್ಷಕ್ಕೆ ಇಳಿಕೆ ಕಂಡಿದೆ.

**ಮಧ್ಯಂತರ ಲಾಭಾಂಶ:** ಕಂಪನಿಯು ₹ 5ರ ಮುಖಬೆಲೆಯ ಪ್ರತಿ ಷೇರಿಗೆ ₹18 ಮಧ್ಯಂತರ ಲಾಭಾಂಶ ಘೋಷಣೆ ಮಾಡಿದೆ. ನವೆಂಬರ್ 1 ರಿಂದ ವೇತನ ಹೆಚ್ಚಳ ಮಾಡುವುದಾಗಿ ಕಂಪನಿ ತಿಳಿಸಿದೆ.

### ಎಚ್‌ಸಿಎಲ್ ಟೆಕ್: ವರಮಾನ ಮುನ್ನೋಟ ಇಳಿಕೆ

**ಬೆಂಗಳೂರು (ರಾಯಿಟರ್ಸ್):** ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯು ಸಹ 2023–24ನೇ ಹಣಕಾಸು ವರ್ಷಕ್ಕೆ ವರಮಾನ ಮುನ್ನೋಟವನ್ನು ತಗ್ಗಿಸಿದೆ. ಈ ಮೊದಲು ವರಮಾನವು ಶೇ 6 ರಿಂದ ಶೇ 6ರವರೆಗೆ ಹೆಚ್ಚಳ ಕಾಣುವ ಅಂದಾಜನ್ನು ಮಾಡಲಾಗಿತ್ತು. ಆದರೆ ಜಾಗತಿಕ ಅನಿಶ್ಚಿತ ಪರಿಸ್ಥಿತಿಯನ್ನು ಗಮನಿಸಿದರೆ ವರಮಾನವು ಶೇ 4 ರಿಂದ ಶೇ 5ರವರೆಗೆ ಹೆಚ್ಚಳ ಆಗಲಿದೆ ಎಂದು ಕಂಪನಿಯು ಗುರುವಾರ ಹೇಳಿದೆ.

ಜಾಗತಿಕ ಆರ್ಥಿಕತೆಯು ಸವಾಲಿನಿಂದ ಕೂಡಿದ್ದು, ಬೇಡಿಕೆಯ ಬಗ್ಗೆ ಅನಿಶ್ಚಿತ ಸ್ಥಿತಿ ಎದುರಾಗಿದೆ. ಹೀಗಾಗಿ ಬೇರೆ ಕಂಪನಿಗಳು ಐ.ಟಿ. ಸೇವೆಗಳಿಗೆ ಬಹಳ ಎಚ್ಚರಿಕೆಯಿಂದ ವೆಚ್ಚ ಮಾಡುತ್ತಿವೆ ಎಂದು ಅದು ತಿಳಿಸಿದೆ.

**ಲಾಭ ಹೆಚ್ಚಳ:** ಕಂಪನಿಯ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 9.9ರಷ್ಟು ಹೆಚ್ಚಾಗಿ ₹3,833 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು 43,487 ಕೋಟಿಯಷ್ಟು ಇತ್ತು. ಕಾರ್ಯಾಚರಣಾ ವರಮಾನ ₹24,686 ಕೋಟಿಯಿಂದ ₹26,672 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

# ಡೆಟ್ ಫಂಡ್: ₹1 ಲಕ್ಷ ಕೋಟಿ ಹಿಂತೆಗೆತ

## ಮುಂಗಡ ತೆರಿಗೆ ಪಾವತಿ, ಷೇರುಗಳಲ್ಲಿ ಹೂಡಿಕೆಗೆ ಗಮನ: ಎಎಂಎಫ್‌ಐ

**ನವದೆಹಲಿ (ಪಿಟಿಐ):** ಡೆಟ್ ಮ್ಯೂಚುವಲ್ ಫಂಡ್ ಯೋಜನೆಗಳಿಂದ ಸತತ ಎರಡನೇ ತಿಂಗಳಿನಲ್ಲಿಯೂ ಬಂಡವಾಳ ಹೊರಹರಿವು ಕಂಡುಬಂದಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಹೇಳಿದೆ.

ಹೂಡಿಕೆದಾರರು ಸೆಪ್ಟೆಂಬರ್‌ನಲ್ಲಿ ₹1.01 ಲಕ್ಷ ಕೋಟಿ ಬಂಡವಾಳವನ್ನು ಡೆಟ್ ಫಂಡ್‌ಗಳಿಂದ ಹಿಂದಕ್ಕೆ ಪಡೆದಿದ್ದಾರೆ. ಆಗಸ್ಟ್‌ನಲ್ಲಿ ₹25,873 ಕೋಟಿ ಹಿಂದಕ್ಕೆ ಪಡೆದಿದ್ದರು ಅದು ಮಾಹಿತಿ ನೀಡಿದೆ.

ಮುಂಗಡ ತೆರಿಗೆ ಪಾವತಿಸಲು, ಕಾರ್ಪೊರೇಟ್ ಅಗತ್ಯಗಳಿಗೆ ಬಂಡವಾಳದ ಬೇಕಿರುವುದು ಹಾಗೂ ಷೇರುಪೇಟೆಯಲ್ಲಿ ಹೂಡಿಕೆ ಮಾಡುವ ಉದ್ದೇಶದಿಂದ ಈ ಪ್ರಮಾಣದ ಬಂಡವಾಳ ಹೊರಹರಿವು ಆಗಿದೆ ಎಂದು ಫೈರ್ಸ್ ರಿಸರ್ಚ್ ಸಂಸ್ಥೆಯ ಉಪಾಧ್ಯಕ್ಷ ಗೋಪಾಲ್ ಕಾವಲಿರೆಡ್ಡಿ ತಿಳಿಸಿದ್ದಾರೆ.

ಲಾಂಗ್ ಡ್ಯುರೇಷನ್ ಮತ್ತು ಗಿಲ್ಟ್ ಫಂಡ್‌ಗಳನ್ನು ಹೊರತುಪಡಿಸಿ ಉಳಿದ 14 ಫಂಡ್‌ಗಳಿಂದ ಹೂಡಿಕೆದಾರರು ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಬಡ್ಡಿದರ ಇಳಿಕೆ ಆಗುವ ನಿರೀಕ್ಷೆಯಿಂದಾಗಿ ಲಾಂಗ್ ಡ್ಯುರೇಷನ್ ಮತ್ತು ಗಿಲ್ಟ್ ಫಂಡ್‌ಗಳಲ್ಲಿ ಹೂಡಿಕೆಯನ್ನು ಮುಂದುವರಿಸಿದ್ದಾರೆ ಎಂದು ಒಕ್ಕೂಟವು ತಿಳಿಸಿದೆ.

ಲಿಕ್ವಿಡ್ ಫಂಡ್‌ಗಳಿಂದ ಹೆಚ್ಚಿನ ₹74,176 ಕೋಟಿ ಬಂಡವಾಳವನ್ನು ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದಾರೆ. ಮನಿ ಮಾರ್ಕೆಟ್ ಫಂಡ್ಸ್‌ನಿಂದ ₹9,158 ಕೋಟಿ, ಅಲ್ಟ್ರಾ ಶಾರ್ಟ್‌ಡ್ಯುರೇಷನ್ ಫಂಡ್ಸ್‌ನಿಂದ ₹5,168 ಕೋಟಿ ಮತ್ತು ಫ್ಲೋಟರ್ ಫಂಡ್ಸ್‌ನಿಂದ ₹4,903 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ ಎಂದು ಒಕ್ಕೂಟವು ಮಾಹಿತಿ ನೀಡಿದೆ.




**ಡೆಟ್ ಫಂಡ್‌ನ ನಿರ್ವಹಣಾ ಸಂಪತ್ತು** (ಲಕ್ಷ ಕೋಟಿಗಳಲ್ಲಿ)

| ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ | ಆಗಸ್ಟ್ ತಿಂಗಳ ಅಂತ್ಯಕ್ಕೆ |
|---|---|
| ₹13.05 | ₹14 |

**ಮುಂಬೈ ಧಾರಣೆ**

**ಶೇಂಗಾ** 12-10-2023

| | |
|---|---|
| ಜಾವಾ 70/80(ಹೊಸ) | 12200-12300 |
| ಜಾವಾ 80/90(ಹೊಸ) | 12900-12000 |
| ದಪ್ಪ ಮಧ್ಯಪ್ರದೇಶ(ಹೊಸ) | 10500-10600 |
| ದಪ್ಪ ಗುಜರಾತ್(ಹೊಸ) | 11300-11400 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1560 (1580) |
| ಒಂದು ವಾರದ ಡೆಲಿವರಿ | 1555 (1575) |
| ಸೋಯಾ ಕಚ್ಚಾ | 825 (820) |
| ಪಾಮ್ ವಾರದ ಡೆಲಿವರಿ | 808 (803) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 797(790) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
57,800 (57,650)
ಬೆಳ್ಳಿ ಕೆ.ಜಿ 69,600 (69,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಬಂಡವಾಳ ಸೆಳೆಯಲು ಚೀನಾಗೂ ಪೈಪೋಟಿ: ಪಾಟೀಲ

# ‘₹25 ಸಾವಿರ ಕೋಟಿ ಹೂಡಿಕೆಗೆ ಆಸಕ್ತಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಂಡವಾಳ ಸೆಳೆಯಲು ದೇಶದ ಇತರ ರಾಜ್ಯಗಳಲ್ಲದೇ, ಚೀನಾದ ಜತೆಗೂ ಕರ್ನಾಟಕವು ತೀವ್ರ ಪೈಪೋಟಿ ನಡೆಸುತ್ತಿದೆ. ಬದಲಾದ ಭೌಗೋಳಿಕ-ರಾಜಕೀಯ ಹಿನ್ನೆಲೆಯಲ್ಲಿ ಅಮೆರಿಕದ ಕಂಪನಿಗಳು ಕರ್ನಾಟಕದಲ್ಲಿ ಹೂಡಿಕೆ ಮಾಡಲು ತೀವ್ರ ಆಸಕ್ತಿ ತೋರಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮತ್ತು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಅಮೆರಿಕಕ್ಕೆ 12 ದಿನಗಳ ವ್ಯಾಪಾರ ಉತ್ತೇಜನಾ ಪ್ರವಾಸ ತೆರಳಿದ್ದ ರಾಜ್ಯ ನಿಯೋಗದ ನೇತೃತ್ವ ವಹಿಸಿದ್ದ ಅವರು ಗುರುವಾರ ವಿಕಾಸಸೌಧದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಈ ಪ್ರವಾಸದ ವೇಳೆ ವಿವಿಧ ಕಂಪನಿಗಳ ಜೊತೆ ಮಾತುಕತೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಅಲ್ಲಿನ ಕಂಪನಿಗಳಿಂದ ರಾಜ್ಯದಲ್ಲಿ ಸುಮಾರು ₹25 ಸಾವಿರ ಕೋಟಿ ಹೂಡಿಕೆ ಮಾಡುವ ಆಸಕ್ತಿ ವ್ಯಕ್ತವಾಗಿದೆ. ಇದರಲ್ಲಿ ಶೇ 60 ರಷ್ಟು ಕಾರ್ಯಗತವಾಗುವ ವಿಶ್ವಾಸವನ್ನು ಎಂ.ಬಿ. ಪಾಟೀಲ ವ್ಯಕ್ತಪಡಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮಾನವ ಸಂಪನ್ಮೂಲದ ಬೇಡಿಕೆಗೆ ಅನುಗುಣವಾಗಿ ಎಂಜಿನಿಯರ್‌ಗಳಿಗೆ ತರಬೇತಿ ನೀಡುವ ಸಂಬಂಧ ಎಎಂಡಿ ಸಂಸ್ಥೆ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಳ್ಳಲಿದೆ. ಈ ಸಂಸ್ಥೆ 800 ಎಂಜಿನಿಯರ್‌ಗಳನ್ನು ಭಾರತದಲ್ಲಿ ನೇಮಕ ಮಾಡಿಕೊಳ್ಳಲಿದೆ ಎಂದು ಹೇಳಿದರು.

ನಾವೀನ್ಯತಾ ಸೂಚ್ಯಂಕದಲ್ಲಿ ಕರ್ನಾಟಕ 18 ನೇ ಸ್ಥಾನ ಪಡೆದಿದ್ದು ಮುಂದಿನ ದಿನಗಳಲ್ಲಿ 10 ರೊಳಗೆ ಸ್ಥಾನ ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದರು.

# ಶರದ್‌ಗೆ ನೋವು ತರಿಸಿದ ಬಿಜೆಪಿ ಸಖ್ಯ: ಸುಪ್ರಿಯಾ


ಸುಪ್ರಿಯಾ ಸುಳೆ

**ಪುಣೆ (ಪಿಟಿಐ):** ‘ಶರದ್ ಪವಾರ್ ಅವರಿಗೆ ಎಂದಿಗೂ ಎನ್‌ಸಿಪಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವ ಇಚ್ಛೆ ಇರಲಿಲ್ಲ. ಆದರೆ, ಪಕ್ಷದ ಹಲವು ನಾಯಕರು ಬಿಜೆಪಿ ಸಖ್ಯ ಬೆಳೆಸಲು ಪಟ್ಟು ಹಿಡಿದಿದ್ದರಿಂದ ಮನನೊಂದು ರಾಜೀನಾಮೆ ಸಲ್ಲಿಸಿದ್ದರು’ ಎಂದು ಪಕ್ಷದ ಕಾರ್ಯಾಧ್ಯಕ್ಷೆ ಹಾಗೂ ಸಂಸದೆ ಸುಪ್ರಿಯಾ ಸುಳೆ ಹೇಳಿದ್ದಾರೆ.

ಕಮಲ ಪಾಳಯದ ಜೊತೆ ಕೈಜೋಡಿಸಲು ಪಕ್ಷದಲ್ಲಿ ನಿರ್ಧರಿಸಲಾಗಿತ್ತು ಎಂಬ ಮಹಾರಾಷ್ಟ್ರದ ಸಚಿವ ಛಗನ್ ಭುಜಬಲ್ ಅವರ ಹೇಳಿಕೆಗೆ ಸುಪ್ರಿಯಾ, ಈ ಪ್ರತಿಕ್ರಿಯೆ ನೀಡಿದ್ದಾರೆ.

ಸುದ್ದಿವಾಹಿನಿಯೊಂದರ ಸಂದರ್ಶನದಲ್ಲಿ ಬುಧವಾರ ಮಾತನಾಡಿದ್ದ ಭುಜಬಲ್, ‘ಬಿಜೆಪಿ ಜತೆ ಕೈಜೋಡಿಸಲು ಶರದ್‌ಗೆ ಇಷ್ಟವಿರಲಿಲ್ಲ. ಹಾಗಾಗಿ, ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಬಳಿಕ ಸುಳೆ ಅವರಿಗೆ ಪಕ್ಷದ ಸಾರಥ್ಯವಹಿಸುವ ಮೂಲಕ ಸರ್ಕಾರದ ಭಾಗವಾಗಲು ತೀರ್ಮಾನಿಸಲಾಗಿತ್ತು’ ಎಂದಿದ್ದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸುಪ್ರಿಯಾ, ‘ಅಪ್ಪನಿಗೆ (ಶರದ್) ಬಿಜೆಪಿ ಸಹವಾಸ ಇಷ್ಟವಿರಲಿಲ್ಲ. ಆದರೆ, ಪ್ರತಿಯೊಬ್ಬರಿಗೂ ಆ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳುವ ಆಸೆ ಇತ್ತು. ಇದು ತಂದೆಗೆ ನೋವು ತರಿಸಿತ್ತು. ಹಾಗಾಗಿಯೇ, ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಿಮ್ಮ (ಮಾಧ್ಯಮಗಳು) ದೃಷ್ಟಿಯಲ್ಲಿ ಅದೊಂದು ಪ್ರಹಸನವಾಗಿತ್ತು. ನಮ್ಮ ಪಾಲಿಗೆ ಅದು ಕಟುಸತ್ಯವಾಗಿತ್ತು’ ಎಂದರು.

‘ಕೊನೆಗೆ, ರಾಜ್ಯದಾದ್ಯಂತ ಪಕ್ಷದ ಕಾರ್ಯಕರ್ತರು ರಾಜೀನಾಮೆ ಹಿಂಪಡೆದು ಅಧ್ಯಕ್ಷರಾಗಿ ಮುಂದುವರಿಸಲು ಆಗ್ರಹಿಸಿದರು. ಹಾಗಾಗಿಯೇ, ಅವರು ತೀರ್ಮಾನವನ್ನು ಬದಲಾಯಿಸಿದರು’ ಎಂದರು.

‘ಹೊಸ ಅಧ್ಯಕ್ಷರ ಆಯ್ಕೆ ಸಂಬಂಧ ಸಮಿತಿಯಲ್ಲಿ ನಿರ್ಧರಿಸುವಂತೆ ಶರದ್ ಸೂಚಿಸಿದ್ದರು. ಇದಕ್ಕೆ ಭುಜಬಲ್ ಆಕ್ಷೇಪ ವ್ಯಕ್ತಪಡಿಸಿದ್ದುಂಟು. ನೀವೇ (ಶರದ್) ಮುಂದುವರಿಯುವಂತೆ ಒತ್ತಾಯಿಸಿದ್ದರು’ ಎಂದು ನೆನಪಿಸಿದರು.

‘ಅಪ್ಪ ಎಂದಿಗೂ ಸರ್ವಾಧಿಕಾರಿಯಾಗಿರಲಿಲ್ಲ. ಹಾಗೊಂದು ವೇಳೆ ಅಂತಹ ಮನಸ್ಥಿತಿ ಹೊಂದಿದ್ದರೆ ಹೊಸ ಅಧ್ಯಕ್ಷರ ಆಯ್ಕೆಗೆ ಸಮಿತಿಯನ್ನು ಅವರೇಕೆ ರಚಿಸುತ್ತಿದ್ದರು. ತಮಗೆ ಇಷ್ಟವಿರುವ ವ್ಯಕ್ತಿಯನ್ನೇ ಅಧ್ಯಕ್ಷ ಗಾದಿಗೆ ಕೂರಿಸಬಹುದಿತ್ತಲ್ಲವೇ?’ ಎಂದು ಪ್ರಶ್ನಿಸಿದರು.

ಪಕ್ಷದ ಮೇಲಿನ ಹಿಡಿತ ಸಾಧಿಸುವುದಕ್ಕೆ ಸಂಬಂಧಿಸಿದಂತೆ ಎರಡೂ ಬಣಗಳ ನಡುವೆ ಕಾನೂನು ಸಮರ ನಡೆಯುತ್ತಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಕುಮಟ** | |
| ಚಿಪ್ಪು | 27099-35869 |
| ಕೋಕ | 16099-32589 |
| ಹೊಸಚಾಲಿ | 36311-39299 |
| **ಪುತ್ತೂರು** | |
| ಹೊಸತು | 34000-43500 |
| **ಸಾಗರ** | |
| ಬಿಳಿಗೋಟು | 21119-32989 |
| ಚಾಲಿ | 31899-38699 |
| ಕೋಕ | 16969-32099 |
| ಕೆಂಪುಗೋಟು | 29299-34699 |
| ರಾಶಿ | 33989-47149 |
| ಸಿಪ್ಪೆಗೋಟು | 13299-22309 |
| **ಶಿವಮೊಗ್ಗ** | |
| ಬೆಟ್ಟೆ | 47000-53232 |
| ಗೊರಬಾಲು | 18009-38099 |
| ರಾಶಿ | 40481-47169 |
| ಸರಕು | 53709-82896 |
| **ಶಿರಸಿ** | |
| ಬೆಟ್ಟೆ | 40823-42123 |
| ಬಿಳಿಗೋಟು | 32099-35811 |
| ಚಾಲಿ | 39099-41408 |
| ಕೆಂಪುಗೋಟು | 32989-32989 |
| ರಾಶಿ | 45208-46699 |
| **ತುಮಕೂರು** | |
| ಇತರೆ | 42100-43950 |
| **ಯಲ್ಲಾಪುರ** | |
| ಬಿಳಿಗೋಟು | 23699-35580 |
| ಚಾಲಿ | 36533-40900 |
| ಕೋಕ | 20899-29099 |
| ಕೆಂಪುಗೋಟು | 33109-34899 |
| ರಾಶಿ | 43899-54019 |

# ರೈಲು ಅಪಘಾತ: ತನಿಖೆಗೆ ಆದೇಶ

**ಬಕ್ಸರ್ (ಪಿಟಿಐ):** ಬಿಹಾರದ ಬಕ್ಸರ್ ಜಿಲ್ಲೆಯಲ್ಲಿ ದೆಹಲಿ–ಕಾಮಾಕ್ಯ ಈಶಾನ್ಯ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ಗುರುವಾರ ಆದೇಶಿಸಲಾಗಿದೆ.

ದೆಹಲಿಯಿಂದ ಅಸ್ಸಾಂಗೆ ತೆರಳುತ್ತಿದ್ದ ರೈಲಿನ 23 ಬೋಗಿಗಳು ಬುಧವಾರ ರಾತ್ರಿ 9.53ರ ಸುಮಾರಿಗೆ ರಘುನಾಥಪುರ ನಿಲ್ದಾಣದ ಬಳಿ ಹಳಿ ತಪ್ಪಿದ್ದರಿಂದ ನಾಲ್ವರು ಮೃತಪಟ್ಟಿದ್ದು, 25ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದರು.

ಮೃತರ ಕುಟುಂಬಕ್ಕೆ ತಲಾ ₹ 10 ಲಕ್ಷ ಹಾಗೂ ಗಾಯಾಳುಗಳಿಗೆ ₹ 50 ಸಾವಿರ ಪರಿಹಾರ ನೀಡಲಾಗುವುದು ಎಂದು ಪೂರ್ವ ಮಧ್ಯ ರೈಲ್ವೆ(ಇಸಿಆರ್) ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಿರೇಂದ್ರ ಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಪಘಾತದಿಂದಾಗಿ ವಿದ್ಯುತ್ ತಂತಿಗಳು, ಕಂಬಗಳು ಮತ್ತು ಹಳಿಗಳಿಗೆ ಹಾನಿಯಾಗಿದೆ. ಇದರಿಂದ ಈ ಮಾರ್ಗದಲ್ಲಿ ಸಂಚರಿಸಬೇಕಿದ್ದ 21 ರೈಲು ಮಾರ್ಗಗಳನ್ನು ಬದಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಬಿಹಾರದ ಬಕ್ಸರ್ ಜಿಲ್ಲೆಯ ರಘುನಾಥಪುರ ರೈಲ್ವೆ ನಿಲ್ದಾಣದ ಬಳಿ ಹಳಿ ತಪ್ಪಿದ ದೆಹಲಿ–ಕಾಮಾಕ್ಯ ಈಶಾನ್ಯ ಎಕ್ಸ್‌ಪ್ರೆಸ್ ರೈಲು - ಎಎಫ್‌ಪಿ ಚಿತ್ರ

**ಹಳಿ ದೋಷ:** ಹಳಿಗಳಲ್ಲಿನ ದೋಷ ಉಂಟಾಗಿದೆ. ಹೀಗಾಗಿಯೇ ರೈಲು ಹಳಿ ತಪ್ಪಿದೆ ಎಂದು ಪ್ರಾಥಮಿಕ ತನಿಖಾ ವರದಿಯಲ್ಲಿ ಉಲ್ಲೇಖವಾಗಿದೆ’ ಎಂದು ಮೂಲಗಳು ಗುರುವಾರ ತಿಳಿಸಿವೆ.

ರೈಲಿನ ಚಾಲಕ ಸೇರಿದಂತೆ ರೈಲ್ವೆಯ ಆರು ಅಧಿಕಾರಿಗಳು ಸಹಿ ಮಾಡಿರುವ ವರದಿಯಲ್ಲಿ ‘ಹಳಿಗಳ ಲ್ಲಿನ ದೋಷದಿಂದಾಗಿಯೇ ರೈಲು ಹಳಿ ತಪ್ಪಿದೆ ಎನ್ನುವುದು ತೋರುತ್ತದೆ’ ಎಂದಿದೆ. ಈ ಅಪಘಾತದಿಂದ ₹ 52 ಕೋಟಿಗೂ ಹೆಚ್ಚು ಹಾನಿ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ರೈಲಿನ ಲೊಕೊ ಪೈಲಟ್ ಗಾಯಗೊಂಡಿದ್ದು, ಸಹಾಯಕ ಗಂಭೀರವಾಗಿ ಗಾಯಗೊಂಡಿದ್ದಾರೆ.

‘ಅಪಘಾತ ಸಂಭವಿಸಿದ ರಘುನಾಥಪುರ ನಿಲ್ದಾಣವನ್ನು ಗಂಟೆಗೆ 128 ಕಿ.ಮೀ ವೇಗದಲ್ಲಿ ರೈಲು ಹಾದುಹೋಯಿತು. ನಿಲ್ದಾಣ ದಾಟಿದ ಕೂಡಲೇ ಹಿಂಭಾಗದಲ್ಲಿ ವಿಪರೀತ ಕಂಪನದಿಂದ ತೀವ್ರ ಆಘಾತದ ಅನುಭವವಾಯಿತು. ಇದರ ಬೆನ್ನಿಗೆ ಬ್ರೇಕ್ ಪೈಪ್‌ನ ಒತ್ತಡವು ಇದ್ದಕ್ಕಿದ್ದಂತೆ ಕುಸಿಯಿತು. ರೈಲು ಹಳಿ ತಪ್ಪಿತು’ ಎಂದು ಪ್ರಾಥಮಿಕ ವರದಿ ಲೊಕೊ ಪೈಲಟ್ ಹೇಳಿಕೆಯನ್ನು ಉಲ್ಲೇಖಿಸಿದೆ.

# ವಿಳಿಂಜಂ ಬಂದರು ಪ್ರವೇಶಿಸಿದ ಪ್ರಥಮ ಹಡಗು

**ತಿರುವನಂತಪುರಂ (ಪಿಟಿಐ):** ಚೀನಾದಿಂದ ಕ್ರೇನ್‌ಗಳನ್ನು ಹೊತ್ತುತಂದ ಮೊದಲ ಹಡಗು ‘ಝೆನ್ ಹುಆ 15’ ಗುರುವಾರ ಇಲ್ಲಿನ ವಿಳಿಂಜಂ ಅಂತರರಾಷ್ಟ್ರೀಯ ಬಂದರು ಪ್ರವೇಶಿಸಿತು. ಟಗ್ ಬೋಟ್‌ಗಳಿಂದ ಜಲನಮನ ಸಲ್ಲಿಸುವ ಮೂಲಕ ಹಡಗನ್ನು ಬರಮಾಡಿಕೊಳ್ಳಲಾಯಿತು.

ಬೃಹತ್ ಹಡಗಿನಿಂದ ಕ್ರೇನ್‌ಗಳನ್ನು ಭಾನುವಾರ ಬಂದರಿಗೆ ಇಳಿಸಲಾಗುವುದು. ಅಂದು ಈ ಸಂಬಂಧ ನಡೆಯುವ ಕಾರ್ಯಕ್ರಮದಲ್ಲಿ ಕೇಂದ್ರ ಬಂದರು ಸಚಿವ ಸರ್ಬಾನಂದ ಸೊನೊವಾಲ್ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಗವಹಿಸುವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗಸ್ಟ್ ಅಂತ್ಯದಲ್ಲಿ ಚೀನಾದಿಂದ ಹಡಗು ನಿರ್ಗಮಿಸಿತ್ತು. ಅ.4ಕ್ಕೆ ವಿಳಿಂಜಂ ಬಂದರಿಗೆ ಬರಬೇಕಿತ್ತು. ಆದರೆ ಪ್ರತಿಕೂಲ ಹವಾಮಾನದ ವಿಳಂಬವಾಯಿತು. ಸಮುದ್ರ ವ್ಯಾಪ್ತಿಯಲ್ಲಿ ಭಾರತದ ಗಡಿ ಪ್ರವೇಶಿಸಿ ಗುಜರಾತ್‌ನ ಮುಂದ್ರಾ ಬಂದರಿಗೆ ತೆರಳಿ, ಅಲ್ಲಿ ಕೆಲವು ಕ್ರೇನ್‌ಗಳನ್ನು ಇಳಿಸಲಾಗಿತ್ತು. ಬಳಿಕ ವಿಳಿಂಜಂಗೆ ತಲುಪಿತು.

ವಿಳಿಂಜಂ ಬಂದರನ್ನು ಅದಾನಿ ಸಮೂಹ ನೆರವಿನಲ್ಲಿ ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದೆ. ಇದು, ಪೂರ್ಣ ಕಾರ್ಯಾರಂಭ ಮಾಡಿದ ಬಳಿಕ ಅತಿದೊಡ್ಡ ಬಂದರು ಎಂಬ ಹಿರಿಮೆಗೆ ಪಾತ್ರವಾಗಲಿದೆ.

ಬಂದರು ಸ್ಥಾಪನೆಗೆ ಸ್ಥಳೀಯ ಮೀನುಗಾರರು ವಿರೋಧಿಸಿದ್ದರು. ಇದು, ಹಿಂಸಾಚಾರ ಘಟನೆಗೂ ಕಾರಣವಾಗಿತ್ತು.


ಚೀನಾ ಹಡಗು ‘ಝೆನ್ ಹುಆ 15’ ಗುರುವಾರ ತಿರುವನಂತಪುರದ ವಿಳಿಂಜಂ ಅಂತರರಾಷ್ಟ್ರೀಯ ಬಂದರು ಪ್ರವೇಶಿಸಿತು –ಪಿಟಿಐ ಚಿತ್ರ

# ₹1.15 ಲಕ್ಷಕ್ಕೆ ಚೇತಕ್ ಇ–ಸ್ಕೂಟರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಬ್ಬದ ವಿಶೇಷ ಕೊಡುಗೆಯ ಭಾಗವಾಗಿ ಕರ್ನಾಟಕ ಮತ್ತು ತಮಿಳುನಾಡಿನ ಗ್ರಾಹಕರು ₹1.15 ಲಕ್ಷಕ್ಕೆ ಚೇತಕ್ ಇ-ಸ್ಕೂಟರ್ ಖರೀದಿಸಬಹುದು ಎಂದು ಬಜಾಜ್ ಆಟೊ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ದಾಸ್ತಾನು ಇರುವವರೆಗೆ ಮಾತ್ರ ಈ ಕೊಡುಗೆಯು ಜಾರಿಯಲ್ಲಿ ಇರಲಿದೆ ಎಂದೂ ಹೇಳಿದೆ.

ಈ ಕೊಡುಗೆಯ ಸದುಪಯೋಗ ಪಡೆದುಕೊಂಡು ಬಜಾಜ್ ಚೇತಕ್ ಕುಟುಂಬವನ್ನು ಸೇರಿಕೊಳ್ಳುವಂತೆ ಕಂಪನಿಯು ಗ್ರಾಹಕರಿಗೆ ಆಹ್ವಾನ ನೀಡಿದೆ. ಬೆಂಗಳೂರು ಮತ್ತು ಚೆನ್ನೈನಲ್ಲಿ amazon.com ಮೂಲಕವೂ ಚೇತಕ್ ಖರೀದಿಗೆ ಲಭ್ಯವಿದೆ ಎಂದು ಕಂಪನಿಯು ತಿಳಿಸಿದೆ.

## ಆರೋಪ ನಿರಾಕರಿಸಿದ ಸಿಬಿಐಸಿ

# ಗಂಗಾಜಲಕ್ಕೆ ಶೇ 18 ಜಿಎಸ್‌ಟಿ ಹೇರಿಕೆ: ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

**ನವದೆಹಲಿ (ಪಿಟಿಐ):** ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಪವಿತ್ರ ಗಂಗಾಜಲದ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಿದೆ ಎಂದು ಕಾಂಗ್ರೆಸ್ ಗುರುವಾರ ಆರೋಪಿಸಿದ್ದು, ‘ಇದೊಂದು ಬೂಟಾಟಿಕೆ ಮತ್ತು ಲೂಟಿ ಸರ್ಕಾರ’ ಎಂದು ತೀವ್ರ ವಾಗ್ದಾಳಿ ಮಾಡಿದೆ.

ಕಾಂಗ್ರೆಸ್‌ನ ಈ ಆರೋಪವನ್ನು ತಳ್ಳಿ ಹಾಕಿರುವ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ (ಸಿಬಿಐಸಿ) ಪೂಜೆ ಮತ್ತು ಇತರ ಸಮಾರಂಭಗಳಲ್ಲಿ ಬಳಸುವ ಗಂಗಾಜಲದ ಮೇಲೆ ಅಂತಹ ಯಾವುದೇ ತೆರಿಗೆ ವಿಧಿಸಿಲ್ಲ ಎಂದೂ ಹೇಳಿದೆ.

‘ಮೋದಿ ಜೀ, ನೀವು ಇಂದು ಉತ್ತರಾಖಂಡದಲ್ಲಿರುವುದು ಒಳ್ಳೆಯದೇ. ಮೋಕ್ಷ ಕೊಡುವ ಗಂಗಾ ಮಾತೆಯು ಸಾಮಾನ್ಯ ಭಾರತೀಯನಿಗೆ ಹುಟ್ಟಿನಿಂದ ಜೀವನದ ಕೊನೆಯವರೆಗೂ ಅತ್ಯಂತ ಹೆಚ್ಚಿನ ಮಹತ್ವದ್ದಾಗಿದೆ. ಆದರೆ, ನಿಮ್ಮ ಸರ್ಕಾರವು ಈ ಪವಿತ್ರ ಗಂಗಾಜಲದ ಮೇಲೆ ಶೇ 18 ಜಿಎಸ್‌ಟಿ ಹೇರಿದೆ. ಗಂಗಾಜಲವನ್ನು ತಮ್ಮ ಮನೆಯಲ್ಲಿ ಇಡುವಂತೆ ಜನರಿಗೆ ಆದೇಶ ಹೊರಡಿಸುವವರು ಇದು ಯಾವ ರೀತಿ ಹೊರೆಯಾಗಲಿದೆ ಎನ್ನುವುದನ್ನು ಒಮ್ಮೆಯೂ ಯೋಚಿಸಿಲ್ಲ. ಇದು ನಿಮ್ಮ ಸರ್ಕಾರದ ಲೂಟಿ ಮತ್ತು ಬೂಟಾಟಿಕೆಯ ಪರಮಾವಧಿ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿ, ತರಾಟೆಗೆ ತೆಗೆದುಕೊಂಡಿದ್ದಾರೆ.

‘ಗಂಗಾಜಲದ ಮೇಲೆ ಯಾವುದೇ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ವಿಧಿಸಿಲ್ಲ. ದೇಶದಾದ್ಯಂತ ಜನರು ಪೂಜೆಗೆ ಮನೆಗಳಲ್ಲಿ ಬಳಸುವ ಗಂಗಾಜಲಕ್ಕೂ ಪೂಜಾ ಸಾಮಗ್ರಿಗಳಿಗೆ ನೀಡಿರುವಂತೆಯೇ ಜಿಎಸ್‌ಟಿ ವಿನಾಯಿತಿ ನೀಡಲಾಗಿದೆ’ ಎಂದು ಸಿಬಿಐಸಿಯು ‘ಎಕ್ಸ್’ನಲ್ಲಿ ಸ್ಪಷ್ಟೀಕರಣ ನೀಡಿದೆ.

ಇದೇ ವೇಳೆ, ಕಾಂಗ್ರೆಸ್ ಸಾಮಾಜಿಕ ಮಾಧ್ಯಮದ ತನ್ನ ಖಾತೆಯಲ್ಲಿ ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರದ ಪರಿಸ್ಥಿತಿ ಕುರಿತು ಅನಿಮೇಟೆಡ್ ವಿಡಿಯೊ ಬಿಡುಗಡೆ ಮಾಡಿ, ‘ಪ್ರಧಾನಿ ಮೋದಿ ಅವರು ಯಾವಾಗ ಮಣಿಪುರಕ್ಕೆ ಭೇಟಿ ಕೊಡಲಿದ್ದಾರೆಂದು ದೇಶವು ಕೇಳುತ್ತಿದೆ’ ಎಂದೂ ಪೋಸ್ಟ್ ಮಾಡಿದೆ.

## ಉತ್ತರಾಖಂಡದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ

# ಸವಾಲುಗಳ ಮಧ್ಯೆ ಭಾರತ ಬಲಿಷ್ಠ

**ಪಿಥೋರಗಢ (ಉತ್ತರಾಖಂಡ) (ಪಿಟಿಐ):** ‘ತನ್ನ ಮುಂದಿರುವ ಹಲವು ಸವಾಲುಗಳ ನಡೆವೆಯೂ ಭಾರತ ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಿದೆ. ಭಾರತದ ದನಿಗೆ ಜಾಗತಿಕ ಮನ್ನಣೆ ಸಿಕ್ಕಿರುವುದನ್ನು ಇತ್ತೀಚೆಗೆ ನಡೆದ ಜಿ20 ಶೃಂಗಸಭೆ ದೃಢಪಡಿಸಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

‘ಕೋಟ್ಯಂತರ ರೂಪಾಯಿಗಳ ಹಗರಣಗಳು ನಡೆದು, ಹತಾಶೆ ಭಾವನೆ ಇಡೀ ದೇಶವನ್ನೇ ಆವರಿಸಿಕೊಂಡಿದ್ದ ಕಾಲವೊಂದಿತ್ತು. ಇಂತಹ ಕರಾಳ ದಿನಗಳಿಂದ ದೇಶಕ್ಕೆ ಯಾವಾಗ ಮುಕ್ತಿ ಸಿಗಲಿದೆ ಎಂಬ ಭಾವನೆ ಜನರಲ್ಲಿ ಮನೆ ಮಾಡಿತ್ತು. ಇದಕ್ಕಾಗಿ ಜನರು ಪ್ರಾರ್ಥಿಸುತ್ತಿದ್ದರು’ ಎಂದ ಮೋದಿ, ‘ಇಂತಹ ಅನೇಕ ಸವಾಲುಗಳ ನಡುವೆಯೂ ಭಾರತ ಬಲಿಷ್ಠ ದೇಶವಾಗಿ ಹೊರಹೊಮ್ಮಿದೆ’ ಎಂದು ಹೇಳಿದರು.

‘ಈಗ ಭಾರತವು ಜಗತ್ತಿಗೇ ದಾರಿ ತೋರುತ್ತಿದೆ ಎಂದು ನಿಮಗೆ ಅನಿಸುತ್ತಿಲ್ಲವೇ’ ಎಂದು ಪ್ರಶ್ನಿಸಿದ ಅವರು, ‘ಈ ಬದಲಾವಣೆ ಮೋದಿಯಿಂದಾಗಿ ಆಗಿದ್ದಲ್ಲ. ನಿಮ್ಮ ಸೇವೆ ಮಾಡುವುದಕ್ಕಾಗಿ ದೇಶದ ಜನರು ಎರಡನೇ ಬಾರಿ ನನಗೆ ಅವಕಾಶ ನೀಡಿರುವುದೇ ಇದಕ್ಕೆ ಕಾರಣ’ ಎಂದು ಹೇಳಿದರು.

‘ಮಹಿಳಾ ಮೀಸಲಾತಿ ಮಸೂದೆ ಸೇರಿದಂತೆ ಕಳೆದ 30–40 ವರ್ಷಗಳಿಂದ ಬಾಕಿ ಉಳಿದಿದ್ದ ಅನೇಕ ವಿಚಾರಗಳಿಗೆ ಸಂಬಂಧಿಸಿ ನಮ್ಮ ಸರ್ಕಾರ ನಿರ್ಧಾರಗಳನ್ನು ಕೈಗೊಂಡಿದೆ’ ಎಂದ ಅವರು, ಚಂದ್ರಯಾನ–3ರ ಯಶಸ್ಸನ್ನೂ ವಿವರಿಸಿದರು.

‘ಉತ್ತರಾಖಂಡದ ಜನರು ನನ್ನ ಕುಟುಂಬದ ಸದಸ್ಯರು’ ಎಂದು ಸಂಬೋಧಿಸಿದ ಪ್ರಧಾನಿ, ‘ರಾಜ್ಯದೊಂದಿಗೆ ನನಗೆ ಅವಿನಾಭಾವ ಸಂಬಂಧ ಇದೆ. ಆತ್ಮೀಯ ಸ್ವಾಗತ ಕೋರಿದ್ದಕ್ಕೆ ಕೃತಜ್ಞತೆ ಸಲ್ಲಿಸುವೆ’ ಎಂದರು. ‘ಹಿಂದಿನ ಸರ್ಕಾರಗಳು ರಾಜ್ಯದ ಗಡಿ ಗ್ರಾಮಗಳ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದವು. ಆದರೆ, ನಮ್ಮ ಸರ್ಕಾರ ಈ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡಿದೆ’ ಎಂದರು.

**ಉದ್ಘಾಟನೆ–ಶಿಲಾನ್ಯಾಸ:** ಇದಕ್ಕೂ ಮುನ್ನ ಮೋದಿ ಅವರು ₹4,200 ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು. ಕೆಲವು ಯೋಜನೆಗಳನ್ನು ಲೋಕಾರ್ಪಣೆ ಮಾಡಿದರು.


ಉತ್ತರಾಖಂಡದ ಪಿಥೋರಗಢದ ಪಾರ್ವತಿ ಕುಂಡದಲ್ಲಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಧ್ಯಾನ ಮಾಡಿದರು –ಪಿಟಿಐ ಚಿತ್ರ

## ವಿಶ್ವಸಂಸ್ಥೆಯಲ್ಲಿ 'ವಸುಧೈವ ಕುಟುಂಬಕಂ' ಫಲಕ

ನ್ಯೂಯಾರ್ಕ್ (ಪಿಟಿಐ): 'ವಸುಧೈವ ಕುಟುಂಬಕಂ' ಎಂಬ ಬರಹವಿರುವ ಫಲಕವನ್ನು ವಿಶ್ವಸಂಸ್ಥೆಯಲ್ಲಿರುವ ಭಾರತದ ಕಾಯಂ ಕಚೇರಿ ಆವರಣದಲ್ಲಿ ಸ್ಥಾಪಿಸಲಾಗಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು ಅಧ್ಯಕ್ಷ ವಿನಯ್ ಸಹಸ್ರಬುದ್ಧೆ ಮತ್ತು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಫಲಕ ಅನಾವರಣಗೊಳಿಸಿದರು.







### ಗರ್ಭಪಾತ ನಿರ್ಧಾರ ಮರುಪರಿಶೀಲಿಸುವಂತೆ ಮಹಿಳೆಗೆ ಸೂಚಿಸಿದ ಕೋರ್ಟ್

# ಭ್ರೂಣಕ್ಕೂ ಹಕ್ಕಿದೆ, ಅದನ್ನು ಕೊಲ್ಲಲಾಗದು: ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭ್ರೂಣವನ್ನು ಹತ್ಯೆ ಮಾಡಲು ಆಗುವುದಿಲ್ಲ. ಹೀಗಾಗಿ, 26 ತಿಂಗಳ ಗರ್ಭಿಣಿಯು ಗರ್ಭಪಾತ ಮಾಡಿಸಿಕೊಳ್ಳುವ ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಮಹಿಳೆಯ ಸ್ವಾಯತ್ತೆಗೆ ಮಹತ್ವ ನೀಡಲೇಬೇಕು. ಆದರೆ ಇನ್ನೂ ಜನಿಸಿರದ ಮಗುವಿನ ಕಥೆ ಏನು? ಇಲ್ಲಿ ಆ ಮಗುವಿನ ಪರವಾಗಿ ವಾದ ಮಂಡಿಸಲು ಯಾರೂ ಇಲ್ಲ. ಹುಟ್ಟಿರದ ಮಗುವಿನ ಹಕ್ಕುಗಳನ್ನು ಇಲ್ಲಿ ಸಮಾನ ನೆಲೆಯಲ್ಲಿ ಕಾಣುವುದು ಹೇಗೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇರುವ ನ್ಯಾಯಪೀಠವು ಕೇಳಿತು.

ಇಂತಹ ಪ್ರಕರಣಗಳಲ್ಲಿ ಮಹಿಳೆಯರ ಆಯ್ಕೆಯ ಹಕ್ಕು ಪ್ರಶ್ನಾತೀತವೇನೂ ಅಲ್ಲ. ಇಲ್ಲಿ ಗರ್ಭಪಾತಕ್ಕೆ ಅವಕಾಶ ಕೊಡುವುದು ವೈದ್ಯಕೀಯ ದೃಷ್ಟಿಯಿಂದ ಅನೈತಿಕವಾಗುತ್ತದೆ ಎಂದು ಕೇಂದ್ರದ ಪರ ಹಾಜರಾದ ಹೆಚ್ಚುವರಿ



ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಹೇಳಿದರು.

ಅರ್ಜಿದಾರ ಮಹಿಳೆಯು ಖಿನ್ನತೆ ಹಾಗೂ ಇತರ ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆಕೆಗೆ ತನ್ನ ಇಬ್ಬರು ಮಕ್ಕಳನ್ನು ನೋಡಿಕೊಳ್ಳಲು ಆಗುತ್ತಿಲ್ಲ. ಆ ಇಬ್ಬರನ್ನು ಅರ್ಜಿದಾರರ ಅತ್ತೆ ನೋಡಿಕೊಳ್ಳುತ್ತಿದ್ದಾರೆ. ಮೂರನೆಯ ಮಗುವಿನ ಜನನವಾದಲ್ಲಿ ಎರಡು ಜೀವಗಳು ಹಾಳಾಗುತ್ತವೆ ಎಂದು ಆಕೆಯ ಪರ ವಕೀಲರು ಹೇಳಿದರು.

ಮಹಿಳೆ 26 ವಾರಗಳ ಗರ್ಭಿಣಿ. ಆಕೆಗೆ ಗರ್ಭಪಾತಕ್ಕೆ ಅವಕಾಶ ನೀಡಬೇಕೆ ಎಂಬ ವಿಚಾರವಾಗಿ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಭಿನ್ನ ನಿಲುವಿನ ಆದೇಶ ನೀಡಿದೆ. ಹೀಗಾಗಿ, ಪ್ರಕರಣ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ಮುಂದೆ ಬಂದಿದೆ. ವಿಚಾರಣೆ ಮುಂದೂಡಲಾಗಿದೆ.

## 11 ಅಪರಾಧಿಗಳ ಬಿಡುಗಡೆ: ದಾಖಲೆ ಸಲ್ಲಿಸಲು ನಿರ್ದೇಶನ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಅಪರಾಧಿಗಳನ್ನು ಅವಧಿಪೂರ್ವದಲ್ಲಿ ಬಿಡುಗಡೆ ಮಾಡಿರುವ ಕ್ರಮಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರ ಮತ್ತು ಗುಜರಾತ್ ಸರ್ಕಾರಕ್ಕೆ ನಿರ್ದೇಶಿಸಿತು.

ಗುಜರಾತ್‌ನಲ್ಲಿ 2002ರ ಗಲಭೆ, ಹಿಂಸಾಚಾರ ವೇಳೆ ಬಿಲ್ಕಿಸ್ ಭಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ 3 ವರ್ಷದ ಪುತ್ರಿ ಸೇರಿ ಕುಟುಂಬದ ಏಳು ಜನರನ್ನು ಕೊಲೆ ಮಾಡಲಾಗಿತ್ತು. ಈ ಪ್ರಕರಣದ 11 ಅಪರಾಧಿಗಳನ್ನು ಕಳೆದ ವರ್ಷ ಅವಧಿಪೂರ್ವದಲ್ಲಿ ಬಿಡುಗಡೆ ಮಾಡಲಾಗಿತ್ತು.

ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಬಿಲ್ಕಿಸ್ ಬಾನು ಪರ ವಕೀಲರು, ಇತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯನ್ ಅವರಿದ್ದ ಪೀಠವು, ಇದಕ್ಕೆ ಸಂಬಂಧಿಸಿದ ಆದೇಶವನ್ನು ಕಾಯ್ದಿರಿಸಿತು.

ಬಿಲ್ಕಿಸ್ ಬಾನು ಅವರಲ್ಲದೆ ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್, ಲಖನೌ ವಿಶ್ವವಿದ್ಯಾಲಯದ ಮಾಜಿ ಕುಲಪತಿ ರೂಪ್ ರೇಖಾ ವರ್ಮಾ, ಟಿಎಂಸಿ ಸಂಸದೆ ಮಹುಆ ಮೊಯಿತ್ರಾ ಅವರೂ ಅಪರಾಧಿಗಳ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ರಿಟ್ ಸಲ್ಲಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ ನಡೆದಾಗ ಬಿಲ್ಕಿನ್ ಬಾನು ಅವರಿಗೆ 21 ವರ್ಷ ವಯಸ್ಸು. ಐದು ತಿಂಗಳ ಗರ್ಭಿಣಿಯಾಗಿದ್ದರು. ಗೋದ್ರಾ ರೈಲಿಗೆ ಬೆಂಕಿ ಕೃತ್ಯದ ಹಿಂದೆಯೇ ಹಿಂಸಾಚಾರ ಸಂಭವಿಸಿತ್ತು.

## ಕೇರಳ: ಮಹಿಳಾ ಅಧಿಕಾರಿಗಳ ವಸ್ತ್ರಸಂಹಿತೆ ಬದಲು

ಕೊಚ್ಚಿ (ಪಿಟಿಐ): ನ್ಯಾಯಾಂಗದ ಮಹಿಳಾ ಅಧಿಕಾರಿಗಳಿಗೆ ಇದ್ದ ವಸ್ತ್ರಸಂಹಿತೆ ನಿಯಮವನ್ನು ಕೇರಳ ಹೈಕೋರ್ಟ್ ಬದಲಿಸಿದೆ.

ಅದರಂತೆ ಮಹಿಳಾ ಅಧಿಕಾರಿಗಳು ಬಿಳಿ ವರ್ಣದ ಸೀರೆ, ಕಪ್ಪು ಬಣ್ಣದ ಬ್ಲೌಸ್ ಧರಿಸಲು ಅವಕಾಶ ಕಲ್ಪಿಸಲಾಗಿದೆ. ಹೈ–ನೆಕ್ ಕಾಲರ್‌ವುಳ್ಳ ಬಿಳಿ ಬಣ್ಣದ ಸಲ್ವಾರ್ ಧರಿಸುವ ಆಯ್ಕೆಯನ್ನೂ ನೀಡಿದೆ.

ಬಿಳಿ ಮತ್ತು ಕಪ್ಪು ಬಣ್ಣ ಹೊರತುಪಡಿಸಿ ಇತರೆ ಬಣ್ಣ ಇರದಂತೆ ಎಚ್ಚರವಹಿಸಬೇಕು. ಉಡುಪು ಸರಳವಾಗಿದ್ದು, ನ್ಯಾಯಾಂಗ ಅಧಿಕಾರಿಗಳ ಘನತೆಗೆ ತಕ್ಕುದಾಗಿರಬೇಕು ಎಂದು ತಿಳಿಸಿದೆ. 1970ರ ಆದೇಶ ಪರಿಷ್ಕರಿಸಿ ಈ ಸಂಬಂಧ ಹೈಕೋರ್ಟ್ ಅ.7ರಂದು ಸುತ್ತೋಲೆ ಹೊರಡಿಸಿದೆ.

ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ಹಾಲಿ ಇದ್ದ ವಸ್ತ್ರ ಸಂಹಿತೆಯ ಉಡುಪು ಧರಿಸುವುದರಿಂದ ಆಗುತ್ತಿದ್ದ ಇರಿಸುಮುರಿಸು ತಪ್ಪಿಸುವುದು ಇದರ ಉದ್ದೇಶವಾಗಿದೆ. ನ್ಯಾಯಾಂಗದ ಮಹಿಳಾ ಅಧಿಕಾರಿಗಳು ಈ ಸಂಬಂಧ ಗಮನಸೆಳೆದಿದ್ದರು.

ಭಾನುವಾರ ನಡೆದಿದ್ದ ಕೇರಳ ನ್ಯಾಯಾಂಗ ಅಧಿಕಾರಿಗಳ ಸಂಘದ ಸಭೆಯಲ್ಲಿಯೂ ವಸ್ತ್ರಸಂಹಿತೆ ನಿಯಮದ ಬದಲಾವಣೆ ಕುರಿತಂತೆ ಮುಖ್ಯ ನ್ಯಾಯಮೂರ್ತಿ ಎ.ಜೆ.ದೇಸಾಯಿ ಅವರು ಉಲ್ಲೇಖಿಸಿದ್ದರು.

# ಕ್ಷುಲ್ಲಕ ಕಾರಣಕ್ಕೆ ದಲಿತನ ಕೊಲೆ

ಪ್ರಜಾವಾಣಿ ವಾರ್ತೆ

ಲಖನೌ: ಮನೆ ಮುಂದೆ ನೀರು ಚಿಮುಕಿಸಿದ ಕಾರಣಕ್ಕೆ ದಲಿತ ವ್ಯಕ್ತಿಯನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಕೌಶಂಬಿ ಜಿಲ್ಲೆಯ ದುಮಾಯಿ ಗ್ರಾಮದಲ್ಲಿ ಬುಧವಾರ ನಡೆದಿದೆ.

ದಲಿತ ಸಮುದಾಯದ ರಮ್ನೇವಾಜ್ ರಾಯಿದಾಸ್ (35) ಕೊಲೆಯಾದವರು. ನೆರೆ ಮನೆಯ ರಾಹುಲ್ ಕುಮಾರ್ ಎಂಬಾತ ಗುಂಡು ಹಾರಿಸಿದ್ದಾನೆ. ಎದೆ ಭಾಗಕ್ಕೆ ಎರಡು ಗುಂಡು ಹಾರಿಸಿದ್ದು, ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಆರೋಪಿ ತಲೆಮರೆಸಿಕೊಂಡಿದ್ದು, ಆತನ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಗುಂಡೇಟಿನಿಂದ ರಾಯಿದಾಸ್ ಕುಟುಂಬದ ಇಬ್ಬರು ಮಹಿಳೆಯರೂ ಗಾಯಗೊಂಡಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಮರ್ ಬಹಾದ್ದೂರ್ ಸಿಂಗ್ ತಿಳಿಸಿದರು.

ಮನೆಯ ಮುಂದೆ ರಾಯಿದಾಸ್ ಮತ್ತೆ, ಮತ್ತೆ ನೀರು ಚಿಮುಕಿಸುತ್ತಿದ್ದಾನೆ ಎಂದು ರಾಹುಲ್ ಆಕ್ಷೇಪಿಸಿದ್ದರು. ಇದು, ಜಗಳಕ್ಕೆ ಕಾರಣವಾಗಿತ್ತು. ಒಂದು ಹಂತದಲ್ಲಿ ಕೋಪಗೊಂಡ ರಾಹುಲ್ ನಾಡಪಿಸ್ತೂಲ್‌ನಿಂದ ಗುಂಡು ಹಾರಿಸಿದ್ದ. ರಾಯಿದಾಸ್ ಸ್ಥಳದಲ್ಲಿಯೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

## ಬಾಟ್ಲಾಹೌಸ್ ಎನ್‌ಕೌಂಟರ್: ಶಿಕ್ಷೆ ಬದಲಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): 2008ರಲ್ಲಿ ನಡೆದಿದ್ದ ಬಾಟ್ಲಾ ಹೌಸ್ ಎನ್‌ಕೌಂಟರ್ ಪ್ರಕರಣದ ಅಪರಾಧಿ ಅರೀಜ್ ಖಾನ್‌ನಿಗೆ ನೀಡಿದ್ದ ಮರಣ ದಂಡನೆ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯಾಗಿ ದೆಹಲಿ ಹೈಕೋರ್ಟ್ ಬದಲಿಸಿದೆ.

ಎನ್‌ಕೌಂಟರ್‌ನಲ್ಲಿ ದೆಹಲಿ ಪೊಲೀಸ್ ಇನ್‌ಸ್ಪೆಕ್ಟರ್ ಮೋಹನ್ ಚಂದ್ ಶರ್ಮಾ ಮೃತಪಟ್ಟಿದ್ದರು. ನ್ಯಾಯ ಮೂರ್ತಿಗಳಾದ ಸಿದ್ಧಾರ್ಥ ಮೃದುಲ್, ಅಮಿತ್ ಶರ್ಮಾ ಅವರಿದ್ದ ಪೀಠವು, ಕೆಳಹಂತದ ಕೋರ್ಟ್ ಶಿಕ್ಷೆ ವಿಧಿಸಿರುವುದನ್ನು ಎತ್ತಿಹಿಡಿಯಿತು. ಆದರೆ, ಮರಣ ದಂಡನೆ ಶಿಕ್ಷೆ ದೃಢಪಡಿಸಲು ನಿರಾಕರಿಸಿತು. ಆಗಸ್ಟ್‌ನಲ್ಲಿ ಅಪರಾಧಿ ಪರ ಮತ್ತು ಸರ್ಕಾರದ ಪರ ವಕೀಲರ ವಾದ ಆಲಿಸಿದ್ದ ಪೀಠ ತೀರ್ಪು ಕಾಯ್ದಿರಿಸಿತ್ತು. 2008ರ ಸೆ. 19 ರಂದು ದೆಹಲಿಯ ಜಾಮೀಯಾ ನಗರದಲ್ಲಿ ಉಗ್ರರು, ಪೊಲೀಸರ ನಡುವೆ ನಡೆದಿದ್ದ ಎನ್‌ಕೌಂಟರ್‌ನಲ್ಲಿ ಶರ್ಮಾ ಮತ್ತು ಇಬ್ಬರು ಉಗ್ರರು ಮೃತಪಟ್ಟಿದ್ದರು.



# ಮಣಿಕಂಠ, ಗಿರಿಧರಣಿ 'ವೇಗಿಗಳು'

### ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಕರ್ನಾಟಕದ ಎಸ್.ಎಸ್. ಸ್ನೇಹಾಗೆ ಬೆಳ್ಳಿ ಪದಕ

ಪ್ರಜಾವಾಣಿ ವಾರ್ತೆ



ಪುರುಷರ 100 ಮೀ. ಓಟದಲ್ಲಿ ಚಿನ್ನ ಗೆದ್ದ ಸರ್ವಿಸಸ್‌ನ ಎಚ್.ಎಚ್.ಮಣಿಕಂಠ (ಬಲದಿಂದ ಎರಡನೇಯವರು) ಹಾಗೂ ಸಹ ಸ್ಪರ್ಧಿಗಳು ಗುರಿಯತ್ತ ಮುನ್ನುಗ್ಗಿದ ಕ್ಷಣ –ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್



ಎಸ್.ಎಸ್.ಸ್ನೇಹಾ



ಸಿ.ಅಂಜಲಿ

ಬೆಂಗಳೂರು: ಕಂಠೀರವ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಗುರುವಾರ ಮಿಂಚು ಹರಿಸಿದ ಎಚ್.ಎಚ್.ಮಣಿಕಂಠ ಮತ್ತು ಗಿರಿಧರಣಿ ರವಿಕುಮಾರ್ ಅವರು 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ 'ವೇಗದ ಓಟಗಾರ ಮತ್ತು ವೇಗದ ಓಟಗಾರ್ತಿ' ಗೌರವಕ್ಕೆ ಪಾತ್ರರಾದರು.

ಸರ್ವಿಸಸ್ ತಂಡವನ್ನು ಪ್ರತಿನಿಧಿಸಿದ ಕರ್ನಾಟಕದ ಮಣಿಕಂಠ ಅವರು ಪುರುಷರ 100 ಮೀ. ಓಟವನ್ನು 10.42 ಸೆ.ಗಳಲ್ಲಿ ಪೂರೈಸಿ ಚಿನ್ನ ಗೆದ್ದರು. ಬುಧವಾರ ನಡೆದಿದ್ದ ಸೆಮಿಫೈನಲ್ ಹೀಟ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ (10.23 ಸೆ.) ಸ್ಥಾಪಿಸಿದ್ದ ಅವರು ನಿರೀಕ್ಷೆಯಂತೆಯೇ ಅಗ್ರಸ್ಥಾನ ಪಡೆದರು.

ಆರಂಭದಲ್ಲೇ ಮುನ್ನಡೆ ಸಾಧಿಸಿದ ಮಣಿಕಂಠ, ಎರಡನೇ ಸ್ಥಾನ ಪಡೆದ ಸ್ಪರ್ಧಿಗಿಂತ 3–4 ಮೀ.ನಷ್ಟು ಲೀಡ್ ಪಡೆದುಕೊಂಡು ಗುರಿ ತಲುಪಿದರು. ಸರ್ವಿಸಸ್‌ನವರೇ ಆದ ನಿಖಿಲ್ ಪಾಟೀಲ್ (10.69 ಸೆ.) ಮತ್ತು ರೈಲ್ವೇಸ್‌ನ ಬಿ.ಶಿವ (10.70 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಮ್ಮದಾಗಿಸಿಕೊಂಡರು.

'ಬುಧವಾರ ಸ್ಥಾಪಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ಗುರಿಯೊಂದಿಗೆ ಕಣಕ್ಕಿಳಿದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಚಿನ್ನ ಗೆದ್ದಿರುವುದು ಸಂತಸ ಉಂಟುಮಾಡಿದೆ' ಎಂದು ಮಣಿಕಂಠ ಪ್ರತಿಕ್ರಿಯಿಸಿದರು.

ಮಹಿಳೆಯರ ವಿಭಾಗದ 100 ಮೀ. ಓಟವನ್ನು ತಮಿಳುನಾಡಿನ ಗಿರಿಧರಣಿ ರವಿಕುಮಾರ್, 11.36 ಸೆ.ಗಳಲ್ಲಿ ಪೂರೈಸಿದರು. ಅವರಿಗೆ ಪ್ರಬಲ ಪೈಪೋಟಿ ಒಡ್ಡಿದ ಕರ್ನಾಟಕದ ಎಸ್.ಎಸ್. ಸ್ನೇಹಾ (11.42 ಸೆ.) ಎರಡನೇ ಸ್ಥಾನ ಪಡೆದರೆ, ಪಂಜಾಬ್‌ನ ಕಮಲ್‌ಜೀತ್ ಕೌರ್ (11.52 ಸೆ.) ಕಂಚು ಪಡೆದರು. ಈ ಓಟದಲ್ಲಿ 'ಫಾಲ್ಸ್ ಸ್ಟಾರ್ಟ್' ಮಾಡಿದ್ದಕ್ಕೆ ರೈಲ್ವೇಸ್‌ನ ಟಿ.ದಾನೇಶ್ವರಿ ಅವರನ್ನು ಅನರ್ಹಗೊಳಿಸಲಾಯಿತು.

ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಕರ್ನಾಟಕದ ಸಿ.ಅಂಜಲಿ ಕಂಚು ಜಯಿಸಿದರು.

**ತೇಜಸ್ ಕೂಟ ದಾಖಲೆ:** ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ರೈಲ್ವೇಸ್‌ನ ತೇಜಸ್ ಶಿರ್ಸೆ (13.67 ಸೆ.) ಅವರು ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಸಿದ್ಧಾಂತ್ ತಿಂಗಳಾಯ ಅವರು 2011ರಲ್ಲಿ ಕೋಲ್ಕತ್ತದಲ್ಲಿ ನಡೆದಿದ್ದ ಕೂಟದಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (13.77 ಸೆ.) ಮುರಿದರು.

**ಎರಡನೇ ದಿನದ ಫಲಿತಾಂಶಗಳು:** ಪುರುಷರ ವಿಭಾಗ: 100 ಮೀ. ಓಟ: ಮಣಿಕಂಠ ಎಚ್.ಎಚ್. (ಸರ್ವಿಸಸ್; ಕಾಲ: 10.42 ಸೆ.)–1, ನಿಖಿಲ್ ಪಾಟೀಲ್ (ಸರ್ವಿಸಸ್)–2, ಶಿವ ಬಿ. (ರೈಲ್ವೇಸ್)–3

**110 ಮೀ. ಹರ್ಡಲ್ಸ್:** ತೇಜಸ್ ಶಿರ್ಸೆ (ರೈಲ್ವೇಸ್; ಕಾಲ: 13.67 ಸೆ.)–1, ಮಾಧವೇಂದ್ರ ಶೆಖಾವತ್ (ರಾಜಸ್ಥಾನ)–2, ಆರ್.ಮಾನವ್ (ತಮಿಳುನಾಡು)–3

**ಡಿಸ್ಕಸ್ ಥ್ರೋ:** ನಿರ್ಭಯ್ ಸಿಂಗ್ (ಹರಿಯಾಣ; ದೂರ: 55.21 ಮೀ.)–1, ಗಗನ್‌ದೀಪ್ ಸಿಂಗ್ (ಎಸ್‌ಎಸ್‌ಸಿಬಿ)–2, ಪ್ರಭ್‌ಜೋತ್ ಸಿಂಗ್ (ಪಿಎಸ್‌ಸಿಬಿ)–3

**ಡೆಕಾಥ್ಲಾನ್:** ಯಮನ್ ದೀಪ್ ಶರ್ಮಾ (ರೈಲ್ವೇಸ್; 7078 ಪಾಯಿಂಟ್ಸ್)–1, ರೋಹಿತ್ ಆರ್. (ಸರ್ವಿಸಸ್)–1, ಜಗತಾರ್ ಸಿಂಗ್ (ರಾಜಸ್ಥಾನ)–3

**ಮಹಿಳೆಯರ ವಿಭಾಗ:** 100 ಮೀ. ಓಟ: ಗಿರಿಧರಣಿ ರವಿಕುಮಾರ್ (ತಮಿಳುನಾಡು; ಕಾಲ: 11.36 ಸೆ.)–1, ಎಸ್.ಎಸ್.ಸ್ನೇಹಾ (ಕರ್ನಾಟಕ)–2, ಕಮಲ್‌ಜೀತ್ ಕೌರ್ (ಪಂಜಾಬ್)–3

**100 ಮೀ. ಹರ್ಡಲ್ಸ್:** ಪ್ರಜ್ಞಾನ್ ಪ್ರಶಾಂತ್ ಸಾಹು (ಒಡಿಶಾ; ಕಾಲ: 13.46 ಸೆ.)–1, ಸಪ್ನಾ ಕುಮಾರಿ (ಬಿಹಾರ)–2, ಸಿ.ಅಂಜಲಿ (ಕರ್ನಾಟಕ)–3

**ಲಾಂಗ್‌ಜಂಪ್:** ಭವಾನಿ ಯಾದವ್ ಭಗವತಿ (ಆಂಧ್ರಪ್ರದೇಶ; ದೂರ: 6.22 ಮೀ.)–1, ಪ್ರಿಯಾ ರಾಥೋಡ್ (ರಾಜಸ್ಥಾನ)–2, ಕುಸುಮಾ ಆರ್. (ಆಂಧ್ರಪ್ರದೇಶ)–3

**ಶಾಟ್‌ಪಟ್:** ಆಭಾ ಕಥುವಾ (ಮಹಾರಾಷ್ಟ್ರ; ದೂರ: 16.32 ಮೀ.)–1, ಮನ್‌ಪ್ರೀತ್ ಕೌರ್ (ಪಿಎಸ್‌ಸಿಬಿ)–2, ಸೃಷ್ಟಿ ವಿಜ್ (ದೆಹಲಿ)–3

## 22ರಿಂದ ಐಟಿಎಫ್ ದಾವಣಗೆರೆ ಓಪನ್ ಟೆನಿಸ್

ದಾವಣಗೆರೆ: ನಗರದಲ್ಲಿ ಇದೇ 22ರಿಂದ 29ರವರೆಗೆ ದಾವಣಗೆರೆ ಓಪನ್ ಪುರುಷರ ಐಟಿಎಫ್ ಟೆನಿಸ್ ಟೂರ್ನಿ ನಡೆಯಲಿದೆ.

ಭಾರತ, ಅಮೆರಿಕ, ಸ್ವಿಟ್ಜರ್ಲೆಂಡ್, ಸ್ವೀಡನ್, ಆಸ್ಟ್ರೇಲಿಯಾ ಸೇರಿದಂತೆ 16 ದೇಶಗಳ 48ಕ್ಕೂ ಹೆಚ್ಚು ಆಟಗಾರರು ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. 22ರಿಂದ ಅರ್ಹತಾ ಸುತ್ತಿನ ಪಂದ್ಯಗಳು ಹಾಗೂ 24ರಿಂದ ಮುಖ್ಯ ಸುತ್ತಿನ ಪಂದ್ಯಗಳು ನಡೆಯಲಿವೆ.

ಜಿಲ್ಲಾ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಪಂದ್ಯಗಳು ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿರುವ ಟೆನಿಸ್ ಅಂಗಣದಲ್ಲಿ ಜರುಗಲಿವೆ.

'ನಗರದಲ್ಲಿ 4 ಸಿಂಥೆಟಿಕ್ ಕೋರ್ಟ್‌ಗಳಿವೆ. ಟೆನಿಸ್‌ಗೆ ಬೇಕಾದ ಮೂಲ ಸೌಕರ್ಯಗಳೂ ಇವೆ. ಟೂರ್ನಿಯು ಒಟ್ಟು ₹15 ಲಕ್ಷ ಬಹುಮಾನ ಮೊತ್ತವನ್ನು ಒಳಗೊಂಡಿದೆ' ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. 'ನಗರದಲ್ಲಿ 2000 ಹಾಗೂ 2012ರಲ್ಲಿ ಅಂತರರಾಷ್ಟ್ರೀಯ ಟೂರ್ನಿ ನಡೆದಿತ್ತು. 2012ರಿಂದ ಪ್ರತಿ ವರ್ಷ ಆಹ್ವಾನಿತ ಟೆನಿಸ್ ಟೂರ್ನಿ ನಡೆಸಲಾಗುತ್ತಿದೆ. ಇದರ ಜೊತೆಗೆ ಗಾಲಿ ಕುರ್ಚಿ ಟೂರ್ನಿಗಳೂ ನಡೆದಿವೆ' ಎಂದು ಜಿಲ್ಲಾ ಟೆನಿಸ್ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಶ್ರೀಶೈಲ ಬ್ಯಾಡಗಿ ಹಾಗೂ ಕಾರ್ಯದರ್ಶಿ ಚಂದ್ರಪ್ಪ ತಿಳಿಸಿದರು.

## ಮಂಗಳೂರು: ಫಿಡೆ ರೇಟೆಡ್ ರಾಷ್ಟ್ರೀಯ ಚೆಸ್ ಟೂರ್ನಿ 17ರಿಂದ

ಮಂಗಳೂರು: ದಕ್ಷಿಣ ಕನ್ನಡ ಚೆಸ್ ಸಂಸ್ಥೆ ಆಶ್ರಯದಲ್ಲಿ ರಾಷ್ಟ್ರೀಯ ಓಪನ್ ರೇಟೆಡ್, ಕ್ಲಾಸಿಕಲ್ ರೇಟೆಡ್ ಚೆಸ್ ಟೂರ್ನಿಯನ್ನು ಅ.17ರಿಂದ 21ರವರೆಗೆ ನಗರದ ಪುರಭವನದಲ್ಲಿ ಆಯೋಜಿಸಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಸ್ಥೆ ಗೌರವಾಧ್ಯಕ್ಷ ಸುನಿಲ್ ಆಚಾರ್ ಅವರು, '20 ವರ್ಷಗಳ ನಂತರ ಇಂತಹ ಐದು ದಿನಗಳ ಟೂರ್ನಿಯನ್ನು ಹಮ್ಮಿಕೊಳ್ಳಲಾಗಿದ್ದು, ಅಂತರರಾಷ್ಟ್ರೀಯ ಮಟ್ಟದ ಆಟಗಾರರು, ಬೇರೆ ಬೇರೆ ರಾಜ್ಯಗಳ ಆಟಗಾರರು ಸೇರಿ ಸುಮಾರು 400 ಆಟಗಾರರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಒಂಬತ್ತು ಸುತ್ತುಗಳಲ್ಲಿ ಟೂರ್ನಿ ನಡೆಯಲಿದೆ. ₹6 ಲಕ್ಷ ಬಹುಮಾನ, ವಿವಿಧ ವಿಭಾಗಗಳಲ್ಲಿ ಟ್ರೋಫಿ ಜತೆಗೆ, 200 ಬಹುಮಾನಗಳು ಇರಲಿವೆ' ಎಂದರು.

### ದಸರಾ ಕ್ರೀಡಾಕೂಟ: ಆತಿಥೇಯ ಮೈಸೂರು ವಿಭಾಗ ಮೇಲುಗೈ

# ಗೌತಮ್, ನವಮಿ ವೇಗದ ಓಟಗಾರರು

• ಆರ್. ಜಿತೇಂದ್ರ



ಈಜು ಸ್ಪರ್ಧೆಯ 100 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಅಗ್ರಸ್ಥಾನ ಪಡೆದ ಬೆಂಗಳೂರು ನಗರ ವಿಭಾಗದ ಸ್ಪರ್ಧಿ ಗಗನಾ ಗುರಿಯತ್ತ ಮುನ್ನುಗ್ಗಿದ ಕ್ಷಣ –ಪ್ರಜಾವಾಣಿ ಚಿತ್ರ/ಅನೂಪ್ ರಾಘ್ ಟಿ.

ಮೈಸೂರು: ಬೆಂಗಳೂರು ಗ್ರಾಮಾಂತರ ವಿಭಾಗದ ಎಂ. ಗೌತಮ್ ಹಾಗೂ ಮೈಸೂರು ವಿಭಾಗದ ಎಚ್.ಆರ್. ನವಮಿ ಅವರು ಗುರುವಾರ ಇಲ್ಲಿ ಆರಂಭವಾದ ರಾಜ್ಯ ಮಟ್ಟದ ಸಿ.ಎಂ. ಕಪ್ ಪ್ರತಿಭಾನ್ವೇಷಣ ದಸರಾ ಕ್ರೀಡಾಕೂಟದಲ್ಲಿ ಕ್ರಮವಾಗಿ ವೇಗದ ಓಟಗಾರ–ಓಟಗಾರ್ತಿಯಾಗಿ ಹೊರಹೊಮ್ಮಿದರು.

ಪುರುಷರ 100 ಮೀಟರ್ಸ್ ಓಟವನ್ನು ಗೌತಮ್ 10.86 ಸೆಕೆಂಡುಗಳಲ್ಲಿ ಕ್ರಮಿಸಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು. ಮಹಿಳೆಯರ ವಿಭಾಗದಲ್ಲಿ ನವಮಿ 12.58 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬಂಗಾರದ ಪದಕಕ್ಕೆ ಕೊರಳೊಡ್ಡಿದರು. ನವಮಿ ಅವರನ್ನು ಒಳಗೊಂಡ ಮೈಸೂರು ವಿಭಾಗ ತಂಡವು 4X100 ರಿಲೆ ಓಟದಲ್ಲೂ ಮೊದಲ ಸ್ಥಾನ ಪಡೆಯಿತು.

ಈಜು ವಿಭಾಗದಲ್ಲಿ ಬೆಂಗಳೂರು ನಗರ ವಿಭಾಗದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ತೋರಿದರು. ಬಿ. ಜತಿನ್ 100 ಮೀಟರ್ಸ್ ಬಟರ್‌ಫ್ಲೈ ಹಾಗೂ 200 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ ಹಾಗೂ ಇದೇ ವಿಭಾಗದ ಎಲ್. ಮಣಿಕಂಠ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಹಾಗೂ 200 ಮೀ ಮೆಡ್ಲೆನಲ್ಲಿ ಚಿನ್ನದ ಪದಕ ಪಡೆದರು. ಮೈಸೂರು ವಿಭಾಗದ ಚಿಂತನ್ ಶೆಟ್ಟಿ 400 ಮೀ.ಫ್ರೀ ಸ್ಟೈಲ್‌ನಲ್ಲಿ ಬಂಗಾರಕ್ಕೆ ಕೊರಳೊಡ್ಡಿದರು. ಮಹಿಳೆಯರ 100 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಗಗನಾ ಅವರು ಬೆಂಗಳೂರು ವಿಭಾಗದ 1ನಿ. 25.48 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದರು.

ಇದೇ ವೇಳೆ, ಗುಂಪು ವಿಭಾಗದಲ್ಲಿ ವಿವಿಧ ಸ್ಪರ್ಧೆಗಳು ನಡೆದವು.

ಅ.14ರ ವರೆಗೆ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ಕ್ರೀಡಾಕೂಟವು ನಡೆಯಲಿದ್ದು, ಆತಿಥೇಯ ಮೈಸೂರು ವಿಭಾಗದ ಜೊತೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ ಹಾಗೂ ಕಲಬುರಗಿ ವಿಭಾಗದಿಂದ 4 ಸಾವಿರ ಸ್ಪರ್ಧಿಗಳು ಪಾಲ್ಗೊಂಡಿದ್ದಾರೆ. ಅ.16ರಿಂದ 21ರವರೆಗೆ ಎರಡನೇ ಹಂತದಲ್ಲಿ ಸಿ.ಎಂ. ಕಪ್ ಎಲೈಟ್ ಗುಂಪಿನ ಸ್ಪರ್ಧೆಗಳು ನಡೆಯಲಿವೆ.

**ಮೊದಲ ದಿನದ ಅಥ್ಲೆಟಿಕ್ಸ್ ಫಲಿತಾಂಶ:** ಪುರುಷರ ವಿಭಾಗ: 100 ಮೀ. ಓಟ: ಎಂ. ಗೌತಮ್ (ಬೆಂ.ಗ್ರಾ.)–1, ಮಾರ್ಕ್ ಡಿಕೋಸ್ಟ (ಮೈಸೂರು)–2, ಈರಯ್ಯ ಹಿರೇಮಠ (ಬೆಂ. ನಗರ)–3, ಕಾಲ: 10.86 ಸೆ.; 400 ಮೀ. ಓಟ: ಮಹೇಂದ್ರ (ಬೆಳಗಾವಿ)–1, ಅಜಯ್ ನೀಲಿಚಂದ್ರ (ಬೆಂ. ನಗರ)–2, ಎಂ. ನಿತಿನ್ ಗೌಡ (ಬೆಂ. ಗ್ರಾಮಾಂತರ)–3, ಕಾಲ: 48.90 ಸೆ.; 1500 ಮೀ. ಓಟ: ಗುರುಪ್ರಸಾದ್ (ಬೆಂಗಳೂರು ಗ್ರಾ.)–1, ರಾಹುಲ್ (ಮೈಸೂರು)–2, ಈರಪ್ಪ ಹನಗಣ್ಣವರ (ಬೆಳಗಾವಿ)–3, ಕಾಲ: 4ನಿ, 02.28 ಸೆ.; 4X100 ಮೀ. ರಿಲೆ: ಬೆಳಗಾವಿ (ಜಿ.ಪಿ.ಗೌತಮ್, ವಿ. ಪ್ರಸನ್ನಕುಮಾರ್, ವಿಜಯ್‌ಕುಮಾರ್ ಮುದಕವಿ, ಕಾರ್ತಿಕ್ ಅಬ್ಬಿಗೇರಿ)–1, ಮೈಸೂರು (ಎಸ್. ಸಾತ್ವಿಕ್, ಸೃಜನ್ ಪೂಜಾರಿ, ವಿಖ್ಯಾತ್ ಶೆಟ್ಟಿ, ಮಾರ್ಕ್ ಡಿಕೋಸ್ಟ)–2, ಬೆಂಗಳೂರು ಗ್ರಾಮಾಂತರ (ಎಂ.ವಿ. ಅಭಿ, ಡಿ.ವಿ. ಅಭಯ್, ನಿತೇಶ್, ಎಂ. ಗೌತಮ್)–3, ಕಾಲ: ಬೆಳಗಾವಿ, 43.21 ಸೆ.; ಡಿಸ್ಕಸ್ ಥ್ರೋ: ವೈ. ಭರತ್ (ಮೈಸೂರು)–1, ಬಿ.ಎಂ. ಗುತ್ತಲ್ (ಬೆಂ. ನಗರ)–2, ಪಿ. ಶ್ರೀಸತ್ಯ (ಬೆಂ. ನಗರ)–3, ದೂರ: 40.41 ಮೀ.; ಹೈಜಂಪ್: ಎ. ರವಿ (ಮೈಸೂರು)–1, ಆದಿತ್ ಕೊಟ್ಯಾನ್ (ಮೈಸೂರು)–2, ಸುನಿಲ್ (ಬೆಳಗಾವಿ)–3, ಎತ್ತರ: 1.8 ಮೀ.; ಜಾವೆಲಿನ್ ಥ್ರೋ: ಸಂದೇಶ್ ನಾಯಕ್ (ಬೆಂ.ನಗರ)–1, ಅಭಿನಂದನ್ ನಾಯಕ್ (ಬೆಳಗಾವಿ)–2, ಯುವರಾಜು (ಬೆಳಗಾವಿ)–3, ದೂರ: 59.05 ಮೀ.

**ಮಹಿಳೆಯರ ವಿಭಾಗ:** 100 ಮೀ. ಓಟ: ಎಚ್.ಆರ್. ನವಮಿ (ಮೈಸೂರು)–1, ಮೋನಿಕಾ ರುಕ್ಮಯ್ಯ (ಬೆಂ. ಗ್ರಾ)–2, ಜೆ.ಲಕ್ಷ್ಯಾ (ಬೆಂ.ಗ್ರಾ)–3, ಕಾಲ: 12.58ಸೆ.; 400 ಮೀ.ಓಟ: ಮೇಘಾ ಮುನವಳ್ಳಿ (ಬೆಳಗಾವಿ)–1, ಆರ್. ಉಷಾ (ಬೆಂ. ನಗರ)–2, ಜ್ಯೋತಿ ಕಟ್ಟಿಮನಿ (ಬೆಳಗಾವಿ)–3, ಕಾಲ: 57.29 ಸೆ.; 1500 ಮೀ. ಓಟ: ಕೆ.ಎಂ. ಅರ್ಚನಾ (ಬೆಂ. ನಗರ)–1, ರೂಪಶ್ರೀ (ಮೈಸೂರು)–2, ಶಿಲ್ಪಾ ಹೊಸಮನಿ (ಬೆಳಗಾವಿ)–3, ಕಾಲ: 4ನಿ.45.68ಸೆ. 4X100 ಮೀ. ರಿಲೆ ಓಟ: ಮೈಸೂರು (ವಿ. ವರ್ಷಾ, ನವಮಿ, ಕೆ. ಪ್ರಜ್ಞಾ, ಆರ್. ಸಿಂಧು)–1, ಬೆಂಗಳೂರು ಗ್ರಾಮಾಂತರ (ಶಿವಾನಿ ರೈ, ಟಿ.ಪಿ. ಯುಕ್ತ, ಕೆ.ಪಿ. ಅಮೃತಾ, ಆರ್. ಭೂಮಿಕಾ)–2, ಬೆಳಗಾವಿ (ಎನ್. ಐಶ್ವರ್ಯ, ಕೆ. ಶುಭಾಂಗಿ, ಎಂ. ನತಾಶಾ, ಪಿ. ಕಾವೇರಿ)–3, ಕಾಲ: 50.61 ಸೆ.; ಟ್ರಿಪಲ್ ಜಂಪ್: ಐಶ್ವರ್ಯ (ಬೆಳಗಾವಿ)–1, ಕೃತಿ ಶೆಟ್ಟಿ (ಮೈಸೂರು)–2, ಕೆ.ಎನ್. ಭೂಮಿಕಾ (ಬೆಂ. ಗ್ರಾ.)–3, ದೂರ: 12.06 ಮೀ.; ಡಿಸ್ಕಸ್ ಥ್ರೋ: ಮಾಧುರ್ಯ (ಮೈಸೂರು)–1, ಯು. ಸೃಷ್ಟಿ (ಬೆಳಗಾವಿ)–2, ಸ್ವರ್ಣಾ ನಾಯಕ್ (ಮೈಸೂರು)–3. ದೂರ: 37.03 ಮೀ ಹೈಜಂಪ್: ಜಾಯ್ಲಿನ್ ಲೋಬೊ (ಬೆಂ. ನಗರ)–1, ಬಿ. ವೈಷ್ಣವಿ (ಬೆಳಗಾವಿ)–2, ರಶ್ಮಿ (ಮೈಸೂರು)–3, ಎತ್ತರ: 1.44 ಮೀ.; ಜಾವೆಲಿನ್ ಥ್ರೋ: ಷಹಜಹಾನಿ (ಮೈಸೂರು)–1, ಕೆ. ದೀಪಾ (ಬೆಳಗಾವಿ)–2, ಎಂ.ಎಸ್. ಅರ್ಚನಾ (ಬೆಳಗಾವಿ–3, ದೂರ: 33.18 ಮೀ.

# ಜಾಗತಿಕ ಹಸಿವು ಸೂಚ್ಯಂಕ: 111ನೇ ಸ್ಥಾನಕ್ಕೆ ಕುಸಿದ ಭಾರತ

ನವದೆಹಲಿ (ಪಿಟಿಐ): 125 ದೇಶಗಳಿಗೆ ಸಂಬಂಧಿಸಿದ ಪ್ರಸಕ್ತ ಸಾಲಿನ ಜಾಗತಿಕ ಹಸಿವು ಸೂಚ್ಯಂಕ ವಿವರಗಳನ್ನು ಗುರುವಾರ ಬಿಡುಗಡೆ ಮಾಡಲಾಗಿದ್ದು, ಭಾರತವು 111ನೇ ಸ್ಥಾನಕ್ಕೆ ಕುಸಿದಿದೆ.

ಜಾಗತಿಕ ಹಸಿವು ಸೂಚ್ಯಂಕ–2023ಕ್ಕೆ ಸಂಬಂಧಿಸಿ, ಭಾರತದ ಅಂಕ ಶೇ 28.7ರಷ್ಟಿದೆ. ಇದು ಹಸಿವಿನ ಮಟ್ಟ ಗಂಭೀರವಾಗಿರುವುದನ್ನು ತೋರಿಸುತ್ತದೆ ಎಂದು ಸೂಚ್ಯಂಕವನ್ನು ಆಧರಿಸಿ ಬಿಡುಗಡೆ ಮಾಡಿರುವ ವರದಿಯಲ್ಲಿ ವಿವರಿಸಲಾಗಿದೆ.

ಕಳೆದ ವರ್ಷ 121 ರಾಷ್ಟ್ರಗಳ ಪೈಕಿ ಭಾರತವು 107ನೇ ಸ್ಥಾನದಲ್ಲಿತ್ತು.

**ಅಂಕಿ-ಅಂಶಗಳು**

**16.6%** ಭಾರತದಲ್ಲಿ ಅಪೌಷ್ಟಿಕತೆ ಇರುವ ಮಕ್ಕಳ ಪ್ರಮಾಣ

**3.1%** 5 ವರ್ಷ ಒಳಗಿನ ಮಕ್ಕಳ ಮರಣ ಪ್ರಮಾಣ

**58.1%** 15–24 ವರ್ಷ ವಯೋಮಾನದ ಮಹಿಳೆಯರಲ್ಲಿನ ರಕ್ತಹೀನತೆ ಪ್ರಮಾಣ




'ಜಾಗತಿಕ ಹಸಿವು ಸೂಚ್ಯಂಕ' (ಜಿಎಚ್‌ಐ) ಎಂಬುದು ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ಹಸಿವಿನ ಪ್ರಮಾಣವನ್ನು ಅಳೆಯುವ ಸಾಧನವಾಗಿದೆ.

ಭಾರತದ ನೆರೆಯ ರಾಷ್ಟ್ರಗಳು ಈ ವಿಷಯದಲ್ಲಿ ಉತ್ತಮ ಸ್ಥಿತಿಯಲ್ಲಿವೆ. ಪಾಕಿಸ್ತಾನ 102ನೇ ಸ್ಥಾನದಲ್ಲಿದ್ದರೆ, ಬಾಂಗ್ಲಾದೇಶ 81, ನೇಪಾಳ 69 ಹಾಗೂ ಶ್ರೀಲಂಕಾ 60ನೇ ಸ್ಥಾನದಲ್ಲಿದೆ.

ಪ್ರಾದೇಶಿಕವಾಗಿ ದಕ್ಷಿಣ ಏಷ್ಯಾ ಮತ್ತು ಆಫ್ರಿಕಾದ ದಕ್ಷಿಣ ಭಾಗಕ್ಕೆ ಸಂಬಂಧಿಸಿ ಈ ಸೂಚ್ಯಂಕವು 27ರಷ್ಟಿದೆ. ಈ ಪ್ರದೇಶಗಳಲ್ಲಿ ಹಸಿವಿನ ಸಮಸ್ಯೆ ಗರಿಷ್ಠವಾಗಿದ್ದು, ಗಂಭೀರವೂ ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮಕ್ಕಳು ತಮ್ಮ ಎತ್ತರಕ್ಕೆ ತಕ್ಕಷ್ಟು ತೂಕ ಹೊಂದಿಲ್ಲದಿರುವುದು ಕೂಡ ಅಪೌಷ್ಟಿಕತೆ ವ್ಯಾಪ್ತಿಗೆ ಬರುತ್ತದೆ. ಈ ಪ್ರಮಾಣವು ಭಾರತದಲ್ಲಿ ಶೇ 18.7ರಷ್ಟಿದೆ. ಇದು ಜಗತ್ತಿನಲ್ಲಿಯೇ ಗರಿಷ್ಠ ಮಟ್ಟದ್ದಾಗಿದೆ ಎಂದು ಸೂಚ್ಯಂಕ ಕುರಿತ ವರದಿಯಲ್ಲಿ ಹೇಳಲಾಗಿದೆ.

# ಸನಾತನ ಧರ್ಮದ ನಿರ್ಮೂಲನೆ ಅಸಾಧ್ಯ: ಭಾಗವತ್



ಮೋಹನ್ ಭಾಗವತ್

ಚಂಡೀಗಢ (ಪಿಟಿಐ): 'ಸನಾತನ ಧರ್ಮ ಹಾಗೂ ಭಾರತ ಎರಡೂ ಬೇರೆ ಬೇರೆಯಲ್ಲ. ಇವೆರಡಕ್ಕೂ ಅವಿನಾಭಾವ ಸಂಬಂಧವಿದೆ. ಸನಾತನ ಧರ್ಮದ ತಳಹದಿ ಮೇಲೆಯೇ ಭಾರತೀಯ ಸಂಸ್ಕೃತಿ ಅರಳಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರತಿಪಾದಿಸಿದ್ದಾರೆ.

'ಸನಾತನ ಧರ್ಮವು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಹಾಗಾಗಿ, ಅದನ್ನು ನಿರ್ಮೂಲನೆ ಮಾಡಬೇಕು' ಎಂದು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ನೀಡಿದ್ದ ಹೇಳಿಕೆಯು ರಾಷ್ಟ್ರದಾದ್ಯಂತ ವಿವಾದ ಸೃಷ್ಟಿಸಿತ್ತು. ಬಿಜೆಪಿ ಹಾಗೂ ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿತ್ತು.

ಹರಿಯಾಣದ ರೋಹ್ಟಕ್‌ನ ಬಾಬಾ ಮಸ್ತನಾಥ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಭಾಗವತ್ ಅವರು, 'ಸನಾತನ ಧರ್ಮ ಎಂದರೆ ಹಿಂದೂ ರಾಷ್ಟ್ರ. ಇದರಡಿಯೇ ನಾವು ಬದುಕಬೇಕು' ಎಂದು ಸ್ಟಾಲಿನ್ ಅವರ ಹೆಸರು ಪ್ರಸ್ತಾಪಿಸದೆ ತಿರುಗೇಟು ನೀಡಿದರು.

'ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಮೌಲ್ಯಗಳು ಈ ಧರ್ಮದೊಂದಿಗೆ ಮಿಳಿತವಾಗಿವೆ. ಎಂದಿಗೂ ಇದರ ನಿರ್ಮೂಲನೆ ಸಾಧ್ಯವಿಲ್ಲ; ಇದು ಚಿರಂತನವಾದುದು. ಹಿಂದೆಯೂ ಈ ಧರ್ಮವಿತ್ತು. ಈಗಲೂ ಇದೆ. ಭವಿಷ್ಯದಲ್ಲಿಯೂ ಅಸ್ತಿತ್ವದಲ್ಲಿ ಇರುತ್ತದೆ' ಎಂದು ಹೇಳಿದರು.

'ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಾತನಾಡಿ, 'ಇಡೀ ವಿಶ್ವಕ್ಕೆ ಸಂಕಟ ಎದುರಾದಾಗ ಪ್ರತಿಯೊಂದು ರಾಷ್ಟ್ರವೂ ಭಾರತ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರತ್ತ ಭರವಸೆಯ ದೃಷ್ಟಿ ಹರಿಸುತ್ತದೆ. ಹಾಗಾಗಿ, ಸನಾತನ ಧರ್ಮ ಹಾಗೂ ಭಾರತದಿಂದ ಮಾತ್ರ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಸಾಧ್ಯ. ಬೇರೆ ಯಾರಿಂದಲೂ ಇದು ಸಾಧ್ಯವಿಲ್ಲ' ಎಂದು ಹೇಳಿದರು.

# ಹೊಸ ಮಸೀದಿಗೆ 'ಮುಹಮ್ಮದ್ ಬಿನ್ ಅಬ್ದುಲ್ಲಾ' ಹೆಸರು

ಪ್ರಜಾವಾಣಿ ವಾರ್ತೆ

ಮುಂಬೈ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಮಸೀದಿಗೆ 'ಮುಹಮ್ಮದ್ ಬಿನ್ ಅಬ್ದುಲ್ಲಾ' ಎಂದು ಪ್ರವಾದಿಯವರ ಹೆಸರಿಡಲು ಇಲ್ಲಿ ನಡೆದ ಅಖಿಲ ಭಾರತ ರಾಬ್ತಾ ಇ ಮಸೀದಿ ಸಮಿತಿಯ ಸಭೆಯು ತೀರ್ಮಾನಿಸಿದೆ.

ಮಸೀದಿಗೆ ನಾಮಕರಣ ಸಂಬಂಧ ಬಾಂದ್ರಾದಲ್ಲಿರುವ ರಂಗ ಶಾರದಾ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮುಸ್ಲಿಂ ಸಮುದಾಯದ ವಿವಿಧ ಪ್ರಮುಖರು ಪಾಲ್ಗೊಂಡಿದ್ದರು.

ಮಸೀದಿ ನಿರ್ಮಾಣದ ಸ್ಥಳದಲ್ಲಿಯೇ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಯು ಸ್ಥಾಪನೆಯಾಗಲಿದೆ. ಮಹಿಳಾ ಕಾಲೇಜು ಸ್ಥಾಪಿಸುವ ಚಿಂತನೆ ಇದೆ ಎಂದು ಸಭೆಗೆ ತಿಳಿಸಲಾಯಿತು.

ಸಭೆಯಲ್ಲಿದ್ದ ಬಿಜೆಪಿ ಮುಖಂಡ ಹಾಜಿ ಅರಾಫತ್, 'ಎಲ್ಲ ಜಾತಿ, ಧರ್ಮಗಳ ಜನರು ಮಸೀದಿ, ಆಸ್ಪತ್ರೆ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಕೊಳ್ಳುವರು' ಎಂದರು.

ಬಾಬ್ರಿ ಮಸೀದಿ -ರಾಮಮಂದಿರ ವಿವಾದದಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ನೀಡಿರುವ 5 ಎಕರೆ ಭೂಮಿಯಲ್ಲಿ ಮಸೀದಿ ನಿರ್ಮಿಸಲಾಗುತ್ತಿದೆ. ನಾಲ್ಕು ಸಾವಿರ ಮಹಿಳೆಯರು ಸೇರಿ ಒಟ್ಟು 9000 ಸಾವಿರ ಮಂದಿ ಪ್ರಾರ್ಥನೆ ಸಲ್ಲಿಸಲು ಆಗುವಂತೆ ನಿರ್ಮಾಣವಾಗುತ್ತಿದೆ.

# ಜಿ20 ಸ್ಪೀಕರ್‌ಗಳ ಶೃಂಗ ಸಭೆ: ಕೆನಡಾ ಸ್ಪೀಕರ್ ಗೈರು

ನವದೆಹಲಿ (ಪಿಟಿಐ): ಜಿ20 ರಾಷ್ಟ್ರಗಳ ಸಂಸತ್ ಸ್ಪೀಕರ್‌ಗಳ ಶೃಂಗಸಭೆ ಗುರುವಾರ ಆರಂಭವಾಗಿದ್ದು, ಕೆನಡಾ ಸೆನೆಟ್‌ನ ಸ್ಪೀಕರ್ ರೇಮಂಡ್ ಗಗ್ನೆ ಅವರು ಹಾಜರಾಗದಿರಲು ನಿರ್ಧರಿಸಿದ್ದಾರೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸ್ಪೀಕರ್‌ಗಳ ಶೃಂಗಸಭೆಯಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು ಅವರು ಈ ಹಿಂದೆ ಖಚಿತಪಡಿಸಿದ್ದರು.

'ಕೆನಡಾ ಸ್ಪೀಕರ್ ಶೃಂಗಸಭೆಗೆ ಹಾಜರಾಗುತ್ತಿಲ್ಲ. ವೇಳಾಪಟ್ಟಿಯಲ್ಲಿ ಬದಲಾವಣೆಗಳು ಆಗುತ್ತಿರುತ್ತವೆ' ಎಂದು ಸಂಸತ್ತಿನ ಮೂಲಗಳು ತಿಳಿಸಿವೆ.

ರೇಮಂಡ್ ಗಗ್ನೆ ಅವರೊಂದಿಗೆ ನಡೆದ ಅನೌಪಚಾರಿಕ ಮಾತುಕತೆ ವೇಳೆ ಹಲವು ವಿಚಾರಗಳನ್ನು ಚರ್ಚಿಸಲಾಗಿದೆ ಎಂದು ಓಂ ಬಿರ್ಲಾ ಮಾಹಿತಿ ನೀಡಿದ್ದಾರೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಆರೋಪಿಸಿದ್ದರು. ಈ ಆರೋಪಗಳನ್ನು ಭಾರತ ತಳ್ಳಿಹಾಕಿತ್ತು. ನಂತರ, ಎರಡು ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಆರಂಭವಾಗಿದೆ.

# ಹಿಂಸಾಚಾರ ವಿಡಿಯೊ ಪ್ರಸರಣಕ್ಕೆ ನಿರ್ಬಂಧ

ಇಂಫಾಲ್ (ಪಿಟಿಐ): ಹಿಂಸಾಚಾರ ಮತ್ತು ಆಸ್ತಿಗಳಿಗೆ ಹಾನಿಯಾಗಿರುವ ದೃಶ್ಯಗಳಿರುವ ವಿಡಿಯೊ ಹಾಗೂ ಚಿತ್ರ ಹಂಚಿಕೊಳ್ಳುವುದನ್ನು ಮಣಿಪುರ ಸರ್ಕಾರ ನಿರ್ಬಂಧಿಸಿದೆ.

ಈ ಕುರಿತು ಬುಧವಾರ ರಾತ್ರಿ ಆದೇಶ ಹೊರಡಿಸಿರುವ ಗೃಹ ಇಲಾಖೆ, 'ಇಂತಹ ವಿಡಿಯೊ ಮತ್ತು ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದೆ.

ದುಷ್ಕರ್ಮಿಗಳು ಇಬ್ಬರು ಯುವಕರನ್ನು ಸಮೀಪದಿಂದ ಗುಂಡು ಹಾರಿಸಿ ಕೊಂದು, ಹೊಂಡದಲ್ಲಿ ಹೂಳುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬಳಿಕ ಸರ್ಕಾರ ಈ ಆದೇಶ ಹೊರಡಿಸಿದೆ. ವಿಡಿಯೊದಲ್ಲಿ ದಾಖಲಾಗಿರುವ ಕೃತ್ಯ ಎಲ್ಲಿ ನಡೆದಿದೆ ಎಂಬುದು ತಿಳಿದುಬಂದಿಲ್ಲ.

ಹಿಂಸಾಚಾರದ ದೃಶ್ಯಗಳಿರುವ ವಿಡಿಯೊ ಮತ್ತು ಫೋಟೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುವುದರಿಂದ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಹದಗೆಡುತ್ತಿದೆ. ಈ ಕಾರಣಕ್ಕೆ 'ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾರ ಬಳಿಯಾದರೂ ಇಂತಹ ವಿಡಿಯೊಗಳಿದ್ದರೆ ಅವರು ಅದನ್ನು ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ತರಬೇಕು. ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ತಂತ್ರಜ್ಞಾನವನ್ನು ದುರುಪಯೋಗಪಡಿಸಿರುವ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು ಎಂದು ಹೇಳಲಾಗಿದೆ.

# ಮಹಾರಾಷ್ಟ್ರ: ಇ.ಡಿಯಿಂದ ₹ 150 ಕೋಟಿ ಸ್ವತ್ತು ಜಪ್ತಿ

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ, ಮಹಾರಾಷ್ಟ್ರದ ಮಾಜಿ ಶಾಸಕ ವಿವೇಕಾನಂದ ಶಂಕರ ಪಾಟೀಲ ಹಾಗೂ ಕುಟುಂಬಕ್ಕೆ ಸೇರಿದ ₹ 150 ಕೋಟಿಯ ಅಧಿಕ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯ ಗುರುವಾರ ಜಪ್ತಿ ಮಾಡಿದೆ.

ಪನವೇಲ್ ಮೂಲದ ಸಹಕಾರಿ ಬ್ಯಾಂಕ್‌ನಲ್ಲಿ ನಡೆದ ಎನ್ನಲಾದ ₹ 512 ಕೋಟಿ ಮೊತ್ತದ ವಂಚನೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಪಾಟೀಲ ಅವರು ಶೇತ್ಕರಿ ಕಾಮಗಾರ್ ಪಕ್ಷದ ನಾಯಕರಾಗಿದ್ದರು. ನಾಲ್ಕು ಬಾರಿ ಶಾಸಕರಾಗಿದ್ದರು. ಪನವೇಲ್‌ನಲ್ಲಿರುವ ಕರ್ನಾಳ ನಗರ ಸಹಕಾರಿ ಬ್ಯಾಂಕ್‌ನ ಮಾಜಿ ಅಧ್ಯಕ್ಷರೂ ಆಗಿದ್ದಾರೆ.

# ವಿಯೆನ್ನಾ ಒಪ್ಪಂದದಂತೆ ಕ್ರಮ: ಭಾರತ ಸಮರ್ಥನೆ

ನವದೆಹಲಿ: ಕೆನಡಾ ರಾಜತಾಂತ್ರಿಕ ಸಿಬ್ಬಂದಿ ಸಂಖ್ಯೆಯನ್ನು ಕಡಿತಗೊಳಿಸುವ ತನ್ನ ನಿರ್ಧಾರವು ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಪ್ಪಂದವನ್ನು ಆಧರಿಸಿ ಕೈಗೊಂಡಿರುವ ಕ್ರಮವಾಗಿದೆ ಎಂದು ಭಾರತ ಗುರುವಾರ ಹೇಳಿದೆ.

ಉಭಯ ದೇಶಗಳು ಸಮಾನ ಸಂಖ್ಯೆಯಲ್ಲಿ ರಾಜತಾಂತ್ರಿಕ ಸಿಬ್ಬಂದಿಯನ್ನು ಹೊಂದಿರುವುದು ಅಗತ್ಯ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಪ್ರತಿಪಾದಿಸಿದ್ದಾರೆ.

ಖಾಲಿಸ್ತಾನ ಪರ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿ ಭಾರತ ವಿರುದ್ಧ ಕೆನಡಾ ಆರೋಪ ಮಾಡಿದ ನಂತರ ಉಭಯ ದೇಶಗಳ ನಡುವೆ ಉದ್ಭವಿಸಿರುವ ರಾಜತಾಂತ್ರಿಕ ಬಿಕ್ಕಟ್ಟು ಮುಂದುವರಿದಿದೆ.

ಅಲ್ಲದೇ, ಭಾರತದಲ್ಲಿನ ತನ್ನ ರಾಜತಾಂತ್ರಿಕ ಸಿಬ್ಬಂದಿ ಪೈಕಿ 41 ಮಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಇತ್ತೀಚೆಗೆ ಗಡುವು ನೀಡಿತ್ತು. ಇದರ ಬೆನ್ನಲ್ಲೇ, ನವದೆಹಲಿ ಹೊರತುಪಡಿಸಿ ಉಳಿದೆಡೆ ಇದ್ದ ರಾಜತಾಂತ್ರಿಕರನ್ನು ಸಿಂಗಪುರ ಹಾಗೂ ಕ್ವಾಲಾಲಂಪುರಕ್ಕೆ ಕೆನಡಾ ಸ್ಥಳಾಂತರಗೊಳಿಸಿತ್ತು.



## CENTRAL UNIVERSITY OF KARNATAKA
(Established by an Act of the Parliament in 2009)
Kadaganchi, Aland Road Kalaburagi-585 367
Phone: (08477) 226702; Website: www.cuk.ac.in

No.CUK/CD IF-20:3105 — 06th Oct 2023

### NOTIFICATION

**EMPANELMENT OF CONTRACTORS FOR MISCELLANEOUS PETTY CIVIL, SANITARY, PLUMBING, ELECTRICAL WORKS / REPAIR ETC. FOR FINANCIAL YEARS 2023-2024 & 2024.2025**

Central University of Karnataka invites applications for empanelment of contractors registerer with Govt. of Karnataka and or Central Government, CPWD, All India Radio, Department of Post, BSNL, NBCC, Kalaburagi Urban/Rural Development Authority (KUDA) etc for empanelment as Civil and / or Electrical couhactors and who have registered offices in the 100 Km vicinity of Kalaburagi for carrying out repair / minor works in the University, For **Financial Years 2023-2024 & 2024-2025.**

For More information visit www.cuk.ac.in

Place: Kalaburagi — Sd/-Registrar

## ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
MESCOM
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885795 CIN: U40109 KA 2002 SGC 030425

ಸಂಖ್ಯೆ: ಮ.ವಿ.ಸ.ಕಂ/ ಅ.ಇಂ(ಖ)/ ಕಾನಿಇಂ(ಕಾ)/ ಸಕಾನಿಇಂ/2023–24/1 /62142 ದಿನಾಂಕ: 10.10.2023

### ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಮಂಗಳೂರು ವೃತ್ತ ವ್ಯಾಪ್ತಿಯ ಪುತ್ತೂರು ಮತ್ತು ಕಾವೂರು ವಿಭಾಗಗಳಿಗೆ ಸಂಬಂಧಪಟ್ಟ ಈ ಕೆಳಕಂಡ ಕಾಮಗಾರಿಗಳನ್ನು ಆಂಶಿಕ ಗುತ್ತಿಗೆ ಆಧಾರದಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್‌ಗಳನ್ನು ಆಹ್ವಾನಿಸುತ್ತಿದೆ.

| ಕ್ರ ಸಂ | ವಿವರಣೆ | ಬಿಡ್ ವಿಚಾರಣಾ ಸಂಖ್ಯೆ |
|---|---|---|
| 1 | ಕಾವೂರು ವಿಭಾಗ, ಮುಲ್ಕಿ ಉಪವಿಭಾಗದ ಕಿನ್ನಿಗೋಳಿ ಶಾಖಾ ವ್ಯಾಪ್ತಿಯ ಎಳತ್ತೂರು ಎಂಬಲ್ಲಿ 1*10 ಎಂವಿಎ, 33/11ಕೆವಿ ಉಪಕೇಂದ್ರದ ಸ್ಥಾಪನೆಯೊಂದಿಗೆ ಹಾಲಿ ಇರುವ 33ಕೆವಿ ಮುಲ್ಕಿ–ಎಳತ್ತೂರು ಮಾರ್ಗವನ್ನು 0.2 ಕಿ.ಮೀ ವರೆಗೆ (ದ್ವಿ ಮಾರ್ಗವನ್ನಾಗಿ) ವಿಸ್ತರಿಸಿ ಯು.ಜಿ ಕೇಬಲ್‌ನ್ನು ಬಳಸಿಕೊಂಡು ನಿರ್ಮಾಣ ಮಾಡುವ ಕಾಮಗಾರಿಯನ್ನು ನಿರ್ವಹಿಸಲು | MESCOM/ 2023-24/ SS/ WORK_INDENT49 |
| 2 | ಪುತ್ತೂರು ವಿಭಾಗದ, ಗ್ರಾಮೀಣ ಉಪವಿಭಾಗದಲ್ಲಿ ಹಾಲಿ ಇರುವ 1*5 ಎಂ.ವಿ.ಎ, 33/11 ಕೆವಿ ಕಾವು ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೆಚ್ಚುವರಿ 1*10 ಎಂ.ವಿ.ಎ ಶಕ್ತಿ ಪರಿವರ್ತಕವನ್ನು ಅಳವಡಿಸಿ, 02 ಸಂಖ್ಯೆಯ 11ಕೆವಿ ಫೀಡರ್‌ಗಳ ರಚನೆಯ ಕಾಮಗಾರಿಯನ್ನು ನಿರ್ವಹಿಸಲು | MESCOM/ 2023-24/ SS/ WORK_INDENT50 |

ಅಸಕ್ತಿಯುಳ್ಳ ಅರ್ಹ ಬಿಡ್ದುದಾರರು ವೆಬ್‌ಸೈಟ್ https://kppp.karnataka.gov.in ಗೆ ದಿನಾಂಕ 13.10.2023 ಅಥವಾ ನಂತರ ಲಾಗ್ ಆನ್ ಮಾಡಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಚೇರಿ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

### ಪತ್ರಿಕಾ ಪ್ರಕಟಣೆ

ಶ್ರೀ. ಶ್ರೀಕುಮಾರ್, ಯಂತ್ರಕರ್ಮಿ ದರ್ಜೆ 2, ಆದ ನೀವು, ಬೆ.ವಿ.ಕಂ., ಎಸ್–3 ಉಪವಿಭಾಗ, ಮುರುಗೇಶ್ ಪಾಳ್ಯ. ಕಾರ್ಯ ಮತ್ತು ಪಾಲನಾ ಘಟಕ, ಬೆಂಗಳೂರು, ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ದಿ.:09.01.2023 ರಿಂದ ಯಾವುದೇ ಮುನ್ಸೂಚನೆಯಿಲ್ಲದೆ ಹಾಗೂ ಮೇಲಧಿಕಾರಿಗಳ ಪೂರ್ವಾನುಮತಿಯಿಲ್ಲದೆ ಅನಧಿಕೃತವಾಗಿ ಕಛೇರಿ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತೀರಿ. ಈ ಸಂಬಂಧ ನಿಮಗೆ ಹಲವಾರು ಬಾರಿ ಸೂಚನಾ ಪತ್ರಗಳನ್ನು ಜಾರಿಗೊಳಿಸಿದರೂ ಸಹಾ ನೀವು ಯಾವುದೇ ರೀತಿಯ ಉತ್ತರ/ಪ್ರತಿಕ್ರಿಯೆ ತೋರಿಸಿರುವುದಿಲ್ಲ ಹಾಗೂ ಅಂತಿಮವಾಗಿ ಕೆಲಸಕ್ಕೆ ಹಾಜರಾಗುವಂತೆ ನಿಮ್ಮ ವಿಳಾಸಕ್ಕೆ ದಿನಾಂಕ: 15.05.2023 ರಂದು ರವಾನಿಸಿದ ಅಂತಿಮ ಸೂಚನಾಪತ್ರವನ್ನು ಸ್ವೀಕರಿಸಿದ್ದರೂ, ಸಹಾ ಸ್ಪಂದಿಸಿರುವುದಿಲ್ಲ. ನಿಮ್ಮ ನಡವಳಿಕೆ ಕ.ವಿ.ಮಂ.ನೌಕರರ ಸೇವಾ(ನಡತೆ) ನಿಯಮಗಳು 1988ರ ಉಲ್ಲಂಘನೆಯಾಗಿರುತ್ತದೆ. ನಿಮ್ಮ ಗೈರುಹಾಜರಿಯಿಂದ ನಿಮ್ಮ ಕಾರ್ಯವ್ಯಾಪ್ತಿಯಲ್ಲಿನ ಕಾರ್ಯಗಳು ಕುಂಠಿತಗೊಂಡಿದ್ದು, ಬೆ.ವಿ.ಕಂ.,ನ ಗೌರವಕ್ಕೆ ಧಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಅಂತಿಮವಾಗಿ ನಿಮಗೊಂದು ಅವಕಾಶವನ್ನು ಕೊಡುತ್ತಾ, ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸೂಕ್ತ ಸಮಜಾಯಿಷಿ/ದಾಖಲೆಗಳೊಂದಿಗೆ ಈ ಕೆಳಗೆ ಸಹಿ ಮಾಡಿರುವ ಪ್ರಾಧಿಕಾರದ ಮುಂದೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ, ಕ.ವಿ.ಮಂ,ನೌಕರರ (ವ.ಶಿ.ನಿ. ಮತ್ತು ಮೇ) 1987ರ ನಿಯಮಾವಳಿಯಡಿಯಲ್ಲಿ ಅತ್ಯಂತ ಕಠಿಣ ಶಿಸ್ತು ಕ್ರಮ ಜರುಗಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕೋರಮಂಗಲ ವಿಭಾಗ, ಬೆ.ವಿ.ಕಂ., ಬೆಂಗಳೂರು

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

## ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ, ಟಿ.ಟಿ.ಎಂ.ಸಿ 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560 027.
ವೆಬ್‌ಸೈಟ್: www.ksmcl.org ದೂರವಾಣಿ: 080–22278813/14/15/16

No.207/KSMCL/MECH/Disposal Scrap/2023-24/2085
ದಿನಾಂಕ: 12.10.2023

### ಇ–ಟೆಂಡರ್ ಆಹ್ವಾನ

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯಲ್ಲಿರುವ ಕೆ.ಎ03ಎಂಡಿ.8667 ಬೊಲೆರೋ ಇನ್‌ವಡರ್ ಅನುಪಯುಕ್ತ ವಾಹನ ಮಾರಾಟ ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ

| | |
|---|---|
| ಟೆಂಡರ್ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 26.10.2023 17:00 ಗಂಟೆಗಳವರೆಗೆ |
| ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 03.11.2023 17:00 ಗಂಟೆಯವರೆಗೆ |
| ಟೆಂಡರ್ ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ | 06.11.2023 11:00 ಗಂಟೆಗೆ |
| ಲೈವ್ ಬಿಡ್ಡಿಂಗ್ | 09.11.2023 ರಂದು ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ |
| ಇ.ಎಂ.ಡಿ ಮೊತ್ತ | ರೂ.21,500/– (ರೂ. ಇಪ್ಪತ್ತೊಂದು ಸಾವಿರದ ಐದು ನೂರು ಮಾತ್ರ) |

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರ್ಮ್ ವೆಬ್‌ಸೈಟ್:https://kppp.karnataka.gov.in.ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ **ಸಹಾಯಕವಾಣಿ 080–46010000/68948777**

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಜಾ)

DIPR/KP/KAVITA/1682/2023-24

## ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580001.
ಫೋನ: 0836–2461218 ಇ–ಮೇಲ್: eesliddwd@gmail.com

No. KNN/SLID/DWD/PB-1/Mundogod-84 /Electricalcharging /2023-24/849 Date:11-10-2023

### ಸಾರ್ವಜನಿಕರ ಗಮನಕ್ಕೆ

**ಕರ್ನಾಟಕ ನೀರಾವರಿ ನಿಗಮ ನಿಯಮಿತ ಶಿಗ್ಗಾಂವ್ ಏತ ನೀರಾವರಿ ನಿಗಮ ವಿಭಾಗ, ಧಾರವಾಡ** ಇವರ ಕಚೇರಿಯಿಂದ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಂದು ಹಾಗೂ ಎಚ್ಚರಿಸುವುದೇನೆಂದರೆ ಮುಂಡಗೋಡ ತಾಲೂಕಿನ ಕವಲಗಿ ಗ್ರಾಮದ ಹೊರವಲಯದಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಕೆರೆ ತುಂಬಿಸುವ ಯೋಜನೆಗಾಗಿ ನಿರ್ಮಿಸಲಾದ ಹೊಸ 33 ಕೆ.ವಿ ವಿದ್ಯುತ್ ಉಪ–ಕೇಂದ್ರಕ್ಕೆ ಒಳಬರುವ 33 ಕೆ.ವಿ ಮಾರ್ಗವು ಯಲ್ಲಾಪುರ ತಾಲೂಕಿನ 110/33/11 ಕೆ.ವಿ ಉಪಕೇಂದ್ರ ಉಮಚಗಿ ವಿದ್ಯುತ್ ಕೇಂದ್ರದಿಂದ ಹೊಸದಾಗಿ ರಚಿಸಲಾದ 33 ಕೆ.ವಿ ಏಕ ವಿದ್ಯುತ್ ಮಾರ್ಗವು ಸದ್ಯದಲ್ಲಿಯೇ **ಪರೀಕ್ಷಾರ್ಥ ಚೇತನಗೊಳ್ಳುವುದರಿಂದ** ಹೊಸದಾಗಿ ರಚಿಸಲಾದ 24 ಕಿ.ಮೀ ಉದ್ದದ(ಭೂಗತ ಕೇಬಲ್ ಮತ್ತು ಓವರ್‌ಹೆಡ್) 33 ಕೆ.ವಿ ವಿದ್ಯುತ್ ಮಾರ್ಗವು ಯಲ್ಲಾಪುರ ತಾಲೂಕಿನ ಉಮಚಗಿ, ಭರತನಳ್ಳಿ, ಜಕ್ಕೊಳ್ಳಿ ರಸ್ತೆ ಮತ್ತು ಬಿಳಕಿ ಅರಣ್ಯ ತಪಾಸಣಾ ಕೇಂದ್ರದ ಮೂಲಕ ಹಾದು ಮುಂಡಗೋಡ ತಾಲೂಕಿನ ಚಿಪಗೇರಿ, ಸುಳ್ಳಳ್ಳಿ ಗ್ರಾಮದ ಕವಲಗಿ ಜ್ಯಾಕ್ ವೆಲ್‌ನ 33 ಕೆ.ವಿ ಉಪಕೇಂದ್ರಕ್ಕೆ ಜೋಡಿಸಲಾದ ಮಾರ್ಗವು **ದಿನಾಂಕ : 12.10.2023** ರಂದು ಅಥವಾ ನಂತರ ಈ ಮಾರ್ಗ ಚಾಲನೆಗೊಂಡು ವಿದ್ಯುತ್ ಪ್ರಸರಣವಾಗುವುದರಿಂದ ಸಾರ್ವಜನಿಕರು ಈ ಮಾರ್ಗದಲ್ಲಿ ಇರುವ ಗೋಪುರ/ ಕಂಬ ಹಾಗೂ ಇನ್ನಿತರೆ ಉಪಕರಣಗಳನ್ನು ಮುಟ್ಟುವುದಾಗಲಿ, ಗೋಪುರ/ ಕಂಬಗಳನ್ನು ಹತ್ತುವುದಾಗಲಿ ಅಥವಾ ಭೂಗತ ಮಾರ್ಗದಲ್ಲಿ ಭೂಮಿ ಅಗೆಯುವುದನ್ನಾಗಲಿ ಮತ್ತು ದನ ಕರುಗಳನ್ನು ಕಟ್ಟುವುದಾಗಲಿ ಮಾಡಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಹಾಗೂ ತಿಳುವಳಿಕೆ ನೀಡಲಾಗಿದೆ.

**ಒಂದು ವೇಳೆ ಇದನ್ನು ಉಲ್ಲಂಘನೆ ಮಾಡಿ ಮೇಲಿನ ಕೃತ್ಯಗಳನ್ನು ಎಸಗಿದ್ದಲ್ಲಿ ಮುಂದೆ ಆಗುವ ಅನಾಹುತಗಳಿಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತ ಅಥವಾ ಹು.ವಿ.ಸ.ಕಂ./ಕೆ.ಪಿ.ಟಿ.ಸಿ.ಎಲ್. ಜವಾಬ್ದಾರರಾಗುವುದಿಲ್ಲ. ಹಾಗೂ ಇದನ್ನು ಉಲ್ಲಂಘಿಸಿದವರು ವಿದ್ಯುಚ್ಛಕ್ತಿ ಕಾಯ್ದೆ 2010 ರ ನಿಭಂದನೆ 43 ರ ಅನ್ವಯ ಶಿಕ್ಷೆಗೆ ಅರ್ಹರಾಗಿರುತ್ತಾರೆಎಂದು ಈ ಮೂಲಕ ತಿಳಿಸಲಾಗಿದೆ.**

ಸಹಿ/– ಕಾರ್ಯಪಾಲಕ ಇಂಜಿನೀಯರರು
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ.

ವಾ.ಸಾ.ಇ/ಧಾರವಾಡ/365/2023–24/ದೇಶಪಾಂಡೆಪಬ್ಲಿಸಿಟಿ

## INSTITUTE OF HOTEL MANAGEMENT CATERING TECHNOLOGY & APPLIED NUTRITION
(An Autonomous Body Under Ministry of Tourism, Government of India)
Near M.S. Building & SKSJTI Hostel, S.J.P Campus, Bangalore-560 001

**RECRUITMENT ON SHORT TERM CONTRACT**

Applications are invited for Teaching Assistant and Yoga Instructor
For further details log on to Institute
Website : ihmbangalore.kar.nic.in

Sd/-
Principal/Secretary

## ಕರ್ನಾಟಕ ಸರ್ಕಾರ
## ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ವಿಜಯಪುರ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬಡಿಕಮಾನ ರಸ್ತೆ ವಿಜಯಪುರ–586101
ದೂರವಾಣಿ ಸಂ: 08352–253641, 251641,
ಇ–ಮೇಲ್: kuwsdbeebjp@yahoo.com

ಸಂಖ್ಯೆ: ಕಜಮ/ಕಾ.ಪಾ.ಅ–ವಿಜಯ./ತಾಂ.ಸ/ತಾಂ./ಟೆಂಡರ್/ಸಿಂದಗಿ 11 KV PCVCB/ 2023–24/1895 ದಿನಾಂಕ: 09.10.2023

### ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮೂಲಕ ಮಾತ್ರ)

**ಸಿಂದಗಿ ಪಟ್ಟಣಕ್ಕೆ ಬಳಗಾನೂರ ಕೆರೆಯಿಂದ ಸುಧಾರಿತ ಸಗಟು ನೀರು ಸರಬರಾಜು ಮಾಡುವ ಯೋಜನೆ ಅಡಿಯಲ್ಲಿ ಚಾಂದಕವಟೆ 110 /11 KV ಸಬ್‌ಸ್ಟೇಶನ್‌ನ್ನು 246 KVA ಗೆ ವಿಸ್ತರಿಸಲು 1 ಸಂಖ್ಯೆ 11 KV PCVCB ನ್ನು ಒದಗಿಸಿ ಅಳವಡಿಸಿ, ವಿದ್ಯುತ್ತೀಕರಿಸಿ, ಪರೀಕ್ಷಿಸಿ, ಚಾಲನೆಗೊಳಿಸುವ ಕಾಮಗಾರಿ ಟೆಂಡರ ಮೊತ್ತ ರೂ. 12,04,561/–, ಬಿಡ್ ಭದ್ರತಾ ಮೊತ್ತ ರೂ. 36,000/–.**

**Indent No: KUWSDB/2023-24/EL/WORK_INDENT63**

ಬಿಡ್ ದಾಸ್ತಾವೇಜಿನ ಬೆಲೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಅಥವಾ ಈ ವೆಬ್‌ಸೈಟ್ https://www.kppp.karnataka.gov.in/ ಮೂಲಕ ಪಡೆಯಬಹುದು. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 08.11.2023 ರಂದು 16.30 ಘಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.11.2023 ರಂದು 11.00 ಘಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಅರ್ಹತೆ ಹೊಂದಿರುವ ಟೆಂಡರದಾರರಿಗೆ ತಿಳಿಸಲಾಗುವುದು.**

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/206/ಕೆಎಸ್‌ಎಂಸಿಎ/2023–24

## ಕರ್ನಾಟಕ ಸರ್ಕಾರ
## ಉಪ ನಿರ್ದೇಶಕರು(ಖಾಗ್ರಾ), ರವರ ಕಛೇರಿ, ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಸ್ಟೇಡಿಯಂ ರೋಡ್, ಎ.ಟಿ.ಐ. ಬಿಲ್ಡಿಂಗ್, ಚಿತ್ರದುರ್ಗ–577501.
ಫೋನ್:08194–295979 Email ID-ddkvichitradurga@gmail.com

ಸಂಖ್ಯೆ:ಉನಿ(ಗ್ರಾಕೈ):ಜಿಪಂಚಿ/ಗ್ರಾಕೈ/ಟೂಲ್‌ಕಿಟ್/ಇ–ಟೆಂಡರ್/2023–24
ದಿನಾಂಕ:09–10–2023

### ಟೆಂಡರ್ ಪ್ರಕಟಣೆ

ಉಪನಿರ್ದೇಶಕರು(ಗ್ರಾಕೈ), ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಕಛೇರಿಯ ಅನುಮೋದಿತ ಕ್ರಿಯಾಯೋಜನೆಯ ಪ್ರಕಾರ 2023–24ನೇ ಸಾಲಿಗೆ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಗಳ ಸರಬರಾಜು ಯೋಜನೆಯ ಲೆಕ್ಕಶೀರ್ಷಿಕೆ: 2851–00–107–0–32ರ (090), (422) ಮತ್ತು (423) ಹಾಗೂ ಗ್ರಾಮೀಣ ಭಾಗದ ವೃತ್ತಿನಿರತ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣಗಳನ್ನು ವಿತರಣೆ ಮಾಡಲು ಲಭ್ಯವಿರುವ ಒಟ್ಟಾರೆ ರೂ.22.00 ಲಕ್ಷಗಳ ಅನುದಾನದಲ್ಲಿ ನಿಯಮಾನುಸಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ಸುಧಾರಿತ ಉಪಕರಣ ಸರಬರಾಜು ಮಾಡಲು ಈ ಕೆಳಗಿನಂತೆ ಟೆಂಡರ್ ಪ್ರಕಟಣೆ ಮಾಡಲಾಗಿದೆ.

(1) ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ **IC/2023-24/IND0018 ದಿನಾಂಕ:09–10–2023** (2) ಟೆಂಡರ್‌ಗೆ ಇಟ್ಟ ಒಟ್ಟು ಮೊತ್ತ **ಒಟ್ಟುರೂ. 22.00 ಲಕ್ಷ** (3) ಟೆಂಡರ್ ಅಧಿಸೂಚನೆ ಹೊರಡಿಸಿದ **ದಿನಾಂಕ: 09–10–2023** (4) ಟೆಂಡರ್ ಅವಧಿ **ದಿನಾಂಕ:09–10–2023** ರಿಂದ **ದಿನಾಂಕ:08–11–2023 ರವರೆಗೆ** (ಇ–ಪ್ರಕ್ಯೂರ್‌ಮೆಂಟ್ ಮೂಲಕ) (5) ಇ.ಎಂ.ಡಿ. ಮೊತ್ತ ಇ–ಪ್ರಕ್ಯೂರ್‌ಮೆಂಟ್ ಪ್ರಕಾರಅಂದಾಜುರೂ. 55,000–00 @ 2.50%ರಂತೆ (6) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:08–11–2023ರ ಸಂಜೆ 5.00 ಗಂಟೆ ವರೆಗೆ** (8) ಮಾದರಿ ಉಪಕರಣಗಳನ್ನುಇಡುವ ದಿನಾಂಕ **06–11–2023** ಸಂಜೆ 5.00 ಗಂಟೆ ಒಳಗಾಗಿ (7) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ **10–11–2023**ಬೆಳಿಗ್ಗೆ 11.00 ಗಂಟೆಗೆ (8) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ **15–11–2023** ಬೆಳಿಗ್ಗೆ 11.00 ಗಂಟೆಗೆ ಮೇಲೆ ತಿಳಿಸಿರುವ ವಿವರಗಳನ್ವಯ ಹಾಗೂ ಕೆಳಕಂಡ ಷರತ್ತುಗಳನ್ವಯ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಇಚ್ಛಿಸಿದ ಅಧಿಕೃತ ಮಾರಾಟಗಾರರು/ ತಯಾರಕರು ನಿಗದಿತ ಅವಧಿಯೊಳಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. **ಹೆಚ್ಚಿನ ಮಾಹಿತಿಯನ್ನುಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಒಂದು ಟೂಲ್ ಕಿಟ್‌ನ ಬೆಲೆಯನ್ನು ಮಾತ್ರ ನಮೂದಿಸುವುದು.**

DIPR/CTA/KSMCA/ 260/2023-24

ಸಹಿ/– ಉಪನಿರ್ದೇಶಕರು(ಗ್ರಾಕೈ), ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ.

## ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ
ನೋಂದಾಯಿತ ಕಛೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯ, ವಸಂತನಗರ, ಬೆಂಗಳೂರು–560 051.

ಸಂಖ್ಯೆ: ಮುಕಾನಿಅ/ಬಿಎಸ್‌ಡಬ್ಲ್ಯೂಎಮ್‌ಎಲ್/ಪಿಆರ್/181/2023–24 ದಿನಾಂಕ: 10.10.2023

### ಸಾರ್ವಜನಿಕ ಪ್ರಕಟಣೆ

**ಉತ್ಪಾದಕರು / ರಫ್ತುದಾರರು / ಬ್ರ್ಯಾಂಡ್ ಮಾಲೀಕರಿಗಾಗಿ**
(ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ (ಪಿಡಬ್ಲ್ಯೂಎಂ) 2016 ರ ಅಡಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಗಳು)

**ವಿಷಯ :** ಪಿಡಬ್ಲ್ಯೂಎಂ ನಿಯಮಾನುಸಾರ ವಿಸ್ತರಿಸಲಾದ ಉತ್ಪಾದಕರ ಹೊಣೆ (ಇಪಿಆರ್) – ಪ್ಲಾಸ್ಟಿಕ್ ತ್ಯಾಜ್ಯ ರೀಸೈಕ್ಲಿಂಗ್ / ಬಳಕೆ ಅವಧಿ ಮುಕ್ತಾಯದ ಪ್ರಕ್ರಿಯೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು (ಬಿಎಸ್‌ಡಬ್ಲ್ಯೂಎಮ್‌ಎಲ್) ಬೆಂಗಳೂರು ನಗರದ ಘನತ್ಯಾಜ್ಯ ನಿರ್ವಹಣೆಗಾಗಿ ಸ್ಥಾಪಿಸಲಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಸಂಸ್ಥೆಯಾಗಿದೆ.

ಬಿಎಸ್‌ಡಬ್ಲ್ಯೂಎಮ್‌ಎಲ್, ಬಿಬಿಎಂಪಿ ಮಿತಿಯಲ್ಲಿ ಉತ್ಪಾದನೆಯಾದ ಘನತ್ಯಾಜ್ಯಗಳ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆಯ ಹೊಣೆಗಾರಿಕೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ರಚಿಸಲಾದ ಒಂದು ವಿಶೇಷ ಉದ್ದೇಶದ ಉದ್ಯಮವಾಗಿರುತ್ತದೆ. ಬಿಎಸ್‌ಡಬ್ಲ್ಯೂಎಮ್‌ಎಲ್ ಸಂಸ್ಥೆಯು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ 2016 ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮ 2022 ಅಡಿಯಲ್ಲಿ ಪ್ಲಾಸ್ಟಿಕ್ ಪ್ಯಾಕೇಜಿಂಗ್‌ನ ವಿಸ್ತರಿಸಲಾದ ಉತ್ಪಾದಕರ ಹೊಣೆಗಾರಿಕೆಯ (ಇಪಿಆರ್) ಮಾರ್ಗಸೂಚಿಗಳನ್ವಯ ಪ್ಲಾಸ್ಟಿಕ್ ಪ್ಯಾಕೇಜಿಂಗ್‌ನಲ್ಲಿರುವ ಉತ್ಪಾದಕರು / ರಫ್ತುದಾರರು / ಹಾಗೂ ಬ್ರ್ಯಾಂಡ್ ಮಾಲೀಕರಿಂದ (ಪಿಐಬಿಓಗಳಿಂದ) ಆಸಕ್ತಿ ವ್ಯಕ್ತ ಪಡಿಸಲು ಆಹ್ವಾನಿಸುತ್ತಿದೆ.

ಬಿಬಿಎಂಪಿಯು ಪಿಐಬಿಓಗಳ ಸಹಭಾಗಿತ್ವದೊಂದಿಗೆ ನಗರದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಆಸಕ್ತಿ ಹೊಂದಿದೆ. ಈ ಪ್ರಕ್ರಿಯೆಯಿಂದ ನಮ್ಮ ವಾರ್ಡ್ ಮಟ್ಟದ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳು ಮತ್ತು ನಗರದಲ್ಲಿ ನಿರ್ಮಿಸಲಾದ ಬೃಹತ್ ಆರ್‌ಡಿಎಫ್ ಶೆಡ್‌ಗಳ ಮೂಲಕ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲು, ಸಂಗ್ರಹಿಸಲಾದ ಅಂತಹ ಪ್ಲಾಸ್ಟಿಕ್ ತ್ಯಾಜ್ಯದ ವಿಂಗಡಣೆ, ಸಾಗಾಣಿಕೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ರೀಸೈಕ್ಲಿಂಗ್ / ಬಳಕೆ ಅವಧಿ ಮುಕ್ತಾಯದ ಪ್ರಕ್ರಿಯೆಗೆ ಅವಕಾಶ ಕಲ್ಪಿಸಲು ಸಹಕಾರಿಯಾಗಲಿದೆ.

ಆಸಕ್ತ ಪಿಐಬಿಓಗಳು (ಪ್ಲಾಸ್ಟಿಕ್ ಪ್ಯಾಕೇಜಿಂಗಾಗಿ ಸಿಪಿಸಿಬಿ ಕೇಂದ್ರೀಕೃತ ಇಪಿಆರ್ ಪೋರ್ಟಲ್‌ನಲ್ಲಿ ನೋಂದಾಯಿತರಾದ/ ನೋಂದಾಯಿಸಿಕೊಳ್ಳಬೇಕಾದ) ಐಪಿಪಿ ಸೆಂಟರ್, ಬಿಬಿಎಂಪಿ, 16ನೇ ಮೇನ್, (ಚೌಡಯ್ಯ ಮೆಮೋರಿಯಲ್ ಹಾಲ್ ಸಮೀಪ) ಮಲ್ಲೇಶ್ವರಂ, ಬೆಂಗಳೂರು ಇಲ್ಲಿ 19.10.2023 ರಂದು ಬೆಳಿಗ್ಗೆ 11.00 ಗಂಟೆಗೆ ಮೊದಲನೇ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳಲು ಆಹ್ವಾನಿಸುತ್ತಾ ಹಾಗೂ ತಮ್ಮ ಹಾಜರಿಯನ್ನು ಮುಕಾನಿಅ (ಸಿಇಓ), ಬಿಎಸ್‌ಡಬ್ಲ್ಯೂಎಮ್‌ಎಲ್ ಇವರ ಕೆಳಕಂಡ ವಿಳಾಸಕ್ಕೆ ಲಿಖಿತವಾಗಿ ಸಹ ಖಚಿತ ಪಡಿಸಬೇಕಾಗಿ ವಿನಂತಿಸಲಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯ, ವಸಂತನಗರ, ಬೆಂಗಳೂರು–560 051. ಇ–ಮೇಲ್ ಐಡಿ: admswml123@gmail.com agmbswml@gmail.com ದೂರವಾಣಿ: 080–43790743.

ಸಹಿ/–
ಸಹಿ/– ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ
ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ವಾಸಾಸಂಇ/ವಾಪ್ರ/1676/ಆಕಾರ್/2023–24

## (ಕರ್ನಾಟಕ ಸರ್ಕಾರ)
## ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ
### ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2023–24 ದಿನಾಂಕ:11.10.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ, ಉಪ ವಿಭಾಗ ವ್ಯಾಪ್ತಿಯ 2022–23ನೇ ಸಾಲಿನ 2515–00–101–0–29 ಯೋಜನೆಯಡಿಯ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ ಪೋರ್ಟಲ್ ಅಡಿ kw-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 11.10.2023 ರಿಂದ ದಿ:25.10.2023ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 25.10.2023 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:25.10.2023 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:27.10.2023 ರಂದು ಸಂಜೆ 4.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

**ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್, ಪ.ರಾಜ್.ಇಂ.ವಿಭಾಗ, ಹಾಸನ.**

ವಾಸಾಸಂಇ/ಹಿಸನಿ/ಹಾಸನ/404/ಕೆಎಸ್‌ಎಂಸಿಎ/415/2023–24

## ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)
Bamul
ಡಿ.ಆರ್.ಕಾಲೇಜು ಅಂಚೆ, ಡಾ:ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು–560029,
ದೂರವಾಣಿ : 080–26096248
ಇ–ಮೇಲ್: bamulpurchase@gmail.com ವೆಬ್‌ಸೈಟ್ :www.bamulnandini.coop,

ಐಆರ್‌ಫ್‌ಟಿ ಸಂಖ್ಯೆ:ಬಮೂಲ್/ಪಿಯುಆರ್/09/1768/ಟಿ–299/2023–24 ದಿನಾಂಕ:10.10.2023
ಐಎಫ್‌ಟಿ ಸಂಖ್ಯೆ:ಬಮೂಲ್/ಪಿಯುಆರ್/09/1769/ಟಿ–300/2023–24 ದಿನಾಂಕ:10.10.2023

**ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನುಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್**

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹತಯಾರಕರು/ ಸರಬರಾಜುದಾರರಿಂದ ಈ ಕೆಳಕಂಡ ಸಾಮಾಗ್ರಿಗಳ ಸರಬರಾಜಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದೆ.

| ಕ್ರ.ಸ SI | ಸಾಮಗ್ರಿಯ ವಿವರ Particulars | ಪರಿಮಾಣ Qty | ಅಂದಾಜು (ಲಕ್ಷಗಳಲ್ಲಿ) Estd Cost in Lkhs | ಟೆಂಡರ್ ಸಂಖ್ಯೆ Tender No |
|---|---|---|---|---|
| 01 | **Supply of Bottom web material for packing 8g/10g Butter (Sunblis rigid PVC Film) to Bengaluru Dairy for the period of one year** | 20,000 Kgs | 52.20 | KMF/2023-24/IND0229 |
| 02 | **Supply Gents Uniform material for the period of two years** | | | KMF/2023-24/IND0334 |
| | i) General Shirting | 5701 Mtrs | 14.37 | |
| | ii) General Suiting | 3134 Mtrs | 23.50 | |
| | iii) Khaki Suiting | 485 Mtrs | 3.73 | |
| 03 | **Supply of Ladies Saree Material for the period of two Years.** Length 6.3 meters (5.5mtrs Saree with blouse 01 mtrs) | 1182 Nos | 14.18 | KMF/2023-24/IND0335 |
| 04 | **Printing and Supply of Diaries for New Year – 2024** | | | |
| | a) Crown 1/4th Size (A-4) Size Diaries with Two gold Colour Corner Clips | 7,035 Nos | 14.14 | KMF/2023-24/IND0336 |
| | b) Crown 1/5th Size (A-5) Size Diaries | 5,860 Nos | 5.27 | |
| | c) Diaries for Marketing Section (140* 210) | 2,500 Nos | 1.75 | |
| 05 | **Printing and Supply of Wall Calendar -2024** | 21,340 Nos | 8.54 | KMF/2023-24/IND0337 |
| 06 | Supply of PP/PET Strapping Clips Metalic (2 kg Packing ) for the period of one year | 1,08,000 Kgs | 91.76 | KMF/2023-24/IND0340 |
| 07 | Supply of Printed Cotton Bags of 5 Kgs Capacity(Size 13" x 17") to Rajankunte Seed Processing Unit Bangalore North | 50,000 Nos | 7.5 | KMF/2023-24/IND0339 |

| | | |
|---|---|---|
| 1 | ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ | 10.10.2023ರಿಂದ 26.10.2023 ಅಪರಾಹ್ನ 02.00 ಗಂಟೆವರೆಗೆ |
| 2 | ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ | 19.10.2023 ಬೆಳಿಗ್ಗೆ 11.00 ಗಂಟೆಗೆ ವರೆಗೆ |
| 3 | ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ | 26.10.2023 ಅಪರಾಹ್ನ 02.00 ಗಂಟೆವರೆಗೆ |
| 4 | ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 27.10.2023 ಅಪರಾಹ್ನ 02.35 ಗಂಟೆಗೆ |
| 5 | ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 31.10.2023 ಬೆಳಿಗ್ಗೆ 11.30 ಗಂಟೆಗೆ |
| 6 | ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ | ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ |

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ.

ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ–ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ವೀಕ್ಷಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/8068948777.

ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್‌ಆಹ್ವಾನಿಸುವ ಪ್ರಾಧಿಕಾರ(ಬಮೂಲ್)

## ಕರ್ನಾಟಕ ಸರ್ಕಾರ
## ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
ಸರ್ಕಾರದ ಸ್ವಾಯತ್ತ ಸಂಸ್ಥೆ
ಇ–ಮೇಲ್ : directorgimsgulbarga@gmail.com ದೂರವಾಣಿ ಸಂ.08472-227252 ಫ್ಯಾಕ್ಸ್ 260252

No. GIMS/KLB/EST-1/Walk in interview/CR-128/ 2023-24/1635 ದಿನಾಂಕ:12–10–2023

### ನೇರ ಸಂದರ್ಶನದ ಅಧಿಸೂಚನೆ (Walk In Interview Notification)

ವಿಷಯ: ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ (ಟ್ರಾಮಾ ಕೇರ್ ಕೇಂದ್ರ ಸೇರಿದಂತೆ) ಸ್ಥಳೀಯ ವೃಂದ (ಕಲ್ಯಾಣ ಕರ್ನಾಟಕ ಪ್ರದೇಶ) ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕ ವೈದ್ಯರನ್ನು ಮತ್ತು ಅಪಘಾತ ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿಯ ಕುರಿತು.

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ (ಟ್ರಾಮಾ ಕೇರ್ ಕೇಂದ್ರ ಸೇರಿದಂತೆ) ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಕ ವೈದ್ಯರನ್ನು ಅಪಘಾತ ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ: **27–10–2023 ರ ಸಾಯಂಕಾಲ 5.00 ಗಂಟೆಯೊಳಗೆ** ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮುಖಾಂತರ ನಿರ್ದೇಶಕರ ಕಚೇರಿ, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಸಂದರ್ಶನದ ದಿನದಂದು ಅಂದರೆ ದಿನಾಂಕ: **02–11–2023** ರಂದು ಬೆಳಗ್ಗೆ 8.30 ರಿಂದ 11.00 ಗಂಟೆಯವರೆಗೆ ತಮ್ಮ ದಾಖಲೆಗಳನ್ನು ಪರಿಶೀಲಿಸಲು ಆಯ್ಕೆಯ ಸಮಿತಿಯ ಮುಂದೆ ಮೂಲ ದಾಖಲೆಗಳೊಂದಿಗೆ 02 ಸೆಟ್ ಝೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಡೀಕರಿಸಿ ಮತ್ತು ಇತ್ತೀಚಿನ 02 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಹಾಗೂ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು ಮತ್ತು ರೂ. 2000/– (ಖಾಯಂ ಹುದ್ದೆಗಳಿಗೆ) ಮತ್ತು ರೂ. 500/– (ಗುತ್ತಿಗೆ ಹುದ್ದೆಗಳಿಗೆ) (ಮರುಪಾವತಿಸಲಾಗದು) ಡಿಡಿ ಯನ್ನು ನಿರ್ದೇಶಕರು, ಜಿಮ್ಸ್, ಕಲಬುರಗಿ ರವರ ಹೆಸರಿನಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಮೀಸಲಾತಿಯನ್ನು ಬಯಸುವ/ಕ್ಲೇಮ್ ಮಾಡುವ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಜಾತಿ/ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ತಮ್ಮ ಅರ್ಜಿ ನಮೂನೆಗಳೊಂದಿಗೆ ಸಲ್ಲಿಸಬೇಕು. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ DPAR 43 HKC 2013 ದಿನಾಂಕ: 29–01–2014 ರಲ್ಲಿ ನಿರ್ದಿಷ್ಟ ಪಡಿಸಿದಂತೆ ಸಹಾಯಕ ಆಯುಕ್ತರು, ಕಂದಾಯ ಉಪ ವಿಭಾಗದವರು ನೀಡಿದ ಅರ್ಹತಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಲ್ಲಿ ಮಾತ್ರ ಅಭ್ಯರ್ಥಿಗಳನ್ನು ಸ್ಥಳೀಯ ವ್ಯಕ್ತಿಗಳೆಂದು ಪರಿಗಣಿಸಲಾಗುತ್ತದೆ. ಹುದ್ದೆಗಳ ವಿವರ ಈ ಕೆಳಗಿನಂತಿದೆ.

**Assistant Professors- Regular posts (ಖಾಯಂ ಹುದ್ದೆ)**

| Sl No | Department | Total No of posts |
|---|---|---|
| 1 | Pharmacology | 1 |
| 2 | Microbiology | 2 |
| 3 | Pathology | 1 |
| 4 | ENT | 1 |
| 5 | Ophthalmology | 1 |
| 6 | General Medicine | 2 |
| 7 | General Surgery (01 TCC post) | 2 |
| 8 | Orthopedics (01 TCC post) | 3 |
| 9 | RadioDiagnosis | 1 |
| 10 | Anesthesia(02 TCC posts) | 5 |
| 11 | OBG | 2 |
| 12 | Emergency Medicine | 1 |
| 13 | Neurosurgery (01 TCC post) | 1 |
| 14 | Plastic Surgery (01 TCC post) | 1 |
| | TOTAL | 24 |

**Senior Residents- Contract Basis (ಗುತ್ತಿಗೆ ಆಧಾರ)**

| Sl No | Department | No of posts |
|---|---|---|
| 1 | General Surgery | 4 |
| 2 | Orthopedics | 3 |
| 3 | Neurosurgery | 3 |
| 4 | Anaesthesiology | 4 |
| 5 | Radiology | 2 |
| | Total | 16 |

**CMO- Contract Basis (ಗುತ್ತಿಗೆ ಆಧಾರ)**

| Sl.No. | Particulars | No. of Posts |
|---|---|---|
| 1 | Casualty Medical Officer (CMO) | 06 |
| | Total | 06 |

ವಿವರವಾದ ಅಧಿಸೂಚನೆ ಮತ್ತು ಅರ್ಜಿ ನಮೂನೆಯನ್ನು ಸಂಸ್ಥೆಯ https://gimsgulbarga.karnataka.gov.in/english ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು.

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/361/ಕೆ.ಎಸ್.ಎಂ.ಸಿ.&ಎ/2023–24

ದಕ್ಷಿಣ ಆಫ್ರಿಕಾಕ್ಕೆ ಸತತ ಎರಡನೇ ಗೆಲುವು • ಆಸ್ಟ್ರೇಲಿಯಾಕ್ಕೆ 134 ರನ್ ಸೋಲು • ಏಡನ್ ಮರ್ಕರಂ ಅರ್ಧಶತಕ

# ಡಿ ಕಾಕ್ ಶತಕಕ್ಕೆ ಒಲಿದ ಜಯ

**ಲಖನೌ (ಪಿಟಿಐ):** ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಅವರ ಸತತ ಎರಡನೇ ಶತಕ ಮತ್ತು ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ತೆಂಬಾ ಬವುಮಾ ಬಳಗ 134 ರನ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಮಣಿಸಿತು. ಮೊದಲ ಪಂದ್ಯದಲ್ಲಿ ಭಾರತಕ್ಕೆ ಶರಣಾಗಿದ್ದ, ಪ್ಯಾಟ್ ಕಮಿನ್ಸ್ ಬಳಗಕ್ಕೆ ಎದುರಾದ ಎರಡನೇ ಸೋಲು ಇದು.

ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 311 ರನ್ ಪೇರಿಸಿತು. ಡಿ ಕಾಕ್ (109; 106 ಎ., 4X8, 6X5) ಮತ್ತು ಏಡನ್ ಮರ್ಕರಂ (56; 44 ಎ., 4X7,. 6X1) ಅವರು ಗಮನ ಸೆಳೆದರು. ಆಸ್ಟ್ರೇಲಿಯಾ ಫೀಲ್ಡರ್‌ಗಳು ಹಲವು ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ಕೂಡಾ ದಕ್ಷಿಣ ಆಫ್ರಿಕಾ ತಂಡದ ಮೊತ್ತ ಬೆಳೆಯಲು ಕಾರಣ.

ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ 40.5 ಓವರ್‌ಗಳಲ್ಲಿ 177 ರನ್‌ಗಳಿಗೆ ಮುಗ್ಗರಿಸಿತು. 33 ರನ್‌ಗಳಿಗೆ ಮೂರು ವಿಕೆಟ್ ಪಡೆದ ದಕ್ಷಿಣ ಆಫ್ರಿಕಾ ತಂಡದ ವೇಗಿ ಕಗಿಸೊ ರಬಾಡ ಯಶಸ್ವಿ ಬೌಲರ್ ಎನಿಸಿಕೊಂಡರೆ, ಅವರಿಗೆ ತಕ್ಕ ಸಾಥ್ ನೀಡಿದ ಸ್ಪಿನ್ನರ್‌ಗಳಾದ ಕೇಶವ್ ಮಹಾರಾಜ್ ಮತ್ತು ತಬ್ರೇಜ್ ಶಂಸಿ ತಲಾ ಎರಡು ವಿಕೆಟ್ ಪಡೆದರು.

ಆರಂಭದಿಂದಲೇ ವಿಕೆಟ್‌ಗಳನ್ನು ಕಳೆದುಕೊಂಡ ಆಸ್ಟ್ರೇಲಿಯಾ ತಂಡ ಯಾವ ಹಂತದಲ್ಲೂ ಹೋರಾಟದ ಮನೋಭಾವ ತೋರಲಿಲ್ಲ. ತಂಡದ ಮೊತ್ತ 27 ಆದಾಗ ಮಿಚೆಲ್ ಮಾರ್ಷ್ (7) ಮರಳಿದರು. ಅವರು ಮಾರ್ಕೊ ಜೆನ್ಸನ್ ಎಸೆತದಲ್ಲಿ ಬವುಮಾಗೆ ಕ್ಯಾಚಿತ್ತರು. ಡೇವಿಡ್ ವಾರ್ನರ್ (13; 27 ಎ.) ಅವರ ಪರದಾಟಕ್ಕೆ ಲುಂಗಿ ಗಿಡಿ ತೆರೆ ಎಳೆದರು.

ನಾಲ್ಕು ಬೌಂಡರಿಗಳ ಮೂಲಕ ಉತ್ತಮ ಆರಂಭ ಪಡೆದ ಸ್ಟೀವನ್ ಸ್ಮಿತ್ (19; 16 ಎ.) ಅವರನ್ನು ರಬಾಡ, ಎಲ್‌ಬಿಡಬ್ಲ್ಯು ಬಲೆಯಲ್ಲಿ ಕೆಡವಿದರು. ಜೋಶ್ ಇಂಗ್ಲಿಸ್ (5) ಮತ್ತು ಮಾರ್ಕಸ್ ಸ್ಟೊಯಿನಿಸ್ (5) ಅವರನ್ನೂ ರಬಾಡ ಪೆವಿಲಿಯನ್‌ಗಟ್ಟಿದರು. ಇದರ ನಡುವೆ ಅಪಾಯಕಾರಿ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ (3) ಅವರನ್ನು ಕೇಶವ್ ಮಹಾರಾಜ್ ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಹಿಡಿದು ಔಟ್ ಮಾಡಿದರು.

70 ರನ್ ಗಳಿಸುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಾಗ ಆಸ್ಟ್ರೇಲಿಯಾ ತಂಡ ಗೆಲುವಿನ ಆಸೆ ಕೈಬಿಟ್ಟಿತು. ಮಾರ್ನಸ್ ಲಾಬುಶೇನ್ (46; 74 ಎ.) ಮತ್ತು ಮಿಚೆಲ್ ಸ್ಟಾರ್ಕ್ (27) ಅವರು ಸೋಲಿನ ಅಂತರ ತಗ್ಗಿಸಿದರಷ್ಟೆ.

**ಡಿ ಕಾಕ್ ಮಿಂಚು:** ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಫೀಲ್ಡಿಂಗ್ ಮಾಡಲು ತೀರ್ಮಾನಿಸಿದರು. ಆದರೆ ಅವರ ನಿರ್ಧಾರವನ್ನು ದಕ್ಷಿಣ ಆಫ್ರಿಕಾ ಆರಂಭಿಕ ಬ್ಯಾಟರ್‌ಗಳು ತಲೆಕೆಳಗಾಗಿಸಿದರು.

ಡಿಕಾಕ್ ಮತ್ತು ಬವುಮಾ (35; 55 ಎ.) ಮೊದಲ ವಿಕೆಟ್‌ಗೆ 19.4 ಓವರ್‌ಗಳಲ್ಲಿ 108 ರನ್ ಸೇರಿಸಿದರು. ರನ್ ವೇಗ ಹೆಚ್ಚಿಸುವ ಪ್ರಯತ್ನದಲ್ಲಿ ಬವುಮಾ, ಮ್ಯಾಕ್ಸ್‌ವೆಲ್ ಎಸೆತದಲ್ಲಿ ವಾರ್ನರ್‌ಗೆ ಕ್ಯಾಚಿತ್ತು ಔಟಾದರು. ಡಿ ಕಾಕ್ ಆ ಬಳಿಕ ರಸೀ ವ್ಯಾನ್ ಡರ್ ಡಸೆ (26) ಅವರೊಂದಿಗೆ ಎರಡನೇ ವಿಕೆಟ್‌ಗೆ 50 ರನ್ ಕಲೆಹಾಕಿದರು.

ಶ್ರೀಲಂಕಾ ವಿರುದ್ಧದ ಮೊದಲ ಪಂದ್ಯದಲ್ಲಿ ಶತಕ ಗಳಿಸಿದ್ದ 30 ವರ್ಷದ ವಿಕೆಟ್ ಕೀಪರ್ ಬ್ಯಾಟರ್ ಡಿಕಾಕ್, ಆಸ್ಟ್ರೇಲಿಯಾದ ಸ್ಪಿನ್ ಮತ್ತು ವೇಗದ ದಾಳಿಗೆ ಎದೆಯೊಡ್ಡಿ ನಿಂತರು. ಐಪಿಎಲ್‌ನಲ್ಲಿ ಲಖನೌ ಜೈಂಟ್ಸ್ ಪರ ಏಕನಾ ಕ್ರೀಡಾಂಗಣದಲ್ಲಿ ಹಲವು ಪಂದ್ಯಗಳನ್ನು ಆಡಿದ್ದರಿಂದ ಡಿ ಕಾಕ್ ಇಲ್ಲಿನ ಪರಿಸ್ಥಿತಿಗೆ ಬೇಗನೇ ಹೊಂದಿಕೊಂಡರು.

35ನೇ ಓವರ್‌ನಲ್ಲಿ ಅವರು ಔಟಾದ ಬಳಿಕ ಆಸ್ಟ್ರೇಲಿಯಾ ತಂಡಕ್ಕೆ ಪಂದ್ಯದ ಮೇಲೆ ಹಿಡಿತ ಸಾಧಿಸುವ ಅವಕಾಶವಿತ್ತು. ಆದರೆ ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ಮುಳುವಾಗಿ ಪರಿಣಮಿಸಿತು. 1 ರನ್ ಗಳಿಸಿದ್ದಾಗ ಜೀವದಾನ ಪಡೆದ ಮರ್ಕರಂ, ಅರ್ಧಶತಕದ ಮೂಲಕ ಎದುರಾಳಿ ತಂಡವನ್ನು ಕಾಡಿದರು.

**ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ** 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 311 (ಕ್ವಿಂಟನ್ ಡಿ ಕಾಕ್ 109, ತೆಂಬಾ ಬವುಮಾ 35, ರಸೀ ವ್ಯಾನ್ ಡರ್ ಡಸೆ 26, ಏಡನ್ ಮರ್ಕರಂ 56, ಹೆನ್ರಿಕ್ ಕ್ಲಾಸೆನ್ 29, ಮಾರ್ಕೊ ಜೆನ್ಸನ್ 26, ಗ್ಲೆನ್ ಮ್ಯಾಕ್ಸ್‌ವೆಲ್ 34ಕ್ಕೆ 2, ಮಿಚೆಲ್ ಸ್ಟಾರ್ಕ್ 53ಕ್ಕೆ 2, ಜೋಶ್ ಹ್ಯಾಜೆಲ್‌ವುಡ್ 60ಕ್ಕೆ 1); **ಆಸ್ಟ್ರೇಲಿಯಾ** 40.5 ಓವರ್‌ಗಳಲ್ಲಿ 177 (ಸ್ಟೀವನ್ ಸ್ಮಿತ್ 19, ಮಾರ್ನಸ್ ಲಾಬುಶೇನ್ 46, ಮಿಚೆಲ್ ಸ್ಟಾರ್ಕ್ 27, ಪ್ಯಾಟ್ ಕಮಿನ್ಸ್ 22, ಕಗಿಸೊ ರಬಾಡ 33ಕ್ಕೆ 3, ಕೇಶವ್ ಮಹಾರಾಜ್ 30ಕ್ಕೆ 2, ತಬ್ರೇಜ್ ಶಂಸಿ 38ಕ್ಕೆ 2, ಮಾರ್ಕೊ ಜೆನ್ಸನ್ 54ಕ್ಕೆ 2)

**ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 134 ರನ್ ಗೆಲುವು



ಶತಕ ಗಳಿಸಿದ ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

### ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

| ದೇಶ | ಪಂದ್ಯ | ಗೆಲುವು | ಸೋಲು | ಟೈ | ಪಾಯಿಂಟ್ | ಎನ್‌ಆರ್‌ಆರ್ |
|---|---|---|---|---|---|---|
| ದಕ್ಷಿಣ ಆಫ್ರಿಕಾ | 2 | 2 | 0 | 0 | 4 | 2.360 |
| ನ್ಯೂಜಿಲೆಂಡ್ | 2 | 2 | 0 | 0 | 4 | 1.958 |
| ಭಾರತ | 2 | 2 | 0 | 0 | 4 | 1.500 |
| ಪಾಕಿಸ್ತಾನ | 2 | 2 | 0 | 0 | 4 | 0.927 |
| ಇಂಗ್ಲೆಂಡ್ | 2 | 1 | 1 | 0 | 2 | 0.553 |
| ಬಾಂಗ್ಲಾದೇಶ | 2 | 1 | 1 | 0 | 2 | -0.653 |
| ಶ್ರೀಲಂಕಾ | 2 | 0 | 2 | 0 | 0 | -1.161 |
| ನೆದರ್ಲೆಂಡ್ಸ್ | 2 | 0 | 2 | 0 | 0 | -1.438 |
| ಆಸ್ಟ್ರೇಲಿಯಾ | 2 | 0 | 2 | 0 | 0 | -1.846 |
| ಅಫ್ಘಾನಿಸ್ತಾನ | 2 | 0 | 2 | 0 | 0 | -1.907 |

### ಮುಖ್ಯಾಂಶಗಳು

- ಪಾಯಿಂಟ್ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾಕ್ಕೆ ಅಗ್ರಸ್ಥಾನ
- ಸತತ ಎರಡನೇ ಶತಕ ಗಳಿಸಿದ ಕ್ವಿಂಟನ್ ಡಿ ಕಾಕ್
- ಕಗಿಸೊ ರಬಾಡಗೆ ಮೂರು ವಿಕೆಟ್

## ಅತ್ಯಧಿಕ ಸಿಕ್ಸರ್: ಕ್ರಿಸ್ ಗೇಲ್ ಪ್ರೇರಣೆಯೂ ಇದೆ– ರೋಹಿತ್

**ನವದೆಹಲಿ (ಪಿಟಿಐ):** ದೈತ್ಯ ಆಟಗಾರ ಕ್ರಿಸ್ ಗೇಲ್ ಅವರ ಹೆಸರಿನಲ್ಲಿದ್ದ ಅತ್ಯಧಿಕ ಸಿಕ್ಸರ್‌ಗಳ ದಾಖಲೆಯನ್ನು ಬುಧವಾರ ಮುರಿದಿರುವ ರೋಹಿತ್ ಶರ್ಮಾ ಅವರು ವೆಸ್ಟ್ ಇಂಡೀಸ್ ಎಡಗೈ ಆಟಗಾರನೇ ತಮಗೆ ಪ್ರೇರಣೆ ಎಂದಿದ್ದಾರೆ. 'ದಾಖಲೆಯ ಈ ಯಾನದಲ್ಲಿ ಕೆಲಮಟ್ಟಿಗೆ ಯುನಿವರ್ಸ್ ಬಾಸ್ (ಗೇಲ್) ಅವರಿಂದಲೇ ಪ್ರೇರಣೆ ಪಡೆದಿದ್ದೇನೆ' ಎಂದು ಹೇಳಿದ್ದಾರೆ.

ಅಫ್ಗಾನಿಸ್ತಾನ ವಿರುದ್ಧ ದೆಹಲಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿ 131 ರನ್ ಹೊಡೆದ ರೋಹಿತ್ ಆ ಇನಿಂಗ್ಸ್‌ನಲ್ಲಿ ಐದು ಸಿಕ್ಸರ್‌ಗಳನ್ನು ಬಾರಿಸಿದ್ದರು. ಮೂರೂ ಮಾದರಿಗಳಲ್ಲಿ ಅವರು ಹೊಡೆದ ಸಿಕ್ಸರ್‌ಗಳ ಸಂಖ್ಯೆ 556ಕ್ಕೆ ಏರಿದೆ. ಇದು ವಿಂಡೀಸ್ ದೈತ್ಯ ಆಟಗಾರನಿಗಿಂತ ಮೂರು ಹೆಚ್ಚು. ರೋಹಿತ್, ಗೇಲ್ ಅವರಿಗಿಂತ 30 ಕಡಿಮೆ ಪಂದ್ಯಗಳಲ್ಲಿ, ಅಂದರೆ 453 ಪಂದ್ಯಗಳಲ್ಲಿ ಈ ಸಾಧನೆಗೈದಿದ್ದಾರೆ.

'ಯುನಿವರ್ಸ್ ಬಾಸ್ ಅಂದರೆ ಯುನಿವರ್ಸ್ ಬಾಸ್. ನಾನು ಅವರಿಂದ ಸ್ಫೂರ್ತಿ ಪಡೆದಿರುವೆ. ಇತ್ತೀಚಿನ ವರ್ಷಗಳಲ್ಲಿ ಎಲ್ಲೆಡೆ ಸಿಕ್ಸರ್ ಎತ್ತುವ ಯಂತ್ರದಂತೆ ಅವರು ಆಡಿರುವುದನ್ನು ನಾವು ನೋಡಿದ್ದೇವೆ' ಎಂದು ಗೇಲ್ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದ್ದಾರೆ.

'ನಾವು ಒಂದೇ ನಂಬರ್‌ನ (45) ಜರ್ಸಿ ಧರಿಸುತ್ತೇವೆ. ಈ ಸಂಖ್ಯೆಯ ಜರ್ಸಿಯಿಂದ ದಾಖಲೆ ಆಗಿರುವುದರಿಂದ ಅವರಿಗೂ ಖುಷಿಯಾಗಿರಬಹುದೆಂಬ ಖಚಿತ ವಿಶ್ವಾಸ ನನಗೆ ಇದೆ' ಎಂದು ಬಿಸಿಸಿಐ ಪೋಸ್ಟ್ ಮಾಡಿದ ವಿಡಿಯೊದಲ್ಲಿ ರೋಹಿತ್ ಹೇಳಿದ್ದಾರೆ.

'ಸಿಕ್ಸರ್ ಹೊಡೆಯುವ ಕೌಶಲದ ಹಿಂದೆ ಸಾಕಷ್ಟು ಶ್ರಮ ಹಾಕಿದ್ದೇನೆ' ಎಂದೂ 36 ವರ್ಷದ 'ಹಿಟ್‌ಮ್ಯಾನ್' ಹೇಳಿದ್ದಾರೆ.

ಬ್ಯಾಟ್ಸ್‌ಮನ್ ಸ್ನೇಹಿ ಅಂಕಣದಲ್ಲಿ ಅಫ್ಗಾನಿಸ್ತಾನವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ ಬೌಲರ್‌ಗಳ ಪ್ರಯತ್ನಕ್ಕೆ ಅವರು ಮೆಚ್ಚುಗೆ ಸೂಚಿಸಿದರು.



ರೋಹಿತ್ ಶರ್ಮಾ

## ಭಾರತ– ಪಾಕ್ ಪಂದ್ಯಕ್ಕೆ ಮಳೆ ಸಾಧ್ಯತೆ

**ಅಹಮದಾಬಾದ್ (ಪಿಟಿಐ):** ಬಹು ನಿರೀಕ್ಷಿತ ಭಾರತ– ಪಾಕಿಸ್ತಾನ ತಂಡಗಳ ನಡುವಣ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ವಿಶ್ವಕಪ್ ಪಂದ್ಯದ ವೇಳೆ ಮಳೆಯೂ ಆಟವಾಡುವ ನಿರೀಕ್ಷೆಯಿದೆ. ಹವಾಮಾನ ಇಲಾಖೆಯು ಪಂದ್ಯ ನಡೆಯುವ ದಿನವಾದ ಶನಿವಾರ ನಗರದಲ್ಲಿ ಮತ್ತು ಉತ್ತರ ಗುಜರಾತಿನಲ್ಲಿ ಮಳೆಯಾಗಬಹುದೆಂದು ಮುನ್ಸೂಚನೆ ನೀಡಿದೆ.

ನ್ಯೂಜಿಲೆಂಡ್‌ಗೆ ಬಲ ತುಂಬಲಿರುವ ಕೇನ್ ವಿಲಿಯಮ್ಸನ್, ಟಿಮ್ ಸೌಥಿ

# ಕಿವೀಸ್‌ಗೆ ಬಾಂಗ್ಲಾ ಸ್ಪಿನ್ ಸವಾಲು

**ಚೆನ್ನೈ (ಪಿಟಿಐ):** ಬೆನ್ನುಬೆನ್ನಿಗೆ ಎರಡು ಪಂದ್ಯಗಳನ್ನು ಗೆದ್ದ ಉತ್ಸಾಹದಲ್ಲಿರುವ ನ್ಯೂಜಿಲೆಂಡ್ ತಂಡ ಶುಕ್ರವಾರ ನಡೆಯುವ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ. ನಿಧಾನಗತಿಯ ಚೆಪಾಕ್ ಪಿಚ್‌ನಲ್ಲಿ ಬಾಂಗ್ಲಾದೇಶದ ಅಸ್ತ್ರವಾದ ಸ್ಪಿನ್ ದಾಳಿಯನ್ನು ತಮ್ಮ ಪ್ರಬಲ ಬ್ಯಾಟಿಂಗ್ ಸರದಿಯ ಮೂಲಕ ಮೆಟ್ಟಿನಿಲ್ಲಬಹುದೆಂಬ ವಿಶ್ವಾಸದಲ್ಲಿ ನ್ಯೂಜಿಲೆಂಡ್ ತಂಡ ಇದೆ.

ನ್ಯೂಜಿಲೆಂಡ್ ತಂಡಕ್ಕೆ ಸಂತಸದ ಸುದ್ದಿಯೊಂದು ಇದೆ. ಆ ತಂಡದ ಕಾಯಂ ನಾಯಕ ಕೇನ್ ವಿಲಿಯಮ್ಸನ್ ಮತ್ತು ಅನುಭವಿ ವೇಗದ ಬೌಲರ್ ಟಿಮ್ ಸೌಥಿ ಅವರು ಗಾಯದಿಂದ ಚೇತರಿಸಿಕೊಂಡಿದ್ದು ಬಾಂಗ್ಲಾದೇಶ ವಿರುದ್ಧ ಪಂದ್ಯಕ್ಕೆ ಲಭ್ಯರಿದ್ದಾರೆ. ಇವರಿಬ್ಬರು ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಆಡಿರಲಿಲ್ಲ. ಈ ಪಂದ್ಯಗಳಿಗೆ ಟಾಮ್ ಲಥಾಮ್ ಅವರು ಹಂಗಾಮಿ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು.

ಈಗ ಪಾಯಿಂಟ್ ಪಟ್ಟಿಯಲ್ಲಿ ಕಿವೀಸ್ ತಂಡ ನಿವ್ವಳ ರನ್ ದರದ ಆಧಾರದಲ್ಲಿ ಅಗ್ರಸ್ಥಾನದಲ್ಲಿದೆ. ಭಾರತ ತಂಡ ಎರಡನೇ ಮತ್ತು ಪಾಕಿಸ್ತಾನ ತಂಡ ಮೂರನೇ ಸ್ಥಾನದಲ್ಲಿವೆ.

ಮೊಣಗಂಟಿನ ನೋವಿನಿಂದ ವಿಲಿಯಮ್ಸನ್ ಅವರು ಸಾಕಷ್ಟು ಚೇತರಿಸಿಕೊಂಡಿದ್ದಾರೆ. ಸೌಥಿ ಅವರು ಹೆಬ್ಬೆರಳ ಗಾಯಗಿಂದಲೂ ಗುಣಮುಖರಾಗಿದ್ದಾರೆ ಎಂದು ನ್ಯೂಜಿಲೆಂಡ್ ತಂಡದ ಕೋಚ್ ಗ್ಯಾರಿ ಸ್ಟೀಡ್ ತಿಳಿಸಿದ್ದಾರೆ.

ತಂಡಕ್ಕೆ ಈಗ ಸಂದಿಗ್ಧವೂ ಎದುರಾಗಿದೆ. ವಿಲಿಯಮ್ಸನ್ ಅನುಪಸ್ಥಿತಿಯಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿದ್ದ ರಚಿನ್ ರವೀಂದ್ರ ಒಂದು ಶತಕ, ಒಂದು ಅರ್ಧಶತಕ ಸಿಡಿಸಿ ಒಳ್ಳೆಯ ಲಯದಲ್ಲಿದ್ದಾರೆ. ಹೀಗಾಗಿ 33 ವರ್ಷದ ವಿಲಿಯಮ್ಸನ್ ಅವರಿಗಾಗಿ ಯಾರು ಸ್ಥಾನ ತೆರವು ಮಾಡಬೇಕು ಎಂಬ ಬಗ್ಗೆ ಸಾಕಷ್ಟು ಲೆಕ್ಕಾಚಾರ ಮಾಡಬೇಕಾಗಿದೆ. ಉಳಿದಂತೆ ತಂಡಕ್ಕೆ ಸಮಸ್ಯೆಯಿಲ್ಲ. ವಿಲ್ ಯಂಗ್, ಡೆವೊನ್ ಕಾನ್ವೆ ಮತ್ತು ಡೇರಿಲ್ ಮಿಚೆಲ್ ಅಂಥ ಬ್ಯಾಟರ್‌ಗಳು ಲಯದಲ್ಲಿದ್ದಾರೆ. ಆದರೆ ಇಲ್ಲಿನ ಪಿಚ್‌ನಲ್ಲಿ ಸರಾಗವಾಗಿ ರನ್ ಗಳಿಸುವುದು ಸುಲಭವಲ್ಲ ಎಂಬುದು ಭಾರತ– ಆಸ್ಟ್ರೇಲಿಯಾ ಪಂದ್ಯದಲ್ಲಿ ವ್ಯಕ್ತವಾಗಿತ್ತು. ಕಳೆದ ಭಾನುವಾರ ಭಾರತದ ಸ್ಪಿನ್ನರುಗಳು ಆರು ವಿಕೆಟ್ ಗಳಿಸಿದ್ದರು.

ಇಂಗ್ಲೆಂಡ್ ಕೈಲಿ ಹಿಂದಿನ ಪಂದ್ಯದಲ್ಲಿ ದಂಡಿಸಿಕೊಂಡಿದ್ದರೂ, ಚೆನ್ನೈನಲ್ಲಿ ತಮಗೆ ದೊರೆಯುವ ನೆರವು ಕಲ್ಪಿಸಿ ಬಾಂಗ್ಲಾದೇಶ ಸ್ಪಿನ್ನರ್‌ಗಳು ಮನಸ್ಸಿನಲ್ಲಿ ಖುಷಿಪಡಬಹುದು. ಸ್ಪಿನ್‌ತ್ರಯರಾದ ನಾಯಕ ಶಕೀಬ್ ಅಲ್ ಹಸನ್, ಮೆಹೆದಿ ಹಸನ್ ಮತ್ತು ಮಹಿದಿ ಹಸನ್ ಮಿರಾಜ್ ಅವರು ಎರಡು ಪಂದ್ಯಗಳಿಂದ 11 ವಿಕೆಟ್‌ಗಳನ್ನು ಪಡೆದಿದ್ದಾರೆ. ತಂಡ ಈ ಮೂವರ ಮೇಲೆ ನಿರೀಕ್ಷೆಯಿಟ್ಟುಕೊಂಡಿದೆ.

ನ್ಯೂಜಿಲೆಂಡ್‌ಗೆ ಮಿಚೆಲ್ ಸ್ಯಾಂಟ್ನರ್ ಸ್ಪಿನ್ ಅಸ್ತ್ರವಾಗಿದ್ದಾರೆ. ಹಾಲಿ ವಿಶ್ವಕಪ್‌ನಲ್ಲಿ ಈ ಎಡಗೈ ಸ್ಪಿನ್ನರ್ ಪ್ರಸ್ತುತ ಏಳು ವಿಕೆಟ್‌ಗಳೊಡನೆ ವಿಕೆಟ್ ಗಳಿಕೆಯಲ್ಲಿ ಅಗ್ರಸ್ಥಾನದಲ್ಲಿ ಇರುವುದು ತಂಡದ ವಿಶ್ವಾಸಕ್ಕೆ ಕಾರಣವಾಗಬಹುದು.

ಬಾಂಗ್ಲಾದೇಶ, ಅನುಭವಿ ಬ್ಯಾಟರ್‌ಗಳಾದ ಶಕಿಬ್ ಅಲ್ ಹಸನ್, ಮುಷ್ಫಿಕುರ್ ರಹೀಮ್, ಲಿಟ್ಟನ್ ದಾಸ್ ಮತ್ತು ನಜ್ಮುಲ್ ಶಾಂತೊ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಿದೆ.

ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ, ಲಾರ್ಕಿ ಫರ್ಗ್ಯುಸನ್ ಅವರಂಥ ಅನುಭವಿ ವೇಗಿಗಳಿಂದ ಈ ವಿಭಾಗದಲ್ಲಿ ಕಿವೀಸ್ ಪ್ರಬಲವಗಿದೆ. ಇವರೆಲ್ಲಾ ಐಪಿಎಲ್‌ನಲ್ಲಿ ಆಡಿರುವ ಅನುಭವಿಗಳಾಗಿದ್ದು, ಇಲ್ಲಿನ ಪರಿಸ್ಥಿತಿ ತಿಳಿದವರು. ಅಂಕಿ ಅಂಶಗಳೂ ನ್ಯೂಜಿಲೆಂಡ್ ಪರ ಇವೆ.



ಬ್ಯಾಟಿಂಗ್ ಅಭ್ಯಾಸ ನಡೆಸಿದ ಕೇನ್ ವಿಲಿಯಮ್ಸನ್ –ಪಿಟಿಐ ಚಿತ್ರ



ಮುಷ್ಫಿಕುರ್ ರಹೀಮ್

### ಮುಖಾಮುಖಿ

| | |
|---|---|
| 41 | ಒಟ್ಟು ಪಂದ್ಯಗಳು |
| 30 | ನ್ಯೂಜಿಲೆಂಡ್ ಗೆಲುವು |
| 10 | ಬಾಂಗ್ಲಾದೇಶ ಗೆಲುವು |
| 1 | ಫಲಿತಾಂಶವಿಲ್ಲ |

ಕೊನೆಯ 10 ಪಂದ್ಯಗಳಲ್ಲಿ 9 ಪಂದ್ಯಗಳಲ್ಲಿ ನ್ಯೂಜಿಲೆಂಡ್ ಜಯಿಸಿದ್ದು ಒಂದು ಪಂದ್ಯದಲ್ಲಿ ಫಲಿತಾಂಶ ಬಂದಿಲ್ಲ.

### ತಂಡಗಳು

**ಬಾಂಗ್ಲಾದೇಶ:** ಶಕಿಬ್ ಅಲ್ ಹಸನ್ (ನಾಯಕ), ಲಿಟ್ಟನ್ ದಾಸ್, ಮುಷ್ಫಿಕುರ್ ರಹೀಂ (ಇಬ್ಬರೂ ವಿಕೆಟ್ ಕೀಪರ್), ತಂಜಿದ್ ಹುಸೇನ್, ನಜ್ಮುಲ್ ಹುಸೇನ್ ಶಾಂತೊ, ತೌಹಿದ್ ಹೃದಯ್, ಮಹಮದುಲ್ಲಾ ರಿಯಾದ್, ಮೆಹಿದಿ ಹಸನ್ ಮಿರಾಜ್, ನಸುಮ್ ಅಹ್ಮದ್, ಮೆಹೆದಿ ಹಸನ್, ತಸ್ಕಿನ್ ಅಹ್ಮದ್, ಮುಸ್ತಫಿಜುರ್ ರಹಮಾಣ್, ಹಸನ್ ಮಹಮೂದ್, ಶರೀಫುಲ್ ಇಸ್ಲಾಂ, ತಂಜಿಂ ಹಸನ್ ಸಾಕಿಬ್.

**ನ್ಯೂಜಿಲೆಂಡ್:** ಕೇನ್ ವಿಲಿಯಮ್ಸನ್ (ನಾಯಕ), ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪ್ಮನ್, ಡೆವೊನ್ ಕಾನ್ವೆ, ಟಾಮ್ ಲಥಾಮ್ (ವಿಕೆಟ್ ಕೀಪರ್), ಲಾಕಿ ಫರ್ಗ್ಯೂಸನ್, ಮ್ಯಾಟ್ ಹೆನ್ರಿ, ಡೇರಿಲ್ ಮಿಚೆಲ್, ಜಿಮ್ಮಿ ನೀಶಮ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಈಶ್ ಸೋಧಿ, ಟಿಮ್ ಸೌಥಿ ಮತ್ತು ವಿಲ್ ಯಂಗ್.

**ಪಂದ್ಯ ಆರಂಭ:** ಮಧ್ಯಾಹ್ನ 2.00

**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಪಾಕಿಸ್ತಾನ ಕ್ರಿಕೆಟ್ ತಂಡದ ಆಟಗಾರರು ಗುರುವಾರ ಅಹಮದಾಬಾದ್‌ಗೆ ಬಿಗಿಭದ್ರತೆಯಲ್ಲಿ ಬಂದರು –ಎಎಫ್‌ಪಿ ಚಿತ್ರ

ಬಿಗಿಭದ್ರತೆಯಲ್ಲಿ ಅಹಮದಾಬಾದ್‌ಗೆ ಬಂದಿಳಿದ ತಂಡ

## ಪಾಕ್ ಆಟಗಾರರಿಗೆ ಭವ್ಯ ಸ್ವಾಗತ

**ಅಹಮದಾಬಾದ್ (ಪಿಟಿಐ):** ಸಾಂಪ್ರದಾಯಿಕ ಎದುರಾಳಿ ಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅ.14ರಂದು ಮುಖಾಮುಖಿಯಾಗಲಿದ್ದು, ಈ ನಿಟ್ಟಿನಲ್ಲಿ ಪಾಕ್ ತಂಡದ ಆಟಗಾರರು ಗುರುವಾರ ಅಹಮದಾಬಾದ್‌ಗೆ ಬಿಗಿಭದ್ರತೆಯಲ್ಲಿ ಬಂದರು.

ಹೋಟೆಲ್‌ಗೆ ಬಂದ ಪಾಕ್ ಆಟಗಾರರಿಗೆ ಭಾರತೀಯ ಸಂಪ್ರದಾಯದಂತೆ ಭವ್ಯ ಸ್ವಾಗತ ಕೋರಲಾಯಿತು. ಬಲೂನುಗಳ ಅಲಂಕಾರ, ಆಟಗಾರರ ಮೇಲೆ ಪುಷ್ಪವೃಷ್ಟಿಗರೆದು, ನೃತ್ಯ ಪ್ರದರ್ಶನದೊಂದಿಗೆ ತಂಡವನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಅಲ್ಲದೆ, ಹೈದರಾಬಾದ್‌ನಿಂದ ಅಹಮದಾಬಾದ್‌ಗೆ ಪ್ರಯಾಣಿಸುವ ವೇಳೆ ಪಾಕ್ ಆಟಗಾರರಿಗೆ ವಿಮಾನ ಸಿಬ್ಬಂದಿ ಕೇಕ್ ಕತ್ತರಿಸುವ ಸಮಾರಂಭ ಆಯೋಜಿಸಿದ್ದರು. ತನ್ನ ಆಟಗಾರರು ಭಾರತದಲ್ಲಿ ಸ್ವೀಕರಿಸಿದ ಭವ್ಯ ಸ್ವಾಗತದ ವಿಡಿಯೊವನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) 'ಎಕ್ಸ್'ನಲ್ಲಿ ಹಂಚಿಕೊಂಡು ಸಂತಸ ವ್ಯಕ್ತಪಡಿಸಿದೆ.

ಶನಿವಾರ ನಡೆಯಲಿರುವ ಹೈವೋಲ್ಟೇಜ್ ಪಂದ್ಯಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. ಗುಜರಾತ್ ಪೊಲೀಸ್, ರಾಷ್ಟ್ರೀಯ ಭದ್ರತಾ ಪಡೆ, ಕ್ಷಿಪ್ರ ಕಾರ್ಯಾಚರಣೆ ಪಡೆ ಮತ್ತು ಹೋಮ್‌ಗಾರ್ಡ್ ಸೇರಿದಂತೆ 11 ಸಾವಿರಕ್ಕೂ ಅಧಿಕ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಉಭಯ ತಂಡಗಳು ಟೂರ್ನಿಯಲ್ಲಿ ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿವೆ. ಬಾಬರ್ ಪಡೆಯು ನೆದರ್ಲೆಂಡ್ಸ್ ಮತ್ತು ಶ್ರೀಲಂಕಾವನ್ನು ಮಣಿಸಿದ್ದರೆ, ರೋಹಿತ್ ಶರ್ಮಾ ಬಳಗ ಆಸ್ಟ್ರೇಲಿಯಾ ಮತ್ತು ಅಫ್ಗಾನಿಸ್ತಾನ ತಂಡಗಳನ್ನು ಮಣಿಸಿದೆ.

ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಪಾಕ್ ಆಟಗಾರರು ಗುರುವಾರ ದೈಹಿಕ ಕಸರತ್ತು ನಡೆಸಿದರು.

## ನೆಟ್ಸ್‌ನಲ್ಲಿ ಶುಭಮನ್ ಗಿಲ್ ಬ್ಯಾಟಿಂಗ್ ತಾಲೀಮು

**ಅಹಮದಾಬಾದ್ (ಪಿಟಿಐ):** ಡೆಂಗಿ ಜ್ವರದಿಂದ ಚೇತರಿಸಿಕೊಂಡಿರುವ ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಗುರುವಾರ ಇಲ್ಲಿ ಅಭ್ಯಾಸ ಕೈಗೊಂಡರು.

ಟೂರ್ನಿಯ ಮೊದಲ ಎರಡು ಪಂದ್ಯಗಳಲ್ಲಿ ಆಡದೇ ಇರುವ ಗಿಲ್, ಪಾಕಿಸ್ತಾನದ ವಿರುದ್ಧ ಶನಿವಾರ ಕಣಕ್ಕಿಳಿಯುವ ವಿಶ್ವಾಸದಲ್ಲಿದ್ದಾರೆ. ಬೆಳಿಗ್ಗೆ ನರೇಂದ್ರ ಮೋದಿ ಸ್ಟೇಡಿಯಂಗೆ ಬಂದ ಅವರು, ಕೆಲಹೊತ್ತು ದೈಹಿಕ ಕಸರತ್ತು ನಡೆಸಿದರು. ಆ ಬಳಿಕ ನೆಟ್ಸ್‌ನಲ್ಲಿ ಬ್ಯಾಟಿಂಗ್ ತಾಲೀಮು ಕೈಗೊಂಡರು. ಥ್ರೋಡೌನ್ ಪರಿಣತ ನುವಾನ್ ಸೆನೆವಿರತ್ನೆ ಮತ್ತು ಸ್ಥಳೀಯ ನೆಟ್ ಬೌಲರ್‌ಗಳನ್ನು ಅವರು ಎದುರಿಸಿದರು.

ರೋಹಿತ್ ಶರ್ಮಾ ಬಳಗದ ಪೂರ್ಣ ಪ್ರಮಾಣದ ಅಭ್ಯಾಸ ಶುಕ್ರವಾರ ನಡೆಯಲಿದೆ. ಕೋಚ್ ರಾಹುಲ್ ದ್ರಾವಿಡ್ ಮತ್ತು ತಂಡದ ವೈದ್ಯರು ಅಭ್ಯಾಸದ ಅವಧಿಯಲ್ಲಿ ಗಿಲ್ ಅವರ ಪ್ರದರ್ಶನದ ಮೇಲೆ ನಿಗಾ ಇಡಲಿದ್ದಾರೆ. ಅವರನ್ನು ಶನಿವಾರ ಕಣಕ್ಕಿಳಿಸಬೇಕೇ ಎಂಬುದನ್ನು ಆ ಬಳಿಕ ನಿರ್ಧರಿಸಲಿದ್ದಾರೆ.



ಶುಭಮನ್ ಗಿಲ್

## ಎಂಟರ ಘಟ್ಟಕ್ಕೆ ಪಿ.ವಿ. ಸಿಂಧು

**ವಾಂತಾ (ಫಿನ್ಲೆಂಡ್), (ಪಿಟಿಐ):** ಭಾರತದ ಅಗ್ರಮಾನ್ಯ ಆಟಗಾರ್ತಿ, ಎಂಟನೇ ಶ್ರೇಯಾಂಕದ ಪಿ.ವಿ. ಸಿಂಧು ಅವರು ಆರ್ಕಟಿಕ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ 21-11, 21-10ರಲ್ಲಿ ಚೀನಾ ತೈಪೆಯ ವೆನ್ ಚಿ ಹ್ಸು ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು.

ಆದರೆ ಕಿದಂಬಿ ಶ್ರೀಕಾಂತ್ ಮತ್ತು ಕಿರಣ್ ಜಾರ್ಜ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಹೊರಬಿದ್ದರು. ಏಳನೇ ಶ್ರೇಯಾಂಕದ ಕಾಂತಾ ಸುನೆಯಾಮ (ಜಪಾನ್) ಅವರು 21-15, 21-12 ರಿಂದ ಶ್ರೀಕಾಂತ್ ಅವರನ್ನು ಹಿಮ್ಮೆಟ್ಟಿಸಿದರೆ, ನಾಲ್ಕನೇ ಶ್ರೇಯಾಂಕದ ಲು ಗುಯಾಂಗ್ ಝು (ಚೀನಾ) 21-10, 22-20 ರಿಂದ ಕಿರಣ್ ಜಾರ್ಜ್ ಅವರನ್ನು ಸೋಲಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಜೋಡಿ 19-21, 19-21ರಲ್ಲಿ ಫ್ರಾನ್ಸ್‌ನ ಮಾರ್ಗೋಟ್ ಲ್ಯಾಂಬರ್ಟ್- ಆ್ಯನೆ ಟ್ರಾನ್ ಅವರಿಗೆ ಮಣಿಯಿತು.



ಪಿ.ವಿ.ಸಿಂಧು

ಒಲಿಂಪಿಕ್ಸ್‌ಗೆ ಹೊಸ ಕ್ರೀಡೆ ಸೇರ್ಪಡೆ ಪ್ರಸ್ತಾವ

## 'ಐಒಸಿ ಅಧಿವೇಶನದಲ್ಲಿ ನಿರ್ಧಾರ'

**ಮುಂಬೈ (ಪಿಟಿಐ):** 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರಿದಂತೆ ಐದು ಹೊಸ ಕ್ರೀಡೆಗಳನ್ನು ಸೇರ್ಪಡೆ ಮಾಡಿಕೊಳ್ಳುವ ಪ್ರಸ್ತಾವಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಕಾರ್ಯಕಾರಿ ಮಂಡಳಿ ಅಧಿವೇಶನದ ಎರಡನೇ ದಿನ ಚರ್ಚೆ ನಡೆಯುವ ಸಾಧ್ಯತೆಯಿದೆ.

ಐಒಸಿಯ ಎರಡು ದಿನಗಳ ಕಾರ್ಯಕಾರಿ ಮಂಡಳಿ ಸಭೆ ಗುರುವಾರ ಆರಂಭವಾಗಿದ್ದು, ಶುಕ್ರವಾರ ಕೊನೆಗೊಳ್ಳಲಿದೆ.

ಕ್ರಿಕೆಟ್ (ಟಿ-20), ಬೇಸ್‌ಬಾಲ್/ಸಾಫ್ಟ್‌ಬಾಲ್. ಫ್ಲ್ಯಾಗ್ ಫುಟ್‌ಬಾಲ್, ಲ್ಯಾಕ್ರೋಸ್ (ಸಿಕ್ಸಸ್) ಮತ್ತು ಸ್ಕ್ವಾಷ್ ಕ್ರೀಡೆಗಳನ್ನು ಸೇರ್ಪಡೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಅಕ್ಟೋಬರ್ 15ರಿಂದ 17ರವರೆಗೆ ಇಲ್ಲಿ ನಡೆಯುವ ಐಒಸಿಯ 14ನೇ ಅಧಿವೇಶನದಲ್ಲಿ ಅಂತಿಮವಾಗಿ ಪರಾಮರ್ಶೆ ನಡೆಸಿ ಮತಕ್ಕೆ ಹಾಕಲಾಗುವುದು.

ಇದೇ ವೇಳೆ, ಶಾಂಘೈ ಮತ್ತು ಬುಡಾಪೆಸ್ಟ್‌ನಲ್ಲಿ ಒಲಿಂಪಿಕ್ ಕ್ವಾಲಿಫೈರ್ ಸಿರೀಸ್ ನಡೆಸಲಾಗುವುದು ಎಂದು ಐಒಸಿ ಕಾರ್ಯಕಾರಿ ಮಂಡಳಿ ಗುರುವಾರ ತಿಳಿಸಿತು. ಐಒಸಿ ಅಧಿವೇಶನ 40 ವರ್ಷಗಳ ಅಂತರದ ನಂತರ ಭಾರತದಲ್ಲಿ ನಡೆಯುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ. 1983ರಲ್ಲಿ ನವದೆಹಲಿಯಲ್ಲಿ ಈ ಅಧಿವೇಶನ ಮೊದಲ ಬಾರಿ ಭಾರತದಲ್ಲಿ ನಡೆದಿತ್ತು.

ಒಲಿಂಪಿಕ್ಸ್‌ಗೆ ಪೂರ್ವಭಾವಿಯಾಗಿ ಶಾಂಘೈ ಮತ್ತು ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕ್ವಾಲಿಫೈರ್ ಸರಣಿಯು ಹೊಸ ಸ್ವರೂಪದ ಸರಣಿಯಾಗಿದ್ದು, ಇಲ್ಲಿ ಹಬ್ಬದ ರೀತಿಯಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಐಒಸಿ ಕಾರ್ಯಕಾರಿ ಮಂಡಳಿ ತಿಳಿಸಿದೆ.

### ರಷ್ಯಾ ಒಲಿಂಪಿಕ್ ಸಮಿತಿ ಅಮಾನತು

**ಮುಂಬೈ (ಎಎಫ್‌ಪಿ):** ಸದಸ್ಯ ರಾಷ್ಟ್ರ ಉಕ್ರೇನ್‌ನ ಮೇಲೆ ಆಕ್ರಮಣ ನಡೆಸಿದ್ದಕ್ಕೆ ರಷ್ಯಾದ ರಾಷ್ಟ್ರೀಯ ಒಲಿಂಪಿಕ್ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ಗುರುವಾರ ಅಮಾನತುಗೊಳಿಸಿದೆ.

ಹೀಗಾಗಿ, ರಷ್ಯನ್ ಒಲಿಂಪಿಕ್ ಸಮಿತಿ ಕಾರ್ಯನಿರ್ವಹಿಸುವಂತಿಲ್ಲ. ಜೊತೆಗೆ ಅದಕ್ಕೆ ಆರ್ಥಿಕ ನೆರವೂ ಸಿಗುವುದಿಲ್ಲ ಎಂದು ಐಒಸಿ ವಕ್ತಾರ ಮಾರ್ಕ್ ಆ್ಯಡಮ್ಸ್ ತಿಳಿಸಿದರು. ಐಒಸಿ ಕಾರ್ಯಕಾರಿ ಮಂಡಳಿ ಸಭೆಯ ಮೊದಲ ದಿನದ ಕಲಾಪಗಳ ನಂತರ ಅವರು ಮಾತನಾಡಿದರು.

ಐಒಸಿ ನಿರ್ಧಾರಕ್ಕೆ ರಷ್ಯಾ ಒಲಿಂಪಿಕ್ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ. 'ಐಒಸಿಯು ಮತ್ತೊಮ್ಮೆ ರಾಜಕೀಯರ ಪ್ರೇರಿತ ನಿರ್ಧಾರವನ್ನು ಕೈಗೊಂಡಿದೆ' ಎಂದು ಸಮಿತಿ ಹೇಳಿದೆ. ಇನ್ನೊಂದೆಡೆ ಉಕ್ರೇನ್, ಐಒಸಿಯ ನಿಲುವನ್ನು ಸ್ವಾಗತಿಸಿದೆ.

## ನ.25, 26ರಂದು ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು

**ಬೆಂಗಳೂರು:** ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಆಶ್ರಯದಲ್ಲಿ ನ.25 ಮತ್ತು 26 ರಂದು 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್' ಆಯೋಜಿಸಲಾಗಿದೆ.

ಬೆಂಗಳೂರಿನ ಉತ್ತರಹಳ್ಳಿ ಮುಖ್ಯರಸ್ತೆ, ಪದ್ಮನಾಭನಗರದಲ್ಲಿರುವ ಈಜು ಕೇಂದ್ರದಲ್ಲಿ ನಡೆಯುವ ಕೂಟದಲ್ಲಿ ಬಾಲಕ ಮತ್ತು ಬಾಲಕಿಯರಿಗೆ 12 ರಿಂದ 14 ವರ್ಷ (ಗುಂಪು 2), 15 ರಿಂದ 17 ವರ್ಷ (ಗುಂಪು 1) ಹಾಗೂ 18 ವರ್ಷಕ್ಕಿಂತ ಮೇಲಿನ (ಸೀನಿಯರ್) ವಯೋವರ್ಗಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

100 ಮೀ. ಮತ್ತು 400 ಮೀ. ಫ್ರೀಸ್ಟೈಲ್, 100 ಮೀ. ಬ್ಯಾಕ್‌ಸ್ಟ್ರೋಕ್, 100 ಮೀ. ಬ್ರೆಸ್ಟ್‌ಸ್ಟ್ರೋಕ್, 100 ಮೀ. ಬಟರ್‌ಫ್ಲೈ ಮತ್ತು 200 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

50 ಮೀ. ವಿಭಾಗದ ಎಲ್ಲ ಸ್ಪರ್ಧೆಗಳು ಯೂರೋಪ್ ಮತ್ತು ಅಮೆರಿಕದಲ್ಲಿ ಜನಪ್ರಿಯತೆ ಪಡೆದುಕೊಂಡಿರುವ 'ಸ್ಕಿನ್ಸ್' ಮಾದರಿಯಲ್ಲಿ ಏರ್ಪಡಿಸಲಾಗಿದೆ. ಚಾಂಪಿಯನ್‌ಷಿಪ್ ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ಪ್ರತಿ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆಯುವವರು ಕ್ರಮವಾಗಿ ತಲಾ ₹ 10 ಸಾವಿರ, ₹ 7 ಸಾವಿರ ಹಾಗೂ ₹ 5 ಸಾವಿರ ನಗದು ಬಹುಮಾನ ಗಳಿಸಲಿದ್ದಾರೆ.

ಸ್ಕಿನ್ಸ್ ವಿಭಾಗದಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆಯುವವರಿಗೆ ಕ್ರಮವಾಗಿ ₹ 6 ಸಾವಿರ, ₹ 4 ಸಾವಿರ ಮತ್ತು ₹ 3 ಸಾವಿರ ನಗದು ಬಹುಮಾನ ಲಭಿಸಲಿದೆ. ನೆಟ್ಟಕಲ್ಲಪ್ಪ ಈಜು ಕೇಂದ್ರದ ದಶಮಾನೋತ್ಸವ ಆಚರಣೆ ಅಂಗವಾಗಿ ಕಳೆದ ವರ್ಷ ಮೊದಲ ಬಾರಿ ಅಖಿಲ ಭಾರತ ಚಾಂಪಿಯನ್‌ಷಿಪ್ ಆಯೋಜಿಸಲಾಗಿತ್ತು. ಈ ಬಾರಿ ಎರಡನೇ ಆವೃತ್ತಿಯ ಕೂಟ ನಡೆಯಲಿದೆ. ಆಸಕ್ತರು ನ.19ರ ಒಳಗಾಗಿ ವೆಬ್‌ಸೈಟ್: https://pages.razorpay.com/naisc-23 ಮೂಲಕ ಹೆಸರು ನೋಂದಾಯಿಸಬಹುದು.

## ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಗೆಲುವು

**ಬೆಂಗಳೂರು:** ವಿ. ವಿಘ್ನೇಶ್ ಮತ್ತು ಆರಿಫ್ ಶೇಖ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಗುರುವಾರ ನಡೆದ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 10-0 ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ವಿರುದ್ಧ ಸುಲಭ ಜಯ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 4-1 ರಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಬಿಎಫ್‌ಸಿ ಪರ ತೊಕ್ಚೋಮ್ ಮಸ್ಲೆಮ್ಗಂಬ ಸಿಂಗ್ ಹ್ಯಾಟ್ರಿಕ್ ಗೋಲು ಗಳಿಸಿದರು.

### ಮೈಸೂರು ರೇಸ್

## ಆಲ್ ಅಟ್ರ್ಯಾಕ್ಟಿವ್‌ಗೆಲ್ಲುವ ನಿರೀಕ್ಷೆ

ಬೆನಕ ಡೆವಲಪರ್ಸ್ ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಆಲ್ ಅಟ್ರ್ಯಾಕ್ಟಿವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಬಲ್ ವಿಷನ್ 5, ಪೆಟ್ಟೀಸ್ ಚಾಯ್ಸ್ 2, ಮ್ಯಾಕ್ಸ್ ಮ್ಯೂಯೆಲ್ಲರ್ 8

2ನೇ ರೇಸ್: ಎಲಿವಾಡೊ 2, ಮೇಬ್ಯಾಕ್ 12, ಫೈರ್ಫಿಂಚ್ 13

3ನೇ ರೇಸ್: ಇನ್‌ಎಫೆಬಲ್ 6, ತೆನಾಲಿ 1, ಸ್ಪಿರಿಚ್ಯುಯಲ್ ಫೋರ್ಸ್ 10

4ನೇ ರೇಸ್: ಇಂಡಿಯನ್ ಪೇಟ್ರಿಯೆಟ್ 9, ಪರ್ಫೆಕ್ಟ್ ಜಸ್ಟೀಸ್ 8, ವೈಲ್ಡ್ ಸ್ಪೆಲ್ 3

5ನೇ ರೇಸ್: ಆಲ್ ಅಟ್ರ್ಯಾಕ್ಟಿವ್ 2, ಅಗ್ನಾಸ್ಟಿಕ್ 1, ಓ ಹನ್ನಿನಿ 4

6ನೇ ರೇಸ್: ಆರ್ಮ್‌ಸ್ಟ್ರಾಂಗ್ 3, ಬೆಂಗಾಜಿ 5, ಲಕ್ಕಿ ಪಾಯಿಂಟ್ 8

7ನೇ ರೇಸ್: ಮ್ಯಾಜಿಕ್ ಸರ್ಕಲ್ 1, ಅಂಕುಶ್ 2, ಫಾರ್ಚೂನೇಟಸ್ 8

**ಉತ್ತಮ ಬೆಟ್: ಎಲಿವಾಡೊ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5.6,7 |